ಸೋಮವಾರ, ಆಗಸ್ಟ್ 9, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚಿನ್ನದ ಮುಖಗವಸು

ತೃಣಮೂಲ ಕಾಂಗ್ರೆಸ್ ಶಾಸಕಿ ಅದಿತಿ ಮುನ್ಶಿ ಅವರು ಭಾನುವಾರ ಕೋಲ್ಕತ್ತದಲ್ಲಿ ದುರ್ಗಾ ದೇವಿಯ ವಿಗ್ರಹಕ್ಕೆ ಚಿನ್ನದ ಮುಖಗವಸು ತೊಡಿಸಿದರು

ಮಸೂದೆ ಮೇಲಿನ ಚರ್ಚೆ ಮಧ್ಯೆ ಪೆಗಾಸಸ್, ರೈತರ ವಿಷಯ ಪ್ರಸ್ತಾಪ • ವಿಪಕ್ಷಗಳ ಹೊಸ ತಂತ್ರ

‘ಮೋದಿ, ನಮ್ಮ ಮಾತು ಕೇಳಿಸಿಕೊಳ್ಳಿ’

ನವದೆಹಲಿ (ಪಿಟಿಐ): ಪೆಗಾಸಸ್ ಗೂಢಚರ್ಯೆ ಮತ್ತು ರೈತರ ಪ್ರತಿಭಟನೆ ಬಗ್ಗೆ ಸಂಸತ್ತಿನ ಸದನಗಳಲ್ಲಿ ಚರ್ಚಿಸಲು ಸರ್ಕಾರವು ಅವಕಾಶ ನೀಡುತ್ತಿಲ್ಲ. ಈ ಎರಡೂ ವಿಷಯಗಳ ಬಗ್ಗೆ ಸರ್ಕಾರದ ಗಮನ ಸೆಳೆಯಲು ವಿರೋಧ ಪಕ್ಷಗಳು ಹೊಸ ತಂತ್ರವನ್ನು ಅನುಸರಿಸುತ್ತಿವೆ. ಬೇರೆ ಮಸೂದೆಗಳ ಚರ್ಚೆಯ ಮಧ್ಯೆ ವಿರೋಧ ಪಕ್ಷಗಳ ನಾಯಕರು ಪೆಗಾಸಸ್ ಗೂಢಚರ್ಯೆ ಮತ್ತು ರೈತರ ಪ್ರತಿಭಟನೆ ಬಗ್ಗೆ ಪ್ರಸ್ತಾಪಿಸಿದ್ದಾರೆ.

ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳ ನಾಯಕರು ಅನುಸರಿಸುತ್ತಿರುವ ಈ ಭಿನ್ನ ತಂತ್ರದ ವಿಡಿಯೊವನ್ನು ಟಿಎಂಸಿ ಸಂಸದ ಡೆರೆಕ್ ಒಬ್ರಿಯಾನ್ ಭಾನುವಾರ ಟ್ವೀಟ್ ಮಾಡಿದ್ದಾರೆ. ವಿರೋಧ ಪಕ್ಷಗಳ ಹಲವು ನಾಯಕರು ಈ ವಿಡಿಯೊವನ್ನು ರಿಟ್ವೀಟ್ ಮಾಡಿದ್ದಾರೆ, ವಿಡಿಯೊವನ್ನು ಹಂಚಿಕೊಂಡಿದ್ದಾರೆ. ‘ಮಿಸ್ಟರ್ ಮೋದಿ, ನಮ್ಮ ಮಾತನ್ನು ಕೇಳಿಸಿಕೊಳ್ಳಿ’ ಎಂಬ ಧ್ವನಿಯೊಂದಿಗೆ ವಿಡಿಯೊ ಆರಂಭವಾಗುತ್ತದೆ. ಆನಂತರ ಯಾವ ಪಕ್ಷದ ನಾಯಕರು ಮಾತನಾಡಿದ್ದಾರೆ ಎಂಬುದರ ವಿವರ ಮತ್ತು ದೃಶ್ಯದ ತುಣುಕನ್ನು ಈ ವಿಡಿಯೊ ಒಳಗೊಂಡಿದೆ.

ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ, ಕಾಂಗ್ರೆಸ್‌ನ ಮಲ್ಲಿಕಾರ್ಜುನ ಖರ್ಗೆ, ಟಿಎಂಸಿಯ ಸುಖೇಂದು ಶೇಖರ್ ರಾಯ್, ಶಿವಸೇನಾದ ಪ್ರಿಯಾಂಕಾ ಚತುರ್ವೇದಿ, ಸಮಾಜವಾದಿ ಪಕ್ಷ, ಡಿಎಂಕೆ, ಟಿಆರ್‌ಎಸ್ ಮತ್ತು ಎಎಪಿಯ ಸಂಸದರು ರಾಜ್ಯಸಭೆಯಲ್ಲಿ ಮಾತನಾಡಿರುವ ದೃಶ್ಯಗಳ ತುಣುಕನ್ನು ಈ ವಿಡಿಯೊ ಒಳಗೊಂಡಿದೆ. 3 ನಿಮಿಷ 44 ಸೆಕೆಂಡ್‌ಗಳ ಒಂದು ವಿಡಿಯೊ ಮತ್ತು 2 ನಿಮಿಷ 20 ಸೆಕೆಂಡುಗಳ ಎರಡು ವಿಡಿಯೊವನ್ನು ಒಬ್ರಿಯಾನ್ ಟ್ವೀಟ್ ಮಾಡಿದ್ದಾರೆ. ಖರ್ಗೆ ಸಹ ಒಂದು ವಿಡಿಯೊವನ್ನು ಟ್ವೀಟ್ ಮಾಡಿದ್ದಾರೆ.

‘14 ದಿನಗಳಿಂದ ಕೇಳಿಕೊಳ್ಳುತ್ತಿದ್ದೇವೆ. ಆದರೆ ಚರ್ಚೆ ನಡೆಸಲು ನೀವು ಅವಕಾಶ ನೀಡುತ್ತಿಲ್ಲ. ಆದರೆ ಸುಮ್ಮನೆ ಮಸೂದೆಗಳನ್ನು ಅಂಗೀಕರಿಸುತ್ತಿದ್ದೀರಿ. ನಿಮಗೆ ಧೈರ್ಯ ಇದ್ದದ್ದೇ ಆದರೆ, ಪೆಗಾಸಸ್ ಚರ್ಚೆಯನ್ನು ಆರಂಭಿಸಿ’ ಎಂದು ಖರ್ಗೆ ಅವರು ರಾಜ್ಯಸಭೆಯಲ್ಲಿ ಆಗ್ರಹಿಸುತ್ತಿರುವ ದೃಶ್ಯ ವಿಡಿಯೊದಲ್ಲಿ ಇದೆ.

‘ಪೆಗಾಸಸ್ ಈಗ ಎಲ್ಲರ ಮನೆಯನ್ನೂ ಹೊಕ್ಕಿದೆ. ಅದರ ಬಗ್ಗೆ ನಾವು ಚರ್ಚೆ ನಡೆಸಲೇಬೇಕು’ ಎಂದು ಆರ್‌ಜೆಡಿಯ ಮನೋಜ್ ಝಾ ಪ್ರತಿಪಾದಿಸಿದ್ದಾರೆ.

‘ನಾನು ರೈತರ ಬಗ್ಗೆ ಮಾತನಾಡಬೇಕಿದೆ. ನೀವು ನನ್ನ ಮೈಕ್ ಆಫ್ ಮಾಡದೇ ಇದ್ದರೆ ಮಾತ್ರ ನಾನು ಮಾತನಾಡಲು ಸಾಧ್ಯವಾಗುತ್ತದೆ’ ಎಂದು ಕಾಂಗ್ರೆಸ್‌ನ ದೀಪೆಂದರ್ ಹೂಡಾ ಹೇಳಿದ್ದಾರೆ.

‘ಸಂಸತ್ತಿನಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸರ್ಕಾರ ಕೊಲ್ಲುತ್ತಿದೆ’ ಎಂದು ಟಿಎಂಸಿಯ ಸುಖೇಂದು ಶೇಖರ್ ರಾಯ್ ಆರೋಪಿಸಿದ್ದಾರೆ.

‘ಅದು ರೈತರ ವಿಚಾರವೇ ಆಗಿರಲಿ, ಆರ್ಥಿಕತೆಯೇ ಆಗಿರಲಿ, ಭದ್ರತೆ ಮತ್ತು ಪೆಗಾಸಸ್ ವಿಚಾರವಾಗಿರಲಿ. ವಿರೋಧ ಪಕ್ಷಗಳ ನಾಯಕರು ಈ ಬಗ್ಗೆ ಒಂದು ಪದ ಹೇಳಿದರೂ ಅವರ ದನಿಯನ್ನು ಅಡಗಿಸಲಾಗುತ್ತಿದೆ. ಕಲಾಪವನ್ನು ಸುಮ್ಮನೆ ಮುಂದೂಡಲಾಗುತ್ತದೆ, ನಮ್ಮ ಮೈಕ್‌ಗಳನ್ನು ಆಫ್ ಮಾಡಲಾಗುತ್ತದೆ’ ಎಂದು ಶಿವಸೇನಾದ ಪ್ರಿಯಾಂಕಾ ಚತುರ್ವೇದಿ ಆರೋಪಿಸಿದ್ದಾರೆ.

ಏಕೈಕ ದಾರಿ: ವಿಪಕ್ಷ ನಾಯಕರ ಪ್ರತಿಪಾದನೆ

‘ನಮ್ಮ ಮಾತನ್ನು ಸರ್ಕಾರವು ಕೇಳಿಸಿಕೊಳ್ಳುವಂತೆ ಮಾಡಲು ಮಸೂದೆ ಮಧ್ಯೆ ಮಾತನಾಡುವುದೇ ನಮಗೆ ಉಳಿದಿರುವ ಏಕೈಕ ದಾರಿ’ ಎಂದು ವಿರೋಧ ಪಕ್ಷಗಳ ನಾಯಕರು ಪ್ರತಿಪಾದಿಸಿದ್ದಾರೆ.

‘ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ವಿರೋಧ ಪಕ್ಷಗಳ ನಾಯಕರು ಮಾತನಾಡುವಾಗ ಪೆಗಾಸಸ್ ಮತ್ತು ರೈತರ ಪ್ರತಿಭಟನೆ ಎಂಬ ಎರಡು ಪದಗಳನ್ನು ಬಳಸಿದ ತಕ್ಷಣ ಗದ್ದಲ ಎಬ್ಬಿಸಲಾಗುತ್ತದೆ. ಅವರ ಮೈಕ್ ಅನ್ನು ಬಂದ್ ಮಾಡಲಾಗುತ್ತದೆ. ನಾವು ಮಾತನಾಡುವ ಎಲ್ಲಾ ಅಧಿಕೃತ ಮಾರ್ಗಗಳೂ ಬಂದ್ ಆದಾಗ, ನಮ್ಮ ಮಾತನ್ನು ಅವರು ಕೇಳಿಸಿಕೊಳ್ಳುವಂತೆ ಮಾಡಲು ನಮಗೆ ಉಳಿದ ಏಕೈಕ ದಾರಿ ಇದು’ ಎಂದು ಡೆರೆಕ್ ಒಬ್ರಿಯಾನ್ ಹೇಳಿದ್ದಾರೆ.

‘ಪ್ರಧಾನಿ ನರೇಂದ್ರ ಮೋದಿ ಅವರು ಧೈರ್ಯಗುಂದಿದ್ದಾರೆ. ಸಂಸತ್ತಿನಲ್ಲಿ ಕೇಳಲಾದ ಪ್ರಶ್ನೆಗಳಿಗೆ ಉತ್ತರಿಸಲು ಅವರೇಕೆ ಧೈರ್ಯ ತೋರುತ್ತಿಲ್ಲ? ಈ ಬಗ್ಗೆ ಚರ್ಚೆ ನಡೆಸಲು ವಿರೋಧ ಪಕ್ಷಗಳು ಸಿದ್ಧವಿವೆ. ಆದರೆ, ಬಿಜೆಪಿ ಸಂಸತ್ತಿನ ಕಲಾಪಗಳನ್ನು ಸ್ಥಗಿತಗೊಳಿಸುತ್ತಿದೆ ಮತ್ತು ಸತ್ಯ ಜನರನ್ನು ತಲುಪುವುದನ್ನು ತಡೆಯುತ್ತಿದೆ’ ಎಂದು ಮಲ್ಲಿಕಾರ್ಜುನ ಖರ್ಗೆ ಟ್ವೀಟ್ ಮಾಡಿದ್ದಾರೆ.

ಡೆರೆಕ್ ಒಬ್ರಿಯಾನ್

‘ನಮ್ಮ ಮಾತನ್ನು ಕೇಳಿಸಿಕೊಳ್ಳಲು ಸರ್ಕಾರ ಸಿದ್ಧವಿಲ್ಲ ಎಂದು ಗೊತ್ತಾದ ನಂತರವೇ, ನಾವು ನಮ್ಮ ಮಾತನ್ನು ಮಸೂದೆಗಳ ಮೇಲಿನ ಚರ್ಚೆಯ ಮಧ್ಯೆ ಆಡಬೇಕು ಎಂಬುದು ನಮಗೆ ಮನದಟ್ಟಾಯಿತು’ ಎಂದು ಪ್ರಿಯಾಂಕಾ ಚತುರ್ವೇದಿ ಹೇಳಿದ್ದಾರೆ.

‘ಚರ್ಚೆಗೆ ಅವಕಾಶ ನೀಡಿ ಎಂಬ ನಮ್ಮ ಬೇಡಿಕೆಗೆ ಸರ್ಕಾರ ಒಪ್ಪುತ್ತಲೇ ಇಲ್ಲ. ನಮ್ಮ ಮೈಕ್‌ಗಳನ್ನು ಹೇಗೆ ಆಫ್ ಮಾಡಲಾಗುತ್ತಿದೆ ಎಂಬುದನ್ನು ಎಲ್ಲರೂ ನೋಡಿದ್ದೀರಿ. ಈ ತಂತ್ರವನ್ನು ಅಧಿವೇಶನದ ಮುಂದಿನ ಕಲಾಪಗಳಲ್ಲೂ ಅನುಸರಿಸುತ್ತೇವೆ. ಎಲ್ಲಾ ವಿರೋಧ ಪಕ್ಷಗಳೂ ಇದಕ್ಕೆ ಬದ್ಧವಾಗಿವೆ. ಸರ್ಕಾರ ಚರ್ಚೆಗೆ ಬರುವವರೆಗೂ ನಾವು ನಮ್ಮ ಪಟ್ಟನ್ನು ಸಡಿಲಿಸುವುದಿಲ್ಲ’ ಎಂದು ಸಿಪಿಎಂನ ಎಳಮರಂ ಕರೀಂ ಅವರು ಹೇಳಿದ್ದಾರೆ.

ಪ್ರಜಾಪ್ರಭುತ್ವದ ಅಣಕ: ಶಶಿ ತರೂರ್

‘ಎನ್‌ಡಿಎ-ಬಿಜೆಪಿ ಸರ್ಕಾರವು ಪ್ರಜಾಪ್ರಭುತ್ವವನ್ನು ಅಣಕ ಮಾಡುತ್ತಿದೆ’ ಎಂದು ಕಾಂಗ್ರೆಸ್ ಸಂಸದ ಶಶಿ ತರೂರ್ ಆರೋಪಿಸಿದ್ದಾರೆ. ಪಿಟಿಐಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಅವರು ಈ ಮಾತು ಹೇಳಿದ್ದಾರೆ.

‘ಪ್ರಶ್ನೆಗಳಿಗೆ ಉತ್ತರಿಸಲು ಮತ್ತು ತನ್ನ ಹೊಣೆಗಾರಿಕೆಯನ್ನು ನಿರಾಕರಿಸುವ ಮೂಲಕ ಎನ್‌ಡಿಎ-ಬಿಜೆಪಿ ಸರ್ಕಾರವು ಪ್ರಜಾಪ್ರಭುತ್ವ ಮತ್ತು ತಾನು ಪ್ರತಿನಿಧಿ ಎಂದು ಹೇಳಿಕೊಳ್ಳುತ್ತಿರುವ ಸಾಮಾನ್ಯ ಭಾರತೀಯರನ್ನು ಅಣಕ ಮಾಡುತ್ತಿದೆ. ತನ್ನ ಕಾರ್ಯಸೂಚಿಗಳಿಗೆ ಒಪ್ಪಿಗೆ ನೀಡುವ ರಬ್ಬರ್ ಸ್ಟ್ಯಾಂಪ್ ಮತ್ತು ತನ್ನ ಏಕಪಕ್ಷೀಯ ನಿರ್ಧಾರಗಳನ್ನು ಪ್ರಕಟಿಸುವ ನೋಟಿಸ್ ಬೋರ್ಡ್‌ನ ಮಟ್ಟಕ್ಕೆ ಸಂಸತ್ ಭವನವನ್ನು ಬಿಜೆಪಿ ಸರ್ಕಾರ ಕುಗ್ಗಿಸಿದೆ’ ಎಂದು ತರೂರ್ ಟೀಕಿಸಿದ್ದಾರೆ.

‘ಪೆಗಾಸಸ್ ಚರ್ಚೆ ನಡೆಯಬಾರದು ಎಂಬುದು ಬಿಜೆಪಿಯ ಉದ್ದೇಶವಾಗಿತ್ತು. ಹೀಗಾಗಿಯೇ ಮಾಹಿತಿ ತಂತ್ರಜ್ಞಾನ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿ ಸಭೆಯಲ್ಲಿ ಕೋರಂ ಇರದಂತೆ ಬಿಜೆಪಿ ಸದಸ್ಯರು ನೋಡಿಕೊಂಡರು. ಜತೆಗೆ ಸಭೆಯಲ್ಲಿ ಹಾಜರಾಗಬೇಕಿದ್ದ ಮೂರು ಸಚಿವಾಲಯಗಳ ಕಾರ್ಯದರ್ಶಿಗಳಿಗೆ, ಸಭೆಗೆ ಹಾಜರಾಗಬೇಡಿ ಎಂಬ ನಿರ್ದೇಶನ ನೀಡಿರಬೇಕು. ಹೀಗಾಗಿಯೇ ಅವರು ಕೊನೆ ಕ್ಷಣದಲ್ಲಿ ಸಭೆಗೆ ಗೈರುಹಾಜರಾದರು. ಮುಂದೆ ನಡೆಯಲಿರುವ ಸಭೆಗೆ ಅಧಿಕಾರಿಗಳು ಬರುತ್ತಾರೆ ಎಂದುಕೊಂಡಿದ್ದೇನೆ’ ಎಂದು ಅವರು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಕಡಲ ಭದ್ರತೆ: ಮೋದಿ ಅಧ್ಯಕ್ಷತೆಯಲ್ಲಿ ವಿಶ್ವಸಂಸ್ಥೆ ಭದ್ರತಾ ಮಂಡಳಿ ಚರ್ಚೆ

ನವದೆಹಲಿ: ಕಡಲ ಭದ್ರತೆ ಕುರಿತು ಸೋಮವಾರ ನಡೆಯಲಿರುವ ವಿಶ್ವಸಂಸ್ಥೆಯು ಭದ್ರತಾ ಮಂಡಳಿಯ ಉನ್ನತ ಮಟ್ಟದ ಮುಕ್ತ ಚರ್ಚೆಯ ಅಧ್ಯಕ್ಷತೆಯನ್ನು ಪ್ರಧಾನಿ ನರೇಂದ್ರ ಮೋದಿ ವಿಡಿಯೊ ಕಾನ್ಫರೆನ್ಸ್ ಮೂಲಕ ವಹಿಸಲಿದ್ದಾರೆ.

ಪ್ರಧಾನಿ ಮೋದಿ ಅವರು, ಭದ್ರತಾ ಮಂಡಳಿಯ ಮುಕ್ತ ಚರ್ಚೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುತ್ತಿರುವ ಭಾರತದ ಮೊದಲ ಪ್ರಧಾನಿ ಆಗಿದ್ದಾರೆ ಎಂದು ಪ್ರಧಾನಿ ಕಚೇರಿ ತಿಳಿಸಿದೆ.

ಮಂಡಳಿಯ ಸದಸ್ಯರು ಮತ್ತು ಹಲವು ರಾಷ್ಟ್ರಗಳ ನಾಯಕರು ಚರ್ಚೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಕಡಲ ಭದ್ರತೆ ಹೆಚ್ಚಿಸುವುದು ಹಾಗೂ ಅಂತರರಾಷ್ಟ್ರೀಯ ಸಹಕಾರ ಸೇರಿದಂತೆ ಅಪರಾಧಗಳನ್ನು ತಡೆಯಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಪ್ರಮುಖವಾಗಿ ಚರ್ಚೆ ನಡೆಯಲಿದೆ.

ಈಗಾಗಲೇ ವಿಶ್ವಸಂಸ್ಥೆ ಭದ್ರತಾ ಮಂಡಳಿ ಈ ವಿಷಯದ ಬಗ್ಗೆ ನಿರ್ಣಯಗಳನ್ನು ಕೈಗೊಂಡಿದೆ. ಆದರೆ, ಈ ವಿಷಯ ಒಂದೇ ರಾಷ್ಟ್ರಕ್ಕೆ ಸೀಮಿತವಾಗಿಲ್ಲ. ಹೀಗಾಗಿ, ಈ ಬಾರಿ ಸಮಗ್ರವಾಗಿ ಚರ್ಚಿಸಿ ಪರಿಹಾರ ರೂಪಿಸಲಾಗುವುದು ಎಂದು ಪ್ರಧಾನಿ ಕಚೇರಿ ತಿಳಿಸಿದೆ.

ಎಂಆರ್‌ಪಿ ಪ್ರಕಟಿಸದ ಕಂಪನಿಗಳಿಗೆ ನೋಟಿಸ್

ಬೆಂಗಳೂರು: ಸರ್ಕಾರದ ಸಹಾಯಧನ ಯೋಜನೆಗಳ ಅಡಿಯಲ್ಲಿ ಪೂರೈಕೆಯಾಗುವ ಕೃಷಿ ಯಂತ್ರೋಪಕರಣಗಳ ಗರಿಷ್ಠ ಮಾರಾಟ ದರವನ್ನು (ಎಂಆರ್‌ಪಿ) ವೆಬ್‌ಸೈಟ್‌ಗಳಲ್ಲಿ ಪ್ರಕಟಿಸದ 21 ಕಂಪನಿಗಳಿಗೆ ಕೃಷಿ ಇಲಾಖೆಯ ಆಯುಕ್ತರು ನೋಟಿಸ್ ಜಾರಿ ಮಾಡಿದ್ದಾರೆ.

ವಿವಿಧ ಯೋಜನೆಗಳ ಅಡಿಯಲ್ಲಿ ಪೂರೈಕೆಯಾಗುವ ಕೃಷಿ ಯಂತ್ರೋಪಕರಣಗಳ ಉತ್ಪಾದಕರು ಗರಿಷ್ಠ ಮಾರಾಟ ದರವನ್ನು ವೆಬ್‌ಸೈಟ್‌ನಲ್ಲಿ ಬಹಿರಂಗಪಡಿಸುವುದನ್ನು ಕಡ್ಡಾಯಗೊಳಿಸಿ ಮೇ 11 ರಂದು ಆದೇಶ ಹೊರಡಿಸಲಾಗಿತ್ತು. ಅದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಕೇಂದ್ರ ಕೃಷಿ ಖಾತೆಯ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಸೂಚನೆ ನೀಡಿದ್ದಾರೆ. ಆ ಬಳಿಕ ಕೃಷಿ ಆಯುಕ್ತರು ಕ್ರಮ ಕೈಗೊಂಡಿದ್ದಾರೆ.

ಈವರೆಗೂ ತಮ್ಮ ಉತ್ಪನ್ನಗಳ ಗರಿಷ್ಠ ಮಾರಾಟ ದರ ಪ್ರಕಟಿಸದ 21 ಕಂಪನಿಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ. ಆಗಸ್ಟ್ 16 ರೊಳಗೆ ದರವನ್ನು ಪ್ರಕಟಿಸಿ, ವರದಿ ನೀಡುವಂತೆ ಸೂಚಿಸಲಾಗಿದೆ. ಗಡುವಿನೊಳಗೆ ಸೂಚನೆ ಪಾಲಿಸದೇ ಇದ್ದಲ್ಲಿ, ಅಂತಹ ಕಂಪನಿಗಳನ್ನು ಸರ್ಕಾರದ ಯೋಜನೆಗಳ ಅಡಿಯಲ್ಲಿ ಯಂತ್ರೋಪಕರಣ ಪೂರೈಸುವ ಉತ್ಪಾದಕರ ಪಟ್ಟಿಯಿಂದ ಕೈಬಿಡುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಅಂತರ ಮರೆತ ಜನ...

‘ಹರ್ಯಾಲಿ ಅಮಾವಾಸ್ಯೆ’ ಪ್ರಯುಕ್ತ ಉತ್ತರ ಪ್ರದೇಶದ ವೃಂದಾವನದ ಬಾಂಕೆ ಬಿಹಾರಿ ದೇವಾಲಯದಲ್ಲಿ ಅಪಾರ ಸಂಖ್ಯೆಯಲ್ಲಿ ಸೇರಿದ್ದ ಭಕ್ತರು ಕೋವಿಡ್–19 ನಿಯಮಗಳನ್ನು ಉಲ್ಲಂಘಿಸಿದ್ದರು – ಪಿಟಿಐ ಚಿತ್ರ

‘ಕಾಂಗ್ರೆಸ್, ಜೆಡಿಎಸ್ ಪಕ್ಷಗಳಿಂದ ಅಲ್ಪಸಂಖ್ಯಾತರ ಅಭಿವೃದ್ಧಿಯಾಗಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್, ಜೆಡಿಎಸ್ ಸೇರಿದಂತೆ ವಿರೋಧ ಪಕ್ಷಗಳಿಂದ ಅಲ್ಪಸಂಖ್ಯಾತರ ಅಭಿವೃದ್ಧಿ ಆಗಿಲ್ಲ. ಬಿಜೆಪಿಯು ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಗರಿಷ್ಠ ಪ್ರಮಾಣದ ಕೆಲಸ ಮಾಡುತ್ತಿದೆ ಎಂದು ಬಿಜೆಪಿ ಅಲ್ಪಸಂಖ್ಯಾತರ ಮೋರ್ಚಾದ ರಾಷ್ಟ್ರೀಯ ಅಧ್ಯಕ್ಷ ಜಮಾಲ್ ಸಿದ್ದಿಕ್ಕಿ ಭಾನುವಾರ ಹೇಳಿದರು.

ನಗರದಲ್ಲಿ ನಡೆದ ಬಿಜೆಪಿ ಅಲ್ಪಸಂಖ್ಯಾತರ ಮೋರ್ಚಾದ ರಾಜ್ಯ ಕಾರ್ಯಕಾರಿಣಿ ಉದ್ಘಾಟಿಸಿ ಮಾತನಾಡಿದ ಅವರು, ‘ಕಾಂಗ್ರೆಸ್, ಜೆಡಿಎಸ್ ಸೇರಿದಂತೆ ಇತರ ಪಕ್ಷಗಳು ಕೇವಲ ಕುಟುಂಬ ರಾಜಕಾರಣಕ್ಕೆ ಸೀಮಿತವಾಗಿವೆ’ ಎಂದು ಅವರು ಟೀಕಿಸಿದರು.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿ, ‘ವಿರೋಧ ಪಕ್ಷಗಳು ಅಧಿಕಾರಕ್ಕಾಗಿ ಜನರನ್ನು ಎತ್ತಿಕಟ್ಟುವ ಕೆಲಸ ಮಾಡುತ್ತಿವೆ. ಬಿಜೆಪಿ ಅಲ್ಪಸಂಖ್ಯಾತರ ವಿರುದ್ಧವಾಗಿದೆ ಎಂದು ಬಿಂಬಿಸುವ ಪ್ರಯತ್ನ ಮಾಡುತ್ತಿವೆ. ಈ ಅಭಿಪ್ರಾಯವನ್ನು ತೊಡೆದುಹಾಕಲು ಪಕ್ಷದ ಕಾರ್ಯಕರ್ತರು ಶ್ರಮಿಸಬೇಕು’ ಎಂದು ಸಲಹೆ ನೀಡಿದರು.

‘ದೇಶದ ಅಭಿವೃದ್ಧಿಯ ಕುರಿತು ನಮ್ಮಲ್ಲಿ ಸ್ಪಷ್ಟತೆ ಇರಬೇಕು. ಹಿಂದೂ, ಮುಸ್ಲಿಂ, ಕ್ರೈಸ್ತ ಧರ್ಮೀಯರ ನಡುವೆ ಸ್ಪರ್ಧೆ ಬೇಡ. ನಾವು ಅಮೆರಿಕ, ಜಪಾನ್ ಸೇರಿದಂತೆ ಬೇರೆ ದೇಶಗಳ ಜತೆ ಸ್ಪರ್ಧಿಸಲು ಸಿದ್ಧರಾಗಬೇಕು’ ಎಂದು ಹೇಳಿದರು.

ಬಿಜೆಪಿ ಅಲ್ಪಸಂಖ್ಯಾತರ ಮೋರ್ಚಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸೈಯದ್ ಇಬ್ರಾಹಿಂ ಮಾತನಾಡಿದರು.

ಈ ವೇಳೆ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್, ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಖ್ತಾರ್ ಪಠಾಣ್, ಹಜ್ ಸಮಿತಿ ಅಧ್ಯಕ್ಷ ರವೂಫುದ್ದೀನ್ ಮತ್ತಿತರರು ಉಪಸ್ಥಿತರಿದ್ದರು.

ಬಿಜೆಪಿ ಅಲ್ಪಸಂಖ್ಯಾತರ ಮೋರ್ಚಾ ರಾಜ್ಯ ಕಾರ್ಯಕಾರಿಣಿಯಲ್ಲಿ ಮೋರ್ಚಾದ ರಾಷ್ಟ್ರೀಯ ಅಧ್ಯಕ್ಷ ಜಾಮಲ್ ಸಿದ್ದಿಕ್ಕಿ ಮಾತನಾಡಿದರು. ಬಿಜೆಪಿ ರಾಜ್ಯ ಘಟಕದ ಕಾರ್ಯದರ್ಶಿ ಜಗದೀಶ್ ಹಿರೇಮನಿ, ಅಲ್ಪಸಂಖ್ಯಾತರ ಮೋರ್ಚಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸೈಯದ್ ಇಬ್ರಾಹಿಂ ಮತ್ತು ರಾಜ್ಯ ಘಟಕದ ಅಧ್ಯಕ್ಷ ಮುಜಾಮಿಲ್ ಅಹ್ಮದ್ ಬಾಬು ಇದ್ದರು

– ಪ್ರಜಾವಾಣಿ ಚಿತ್ರ

ಪ್ಲಾಸ್ಟಿಕ್ ತ್ರಿವರ್ಣ ಧ್ವಜ ಬಳಸದಂತೆ ಸೂಚನೆ

ನವದೆಹಲಿ(ಪಿಟಿಐ): ‘ಜೈವಿಕವಾಗಿ ವಿಘಟನೆ ಮಾಡಲು ಸಾಧ್ಯವಾಗದೇ ಇರುವ ಕಾರಣ ಸಾರ್ವಜನಿಕರು ಪ್ಲಾಸ್ಟಿಕ್‌ನ ತ್ರಿವರ್ಣ ಧ್ವಜವನ್ನು ಬಳಸದಂತೆ ಎಚ್ಚರ ವಹಿಸಬೇಕು’ ಎಂದು ಕೇಂದ್ರ ಗೃಹ ಸಚಿವಾಲಯವು ಸ್ವಾತಂತ್ರ್ಯ ದಿನಾಚರಣೆಗೂ ಮುನ್ನ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚನೆ ನೀಡಿದೆ.

‘ರಾಷ್ಟ್ರಧ್ವಜವು ದೇಶದ ಜನರ ಭರವಸೆ ಮತ್ತು ಆಕಾಂಕ್ಷೆಗಳನ್ನು ಪ್ರತಿನಿಧಿಸುತ್ತದೆ. ಹಾಗಾಗಿ, ಅದು ಗೌರವದ ಸ್ಥಾನವನ್ನು ಪಡೆದುಕೊಂಡಿದೆ. ಆದರೆ, ರಾಷ್ಟ್ರಧ್ವಜವನ್ನು ಪ್ರದರ್ಶಿಸುವ ಕುರಿತು ಇರುವ ಕಾನೂನು, ಆಚರಣೆ ಮತ್ತು ಸಂಪ್ರದಾಯಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರು ಮತ್ತು ಸರ್ಕಾರದ ಸಂಸ್ಥೆಗಳಲ್ಲಿ ಅರಿವಿನ ಕೊರತೆ ಇದೆ. ಪ್ಲಾಸ್ಟಿಕ್‌ನ ಧ್ವಜಗಳು ಕಾಗದದ ಧ್ವಜಗಳಂತೆ ಜೈವಿಕವಾಗಿ ವಿಘಟನೆಯಾಗುವುದಿಲ್ಲ. ಇವು ದೀರ್ಘಕಾಲದವರೆಗೂ ಕೊಳೆಯುವುದಿಲ್ಲ. ಹಾಗಾಗಿ, ಪ್ಲಾಸ್ಟಿಕ್ ತ್ರಿವರ್ಣ ಧ್ವಜ ಬಳಸದಂತೆ ಎಚ್ಚರ ವಹಿಸುವುದು ಸೂಕ್ತ’ ಎಂದು ಸಚಿವಾಲಯವು ಹೇಳಿದೆ.

ಲಸಿಕೆ ಪ್ರಮಾಣ ಪತ್ರ ವಾಟ್ಸ್‌ಆ್ಯಪ್‌ನಲ್ಲಿ ಲಭ್ಯ

ನವದೆಹಲಿ(ಪಿಟಿಐ): ಕೋವಿಡ್ ಲಸಿಕೆ ಪಡೆದ ನಾಗರಿಕರು ಇನ್ನು ಮುಂದೆ ವಾಟ್ಸ್‌ಆ್ಯಪ್ ಮೂಲಕವೇ ಕೆಲವೇ ಸೆಕೆಂಡ್‌ಗಳಲ್ಲಿ ಪ್ರಮಾಣಪತ್ರ ಪಡೆದುಕೊಳ್ಳಬಹುದು.

ಸುಲಭವಾದ ಮೂರು ಹಂತಗಳಲ್ಲಿ ಈ ಪ್ರಮಾಣಪತ್ರ ಪಡೆದುಕೊಳ್ಳಬಹುದು ಎಂದು ಕೇಂದ್ರ ಆರೋಗ್ಯ ಸಚಿವ ಮಾನ್ಸುಖ್ ಮಾಂಡವಿಯ ಅವರ ಕಚೇರಿ ತಿಳಿಸಿದೆ.

ವಾಟ್ಸ್‌ಆ್ಯಪ್ ಸಂಖ್ಯೆ +91-9013151515 ಅನ್ನು ಮೊಬೈಲ್‌ನಲ್ಲಿ ’ಸೇವ್’ ಮಾಡಿಕೊಳ್ಳಬೇಕು. ನಂತರ, ‘covid certificate' ಎಂದು ವಾಟ್ಸ್‌ಆ್ಯಪ್ ಮೂಲಕವೇ ಸಂದೇಶ ಕಳುಹಿಸಬೇಕು. ಈ ಸಂದೇಶ ಕಳುಹಿಸಿದ ತಕ್ಷಣ ಮೊಬೈಲ್‌ಗೆ ‘ಒಟಿಪಿ’ ಬರಲಿದೆ. ‘ಒಟಿಪಿ’ ನಮೂದಿಸಿದರೆ ಕೆಲವೇ ಸೆಕೆಂಡ್‌ಗಳಲ್ಲಿ ವಾಟ್ಸ್‌ಆ್ಯಪ್‌ನಲ್ಲಿ ಪ್ರಮಾಣಪತ್ರ ಲಭ್ಯವಾಗಲಿದೆ

‘ತಂತ್ರಜ್ಞಾನ ಬಳಸುವ ಮೂಲಕ ನಾಗರಿಕರ ಬದುಕಿನಲ್ಲಿ ಹೊಸ ಕ್ರಾಂತಿ ಮೂಡಿಸಲಾಗುತ್ತಿದೆ’ ಎಂದು ಮಾನ್ಸುಖ್ ಮಾಂಡವಿಯ ತಿಳಿಸಿದ್ದಾರೆ.

ಸದ್ಯ ಕೋವಿನ್ ಪೋರ್ಟಲ್ ಮೂಲಕ ಪ್ರಮಾಣಪತ್ರ ಪಡೆದುಕೊಳ್ಳುವ ವ್ಯವಸ್ಥೆ ಇದೆ.

ಕೋವಿಡ್: 29.18 ಲಕ್ಷಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 1,598 ಮಂದಿ ಕೊರೊನಾ ಸೋಂಕಿತರಾಗಿರುವುದು ಭಾನುವಾರ ದೃಢಪಟ್ಟಿದೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.18 ಲಕ್ಷ ದಾಟಿದೆ.

ಒಂದು ದಿನದಲ್ಲಿ 1.46 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಶೇ 1.09ರಷ್ಟು ಪ್ರಕರಣ ದೃಢಪಟ್ಟಿದೆ. 16 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 10 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ರಾಮನಗರದಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 438, ಮೈಸೂರಿನಲ್ಲಿ 98 ಹಾಗೂ ಕೊಡಗಿನಲ್ಲಿ 83 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 348 ಹಾಗೂ ಉಡುಪಿಯಲ್ಲಿ 129 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ವರದಿಯಾಗಿವೆ. ಕೋವಿಡ್ ಪೀಡಿತರಲ್ಲಿ 20 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ.

9 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ದಕ್ಷಿಣ ಕನ್ನಡದಲ್ಲಿ 6, ಹಾಸನ ಹಾಗೂ ಕೋಲಾರದಲ್ಲಿ ತಲಾ 3, ಉತ್ತರ ಕನ್ನಡ ಹಾಗೂ ಧಾರವಾಡದಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ. ಬೆಂಗಳೂರು ಸೇರಿದಂತೆ ನಾಲ್ಕು ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ.

ಮರಣ ಪ್ರಮಾಣ ದರವು ಶೇ 1.25 ರಷ್ಟು ವರದಿಯಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ 36,793ಕ್ಕೆ ಏರಿದೆ. ಸೋಂಕಿತರಲ್ಲಿ 1,914 ಮಂದಿ ಚೇತರಿಸಿಕೊಂಡಿದ್ದಾರೆ.

ಗುಣಮುಖರಾದವರ ಸಂಖ್ಯೆ 28.57 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 23,930ಕ್ಕೆ ಇಳಿಕೆಯಾಗಿದೆ.

ರಾಜ್ಯ ಕೋವಿಡ್ ಅಂಕಿ–ಅಂಶ

29,18,525 ▲ ಒಟ್ಟು ಸೋಂಕಿತರು (29,16,927 ನಿನ್ನೆಯ ವಿವರ)

23,930 ▼ ಸಕ್ರಿಯ ಪ್ರಕರಣಗಳು

28,57,776 ▲ ಗುಣಮುಖರಾದವರು

36,793 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,598	▼
ಗುಣಮುಖ	1,914	▼
ಸಾವು	20	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಜಮ್ಮು–ಕಾಶ್ಮೀರ: ಜೆಇಐ ಸದಸ್ಯರ ಮನೆಯಲ್ಲಿ ಎನ್‌ಐಎ ಶೋಧ

ಶ್ರೀನಗರ(ಪಿಟಿಐ): ‘ಜಮ್ಮು–ಕಾಶ್ಮೀರದಲ್ಲಿ ಜಮಾತ್–ಎ–ಇಸ್ಲಾಮಿ ಸಂಘಟನೆಯ(ಜೆಇಐ) ಸದಸ್ಯರಿಗೆ ಸಂಬಂಧಿಸಿದ ಸ್ಥಳಗಳ ಮೇಲೆ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಭಾನುವಾರ ಶೋಧ ನಡೆಸಿದೆ’ ಎಂದು ಅಧಿಕಾರಿಗಳು ತಿಳಿಸಿದರು.

‘ಜಮ್ಮು ಮತ್ತು ಕಾಶ್ಮೀರದ ರಾಮ್‌ಬನ್, ಕಿಶ್ತವಾರ್ ಮತ್ತು ರಜೌರಿ ಸೇರಿದಂತೆ ಹಲವೆಡೆ ಜೆಇಐ ಸದಸ್ಯರಿಗೆ ಸಂಬಂಧಿಸಿದ ಮನೆಗಳು, ಕಚೇರಿಗಳು ಸೇರಿ 56ಕ್ಕೂ ಹೆಚ್ಚು ಸ್ಥಳಗಳಲ್ಲಿ ರಾಷ್ಟ್ರೀಯ ತನಿಖಾ ದಳವು ಶೋಧ ನಡೆಸಿದೆ’ ಎಂದು ಅವರು ಮಾಹಿತಿ ನೀಡಿದರು.

‘ಪೊಲೀಸರು ಮತ್ತು ಸಿಆರ್‌ಪಿಎಫ್ ನೆರವಿನಿಂದ ಎನ್‌ಐಎ ಈ ಶೋಧ ನಡೆಸಿದೆ. ಈ ಸಂಘಟನೆಯ ಭಯೋತ್ಪಾದಕ ಚಟುವಟಿಕೆಗಳಿಗೆ ಸಂಬಂಧಿಸಿದ ಪ್ರಕರಣದ ತನಿಖೆಯ ಭಾಗವಾಗಿ ಶೋಧ ನಡೆದಿದೆ’ ಎಂದು ಹೇಳಿದರು.

ಫೆಬ್ರುವರಿ 2019ರಲ್ಲಿ ಕೇಂದ್ರ ಸರ್ಕಾರವು ಭಯೋತ್ಪಾದನೆ ತಡೆ ಕಾಯ್ದೆಯಡಿ ಜಮಾತ್–ಎ–ಇಸ್ಲಾಮಿ ಸಂಘಟನೆಯ ಮೇಲೆ ಐದು ವರ್ಷಗಳ ನಿಷೇಧ ಹೇರಿದೆ.

‘ರಿಷಿ ಸುನಾಕ್‌ಗೆ ಹಿಂಬಡ್ತಿ: ಎಚ್ಚರಿಕೆ’

ಲಂಡನ್(ಪಿಟಿಐ): ಕೋವಿಡ್ ನಿಯಂತ್ರಿಸಲು ಜಾರಿಗೊಳಿಸಿರುವ ಸಂಚಾರದ ನಿರ್ಬಂಧಗಳನ್ನು ಸಡಿಲಿಸುವಂತೆ ಕೋರಿ ಬರೆದಿದ್ದ ಪತ್ರವನ್ನು ಹಣಕಾಸು ಸಚಿವ ರಿಷಿ ಸುನಾಕ್ ಮಾಧ್ಯಮಗಳಿಗೆ ಸೋರಿಕೆ ಮಾಡಿದ್ದಾರೆ ಎನ್ನಲಾದ ಕುರಿತು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಿಷಿ ಸುನಾಕ್

ಈಗಿರುವ ಹಣಕಾಸು ಖಾತೆಯನ್ನು ವಾಪಸ್ ಪಡೆದು ಆರೋಗ್ಯ ಖಾತೆ ನೀಡುವ ಮೂಲಕ ರಿಷಿ ಅವರಿಗೆ ಹಿಂಬಡ್ತಿ ನೀಡುವ ಎಚ್ಚರಿಕೆಯನ್ನು ಜಾನ್ಸನ್ ನೀಡಿದ್ದಾರೆ. ರಿಷಿ ಸುನಾಕ್ ಭಾರತ ಮೂಲದವರು.

‘ರಿಷಿ ಮುಂದಿನ ಆರೋಗ್ಯ ಸಚಿವರಾಗಬಹುದು. ಅಲ್ಲಿ ಅವರು ಅತ್ಯುತ್ತಮವಾಗಿ ಕಾರ್ಯನಿರ್ವಹಿಸಬಹುದು’ ಎಂದು ಜಾನ್ಸನ್ ಅವರು ಅಧಿಕಾರಿಗಳ ಮುಂದೆ ಹೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದೇಶದ ಆರ್ಥಿಕತೆಗೆ ಧಕ್ಕೆಯಾಗುತ್ತಿರುವುದರಿಂದ ಸಂಚಾರದ ನಿರ್ಬಂಧಗಳನ್ನು ಸಡಿಲಗೊಳಿಸುವ ಅಗತ್ಯವಿದೆ ಎಂದು ರಿಷಿ ಸುನಾಕ್ ಅವರು ಕಳೆದ ವಾರ ಜಾನ್ಸನ್ ಅವರಿಗೆ ಪತ್ರ ಬರೆದಿದ್ದರು. ಆದರೆ, ಮಾಧ್ಯಮಗಳಲ್ಲಿ ಈ ಬಗ್ಗೆ ವರದಿ ಪ್ರಕಟವಾದ ಬಳಿಕವೇ ಜಾನ್ಸನ್ ಅವರಿಗೆ ಪತ್ರದ ವಿಷಯ ಗಮನಕ್ಕೆ ಬಂದಿದೆ ಎಂದು ‘ಸಂಡೇ ಟೈಮ್ಸ್’ ವರದಿ ಮಾಡಿದೆ.

ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ವಿರೋಧ

ತಜ್ಞರು, ಶಿಕ್ಷಣ ವಲಯದ ಪ್ರಮುಖರ ಜೊತೆ ಚರ್ಚೆಗೆ ಸಿದ್ದರಾಮಯ್ಯ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಸಕ್ತ ಶೈಕ್ಷಣಿಕ ವರ್ಷದಿಂದ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸಿ ಹೊರಡಿಸಿರುವ ಆದೇಶವನ್ನು ತಕ್ಷಣ ಹಿಂಪಡೆಯಬೇಕು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

‘ಚರ್ಚೆ ನಡೆಸದೇ ಆದೇಶ ಹೊರಡಿಸಿರುವುದು ಸರ್ವಾಧಿಕಾರಿ ನಿಲುವು. ಒಕ್ಕೂಟ ತತ್ವಕ್ಕೆ ಮಾಡಿರುವ ಅವಮಾನ’ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದು, ವಿಸ್ತೃತ ಚರ್ಚೆ ನಂತರವೇ ನೀತಿಯ ಅನುಷ್ಠಾನ ಕುರಿತು ತೀರ್ಮಾನಿಸಬೇಕು ಎಂದಿದ್ದಾರೆ.

'ಶಿಕ್ಷಣ ತಜ್ಞರು, ಉಪನ್ಯಾಸಕರು, ಹಿರಿಯರು ಮತ್ತು ವಿರೋಧ ಪಕ್ಷಗಳ ಮುಖಂಡರು ಈ ನೀತಿಯನ್ನು ತರಾತುರಿಯಲ್ಲಿ ಹೇರಬೇಡಿ ಎಂದಿದ್ದರು. ಸಾಧಕ–ಬಾಧಕಗಳ ಬಗ್ಗೆ ಚರ್ಚಿಸಿದ ನಂತರ ತೀರ್ಮಾನಿಸಿ ಎಂದು ಹೇಳಿದ್ದೆವು. ಆ ರೀತಿ ಮಾಡದೆ, ನೀತಿ ಜಾರಿಗೊಳಿಸಿ ಆದೇಶಿಸಲಾಗಿದೆ. ಬಡವರ, ಮಧ್ಯಮ ವರ್ಗದವರ ಗುಣಮಟ್ಟದ ಉನ್ನತ ಶಿಕ್ಷಣ ಪಡೆಯುವ ಕನಸಿಗೆ ನೇರವಾಗಿ ಬೆಂಕಿ ಇಡುವ ಪ್ರಕ್ರಿಯೆಯ ಭಾಗವಾಗಿ ಈ ನೀತಿ ಜಾರಿಗೊಳಿಸಲಾಗುತ್ತಿದೆ’ ಎಂದು ಟೀಕಿಸಿದ್ದಾರೆ.

‘ಕನ್ನಡ ಭಾಷಾ ವಿಷಯವನ್ನು ಕೇವಲ ಎರಡು ಸೆಮಿಸ್ಟರ್‌ಗಳಿಗೆ, ಅಂದರೆ ಒಂದು ವರ್ಷ ಕಲಿಸುವುದಾಗಿ ಹಿಂದೆ ಹೇಳಿದ್ದರು. ತೀವ್ರ ವಿರೋಧ ವ್ಯಕ್ತವಾದ ಬಳಿಕ ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥನಾರಾಯಣ ಸಮಸ್ಯೆ ಸರಿಪಡಿಸುವುದಾಗಿ ತಿಳಿಸಿದ್ದರು. ಆದರೆ, ಹೊರಡಿಸಿರುವ ಆದೇಶದಲ್ಲಿ ಸ್ಪಷ್ಟತೆ ಇಲ್ಲ. ಅನೇಕ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ವಿದ್ಯಾರ್ಥಿಗಳಿಗೆ ಮಾರಾಟ ಮಾಡುವ, ನಿಧಾನಕ್ಕೆ ಸರ್ಕಾರಿ ವಿಶ್ವವಿದ್ಯಾಲಯಗಳನ್ನು ಮುಚ್ಚಿ ಖಾಸಗಿ ವಿಶ್ವವಿದ್ಯಾಲಯಗಳನ್ನು ಹೆಚ್ಚಿಸಲು, ಖಾಸಗಿಯವರಿಗೆ ವಿಪರೀತ ಹಣ ಮಾಡಲು ಬೇಕಾದ ವೇದಿಕೆಯನ್ನು ನೀತಿಯ ಮೂಲಕ ಸೃಷ್ಟಿಸಿಕೊಡಲು ಕೇಂದ್ರ- ರಾಜ್ಯ ಸರ್ಕಾರ ಹೊರಟಿವೆ’ ಎಂದು ದೂರಿದ್ದಾರೆ.

‘ಪಿಯುಸಿ ಮಟ್ಟದಲ್ಲಿ ವಿಜ್ಞಾನ ಕಲಿತವರು ಇದುವರೆಗೆ ಬಿಎಸ್ಸಿ ಹೋಗಲು ಮನಸ್ಸಾಗದಿದ್ದರೆ ಬಿ.ಕಾಂ ಅಥವಾ ಬಿಎಗೆ ಸೇರಬಹುದಿತ್ತು. ಈ ಆಯ್ಕೆಗಳು ರದ್ದಾಗುತ್ತವೆ ಎಂಬಂತೆ ಆದೇಶ ಹೊರಡಿಸಲಾಗಿದೆ. ಶಿಕ್ಷಣ, ಪಠ್ಯಕ್ರಮಗಳನ್ನು ನಿರ್ಧರಿಸುವ ಹಕ್ಕು ರಾಜ್ಯಗಳಿಗೆ ಸಂಬಂಧಿಸಿದ್ದು. ರಾಜ್ಯಗಳ ಅಧಿಕಾರಗಳನ್ನು ದಮನ ಮಾಡಿ ಕೇಂದ್ರದ ಬಿಜೆಪಿ ಸರ್ಕಾರವು ಈ ನೀತಿ ಜಾರಿಗೊಳಿಸಲು ಹೊರಟಿದೆ’ ಎಂದು ಆರೋಪಿಸಿದ್ದಾರೆ.

ಕೆಸರು ರಸ್ತೆಯಲ್ಲಿ ಸಿಲುಕಿದ ಜೀಪ್ ಕಾಲ್ನಡಿಗೆಯಲ್ಲಿ ಸಾಗಿದ ಸಚಿವ

ಪ್ರಜಾವಾಣಿ ವಾರ್ತೆ

ಸುಳ್ಯ: ಮೀನುಗಾರಿಕಾ ಸಚಿವ ಎಸ್. ಅಂಗಾರ ಅವರು ತಮ್ಮ ಕ್ಷೇತ್ರದಲ್ಲಿ ಜೀಪಿನಲ್ಲಿ ತೆರಳುತ್ತಿದ್ದಾಗ, ಕೆಸರುಮಯವಾದ ರಸ್ತೆಯ ನಡುವೆ ಜೀಪ್ ನಿಂತುಹೋದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಶನಿವಾರ ಗಡಿ ಪ್ರದೇಶಕ್ಕೆ ತೆರಳುವಾಗ ರಸ್ತೆ ಅವ್ಯವಸ್ಥೆಯ ಕಾರಣಕ್ಕೆ ಕಾರನ್ನು ಬಿಟ್ಟು ಅನಿವಾರ್ಯವಾಗಿ ಅವರು ಜೀಪ್ ಹತ್ತಿದ್ದರು. ರಸ್ತೆಯ ಏರಿನಲ್ಲಿ ಸಚಿವರು ಹೋಗುತ್ತಿದ್ದ ಜೀಪು ಮುಂದೆ ಚಲಿಸದೆ ಬಾಕಿಯಾಯಿತು. ಜೀಪಿನಿಂದ ಕೆಳಗಿಳಿದು ಸಚಿವರು ಕಾಲ್ನಡಿಗೆಯಲ್ಲಿ ಸಾಗಿದರೆ, ಕಾರ್ಯಕರ್ತರು ಜೀಪನ್ನು ತಳ್ಳಿದರು.

ಆಲೆಟ್ಟಿ– ಕೂಟೇಲು ಸಂಪರ್ಕ ರಸ್ತೆ ಹಲವಾರು ವರ್ಷಗಳಿಂದ ದುಃಸ್ಥಿತಿಯಲ್ಲಿದ್ದು, ಕಳೆದ ಚುನಾವಣೆ ಸಂದರ್ಭದಲ್ಲಿ ಸ್ಥಳೀಯರು ಮತದಾನ ಬಹಿಷ್ಕರಿಸಿದ್ದರು. ಆ ವೇಳೆ ಅಂಗಾರ ಸ್ಥಳಕ್ಕೆ ತೆರಳಿ, ಮುಂದಿನ ಬಾರಿ ರಸ್ತೆ ಅಭಿವೃದ್ಧಿಗೊಳಿಸುವ ಭರವಸೆ ನೀಡಿದ್ದರು. ಎರಡನೇ ಬಾರಿ ಸಚಿವ ಸ್ಥಾನ ಪಡೆದು, ಕ್ಷೇತ್ರದ ಸಮಸ್ಯೆಗಳನ್ನು ಆಲಿಸಲು, ಇದೇ ರಸ್ತೆಯಲ್ಲಿ ತೆರಳುತ್ತಿದ್ದಾಗ ಜೀಪ್ ರಸ್ತೆ ನಡುವೆ ಬಾಕಿಯಾಯಿತು.

ಸುಳ್ಯದಲ್ಲಿ ಸಚಿವ ಎಸ್. ಅಂಗಾರ ತೆರಳುತ್ತಿದ್ದ ಜೀಪು ರಸ್ತೆ ಮಧ್ಯೆ ಅರ್ಧದಲ್ಲಿ ಬಾಕಿಯಾಗಿದ್ದು, ಸಚಿವರ ಬೆಂಬಲಿಗರು ತಳ್ಳಿದರು

ಜಾಲತಾಣದಲ್ಲಿ ವ್ಯಾಪಕ ಟೀಕೆ

ಅಂಗಾರ ಅವರ ಜೀಪ್‌ನ ವಿಡಿಯೊ ವೈರಲ್ ಆಗುತ್ತಿದ್ದಂತೆ, ‘ಮೂರು ದಶಕಗಳಿಂದ ನಿರಂತರವಾಗಿ ಬಿಜೆಪಿಯನ್ನು ಗೆಲ್ಲಿಸಿದ ಸುಳ್ಯ ಕ್ಷೇತ್ರ ಬದಲಾಗುವುದು ಯಾವಾಗ’ ಎಂದು ಕ್ಷೇತ್ರದ ಜನರು ಸಾಮಾಜಿಕ ಜಾಲತಾಣದಲ್ಲಿ ಚರ್ಚೆ ಆರಂಭಿಸಿದ್ದಾರೆ.

‘ಕಾಶ್ಮೀರ ಬದಲಾಯಿತು, ಅಯೋಧ್ಯೆಯಲ್ಲಿ ಮಂದಿರವರಳಿತು, ಮೂರು ದಶಕಗಳಿಂದ ಬಿಜೆಪಿಯನ್ನು ಗೆಲ್ಲಿಸಿದ ಸುಳ್ಯ ಬದಲಾಗುವುದೆಂದು’ ಎಂದು ಕೆಲವರು ವಿಡಿಯೊಕ್ಕೆ ಕಾಮೆಂಟ್ ಹಾಕಿದ್ದಾರೆ.

ರಸ್ತೆ ಕಾಮಗಾರಿ: ಭೂಸ್ವಾಧೀನ ಪ್ರಕ್ರಿಯೆ ಬದಲಾವಣೆಗೆ ಶಿಫಾರಸು

ಪ್ರಜಾವಾಣಿ ವಾರ್ತೆ

ನವದೆಹಲಿ: ರಸ್ತೆ ಕಾಮಗಾರಿಗಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ಸರಳಗೊಳಿಸಲು ಸಂಸದೀಯ ಸ್ಥಾಯಿ ಸಮಿತಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದೆ.

‘ರಸ್ತೆ ಮತ್ತು ಹೆದ್ದಾರಿ ಕಾಮಗಾರಿಗಳು ವಿಳಂಬವಾಗಲು ಭೂಸ್ವಾಧೀನ ಪ್ರಕ್ರಿಯೆಯಲ್ಲಿನ ಅಡಚಣೆಗಳೇ ಪ್ರಮುಖ ಕಾರಣ. ವಿಳಂಬದಿಂದ ಕಾಮಗಾರಿಯ ವೆಚ್ಚವೂ ಏರಿಕೆಯಾಗುತ್ತದೆ. ಈ ಅಡಚಣೆ ಮತ್ತು ವೆಚ್ಚ ಏರಿಕೆಯನ್ನು ತಡೆಯಲು ಭೂಸ್ವಾಧೀನ ಪ್ರಕ್ರಿಯೆಯನ್ನು ಸರಳಗೊಳಿಸಬೇಕು’ ಎಂದು ಸಾರಿಗೆ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿಯು ಶಿಫಾರಸು ಮಾಡಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಮಾರ್ಪಾಡು ಮಾಡಲು ಸಮಿತಿಯು ಶಿಫಾರಸು ಮಾಡಿದೆ.

ಪ್ರಜಾವಾಣಿ ಇದ್ದರೆ ಗಮನ... ಗೆಲ್ಲುತ್ತೀರಿ ಬಹುಮಾನ!
ಸ್ಪೆಷಲ್ ಅಂಕಣಗಳ ಸಿಂಪಲ್ ಪ್ರಶ್ನೆ!
ಹಿಂದಿನ ಪ್ರಶ್ನೆಗೆ ಉತ್ತರ: ಪಾವನ ಗೌಡ
ಪ್ರತಿ ದಿನ ಒಂದು ಸ್ಪೆಷಲ್ ಅಂಕಣದಿಂದ ಆಯ್ದ ಪ್ರಶ್ನೆಗೆ ಉತ್ತರಿಸಿ ಬಹುಮಾನ ಗೆಲ್ಲಿ!
ಪ್ರಶ್ನೆ: ಇಂದಿನ ಸುಭಾಷಿತ ಯಾರದು?
www.bit.ly/pvgamana ಲಿಂಕ್ ಬಳಸಿ ಇಂದು ರಾತ್ರಿ 8ರ ಒಳಗೆ ನಿಮ್ಮ ಉತ್ತರವನ್ನು ಕಳುಹಿಸಿ
ಪ್ರಜಾವಾಣಿ GIFT VOUCHER ₹500/-
ಪ್ರತಿ ದಿನ 8 ಅದೃಷ್ಟಶಾಲಿಗಳಿಗೆ

ಸೋಮವಾರ, ಆಗಸ್ಟ್ 9, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 221 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಅಭ್ಯಾಸದ ಹಾಳೆ (ವರ್ಕ್‌ಶೀಟ್ಸ್)ಗಳು ಪಠ್ಯಪುಸ್ತಕಗಳಿಗಿಂತ ಆಕರ್ಷಕವಾಗಿರುವ ಕಾರಣ ಮಕ್ಕಳು ಈ ಹಾಳೆಗಳ ಕಲಿಕೆಯಲ್ಲಿ ಹೆಚ್ಚು ಉತ್ಸಾಹದಿಂದ ತೊಡಗುತ್ತಾರೆ



ಆಳ-ಅಗಲ
ಲಸಿಕೆ ಮಿಶ್ರಣದಿಂದ ಹೆಚ್ಚಿನ ಪರಿಣಾಮ?

‘ಅತ್ಯಾಚಾರ ಖಂಡಿಸುವಾಗ ಜಾತಿ ತಾರತಮ್ಯ ಇದೆಯೆ?’ 4
ಮಂಜು ಪಾವಗಡಗೆ ಬಿಗ್‌ಬಾಸ್ ಪಟ್ಟ 3B

ಸಂಸತ್ ಸಮಿತಿಯ ವರದಿಯಲ್ಲಿ ಕಳವಳ
ಮುಚ್ಚಿದ ಶಾಲೆ: ಪರಿಣಾಮ ತೀವ್ರ 7

ಆರೋಗ್ಯಕ್ಕಾಗಿ
ಅಡ್ಡ ಪರಿಣಾಮಗಳ ಬಗ್ಗೆ ಚಿಂತೆಯೇ?
ಮಧುಮೇಹ -ಎನ್
ಆರೋಗ್ಯಕ್ಕಾಗಿ ಜೊತೆಯಾಗಿ ಹೋರಾಡೋಣ
ಆರೋಗ್ಯಕ್ಕಾಗಿ ಅಡ್ಡ ಪರಿಣಾಮಗಳಿಂದ ಸರ್ವಾಂಗಗಳನ್ನು ಕಾಪಾಡುವ ಆಯುರ್ವೇದಿಕ್ ಔಷಧಿ ಮಧುಮೇಹ-ಎನ್ ಸದಾ ಉಪಯೋಗಿಸಿರಿ ಮತ್ತು ಆರೋಗ್ಯಕರ ಜೀವನ ಸಾಗಿಸಿ

ಆರೋಗ್ಯದ ಕಾಳಜಿಯೊಂದಿಗೆ ಜೀವನದ ಕ್ಷಣ ಕ್ಷಣವನ್ನು ಆನಂದಿಸಿ!
ಜೀವನದ ಪ್ರತಿ ನಿಮಿಷದಲ್ಲೂ ಹರ್ಷೋಲ್ಲಾಸ ನಿಮ್ಮದಾಗಲಿ!
ಕೊನೆ ಗಳಿಗೆಯಲ್ಲಿ ಕುರುಹು ಕಂಡು ಆಸ್ಪತ್ರೆಗೆ ಹೋಗುವುದನ್ನು ಕಾಯಬೇಡಿ
ದೇಹದಲ್ಲಿ ಊತ • ಹಸಿವಿನ ಕೊರತೆ • ದಣಿವು • ಕಡಿಮೆ ರೋಗನಿರೋಧಕ ಶಕ್ತಿ
ನಿಮಗೆ ಮೇಲಿನ ಯಾವುದೇ ಒಂದು ಕುರುಹು ಕಂಡುಬಂದಲ್ಲಿ ಕೂಡಲೇ ನಿಮ್ಮ ವೈದ್ಯರನ್ನು ಭೇಟಿ ಮಾಡಿ.
ಆಯುರೋಲಿವ್
ಪ್ರತಿದಿನ ಆರೋಗ್ಯ ಕಾಳಜಿ ವಹಿಸಿ
ಎಚ್ಚರಿಕೆ ⚠ ನಿಮ್ಮ ಯಕೃತ್ತಿನ ಆರೋಗ್ಯ

ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ: From the house of A & J Health Care, Bangalore
For a Healthy Society
Ph: 8762226000, 9243112373.

ಪ್ರಮುಖ ಖಾತೆಗಳಿಗೆ ಆನಂದ್ ಸಿಂಗ್, ಎಂ.ಟಿ.ಬಿ. ನಾಗರಾಜ್ ಪಟ್ಟು

ಖಾತೆ: ಹೆಚ್ಚುತ್ತಿರುವ ಬೇಗುದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಂಪುಟದಲ್ಲಿ ಖಾತೆ ಹಂಚಿಕೆಗೆ ಸಂಬಂಧಿಸಿದಂತೆ ಅಸಮಾಧಾನ ಹೊಗೆಯಾಡಲಾರಂಭಿಸಿದೆ. ಸಚಿವರಾದ ಆನಂದ್ ಸಿಂಗ್ ಮತ್ತು ಎಂ.ಟಿ.ಬಿ.ನಾಗರಾಜ್ ತಮಗೆ ನೀಡಿರುವ ಖಾತೆಗಳನ್ನು ಬದಲಿಸಿ, ಪ್ರಬಲ ಖಾತೆಗಳನ್ನೇ ನೀಡಬೇಕು ಎಂದು ಪಟ್ಟು ಹಿಡಿದಿದ್ದಾರೆ.

ಇದರಿಂದ ಬೊಮ್ಮಾಯಿ ಅವರು ಇಕ್ಕಟ್ಟಿಗೆ ಸಿಲುಕಿದ್ದು, ಇಬ್ಬರನ್ನೂ ಸಮಾಧಾನಪಡಿಸುವ ಕಸರತ್ತಿಗೆ ಕೈ ಹಾಕಿದ್ದಾರೆ. ಆದರೆ, ಇಬ್ಬರೂ ತಮ್ಮ ಪಟ್ಟುಗಳನ್ನು ಬಿಟ್ಟುಕೊಟ್ಟಿಲ್ಲ.

ಆನಂದ್ ಸಿಂಗ್ ಮತ್ತು ನಾಗರಾಜ್ ಮುಖ್ಯಮಂತ್ರಿಯವರನ್ನು ಭಾನುವಾರ ಭೇಟಿ ಮಾಡಿ, ತಮ್ಮ ಬೇಡಿಕೆಯನ್ನು ಈಡೇರಿಸುವಂತೆ ಒತ್ತಾಯಿಸಿದರು. ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರವನ್ನು ತೊರೆದು ಬರುವಾಗ ಕೊಟ್ಟ ಮಾತಿನಂತೆ ‘ಗೌರವಯುತ’ವಾಗಿ ನಡೆಸಿಕೊಳ್ಳಬೇಕು ಎಂದು ಬೇಡಿಕೆ ಇಟ್ಟಿದ್ದಾರೆ.

ಅಲ್ಲದೆ, ಉಪಮುಖ್ಯಮಂತ್ರಿ ಹುದ್ದೆಯ ಮೇಲೆ ಕಣ್ಣಿಟ್ಟಿದ್ದ ಸಚಿವ ಬಿ.ಶ್ರೀರಾಮುಲು ಕೂಡಾ ಖಾತೆಯ ಬಗ್ಗೆ ಅಸಮಾಧಾನಗೊಂಡಿದ್ದು, ತಮ್ಮ ಆಪ್ತರ ಬಳಿ ಬೇಗುದಿ ತೋಡಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ತಕ್ಷಣಕ್ಕೆ ಬದಲಾವಣೆ ಇಲ್ಲ: ‘ತಕ್ಷಣಕ್ಕೆ ಖಾತೆ ಬದಲಾವಣೆ ಸಾಧ್ಯವಿಲ್ಲ’ ಎಂದು ಪ್ರಬಲ ಖಾತೆಗಳಿಗೆ ಪಟ್ಟು ಹಿಡಿದಿರುವ ಸಚಿವರನ್ನು ಮನವೊಲಿಸಲು ಬೊಮ್ಮಾಯಿ ಪ್ರಯತ್ನಿಸಿದ್ದಾರೆ.

3B ಪುಟ ನೋಡಿ

ಸಂಪುಟ ದರ್ಜೆ ಸ್ಥಾನಮಾನ ನಿರಾಕರಿಸಿದ ಬಿಎಸ್‌ವೈ

ತಮಗೆ ಸಂಪುಟ ದರ್ಜೆ ಸಚಿವರ ಸ್ಥಾನಮಾನ ನೀಡಿ ಹೊರಡಿಸಿದ್ದ ಆದೇಶವನ್ನು ಹಿಂಪಡೆಯುವಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಭಾನುವಾರ ಪತ್ರ ಬರೆದಿದ್ದಾರೆ.

ಯಡಿಯೂರಪ್ಪ ಅವರಿಗೆ ಸಂಪುಟ ದರ್ಜೆ ಸಚಿವರಿಗೆ ನೀಡುವ ಎಲ್ಲ ಸೌಲಭ್ಯಗಳನ್ನು ಒದಗಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಶನಿವಾರ ಆದೇಶ ಹೊರಡಿಸಿತ್ತು.

‘ಈ ಆದೇಶವನ್ನು ಹಿಂಪಡೆಯಬೇಕು. ನಿಕಟಪೂರ್ವ ಮುಖ್ಯಮಂತ್ರಿಗೆ ಸರ್ಕಾರದಿಂದ ನೀಡುವ ಸೌಲಭ್ಯಗಳಷ್ಟೇ ನನಗೆ ಸಾಕು’ ಎಂದು ಯಡಿಯೂರಪ್ಪ ಪತ್ರದಲ್ಲಿ ಕೋರಿದ್ದಾರೆ.

ಈ ಹಿಂದೆ ನಿರ್ಗಮಿತ ಮುಖ್ಯಮಂತ್ರಿಗಳಿಗೆ ಸಂಪುಟದರ್ಜೆ ಸ್ಥಾನಮಾನ ನೀಡಿದ ಉದಾಹರಣೆಗಳಿಲ್ಲ. ಶಿಷ್ಟಾಚಾರದ ಪ್ರಕಾರ, ವಿಶೇಷ ಭದ್ರತಾ ವ್ಯವಸ್ಥೆ ಸೇರಿ ಕೆಲ ಸೌಲಭ್ಯಗಳನ್ನಷ್ಟೇ ಒದಗಿಸಲಾಗುತ್ತದೆ.

ಯಡಿಯೂರಪ್ಪ ಅವರಿಗೆ ವಿಶೇಷ ಸ್ಥಾನಮಾನ ನೀಡಲು ಬೊಮ್ಮಾಯಿ ನಿರ್ಧರಿಸಿದ್ದರು. ಆದರೆ, ಸರ್ಕಾರ ತಮ್ಮ ಹಿಡಿತದಲ್ಲಿ ಇದೆ ಎಂಬ ತಪ್ಪು ಸಂದೇಶ ರವಾನೆ ಆಗಬಹುದು ಎಂಬ ಕಾರಣದಿಂದ ಯಡಿಯೂರಪ್ಪ ಈ ಸ್ಥಾನಮಾನ ನಿರಾಕರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಪ್ರತಿ ತಿಂಗಳು ಸಚಿವರ ಮೌಲ್ಯ ಮಾಪನ’

‘ಸಚಿವರ ಕಾರ್ಯನಿರ್ವಹಣೆಯನ್ನು ಪ್ರತಿ ತಿಂಗಳು ಮೌಲ್ಯಮಾಪನಕ್ಕೆ ಒಳಪಡಿಸಲಾಗುವುದು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ತಿಳಿಸಿದರು.

ಭ್ರಷ್ಟಾಚಾರ ಮತ್ತು ಇತರ ಯಾವುದೇ ಆರೋಪಗಳಿಗೆ ಒಳಗಾಗುವ ಸಚಿವರನ್ನು ಪಕ್ಷ ಸಹಿಸುವುದಿಲ್ಲ ಎಂದು ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಸಚಿವರ ಕಾರ್ಯನಿರ್ವಹಣೆಯನ್ನು ನಿರಂತರವಾಗಿ ಪರಾಮರ್ಶೆ ಮಾಡುತ್ತೇವೆ. ಜನತೆ ಮತ್ತು ಕಾರ್ಯಕರ್ತರ ಪ್ರತಿಕ್ರಿಯೆಯನ್ನು ಅವರಿಗೆ ತಿಳಿಸಿ, ಆ ಕೆಲಸಗಳನ್ನು ಮಾಡಿಸುವ ನಿಟ್ಟಿನಲ್ಲಿ ಪಕ್ಷ ಸಚಿವರ ಬೆನ್ನು ಬೀಳಲಿದೆ’ ಎಂದು ಕಟೀಲ್ ಹೇಳಿದರು.

‘ನೂತನ ಸಚಿವರು ಅಭಿನಂದನೆ, ಸನ್ಮಾನಗಳನ್ನು ನಿಲ್ಲಿಸಬೇಕು. ಸಂಕಷ್ಟದ ಈ ಸಂದರ್ಭದಲ್ಲಿ ಪಕ್ಷ ಮತ್ತು ಸರ್ಕಾರದ ಗೌರವ ಉಳಿಸುವ ಕೆಲಸ ಮಾಡಬೇಕು. ಕೋವಿಡ್, ಪ್ರವಾಹ, ಭೂಕುಸಿತದಿಂದ ಜನತೆ ಸಂಕಷ್ಟದಲ್ಲಿದ್ದಾರೆ. ಅಲ್ಲಿಗೆ ಹೋಗಿ ಅವರ ಕಣ್ಣೀರು ಒರೆಸುವ ಕೆಲಸ ಮಾಡಬೇಕು’ ಎಂದೂ ಸೂಚಿಸಿದರು.

ಸಂಘ ನಿಷ್ಠರಿಗೆ ಆದ್ಯತೆ ನೀಡಿಲ್ಲ ಎಂದು ಕೇಳಿಬಂದ ಟೀಕೆಗೆ, ‘ಅನಿವಾರ್ಯ ಸಂದರ್ಭದಲ್ಲಿ ತ್ಯಾಗ ಮಾಡಿ ಬಂದವರಿಗೆ ಗೌರವ ನೀಡಿ, ಅವರಿಗೆ ಕೊಟ್ಟ ಮಾತು ಉಳಿಸಿಕೊಳ್ಳುವ ಕಾರಣದಿಂದ ಹೆಚ್ಚು ಸಚಿವ ಸ್ಥಾನಗಳನ್ನು ಕೊಟ್ಟಿದ್ದೇವೆ’ ಎಂದರು.

3B ಪುಟ ನೋಡಿ

ಥ್ಯಾಂಕ್ಯೂ ಜಪಾನ್.. ಭಾನುವಾರ ನಡೆದ ಟೋಕಿಯೊ ಒಲಿಂಪಿಕ್ಸ್ –2020 ಮುಕ್ತಾಯ ಸಮಾರಂಭದಲ್ಲಿ ಒಲಿಂಪಿಕ್ ಜ್ಯೋತಿ ಮತ್ತು ಕಾಲ್ಡ್ರನ್ ಕಂಡಿದ್ದು ಹೀಗೆ –ರಾಯಿಟರ್ಸ್ ಚಿತ್ರ

ಕಿಪ್ಚೋಗಿ ‘ಮ್ಯಾರಥಾನ್’ ಓಟ

ಪುರುಷರ ಮ್ಯಾರಥಾನ್

ಚಿನ್ನ: ಎಲ್ಯೂಡ್ ಕಿಪ್ಚೋಗಿ (ಕೆನ್ಯಾ)
ಕಾಲ: 2 ತಾಸು 8 ನಿಮಿಷ 38 ಸೆಕೆಂಡು
(ಸತತ ಎರಡು ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ)

ಬೆಳ್ಳಿ: ಅಬ್ದಿ ನಗೀಯಿ (ನೆದರ್ಲೆಂಡ್ಸ್) ಕಾಲ: 2:09:58

ಕಂಚು: ಬಶೀರ್ ಅಬ್ದಿ (ಬೆಲ್ಜಿಯಂ) ಕಾಲ: 2:10:00

ಟ್ಯಾಕ್ಸಿ ಚಾಲಕಿಯ ‘ಪಂಚ್’

ಮಹಿಳೆಯರ ಮಿಡ್ಲ್‌ವೇಟ್ ಬಾಕ್ಸಿಂಗ್
ಚಿನ್ನ: ಲಾರೆನ್ಸ್ ಪ್ರೈಸ್ (ಬ್ರಿಟನ್)
ಬೆಳ್ಳಿ: ಕಿಯಾನ್ ಲೀ (ಚೀನಾ)
ಸ್ಕೋರು 5-0

ಭಾರತದ ಸಾಧನೆ

ಚಿನ್ನ: 1
ಬೆಳ್ಳಿ: 2
ಕಂಚು: 4

ಸಿಬಿಐ ವಿರುದ್ಧ ‘ಸುಪ್ರೀಂ’ ಅತೃಪ್ತಿ ಬೆನ್ನಲ್ಲೇ ಈ ಬೆಳವಣಿಗೆ

ನ್ಯಾಯಮೂರ್ತಿಗಳಿಗೆ ಅಪಮಾನ: ಐವರ ಸೆರೆ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ಮತ್ತು ಆಂಧ್ರ ಪ್ರದೇಶ ಹೈಕೋರ್ಟ್ ನ್ಯಾಯಮೂರ್ತಿಗಳ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಆಕ್ಷೇಪಾರ್ಹ ವಿಷಯಗಳನ್ನು ಪ್ರಕಟಿಸಿದ್ದ ಆರೋಪದ ಮೇಲೆ ಐವರನ್ನು ಬಂಧಿಸಿರುವುದಾಗಿ ಸಿಬಿಐ ಭಾನುವಾರ ತಿಳಿಸಿದೆ. ವೈಎಸ್‌ಆರ್ ಕಾಂಗ್ರೆಸ್‌ನ ಸಂಸದ ನಂದಿಗಾಮ ಸುರೇಶ್ ಮತ್ತು ಮುಖಂಡ ಅಮಂಚಿ ಕೃಷ್ಣಮೋಹನ್ ಅವರು ಈ ಪ್ರಕರಣದಲ್ಲಿ ಹೊಂದಿರಬಹುದಾದ ಪಾತ್ರದ ಬಗ್ಗೆಯೂ ತನಿಖೆ ನಡೆಯುತ್ತಿದೆ.

ನ್ಯಾಯಮೂರ್ತಿಗಳು ಮತ್ತು ಕೋರ್ಟ್‌ಗಳು ನೀಡುವ ದೂರನ್ನು ಸಿಬಿಐ ಸೇರಿ ಇತರ ಸಂಸ್ಥೆಗಳು ಗಂಭೀರವಾಗಿ ಪರಿಗಣಿಸುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ ರಮಣ ಇತ್ತೀಚೆಗೆ ಅಸಮಾಧಾನ ವ್ಯಕ್ತಪಡಿಸಿದ್ದರು. ಅವರ ಹೇಳಿಕೆಯ ಬೆನ್ನಲ್ಲೇ ಸಿಬಿಐ ಈ ಮಾಹಿತಿ ನೀಡಿದೆ.

ಇಬ್ಬರು ಆರೋಪಿಗಳಾದ ಆಂಧ್ರ ಪ್ರದೇಶದ ಪಟ್ಟಪು ಆದರ್ಶ್ ಮತ್ತು ಲವಣೂರು ಸಾಂಬಶಿವ ರೆಡ್ಡಿ ಅವರನ್ನು ಶನಿವಾರ ಬಂಧಿಸಲಾಗಿದೆ. ಅವರಿಬ್ಬರನ್ನೂ ಭಾನುವಾರ ಗುಂಟೂರು ಕೋರ್ಟ್‌ನಲ್ಲಿ ಹಾಜರುಪಡಿಸಲಾಯಿತು. ಬಂಧಿತರಲ್ಲಿ ಒಬ್ಬರು ತಮ್ಮ ನಿಜವಾದ ಗುರುತು ಮರೆಮಾಚಿ ಬೇರೆ ಹೆಸರಿನ ಪಾಸ್‌ಪೋರ್ಟ್ ಬಳಸಿದ್ದಾರೆ ಎಂದು ಸಿಬಿಐ ಆರೋಪಿಸಿದೆ. ಅದಕ್ಕೂ ಮೊದಲು ಮೂವರನ್ನು ಬಂಧಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಖ್ಯಾಂಶಗಳು

- ಸಾಮಾಜಿಕ ಜಾಲತಾಣದಲ್ಲಿ ಆಕ್ಷೇಪಾರ್ಹ ವಿಷಯಗಳನ್ನು ಪ್ರಕಟಿಸಿದ್ದ ಆರೋಪ
- 16 ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲು
- ತನಿಖೆ ನಡೆಸಲು ಆಂಧ್ರ ಪ್ರದೇಶ ಹೈಕೋರ್ಟ್‌ನಿಂದ ಸಿಬಿಐಗೆ ನಿರ್ದೇಶನ

ಕುವೈಟ್‌ನಲ್ಲಿದ್ದ ರಾಜಶೇಖರ ರೆಡ್ಡಿ ಅವರು ಭಾರತದಲ್ಲಿ ಬಂದಿಳಿದ ಕೂಡಲೇ ಜುಲೈ 9ರಂದು ಬಂಧಿಸಲಾಗಿದೆ.

ನ್ಯಾಯಮೂರ್ತಿಗಳ ಬಗ್ಗೆ ಅವಹೇಳನಕಾರಿ ವಿಷಯ ಪ್ರಕಟಿಸಿದ ಪ್ರಕರಣದಲ್ಲಿ 16 ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಪ್ರಕರಣದ ತನಿಖೆ ನಡೆಸಬೇಕು ಎಂದು ಆಂಧ್ರ ಪ್ರದೇಶ ಹೈಕೋರ್ಟ್, ಸಿಬಿಐಗೆ ಕಳೆದ ನವೆಂಬರ್ 11ರಂದು ನಿರ್ದೇಶನ ನೀಡಿತ್ತು. ತನಿಖಾ ವರದಿಯನ್ನು ಮೊಹರು ಮಾಡಿದ ಲಕೋಟೆಯಲ್ಲಿ ಸಲ್ಲಿಸಬೇಕು ಎಂದು ಸೂಚಿಸಿತ್ತು.

16 ಆರೋಪಿಗಳ ಪೈಕಿ 13 ಮಂದಿಯನ್ನು ಪತ್ತೆ ಮಾಡಲಾಗಿದೆ. ಅವರಲ್ಲಿ 11 ಮಂದಿಯನ್ನು ತನಿಖೆಗೆ ಒಳಪಡಿಸಲಾಗಿದೆ. ಮೂವರು ವಿದೇಶದಲ್ಲಿ ಇದ್ದಾರೆ. ತನಿಖೆಗೆ ಒಳಪಡಿಸಿದ 11 ಮಂದಿಯ ಪೈಕಿ ಐವರನ್ನು ಬಂಧಿಸಲಾಗಿದೆ. ಆರು ಮಂದಿಯ ವಿರುದ್ಧ ಸಾಕ್ಷ್ಯಗಳು ಸಿಕ್ಕಿವೆ. ವಿದೇಶದಲ್ಲಿ ಇರುವ ವ್ಯಕ್ತಿಗಳನ್ನು ತನಿಖೆಗೆ ಒಳಪಡಿಸಲು ಸಿಬಿಐ ಪ್ರಯತ್ನಿಸುತ್ತಿದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ. ಪರಸ್ಪರ ಕಾನೂನು ನೆರವು ಒಪ್ಪಂದ (ಎಂಎಲ್‌ಎಟಿ) ಮತ್ತು ಇಂಟರ್‌ಪೋಲ್ ನೆರವಿನಿಂದ ವಿದೇಶಗಳಿಂದಲೂ ಮಾಹಿತಿ ಕಲೆಹಾಕಲಾಗುತ್ತಿದೆ ಎಂದು ಸಿಬಿಐ ವಕ್ತಾರ ಆರ್.ಸಿ. ಜೋಶಿ ಹೇಳಿದ್ದಾರೆ.

ಈ ಪ್ರಕರಣದ ಹಿಂದಿರುವ ಸಂಚನ್ನು ಬಯಲಿಗೆಳೆಯುವ ದಿಸೆಯಲ್ಲಿ ಸಿಬಿಐ ಪರಿಶೀಲನೆ ನಡೆಸುತ್ತಿದೆ. ಎಫ್‌ಐಆರ್‌ನಲ್ಲಿ ಇಲ್ಲದ ವ್ಯಕ್ತಿಗಳು ಪ್ರಕರಣದಲ್ಲಿ ಭಾಗಿಯಾಗಿದ್ದಾರೆಯೇ ಎಂಬ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ.

‘ಮಾನವ ಹಕ್ಕು ಉಲ್ಲಂಘನೆ ಠಾಣೆಗಳಲ್ಲೇ ಹೆಚ್ಚು’

ನವದೆಹಲಿ (ಪಿಟಿಐ): ಪೊಲೀಸ್ ಠಾಣೆಗಳಲ್ಲಿ ನಡೆಯುವ ಕಸ್ಟಡಿ ಹಿಂಸೆಯ ಬಗ್ಗೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಕಳವಳ ವ್ಯಕ್ತಪಡಿಸಿದ್ದಾರೆ. ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ದೈಹಿಕ ಹಿಂಸೆ ಠಾಣೆಗಳಲ್ಲಿಯೇ ಅತಿ ಹೆಚ್ಚು ನಡೆಯುತ್ತಿವೆ. ಪ್ರಭಾವಿ ವ್ಯಕ್ತಿಗಳು ಕೂಡ ಇದರಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ ಎಂದು ಅವರು ಹೇಳಿದ್ದಾರೆ.

ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರದ (ಎನ್‌ಎಎಲ್‌ಎಸ್‌ಎ) ಆ್ಯಪ್ ಅನ್ನು ಭಾನುವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

ದೌರ್ಜನ್ಯಗಳನ್ನು ತಡೆಯುವ ಕುರಿತು ದೇಶದಾದ್ಯಂತ ಪೊಲೀಸ್ ಅಧಿಕಾರಿಗಳಿಗೆ ಕಾನೂನು ಸೇವಾ ಪ್ರಾಧಿಕಾರವು ತರಬೇತಿ ನೀಡಬೇಕು ಎಂದು ಸಲಹೆ ನೀಡಿದರು.

‘ಎಲ್ಲ ವರ್ಗದವರಿಗೂ ಒಂದೇ ರೀತಿಯಲ್ಲಿ ನ್ಯಾಯ ದೊರೆಯಬೇಕು. ಆಗ ಮಾತ್ರ ಕಾನೂನಿನ ಅನ್ವಯ ಆಡಳಿತ ನಡೆಸಲು ಸಾಧ್ಯ. ಆದರೆ, ಗ್ರಾಮೀಣ ಮತ್ತು ದುರ್ಗಮ ಸ್ಥಳಗಳಲ್ಲಿರುವವರಿಗೆ ನ್ಯಾಯಾಂಗದ ಸೇವೆ ಸಮರ್ಪಕವಾಗಿ ಲಭ್ಯವಾಗುತ್ತಿಲ್ಲ. ಈಗಿರುವ ಕೊರತೆಗಳನ್ನು ನೀಗಿಸಬೇಕಾಗಿದೆ’ ಎಂದು ಹೇಳಿದರು.

ಸಂವಿಧಾನ ತಿದ್ದುಪಡಿ ಮಸೂದೆ ಮಂಡನೆ ಇಂದು 4

ಚಿನಕುರಳಿ

ಪ್ರಕಾಶ್ ಶೆಟ್ಟಿ



‘28,29 ಕ್ಕೆ ಸಿಇಟಿ: ಎಲ್ಲ ಸಿದ್ಧತೆ ಪೂರ್ಣ’

ಬೆಂಗಳೂರು: ‘ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ–2021) ಇದೇ 28 ಮತ್ತು 29ರಂದು ನಡೆಯಲಿದೆ. ಕನ್ನಡ ಭಾಷಾ ಪರೀಕ್ಷೆ 30ಕ್ಕೆ ನಡೆಯಲಿದೆ.

‘ಪರೀಕ್ಷೆಗೆ ಎಲ್ಲ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಕೋವಿಡ್ ಮಾರ್ಗಸೂಚಿಯಂತೆ ಪರೀಕ್ಷೆ ನಡೆಸಲಾಗುವುದು. ಸಿಬ್ಬಂದಿಗೆ ಈಗಾಗಲೇ ಆನ್‌ಲೈನ್ ತರಬೇತಿ ನೀಡಲಾಗಿದೆ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಭಾನುವಾರ ತಿಳಿಸಿದರು.

ಎಂಜಿನಿಯರಿಂಗ್, ತಂತ್ರಜ್ಞಾನ, ಯೋಗ, ನ್ಯಾಚುರೋಪಥಿ, ಬಿ. ಫಾರ್ಮ, ಎರಡನೇ ವರ್ಷದ ಬಿ. ಫಾರ್ಮ ಮತ್ತು ಫಾರ್ಮ–ಡಿ, ಕೃಷಿ ವಿಜ್ಞಾನ ಕೋರ್ಸ್, ವೆಟನರಿ ಕೋರ್ಸ್ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಸಿಇಟಿ ನಡೆಸಲಿದೆ.

ಹೊರನಾಡು, ಗಡಿನಾಡು ಕನ್ನಡಿಗ ಅಭ್ಯರ್ಥಿಗಳು ಕನ್ನಡ ಭಾಷಾ ಪರೀಕ್ಷೆ ಬರೆಯಬೇಕು. ವೈದ್ಯಕೀಯ, ದಂತ ವೈದ್ಯಕೀಯ, ಆಯುರ್ವೇದ, ಯುನಾನಿ, ಹೋಮಿಯೋಪಥಿ ಸೀಟುಗಳ ಪ್ರವೇಶಕ್ಕೆ ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ (ನೀಟ್) ಅರ್ಹತೆ ಪಡೆಯಬೇಕು.

ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 2020–21ನೇ ಶೈಕ್ಷಣಿಕ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶ ಸೋಮವಾರ (ಆಗಸ್ಟ್ 9) ಮಧ್ಯಾಹ್ನ 3.30ಕ್ಕೆ ಪ್ರಕಟವಾಗಲಿದೆ.

ರಾಜ್ಯ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ಸಭಾಂಗಣದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ಫಲಿತಾಂಶವನ್ನು ಪ್ರಕಟಿಸಲಿದ್ದಾರೆ. ಬಳಿಕ ಮಂಡಳಿಯ ವೆಬ್‌ಸೈಟ್‌ನಲ್ಲಿ ಫಲಿತಾಂಶ ಲಭ್ಯವಾಗಲಿದೆ. ಈ ಬಾರಿ 8.76 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದಾರೆ. ವಿದ್ಯಾರ್ಥಿಗಳು https://sslc.karnataka.gov.in ವೆಬ್‌ಸೈಟ್‌ನಿಂದ ಫಲಿತಾಂಶವನ್ನು ಪಡೆಯಬಹುದು ಎಂದು ಪರೀಕ್ಷಾ ಮಂಡಳಿ ತಿಳಿಸಿದೆ.

ICICI Bank
EXPRESS Bank Guarantee

ಸರಳತೆ ಮತ್ತು ಅನುಕೂಲತೆಯ ಅನುಭವ ಪಡೆಯಿರಿ
ICICI Bank ಎಕ್ಸ್‌ಪ್ರೆಸ್ ಬ್ಯಾಂಕ್ ಗ್ಯಾರಂಟಿಯೊಂದಿಗೆ
ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿರಿ ಅಥವಾ ನಿಮ್ಮ ಅತಿ ಹತ್ತಿರದ ಶಾಖೆಯಲ್ಲಿ
ಸರಳೀಕೃತ ಕಾಗದ ಪತ್ರಗಳು
ಆಕರ್ಷಕ ಬೆಲೆಯನ್ನು ಆನಂದಿಸಿರಿ
ಇಲ್ಲಿಗೆ ಮಿಸ್ಡ್ ಕಾಲ್ ನೀಡಿರಿ 9625 470 470
BG ಯನ್ನು 5676766 ಇಲ್ಲಿಗೆ SMS ಮಾಡಿರಿ
ಭೇಟಿ ನೀಡಿರಿ icicibank.com/bg
*ಆಯ್ದ ಶಾಖೆಗಳಲ್ಲಿ ಟ್ರೇಡ್‌ಸರ್ವಿಸಸ್‌ಗಾಗಿ ವ್ಯಾಪಾರದ ಅವಧಿಯೊಳಗೆ ಎಲ್ಲಾ ಸಂಬಂಧಿತ ದಸ್ತಾವೇಜುಗಳು ಸ್ವೀಕರಿಸಲ್ಪಡುವುದಕ್ಕೆ ಒಳಪಟ್ಟು. icicibank.com ನ ನಿಯಮ ಮತ್ತು ನಿಬಂಧನೆಗಳು ಅನ್ವಯ.

ಸೂರ್ಯನ ಶಕ್ತಿ ಸದ್ಬಳಕೆಗೆ ನೆರವಾಗುತ್ತಿದೆ ಸೌರ ಗೃಹ ಯೋಜನೆ • ಸೌರ ಚಾವಣಿ ನಿರ್ಮಾಣಕ್ಕೆ ಸಿಗಲಿದೆ ಸಹಾಯಧನ

ಮನೆ ಸೂರಿನ ಸೌರ ಇಂಧನದತ್ತ ಬೆಂಗಳೂರಿಗರ ಚಿತ್ತ

• ಗುರು ಪಿ.ಎಸ್.

ಬೆಂಗಳೂರು: ತಂತ್ರಜ್ಞಾನದ ಮೇಲಿನ ಅವಲಂಬನೆ ಹೆಚ್ಚುತ್ತಿದ್ದಂತೆ ವಿದ್ಯುತ್ ಬಳಕೆಯೂ ಜಾಸ್ತಿಯಾಗುತ್ತಿದೆ. ಭವಿಷ್ಯದ ಭಾರಿ ಸವಾಲುಗಳಲ್ಲಿ ವಿದ್ಯುತ್ ಕೊರತೆ ನೀಗಿಸುವುದೂ ಸೇರಿದೆ. ನಗರ ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಬೇಕೆಂದರೆ ಈ ಸವಾಲನ್ನು ದಿಟ್ಟವಾಗಿ ಎದುರಿಸಲೇ ಬೇಕಾಗಿದೆ.

ಬರಿದಾಗುವ ಶಕ್ತಿ ಸಂಪನ್ಮೂಲಗಳ ಬದಲಿಗೆ, ನಿಸರ್ಗದತ್ತ ಶಕ್ತಿ ಮೂಲಗಳಿಂದ ವಿದ್ಯುತ್ ಉತ್ಪಾದಿಸುವುದು ಎಲ್ಲಕ್ಕಿಂತಲೂ ಉತ್ತಮ ಆಯ್ಕೆ. ಅದರಲ್ಲಿಯೂ, ಸೌರಶಕ್ತಿ ಬಳಸಿಕೊಂಡು ಸುಲಭವಾಗಿ ಮತ್ತು ಅತಿ ಕಡಿಮೆ ವೆಚ್ಚದಲ್ಲಿ ವಿದ್ಯುತ್ ಪಡೆಯಲು ಸಾಧ್ಯ ಇರುವುದರಿಂದ ಸೌರವಿದ್ಯುತ್ ಘಟಕಗಳ ನಿರ್ಮಾಣ ಕಾರ್ಯ ಚುರುಕು ಪಡೆದಿದೆ.

ರಾಜಧಾನಿಯಲ್ಲಿ ಅನೇಕ ಅಪಾರ್ಟ್‌ಮೆಂಟ್ ಸಮುಚ್ಚಯಗಳು ಅಥವಾ ಗುಂಪು ವಸತಿಗಳು ಹೆಚ್ಚಾಗಿ ಡೀಸೆಲ್ ಜನರೇಟರ್‌ಗಳನ್ನೇ ಅವಲಂಬಿಸಿವೆ. ನಗರದಲ್ಲಿ ವಿದ್ಯುತ್ ಉತ್ಪಾದನೆ ಮತ್ತು ಲಭ್ಯತೆ ಹೆಚ್ಚಾದರೆ, ಇಂತಹ ಜನರೇಟರ್‌ಗಳ ಅಗತ್ಯವೇ ಬೀಳುವುದಿಲ್ಲ. ಡೀಸೆಲ್ ಜನರೇಟರ್‌ನಿಂದ ಪಡೆಯುವ ಪ್ರತಿ ಯುನಿಟ್ ವಿದ್ಯುತ್‌ಗೆ ₹16ರಿಂದ ₹18 ನಿರ್ವಹಣಾ ವೆಚ್ಚ ತಗುಲಿದರೆ, ಸೌರ ವಿದ್ಯುತ್ ಚಾವಣಿ ಅಳವಡಿಕೆ ಮತ್ತು ನಿರ್ವಹಣೆಗೆ ಪ್ರತಿ ಯುನಿಟ್‌ಗೆ ₹5 ಅಥವಾ ₹6 ಖರ್ಚಾಗುತ್ತದೆ. ಅಂದರೆ, ನೈಸರ್ಗಿಕವಾಗಿ ಮಾತ್ರವಲ್ಲದೆ, ಆರ್ಥಿಕವಾಗಿಯೂ ಈ ವ್ಯವಸ್ಥೆ ಲಾಭದಾಯಕ. ಗ್ರಾಹಕರು ಮತ್ತು ವಿದ್ಯುತ್ ಸರಬರಾಜು ಸಂಸ್ಥೆಗಳಿಗೂ ಸಹಕಾರಿ.

ದೇಶದಲ್ಲಿಯೇ ಮೊದಲು:

ಗ್ರಾಹಕರ ವಿದ್ಯುತ್ ಬೇಡಿಕೆ ಆಧಾರಿತ ನಿರ್ವಹಣೆಗೆ (ಡಿಎಸ್‌ಎಂ) ದೇಶದಲ್ಲಿಯೇ ಮೊದಲ ಬಾರಿಗೆ ಕ್ರಮ ಕೈಗೊಂಡ ವಿದ್ಯುತ್ ಸರಬರಾಜು ಸಂಸ್ಥೆ ಬೆಸ್ಕಾಂ. ಅಂದರೆ, ಗ್ರಾಹಕರ ವಿದ್ಯುತ್ ಬೇಡಿಕೆಯನ್ನು ಆದಷ್ಟು ತಗ್ಗಿಸಿ, ಅವರೇ ವಿದ್ಯುತ್ ಉತ್ಪಾದಿಸಲು ಅನುವು ಮಾಡಿಕೊಡುವಂತಹ ಉಪಕ್ರಮಗಳನ್ನು 2008ರಿಂದಲೇ ಪ್ರಾರಂಭಿಸಿದೆ. ಸೌರವಿದ್ಯುತ್ ಚಾವಣಿಗಳಿಗೆ ಸಂಬಂಧಿಸಿದ ಯೋಜನೆ, ವಿನ್ಯಾಸ ಮತ್ತು ನಿರ್ವಹಣೆಯ ಚಟುವಟಿಕೆಯನ್ನು ಆಗಿನಿಂದಲೇ ನಡೆಸುತ್ತಿದೆ.

ಒಂದು ಕಿಲೊವಾಟ್ ಸಾಮರ್ಥ್ಯದ ಸೌರವಿದ್ಯುತ್ ಚಾವಣಿಯಿಂದ ದಿನಕ್ಕೆ 3 ಯುನಿಟ್‌ನಿಂದ 5 ಯುನಿಟ್‌ಗಳಷ್ಟು ವಿದ್ಯುತ್ ಪಡೆಯಬಹುದು. ಕೇಂದ್ರ ಸರ್ಕಾರವು ಈ ವರ್ಷ ಸೌರಫಲಕಗಳ ಬೆಲೆಯನ್ನೂ ಕಡಿಮೆ ಮಾಡಿರುವುದರಿಂದ, ಕೈಗಾರಿಕೆಗಳು, ವಾಣಿಜ್ಯ ಸಂಸ್ಥೆಗಳು ಗ್ರಿಡ್‌ನಿಂದ ಪಡೆಯುವ ದರಕ್ಕಿಂತ ಅತಿ ಕಡಿಮೆ ದರದಲ್ಲಿ ಸೌರ ಚಾವಣಿಗಳಿಂದ ವಿದ್ಯುತ್ ಪಡೆಯಬಹುದಾಗಿದೆ.

ಸೌರ ಗೃಹ ಯೋಜನೆ:

ಹಸಿರು ಉಪಕ್ರಮದ ಅಡಿಯಲ್ಲಿ ಕೇಂದ್ರ ಸರ್ಕಾರದ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯವು (ಎಂಎನ್‌ಆರ್‌ಇ) 'ಸೌರ ಗೃಹ ಯೋಜನೆ'ಯನ್ನು 2021ರ ಮಾರ್ಚ್‌ನಿಂದ ಜಾರಿಗೊಳಿಸಿದೆ. ಈ ಯೋಜನೆಯ ಅನುಷ್ಠಾನಕ್ಕೆ ಬೆಸ್ಕಾಂ ಅನ್ನು ನೋಡಲ್ ಏಜೆನ್ಸಿ. ವಸತಿ ಮತ್ತು ಅಪಾರ್ಟ್‌ಮೆಂಟ್ ವಸತಿ ಸಮುಚ್ಚಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಗ್ರಾಹಕರಿಗೆ ನೆಟ್ ಮೀಟರಿಂಗ್ ಆಧಾರದಲ್ಲಿ ಸೌರಶಕ್ತಿ ಚಾವಣಿ ಸ್ಥಾಪಿಸಲು ಸಹಾಯಧನ ನೀಡುವ ಯೋಜನೆ ಇದು.

ಸೌರವಿದ್ಯುತ್ ಚಾವಣಿ ಹಾಕಿಸಿಕೊಂಡವರಿಗೆ ಚಾವಣಿಯ ಮಾನದಂಡ ವೆಚ್ಚ ಅಥವಾ ನಿಗದಿತ ವೆಚ್ಚದಲ್ಲಿ ಶೇ 40ರಷ್ಟು ಸಹಾಯಧನವನ್ನು ನೀಡಲಾಗುತ್ತದೆ. 3 ಕಿಲೊವಾಟ್‌ನಿಂದ 10 ಕಿಲೊವಾಟ್‌ವರೆಗೆ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯದ ಸೌರವಿದ್ಯುತ್ ಚಾವಣಿ ನಿರ್ಮಿಸಿಕೊಳ್ಳುವ ಗುಂಪು ವಸತಿ ಅಥವಾ ಅಪಾರ್ಟ್‌ಮೆಂಟ್ ಸಮುಚ್ಚಯದ ವಸತಿ ಗ್ರಾಹಕರಿಗೆ ಶೇ 20ರಷ್ಟು ಸಹಾಯಧನ ಸಿಗುತ್ತದೆ.

ಉದಾಹರಣೆಗೆ, 3 ಕಿಲೊವಾಟ್ ಸಾಮರ್ಥ್ಯದ ಸೌರಚಾವಣಿಗೆ ₹47 ಸಾವಿರ ಮಾನದಂಡ ಅಥವಾ ಮೂಲ ವೆಚ್ಚ ನಿಗದಿ ಮಾಡಿದ್ದರೆ, ಅದಕ್ಕೆ ಶೇ 40ರಷ್ಟು ಅಂದರೆ, ₹18,800ರಷ್ಟು ಸಹಾಯಧನವನ್ನು ಸರ್ಕಾರ ನೀಡಲಿದೆ. ಉಳಿದ ಶೇ 60ರಷ್ಟನ್ನು ಅಂದರೆ, ₹28,200ನ್ನು ಗ್ರಾಹಕರೇ ಭರಿಸಬೇಕು.

ಗ್ರಾಹಕರು ತಮ್ಮ ಅಗತ್ಯಕ್ಕೆ ತಕ್ಕಷ್ಟು ವಿದ್ಯುತ್ ಬಳಸಿ, ಮಿಕ್ಕಿದ್ದನ್ನು ಬೆಸ್ಕಾಂಗೆ ಮಾರಾಟ ಮಾಡಬಹುದು. ಸಂಸ್ಥೆಯು ಯುನಿಟ್‌ಗೆ ₹2.99 ರಿಂದ ₹3.07 ವರೆಗೆ ದರ ನೀಡಲಿದೆ.

ಗ್ರಾಹಕರ ಮನೆಗಳ ಮೇಲೆ ಸೌರವಿದ್ಯುತ್ ಘಟಕ ಸ್ಥಾಪನೆಗೆ ಮಾತ್ರ ಆದ್ಯತೆ ನೀಡದೆ, ಸರ್ಕಾರಿ ಕಚೇರಿ, ಕಟ್ಟಡಗಳ ಮೇಲೆಯೂ ಸೌರವಿದ್ಯುತ್ ಘಟಕಗಳನ್ನು ಬೆಸ್ಕಾಂ ನಿರ್ಮಾಣ ಮಾಡುತ್ತಿದೆ. ಬೆಸ್ಕಾಂ ವ್ಯಾಪ್ತಿಯ 285 ಸ್ಥಳಗಳಲ್ಲಿ ಸೌರವಿದ್ಯುತ್ ಘಟಕಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಕೆಲವು ಘಟಕಗಳಿಂದ ಬೆಸ್ಕಾಂ ಈಗಾಗಲೇ ಸೌರವಿದ್ಯುತ್ ಪಡೆಯುತ್ತಿದೆ. ಇನ್ನು ಕೆಲವು ಕಾಮಗಾರಿ ಪ್ರಗತಿಯಲ್ಲಿವೆ.

ಪರ್ಯಾಯ ಮೂಲಗಳಿಂದ ವಿದ್ಯುತ್ ಪಡೆಯುವ ನಿಟ್ಟಿನಲ್ಲಿ ಗ್ರಾಹಕರಲ್ಲಿಯೂ ಅರಿವು ಮೂಡಬೇಕಾಗಿದೆ. ಬೆಸ್ಕಾಂನೊಂದಿಗೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳೂ ಕೈ ಜೋಡಿಸಿದರೆ, ಸೌರವಿದ್ಯುತ್ ಉತ್ಪಾದನೆ ಹೆಚ್ಚಾಗುವುದಲ್ಲದೆ, ವಿದ್ಯುತ್ ಬೇಡಿಕೆ–ಪೂರೈಕೆ ನಡುವಣ ವ್ಯತ್ಯಾಸ ತಗ್ಗುವುದರಲ್ಲಿ ಅನುಮಾನವಿಲ್ಲ.

ಬೆಸ್ಕಾಂನ ಕೇಂದ್ರ ಕಚೇರಿಯ ಕಟ್ಟಡದ ಮೇಲೆ ಅಳವಡಿಸಲಾಗಿರುವ ಸೌರಶಕ್ತಿ ಚಾವಣಿಯ ನೋಟ – ಪ್ರಜಾವಾಣಿ ಚಿತ್ರ/ ರಂಜು ಪಿ

ಸೌರವಿದ್ಯುತ್ ಘಟಕ: ಅಳವಡಿಕೆ ಪ್ರಕ್ರಿಯೆ ಹೇಗೆ ?

- ನಿಮ್ಮ ಮನೆಯ ಆರ್.ಆರ್. ಸಂಖ್ಯೆ ನಮೂದಿಸಿ ಬೆಸ್ಕಾಂ ವೆಬ್‌ಸೈಟ್‌ನಲ್ಲಿ (https://bescom.karnataka.gov.in) ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕು
- ಆರ್.ಆರ್. ಸಂಖ್ಯೆ ನಂತರ ಮೊಬೈಲ್ ಸಂಖ್ಯೆ ನಮೂದಿಸಿ, ಉಪವಿಭಾಗ ಆಯ್ಕೆ ಮಾಡಿ ಸೌರಘಟಕಕ್ಕೆ ಅರ್ಜಿ ಸಲ್ಲಿಸಬೇಕು
- ಬೆಸ್ಕಾಂ ಹಾಗೂ ಮನೆಯ ಮಾಲೀಕರ ಮಧ್ಯೆ ವಿದ್ಯುತ್ ಖರೀದಿ ಒಪ್ಪಂದ ನಡೆಯುತ್ತದೆ.
- ಗ್ರಿಡ್‌ಗೆ ಪೂರೈಕೆಯಾಗುವ ವಿದ್ಯುತ್ ಆಧಾರದ ಮೇಲೆ ಮನೆಯ ಮಾಲೀಕರಿಗೆ ಬೆಸ್ಕಾಂ ಹಣ ಪಾವತಿಸುತ್ತದೆ.
- ಮಾಹಿತಿಗೆ–080–22340816 ಸಂಪರ್ಕಿಸಬಹುದು.

ಸೌರಗೃಹ ಯೋಜನೆ ಉಪಯೋಗ

- ನಮ್ಮ ಮನೆಗೆ ಅಗತ್ಯವಿರುವಷ್ಟು ವಿದ್ಯುತ್ ನಾವೇ ಉತ್ಪಾದಿಸಬಹುದು
- ಮಾಸಿಕ ವಿದ್ಯುತ್ ಶುಲ್ಕದಲ್ಲಿ ಉಳಿತಾಯ
- ಹೆಚ್ಚುವರಿ ವಿದ್ಯುತ್ ಅನ್ನು ಬೆಸ್ಕಾಂಗೆ ನೀಡಿ 25 ವರ್ಷಗಳವರೆಗೆ ಹಣ ಸಂಪಾದಿಸಬಹುದು
- ಕಡಿಮೆ ಬಂಡವಾಳ ವೆಚ್ಚ
- ಮನೆಯ ಚಾವಣಿಯ ಅತ್ಯುತ್ತಮ ಬಳಕೆ

ಪ್ರಜಾವಾಣಿ ನೋಡಿಯೊ — ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

'₹1 ಲಕ್ಷದವರೆಗೆ ಉಳಿತಾಯ'

ತಿಂಗಳಿಗೆ ₹8ಸಾವಿರದಿಂದ ₹9 ಸಾವಿರಕ್ಕೂ ಹೆಚ್ಚು ವಿದ್ಯುತ್ ಶುಲ್ಕ ಬರುತ್ತಿದ್ದಾಗ, ಅದರ ಹೊರೆ ಭರಿಸಲಾಗದೆ ತಮ್ಮ ಮನೆಯ ಮೇಲೆ ಸೌರವಿದ್ಯುತ್ ಘಟಕ ಸ್ಥಾಪಿಸಿಕೊಂಡಿದ್ದರು ಬನ್ನೇರುಘಟ್ಟ ರಸ್ತೆ ಬಳಿಯ ಅರಕೆರೆ ನಿವಾಸಿ ಪೃಥ್ವಿ ಮಾಂಗಿರಿ. ಈಗ ಅವರು ಬೆಸ್ಕಾಂಗೇ ವಿದ್ಯುತ್ ಮಾರಾಟ ಮಾಡುತ್ತಿದ್ದಾರೆ.

₹5 ಲಕ್ಷ ವೆಚ್ಚದಲ್ಲಿ 15 ಸೌರಫಲಕಗಳನ್ನು ಅಳವಡಿಸಿ, 5 ಕಿಲೊವಾಟ್ ವಿದ್ಯುತ್ ಉತ್ಪಾದಿಸುತ್ತಿದ್ದಾರೆ.

'ನಾನು ಡ್ರಮ್ ವಾದಕ. ನನ್ನದೇ ಆದ ಸ್ಟುಡಿಯೋ ಇದೆ. ನನ್ನ ಡ್ರಮ್ ವಾದನ ಅಭ್ಯಾಸದಿಂದ ತೊಂದರೆಯಾಗುತ್ತಿದೆ ಎಂದು ನೆರೆ–ಹೊರೆಯವರು ಪದೇ ಪದೇ ತಕರಾರು ಎತ್ತುತ್ತಿದ್ದರು. ಕೋಣೆಯಿಂದ ಶಬ್ದ ಆಚೆ ಹೋಗದಿರುವ ವ್ಯವಸ್ಥೆ (ಸೌಂಡ್ ಪ್ರೂಫ್) ಅಳವಡಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ಇದಕ್ಕಾಗಿ ಎ.ಸಿ ಸೇರಿದಂತೆ ಇನ್ನಿತರ ವ್ಯವಸ್ಥೆಗೆ ಹೆಚ್ಚು ಖರ್ಚು ಮಾಡಬೇಕಾಯಿತು. ಮೊದಲು ತಿಂಗಳಿಗೆ ₹1,500ದಷ್ಟು ಬರುತ್ತಿದ್ದ ವಿದ್ಯುತ್ ಶುಲ್ಕ ಒಂದೆರಡು ತಿಂಗಳು ₹9,000ದವರೆಗೆ ಬಂದಿತ್ತು' ಎಂದು ಹೇಳಿದರು.

'ದುಬಾರಿ ಶುಲ್ಕದ ಸಮಸ್ಯೆ ತಪ್ಪಿಸಿಕೊಳ್ಳುವ ಉದ್ದೇಶದಿಂದ ಮನೆಯ ಮೇಲೆ ಸೌರವಿದ್ಯುತ್ ಘಟಕವನ್ನು ಅಳವಡಿಸಿಕೊಂಡೆವು. ಬೆಸ್ಕಾಂನಿಂದ ಪ್ರತ್ಯೇಕ ಮೀಟರ್ ಅಳವಡಿಸಲಾಗಿದೆ. ಮನೆಯ ಪಕ್ಕದ ಟ್ರಾನ್ಸ್‌ಫಾರ್ಮರ್ ಮೂಲಕ ಈ ವಿದ್ಯುತ್ ನೇರವಾಗಿ ಬೆಸ್ಕಾಂನ ಗ್ರಿಡ್‌ಗೆ ಹೋಗುತ್ತದೆ. ಪ್ರತಿ ಯುನಿಟ್‌ಗೆ ₹7ರಂತೆ ಬೆಸ್ಕಾಂ ಹಣ ನೀಡುತ್ತಿದೆ. ನಾವು ಬಳಸುವ ವಿದ್ಯುತ್ ವೆಚ್ಚವನ್ನು ಕಡಿತಗೊಳಿಸಿ ಉಳಿದ ಹಣವನ್ನು ನಮ್ಮ ಖಾತೆಗೆ ಜಮಾ ಮಾಡಲಾಗುತ್ತದೆ' ಎಂದು ಪೃಥ್ವಿ ಅವರ ತಾತ ರಾಜನ್ ಹೇಳಿದರು.

'ನಮ್ಮ ವಿದ್ಯುತ್ ವೆಚ್ಚ, ಬೆಸ್ಕಾಂ ನೀಡುವ ಹಣ ಮತ್ತು ಬಡ್ಡಿ ಲೆಕ್ಕ ಎಲ್ಲ ಹಾಕಿದರೆ ಒಂದೂವರೆ ವರ್ಷಕ್ಕೆ ₹1 ಲಕ್ಷದವರೆಗೆ ನಮಗೆ ಲಾಭವಾಗಿದೆ. ಇನ್ನೂ 25 ವರ್ಷ ನಮಗೆ ಚಿಂತೆ ಇಲ್ಲ' ಎಂದೂ ಹೇಳಿದರು.

ಪೃಥ್ವಿ ಮಾಂಗಿರಿ

ಸೌರಚಾವಣಿ ಅಳವಡಿಕೆಗೆ ಗ್ರಾಹಕರ ಉತ್ಸಾಹ

'ಸೌರ ಗೃಹ ಯೋಜನೆಯಡಿ ವಸತಿ ಮತ್ತು ಗುಂಪು ವಸತಿ ಗ್ರಾಹಕರು ಸೌರವಿದ್ಯುತ್ ಚಾವಣಿ ಅಳವಡಿಸಿಕೊಳ್ಳಲು ಉತ್ಸಾಹ ತೋರುತ್ತಿದ್ದಾರೆ. ಮೊದಲ ಬಂದವರಿಗೆ ಮೊದಲ ಪ್ರಾಶಸ್ತ್ಯ ನೀಡಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತಿದೆ' ಎಂದು ಬೆಸ್ಕಾಂನ ಡಿಎಸ್‌ಎಂ ವಿಭಾಗದ ಪ್ರಧಾನ ವ್ಯವಸ್ಥಾಪಕ ಎಚ್.ವಿ. ಕೃಷ್ಣಪ್ರಸಾದ್ ಹೇಳಿದರು.

'ಸೌರ ಗೃಹ ಯೋಜನೆಗಿಂತಲೂ ಮೊದಲೇ, ಅನೇಕರು ವೈಯಕ್ತಿಕ ಆಸಕ್ತಿಯಿಂದ ಮನೆಯ ಮೇಲೆ ಸೌರವಿದ್ಯುತ್ ಘಟಕ ಸ್ಥಾಪಿಸಿಕೊಂಡಿದ್ದಾರೆ. ಅವರಿಂದ ಖರೀದಿಸುವ ಪ್ರತಿ ಯುನಿಟ್ ವಿದ್ಯುತ್‌ಗೆ ₹3.05 ನೀಡಲಾಗುತ್ತಿದೆ. ವರ್ಷಗಳು ಕಳೆದಂತೆ ಅಥವಾ ಆದೇಶಗಳು ಬದಲಾದಂತೆ ಈ ಮೊತ್ತದಲ್ಲಿ ವ್ಯತ್ಯಾಸವಾಗಬಹುದು' ಎಂದೂ ಹೇಳಿದರು.

ಎಚ್.ವಿ. ಕೃಷ್ಣಪ್ರಸಾದ್

285 ಸ್ಥಳಗಳಲ್ಲಿ ಸೌರವಿದ್ಯುತ್ ಚಾವಣಿ

ಗ್ರಾಹಕರ ಮನೆಗಳ ಮೇಲೆ ಸೌರವಿದ್ಯುತ್ ಘಟಕ ಸ್ಥಾಪನೆಗೆ ಮಾತ್ರ ಆದ್ಯತೆ ನೀಡದೆ, ಸರ್ಕಾರಿ ಕಚೇರಿ, ಕಟ್ಟಡಗಳ ಮೇಲೆಯೂ ಸೌರವಿದ್ಯುತ್ ಘಟಕಗಳನ್ನು ಬೆಸ್ಕಾಂ ನಿರ್ಮಾಣ ಮಾಡುತ್ತಿದೆ. ಬೆಸ್ಕಾಂ ವ್ಯಾಪ್ತಿಯ 285 ಸ್ಥಳಗಳಲ್ಲಿ ಸೌರವಿದ್ಯುತ್ ಘಟಕ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ.

ಕೆಲವು ಕಾಮಗಾರಿ ಪ್ರಗತಿಯಲ್ಲಿದ್ದರೆ, ಮತ್ತೆ ಕೆಲವು ಘಟಕಗಳಿಂದ ಈಗಾಗಲೇ ಸೌರವಿದ್ಯುತನ್ನು ಬೆಸ್ಕಾಂ ಪಡೆಯುತ್ತಿದೆ.

13ನೇ ಹಣಕಾಸು ಆಯೋಗದಡಿ ಈ ಕಾರ್ಯಕ್ಕಾಗಿ ₹67.66 ಕೋಟಿ ಅನುದಾನವನ್ನೂ ಕೇಂದ್ರ ಸರ್ಕಾರ ನೀಡಿದೆ. 2020ರ ಜೂನ್ 5ರಿಂದ ಈ ಪ್ರಕ್ರಿಯೆ ಪ್ರಾರಂಭವಾಗಿದ್ದು, ಇದೇ ಡಿಸೆಂಬರ್ ಒಳಗೆ ಪೂರ್ಣಗೊಳಿಸುವ ಗುರಿ ಇದೆ ಎಂದು ಎಚ್.ವಿ. ಕೃಷ್ಣಪ್ರಸಾದ್ ವಿವರಿಸಿದರು.

ಸಹಾಯಧನಕ್ಕಾಗಿ 1,146 ಅರ್ಜಿ ಸಲ್ಲಿಕೆ

ಸೌರ ಗೃಹ ಯೋಜನೆಯಡಿ ಸಹಾಯಧನ ಪಡೆಯಲು ಜುಲೈ 31ರ ವೇಳೆಗೆ 1,146 ಜನ ಅರ್ಜಿ ಸಲ್ಲಿಸಿದ್ದಾರೆ. ತಾಂತ್ರಿಕ ಕಾರ್ಯಸಾಧ್ಯತೆಯ ಆಧಾರದ ಮೇಲೆ ಅರ್ಜಿಗಳನ್ನು ಆಯ್ಕೆ ಮಾಡಲಾಗುತ್ತದೆ. ಮೊದಲು ಬಂದವರಿಗೆ ಆದ್ಯತೆ ಎಂದೂ ಬೆಸ್ಕಾಂ ಹೇಳಿದೆ.

ಸೌರಶಕ್ತಿ ಚಾವಣಿಗೆ ಅರ್ಜಿ ಸಲ್ಲಿಸುವವರು http://srtpv.bescom.org/SRTPV/expression ಈ ಲಿಂಕ್ ಬಳಸಬಹುದು.

ಸೌರವಿದ್ಯುತ್ ಶಕ್ತಿಗೆ ಸಂಬಂಧಿಸಿದ ಯಾವುದೇ ಯೋಜನೆಯ ಮಾಹಿತಿಗೆ, ಬೆಸ್ಕಾಂನ ಸಹಾಯವಾಣಿ 080–22340816 ಸಂಪರ್ಕಿಸಬಹುದು.

160.33 ಮೆಗಾವಾಟ್ — ಬೆಸ್ಕಾಂ ವ್ಯಾಪ್ತಿಯಲ್ಲಿ ಸೌರ ಚಾವಣಿಗಳಿಂದ ಉತ್ಪಾದನೆಯಾಗುತ್ತಿರುವ ಒಟ್ಟು ಸೌರವಿದ್ಯುತ್

20.83 ಮೆಗಾವಾಟ್ — ವಸತಿ–ಗುಂಪು ವಸತಿಗಳಲ್ಲಿ ಉತ್ಪಾದನೆಯಾಗುತ್ತಿರುವ ಸೌರವಿದ್ಯುತ್

2.27 ಮೆಗಾವಾಟ್ — ಸರ್ಕಾರಿ ಕಟ್ಟಡಗಳಲ್ಲಿ ಉತ್ಪಾದನೆಯಾಗುತ್ತಿರುವ ಸೌರವಿದ್ಯುತ್

137.24 ಮೆಗಾವಾಟ್ — ವಸತಿಯೇತರ ಅಥವಾ ಕೈಗಾರಿಕೆಗಳಲ್ಲಿ ಉತ್ಪಾದನೆಯಾಗುತ್ತಿರುವ ಸೌರವಿದ್ಯುತ್

ಬಿಎಂಎಸ್‌ಐಟಿಯಲ್ಲಿ 450 ತಾಂತ್ರಿಕ ಮಾದರಿ ಪ್ರದರ್ಶನ

ಯಲಹಂಕ: ಬಿಎಂಎಸ್ ತಾಂತ್ರಿಕ ಮತ್ತು ನಿರ್ವಹಣೆ ಮಹಾವಿದ್ಯಾಲಯದಲ್ಲಿ ಏರ್ಪಡಿಸಿದ್ದ ತಾಂತ್ರಿಕ ಮತ್ತು ನಿರ್ವಹಣಾ ಮೇಳದಲ್ಲಿ ವಿದ್ಯಾರ್ಥಿಗಳು ಸಿದ್ಧಪಡಿಸಿದ್ದ 450 ಮಾದರಿಗಳನ್ನು ಪ್ರದರ್ಶಿಸಲಾಯಿತು. ಆನ್‌ಲೈನ್‌ನಲ್ಲಿಯೇ ಈ ಮಾದರಿಗಳು ಪ್ರದರ್ಶನಗೊಂಡವು.

ಐಒಟಿ, ತ್ರೀಡಿ ಪ್ರಿಂಟಿಂಗ್ ತಂತ್ರಜ್ಞಾನ, ದತ್ತಾಂಶ ವಿಶ್ಲೇಷಣೆ, ಹಸಿರು ಇಂಧನ, ವಸ್ತು ವಿಜ್ಞಾನ ಮತ್ತಿತರ ವಿಷಯಗಳಿಗೆ ಸಂಬಂಧಿಸಿದ ಮಾದರಿಗಳ ಪ್ರಾತ್ಯಕ್ಷಿಕೆ ಗಮನ ಸೆಳೆದವು.

'ಅತ್ಯುತ್ತಮ ಪ್ರಾತ್ಯಕ್ಷಿಕೆಗಳಿಗೆ ಬಹುಮಾನದ ಜೊತೆಗೆ ಉತ್ತೇಜನ ನೀಡಿ, ಹೆಚ್ಚಿನ ಸಂಶೋಧನೆ ಮಾಡಲು ಅನುವು ಮಾಡಿಕೊಡಲಾಗುವುದು' ಎಂದು ಪ್ರಾಂಶುಪಾಲ ಡಾ. ಜಿ.ಎನ್. ಮೋಹನ್ ಬಾಬು ತಿಳಿಸಿದರು.

ತೆರಿಗೆ ವಿವರ ಪತ್ರ ಸಲ್ಲಿಸಿದ 3 ವರ್ಷಗಳ ಬಳಿಕ ತೆರಿಗೆ ಮೊತ್ತ ಪರಿಷ್ಕರಿಸುವಂತಿಲ್ಲ: ಪಿ.ಆರ್‌.ರಮೇಶ್

'ಆಸ್ತಿ ತೆರಿಗೆ: ವಲಯಗಳನ್ನು ಹೊಸತಾಗಿ ವರ್ಗೀಕರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯ ಆಸ್ತಿ ಮಾಲೀಕರು ವಲಯ ವರ್ಗೀಕರಣಕ್ಕೆ ಅನುಗುಣವಾಗಿ ತೆರಿಗೆ ಪಾವತಿಸುತ್ತಿಲ್ಲ ಎಂಬ ಕಾರಣಕ್ಕೆ ಐದು ವರ್ಷಗಳ ಹಿಂದಿನಿಂದ ತೆರಿಗೆಯನ್ನು ಈಗ ವಸೂಲಿ ಮಾಡಲು ಕಾನೂನಿನಲ್ಲಿ ಅವಕಾಶ ಇಲ್ಲ. ಹಾಗಾಗಿ ವಲಯಗಳನ್ನು ಹೊಸತಾಗಿ ವರ್ಗೀಕರಿಸುವ ಮೂಲಕ ಈ ಸಮಸ್ಯೆ ನೀಗಿಸಬಹುದು' ಎಂದು ವಿಧಾನ ಪರಿಷತ್ ಸದಸ್ಯ ಪಿ.ಆರ್.ರಮೇಶ್ ಸಲಹೆ ನೀಡಿದ್ದಾರೆ.

'ಕಟ್ಟಡ ಮಾಲೀಕರಿಗೆ ಬಿಬಿಎಂಪಿಯು ಐದು ವರ್ಷಗಳ ತೆರಿಗೆ ವ್ಯತ್ಯಾಸದ ಬಾಕಿ ಮೊತ್ತಕ್ಕೆ ವಾರ್ಷಿಕ ಶೇ 24ರಷ್ಟು ದಂಡವನ್ನೂ ವಿಧಿಸಿ 1976ರ ಕೆಎಂಸಿ ಕಾಯ್ದೆಯ ಸೆಕ್ಷನ್ 108 (ಎ) ಪ್ರಕಾರ ನೋಟಿಸ್ ಜಾರಿ ಮಾಡುತ್ತಿದೆ. ಈ ನೋಟಿಸ್‌ಗಳು ಸಿದ್ಧವಾಗಿದ್ದು 2021ರ ಫೆಬ್ರುವರಿಯಲ್ಲಿ. ಆದರೆ, ಮಾಲೀಕರಿಗೆ ಜಾರಿಯಾಗಿದ್ದು ಜುಲೈ ಬಳಿಕ. 2020ರ ಬಿಬಿಎಂಪಿ ಕಾಯ್ದೆ ಜಾರಿಗೆ ಬಂದ ಬಳಿಕ 1976ರ ಕೆಎಂಸಿ ಕಾಯ್ದೆ ಬಿಬಿಎಂಪಿಗೆ ಅನ್ವಯ ಆಗುವುದಿಲ್ಲ. ಈಗ ನೋಟಿಸ್ ನೀಡುವುದಿದ್ದರೆ ಬಿಬಿಎಂಪಿ ಕಾಯ್ದೆಯನ್ವಯವೇ ನೀಡಬೇಕಾಗುತ್ತದೆ' ಎಂದು ಸ್ಪಷ್ಟಪಡಿಸಿದರು.

'ಕಟ್ಟಡ ಮಾಲೀಕರು ತೆರಿಗೆ ತಪ್ಪಿಸಿಕೊಳ್ಳುವ ಸಂದೇಹ ಬಂದರೆ ಬಿಬಿಎಂಪಿ ಆಯುಕ್ತರು ಕೆಎಂಸಿ ಕಾಯ್ದೆಯ ಸೆಕ್ಷನ್ 108 (11)ರ ಪ್ರಕಾರ ಕಟ್ಟಡಗಳನ್ನು ಅನಿಶ್ಚಿತವಾಗಿ ಆಯ್ಕೆ ಮಾಡಿ ಪರಿಶೀಲನೆಗೆ ಒಳಪಡಿಸಬಹುದು. ಅದಕ್ಕೆ ಮಾಲೀಕರು ನಿರಾಕರಿಸಿದರೆ ಅವರಿಗೆ ಸಮಂಜಸವಾದ ಅವಕಾಶ ನೀಡಿ ತೆರಿಗೆಯನ್ನು ನಿರ್ಧರಿಸಬಹುದು. ಈ ರೀತಿ ಅನಿಶ್ಚಿತ ಆಯ್ಕೆ ಮೂಲಕ ಪರಿಶೀಲನೆ ಮಾಡಿದಾಗ ಆಸ್ತಿ ಮಾಲೀಕರು ಸಲ್ಲಿಸಿದ ತೆರಿಗೆ ವಿವರ ಪತ್ರಗಳು ಸರಿ ಇಲ್ಲದಿದ್ದರೆ, ಅಥವಾ ಕಡಿಮೆ ಮೊತ್ತವನ್ನು ನಮೂದಿಸಿದ್ದರೆ ತೆರಿಗೆಯನ್ನು ಮರು ನಿರ್ಧಾರ ಮಾಡಬಹುದು. ಪರಿಷ್ಕೃತ ತೆರಿಗೆಯ ಮೊತ್ತವು ಮಾಲೀಕ ಸಲ್ಲಿಸಿದ ತೆರಿಗೆ ವಿವರ ಪತ್ರದ ಮೊತ್ತಕ್ಕಿಂತ ಶೇ 5ಕ್ಕಿಂತ ಹೆಚ್ಚಿದ್ದರೆ ತಪ್ಪಿಸಿಕೊಂಡ ತೆರಿಗೆ ಮೊತ್ತಕ್ಕೆ ವಾರ್ಷಿಕ ಶೇ 24ರಷ್ಟು ಬಡ್ಡಿ ಸಮೇತ ವಸೂಲಿ ಮಾಡಬಹುದು' ಎಂದರು.

'ಈ ರೀತಿ ತೆರಿಗೆ ಪರಿಷ್ಕರಿಸುವುದಕ್ಕೆ ಕೆಎಂಸಿ ಕಾಯ್ದೆಯಲ್ಲಿ ಕೆಲವೊಂದು ನಿಬಂಧನೆಗಳೂ ಇವೆ. ಈ ಕಾಯ್ದೆಯ ಸೆಕ್ಷನ್ 108 (13)ರ ಪ್ರಕಾರ ಪರಿಶೀಲನೆ ಬಳಿಕ ನಿಗದಿಪಡಿಸಿದ ಮೊತ್ತಕ್ಕೆ ಆಕ್ಷೇಪ ಸಲ್ಲಿಸಲು ಮಾಲೀಕರಿಗೆ 30 ದಿನಗಳು ಕಾಲಾವಕಾಶ ನೀಡಬೇಕು. ಅವರು ಆಕ್ಷೇಪಗಳನ್ನು ಸಲ್ಲಿಸಿದರೆ ಅದನ್ನು ಪರಿಗಣಿಸಿ ತೆರಿಗೆಯ ಮೊತ್ತವನ್ನು ಪರಿಷ್ಕರಿಸಬಹುದು. ಆದರೆ, ಪರಿಷ್ಕರಣೆಯ ಆದೇಶವನ್ನು ಮಾಲೀಕರು ಆಕ್ಷೇಪ ಸಲ್ಲಿಸಿದ 60 ದಿನಗಳ ಒಳಗೆ ಸಲ್ಲಿಸಬೇಕು. ಸೆಕ್ಷನ್ 108 (14)ರ ಪ್ರಕಾರ ಕಟ್ಟಡ ಮಾಲೀಕರು ತೆರಿಗೆ ವಿವರ ಪತ್ರ ಸಲ್ಲಿಸಿದ ಮೂರು ವರ್ಷಗಳ ಬಳಿಕ ತೆರಿಗೆ ಮೊತ್ತವನ್ನು ಪರಿಷ್ಕರಣೆ ಮಾಡುವಂತಿಲ್ಲ' ಎಂದು ಹೇಳಿದರು.

ಕಟ್ಟಡ ಮಾಲೀಕರಿಂದಲೇ ತೆರಿಗೆ ವ್ಯತ್ಯಾಸದ ಮೊತ್ತವನ್ನು ವಸೂಲಿ ಮಾಡಲು ಮುಂದಾದರೆ ಬಿಬಿಎಂಪಿ ವಿರುದ್ಧ ಕಾನೂನು ಸಮರ ಅನಿವಾರ್ಯ.

ಪಿ.ಆರ್.ರಮೇಶ್

ವಿಧಾನ ಪರಿಷತ್ ಸದಸ್ಯ

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	20.32 ಕೋಟಿ ▲	3.19 ಕೋಟಿ
ಸಕ್ರಿಯ ಪ್ರಕರಣ	1.63 ಕೋಟಿ ▲	3.96ಲಕ್ಷ ▼
ಗುಣಮುಖ	18.26ಕೋಟಿ ▲	3.11 ಕೋಟಿ ▲
ಸಾವು	43.05 ಲಕ್ಷ ▲	4.28 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	5.71 ಲಕ್ಷ ▼	36,028 ▲
ಗುಣಮುಖ	4.38 ಲಕ್ಷ ▼	39,828 ▲
ಸಾವು	9,039 ▼	447 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಬ್ರೆಜಿಲ್	ಇಂಡೊನೇಷ್ಯಾ
68,905 ▼	43,033 ▲	31,753

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರೆಜಿಲ್	ಬ್ರಿಟನ್
60.34 ▼	6.65 ▼	12.89 ▲

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಪ್ರಜಾವಾಣಿ ಗ್ರಾಫಿಕ್ಸ್

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.33 ಲಕ್ಷ
ತಮಿಳುನಾಡು	34,317 ▲
ದೆಹಲಿ	25,066

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	63.53 ▲
ಕೇರಳ	35.52 ▲
ತಮಿಳುನಾಡು	25.75 ▲

ನಗರದ ಕೋವಿಡ್ ಅಂಕಿ–ಅಂಶ

ಒಟ್ಟು ಪ್ರಕರಣಗಳು (12,30,138 ನಿನ್ನೆಯ ವಿವರ)	12,30,486 ▲
ಸಕ್ರಿಯ ಪ್ರಕರಣಗಳು	8,493 ▼
ಗುಣಮುಖರಾದವರು	12,06,078 ▲
ಒಟ್ಟು ಸಾವು	15,914 ▲

ಭಾನುವಾರದ ಏರಿಕೆ

ಹೊಸ ಪ್ರಕರಣ	348 ▼
ಗುಣಮುಖ	366 ▼
ಸಾವು	01 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ನಗರದಲ್ಲಿ ಇಂದು

ಕುವೆಂಪು ಸಾಹಿತ್ಯ ವಾಚನ: ವಿಚಾರ ಸಾಹಿತ್ಯ: ರಾಘವೇಂದ್ರ ಕರ್ಜೆ, ಆಯೋಜನೆ: ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಸಂಜೆ 6ಕ್ಕೆ (ಆನ್‌ಲೈನ್ ಕಾರ್ಯಕ್ರಮ)

ರಾಷ್ಟ್ರೀಯ ಶಿಕ್ಷಣ ನೀತಿ 2020 ಚರ್ಚೆ: 'ನೂತನ ಶಿಕ್ಷಣ ನೀತಿ ಮತ್ತು ಒಕ್ಕೂಟ ಧರ್ಮ', ಭಾಗವಹಿಸುವವರು: ಸಿದ್ದರಾಮಯ್ಯ, ವೈ.ಎಸ್.ವಿ. ದತ್ತಾ, ಯು. ಬಸವರಾಜ್, ಪುರುಷೋತ್ತಮ ಬಿಳಿಮಲೆ, ಆಯೋಜನೆ: ಸಮುದಾಯ ಕರ್ನಾಟಕ, ಸಂಜೆ 7ಕ್ಕೆ (ಆನ್‌ಲೈನ್ ಕಾರ್ಯಕ್ರಮ)

'ನಾಗರಹೊಳೆ; ರಾಜೀವ್ ಗಾಂಧಿ ಹೆಸರು ಬದಲಿಸಿ'

ಮೈಸೂರು: ನಾಗರಹೊಳೆ ಪ್ರದೇಶಕ್ಕಿರುವ 'ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನ' ಎಂಬ ಹೆಸರನ್ನು ಬದಲಿಸಿ, 'ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ' ಹೆಸರಿಡಬೇಕೆಂದು ಆಗ್ರಹಿಸಿ ಆನ್‌ಲೈನ್ ಸಹಿ ಸಂಗ್ರಹ ಅಭಿಯಾನ ಶುರುವಾಗಿದೆ.

ಕೊಡಗಿನ ನವೀನ್ ಮಾದಪ್ಪ ಮತ್ತು ವಿನಯ್ ಕಾಯಪಂಡ ಎಂಬುವರು change.orgನಲ್ಲಿ ಆರಂಭಿಸಿರುವ ಅಭಿಯಾನ ಬೆಂಬಲಿಸಿ, ಭಾನುವಾರ ರಾತ್ರಿಯ ವರೆಗೆ 6,400 ಮಂದಿ ಸಹಿ ಹಾಕಿದ್ದಾರೆ.

ಆರೋಗ್ಯ ಕಾರ್ಯಕರ್ತರಿಗೆ ರಾಮಲಿಂಗಾರೆಡ್ಡಿ ಅವರು ಆಹಾರದ ಕಿಟ್‌ಗಳನ್ನು ವಿತರಿಸಿದರು. ಕಾಂಗ್ರೆಸ್ ಮುಖಂಡರಾದ ಮಂಜುನಾಥ ರೆಡ್ಡಿ, ಚಂದ್ರಪ್ಪ, ಮೋಹನ್, ಮಂಜುನಾಥ್, ಮಂಜುಳಾ ಸಂಪತ್, ಮುನಿರಾಜ್, ಗೋವರ್ಧನ ರೆಡ್ಡಿ ಹಾಗೂ ಆನಂದ್ ಇದ್ದರು.

'3ನೇ ಅಲೆ ತಡೆಗೆ ಕ್ರಮಕೈಗೊಳ್ಳಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಮೂರನೇ ಅಲೆಯ ಬಗ್ಗೆ ತಜ್ಞರು ಮುನ್ಸೂಚನೆ ನೀಡಿರುವುದರಿಂದ ಸರ್ಕಾರ ಈಗಲೇ ಎಚ್ಚೆತ್ತುಕೊಂಡು ಸೂಕ್ತಕ್ರಮ ಕೈಗೊಳ್ಳಬೇಕು' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಆಗ್ರಹಿಸಿದರು.

ಬಿಟಿಎಂ ವಿಧಾನಸಭಾ ಕ್ಷೇತ್ರದ ಆರೋಗ್ಯ ಕಾರ್ಯಕರ್ತರಿಗೆ ಆರ್.ಎಲ್.ಆರ್ ತಂಡದ ವತಿಯಿಂದ ಹಮ್ಮಿಕೊಂಡ ಆಹಾರ ಕಿಟ್‌ಗಳ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 'ಕೋವಿಡ್ ಎರಡನೇ ಅಲೆಯು ನಿಯಂತ್ರಣಕ್ಕೆ ಬಂದಿದೆ. ಈಗ ಮೂರನೇ ಅಲೆಯ ಬಗ್ಗೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ತಜ್ಞರು ವರದಿ ನೀಡಿದ್ದಾರೆ. ಆದಷ್ಟು ಬೇಗ ಸರ್ಕಾರ ಕಾರ್ಯಗತವಾಗಬೇಕು. ಮೊದಲ ಮತ್ತು ಎರಡನೇ ಅಲೆಯಂತೆ ನಿರ್ಲಕ್ಷ್ಯ ಮಾಡಬಾರದು. ಸರ್ಕಾರ ನಿದ್ದೆಗೆ ಜಾರಿದರೆ ಮೂರನೇ ಅಲೆಯಲ್ಲಿ ಸಂಕಷ್ಟ ಎದುರಾಗುತ್ತದೆ' ಎಂದು ಎಚ್ಚರಿಸಿದರು.

ಕಾಂಗ್ರೆಸ್ ಮುಖಂಡ ಮಂಜುನಾಥ್ ರೆಡ್ಡಿ ಇದ್ದರು.

ಮತದಾರರ ಪಟ್ಟಿ ಪರಿಷ್ಕರಣೆ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಮತದಾರರ ಪಟ್ಟಿ ಪರಿಷ್ಕರಣಾ ಕಾರ್ಯ ಇದೇ 9ರಿಂದ (ಸೋಮವಾರ) ಆರಂಭವಾಗಲಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಯಾಗಿರುವ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದ್ದಾರೆ.

ಇದೇ 9ರಿಂದ ಅ. 31ರವರೆಗೆ ಮತದಾರರ ಪಟ್ಟಿ ಪರಿಷ್ಕರಣೆ ನಡೆಯಲಿದೆ. ಹೆಸರು ಮರುಕಳಿಸಿರುವುದು, ಹೆಸರಿನ ಅಕ್ಷರಗಳು ಬದಲಾಗಿರುವುದನ್ನು ಮಾರ್ಪಡಿಸಲು ಅವಕಾಶ ಕಲ್ಪಿಸಲಾಗಿದೆ. ಮತಗಟ್ಟೆ ಹಂತದ ಅಧಿಕಾರಿಗಳು (ಬಿಎಲ್‌ಒ) ಮನೆ ಮನೆಗೆ ತೆರಳಿ ಮತದಾರರ ಪಟ್ಟಿಯನ್ನು ಪರಿಶೀಲಿಸಿ ಲೋಪಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಿದ್ದಾರೆ. ಮತಗಟ್ಟೆಗಳನ್ನು ಮರುನಿಗದಿಗೊಳಿಸಲಿದ್ದಾರೆ.

ಮತದಾರರ ಕರಡು ಪಟ್ಟಿಯನ್ನು ಬಿಬಿಎಂಪಿ ನ.1ರಂದು ಪ್ರಕಟಿಸಲಿದೆ. ಮತದಾರರು ಆಕ್ಷೇಪಣೆಗಳನ್ನು ಸಲ್ಲಿಸಲು ನ. 30ರವರೆಗೆ ಕಾಲಾವಕಾಶ ನೀಡಲಾಗುತ್ತದೆ. ಆಕ್ಷೇಪಣೆಗಳನ್ನು ಪರಿಗಣಿಸಿ ಡಿ. 20ರ ಒಳಗೆ ಜಿಲ್ಲಾ ಚುನಾವಣಾಧಿಕಾರಿ ಸೂಕ್ತ ಮಾರ್ಪಾಡು ಮಾಡಲಿದ್ದಾರೆ.

'ಮತದಾರರ ಅಂತಿಮ ಪಟ್ಟಿಯನ್ನು 2022ರ ಜ. 5ರಂದು ಪ್ರಕಟಿಸಲಾಗುತ್ತದೆ' ಎಂದು ಮುಖ್ಯ ಆಯುಕ್ತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ವೈದ್ಯಕೀಯ ಶಿಕ್ಷಣದಲ್ಲಿ ಆರ್ಥಿಕ ದುರ್ಬಲರಿಗೆ ಮೀಸಲು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಥಿಕವಾಗಿ ದುರ್ಬಲರಾಗಿರುವವರಿಗೆ ವೈದ್ಯಕೀಯ ಶಿಕ್ಷಣದಲ್ಲಿ ಶೇಕಡ 10ರಷ್ಟು ಮೀಸಲಾತಿ ನೀಡುವ ಕೇಂದ್ರ ಸರ್ಕಾರದ ನಿರ್ಣಯವನ್ನು ರಾಜ್ಯದಲ್ಲೂ ಅನುಷ್ಠಾನಕ್ಕೆ ತರಲು ನಿರ್ಧರಿಸಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ್ ತಿಳಿಸಿದರು.

'ಮಲ್ಲೇಶ್ವರ ಬ್ರಾಹ್ಮಣ ಮಹಾಸಭಾ' ಹಾಗೂ 'ಉಭಯ ವೇದಾಂತ ಪ್ರವರ್ತನಾ ಸಭಾ' ಸಹಭಾಗಿತ್ವದಲ್ಲಿ ಮಲ್ಲೇಶ್ವರದಲ್ಲಿ ಭಾನುವಾರ ಆಯೋಜಿಸಿದ್ದ ಬ್ರಾಹ್ಮಣ ಸಮುದಾಯದವರಿಗೆ ಆಹಾರ ಕಿಟ್ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕೈಗೊಂಡಿರುವ ನಿರ್ಧಾರವನ್ನು ರಾಜ್ಯದಲ್ಲೂ ಜಾರಿಗೆ ತರಲು ಇತ್ತೀಚೆಗೆ ನಡೆದ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಸದ್ಯದಲ್ಲೇ ಈ ಸಂಬಂಧ ಆದೇಶ ಹೊರಡಿಸಲಾಗುವುದು. ಆರ್ಥಿಕವಾಗಿ ದುರ್ಬಲರಿಗೆ ಮೀಸಲಾತಿ ಸೌಲಭ್ಯ ಕಲ್ಪಿಸಿರುವುದರಿಂದ ಬ್ರಾಹ್ಮಣ ಸಮುದಾಯದಲ್ಲಿನ ಬಡವರಿಗೂ ಅನುಕೂಲವಾಗಲಿದೆ' ಎಂದರು.

ಬ್ರಾಹ್ಮಣ ಸಮುದಾಯದ ಮುಖಂಡರಾದ ಪ್ರಕಾಶ್ ಅಯ್ಯಂಗಾರ್, ಪ್ರಶಾಂತ್ ಹಾಜರಿದ್ದರು. 150 ಕುಟುಂಬಗಳಿಗೆ ಆಹಾರ ಕಿಟ್ ವಿತರಿಸಲಾಯಿತು.

'ಇಂದಿರಾ ಕ್ಯಾಂಟೀನ್ ಹೆಸರು ಬದಲಾವಣೆ ತಪ್ಪೇನಿಲ್ಲ'

ಚಿಕ್ಕಬಳ್ಳಾಪುರ: 'ಇದಿರಾ ಕ್ಯಾಂಟೀನ್ ಹೆಸರು ಬದಲಾವಣೆ ಬಗ್ಗೆ ಸರ್ಕಾರ ಯಾವುದೇ ತೀರ್ಮಾನ ಕೈಗೊಂಡಿಲ್ಲ' ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ. ಸುಧಾಕರ್ ಸ್ಪಷ್ಟಪಡಿಸಿದ್ದಾರೆ.

'ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರು ಇಂದಿರಾ ಕ್ಯಾಂಟೀನ್ ಹೆಸರು ಬದಲಿಸಿ ಅನ್ನಪೂರ್ಣೇಶ್ವರಿ ಕ್ಯಾಂಟೀನ್ ಎಂದು ಇಡುವಂತೆ ಹೇಳಿದ್ದಾರೆ. ಅನ್ನಪೂರ್ಣೇಶ್ವರಿ ಹೆಸರಿಡುವುದು ತಪ್ಪೇನೂ ಇಲ್ಲ. ಇಂದಿರಾ ಗಾಂಧಿ, ಸೇರಿದಂತೆ ನಮ್ಮೆಲ್ಲರಿಗೂ ತಾಯಿ ಅನ್ನಪೂರ್ಣೇಶ್ವರಿ ಅಲ್ಲವೇ' ಎಂದು ಅವರು ಹೆಸರು ಬದಲಾವಣೆಯನ್ನು ಸಮರ್ಥಿಸಿಕೊಂಡಿದ್ದಾರೆ.

ಪೊಲೀಸರ 'ಕೈ ಬಿಸಿ' ಮಾಡಿದರೆ ವಾಹನ ಬಿಡುಗಡೆ • ಟೋಯಿಂಗ್ ಸಿಬ್ಬಂದಿಯೇ ಮಧ್ಯವರ್ತಿಗಳು

ದಂಡದ ಮೊತ್ತ ಹೆಚ್ಚಳ; ಭ್ರಷ್ಟಾಚಾರ ನಿಚ್ಚಳ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ರಸ್ತೆ ಸಂಚಾರ ನಿಯಮಗಳ ಉಲ್ಲಂಘನೆ ದಂಡದ ಮೊತ್ತವನ್ನು 2019ರ ಸೆಪ್ಟೆಂಬರ್‌ನಲ್ಲಿ ಹೆಚ್ಚಳ ಮಾಡಲಾಗಿದ್ದು, ಇದು ಕೆಲ ಪೊಲೀಸರ ಭ್ರಷ್ಟಾಚಾರಕ್ಕೆ ಅನುಕೂಲ ಮಾಡಿಕೊಟ್ಟಿರುವ ಆರೋಪಗಳು ವ್ಯಕ್ತವಾಗುತ್ತಿವೆ.

ನಗರದ ಪ್ರತಿ ಸಂಚಾರ ಠಾಣೆಯಲ್ಲೂ ಸರದಿ ಪ್ರಕಾರ ಪಿಎಸ್‌ಐ ಹಾಗೂ ಎಎಸ್‌ಐ ನೇತೃತ್ವದ ತಂಡಗಳನ್ನು ದಂಡ ಸಂಗ್ರಹ ಕೆಲಸಕ್ಕೆ ನಿಯೋಜಿಸಲಾಗುತ್ತಿದೆ. ಪ್ರಮುಖ ರಸ್ತೆ, ವೃತ್ತ ಹಾಗೂ ಇತರೆಡೆ ಕಾದು ನಿಲ್ಲುವ ತಂಡ, ಸಾರ್ವಜನಿಕರ ವಾಹನಗಳನ್ನು ತಡೆದು ಪರಿಶೀಲಿಸುತ್ತಿದೆ.

ಈ ಪೈಕಿ ಕೆಲವರು, ನಿಗದಿತ ದಂಡ ವಸೂಲಿ ಮಾಡದೇ ಲಂಚ ಪಡೆದು ಸಾರ್ವಜನಿಕರನ್ನು ಬಿಟ್ಟು ಕಳುಹಿಸುತ್ತಿದ್ದಾರೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತಿದ್ದು, ಪೊಲೀಸರ ಬಗ್ಗೆ ಜನರಿಗೆ ತಪ್ಪು ಸಂದೇಶ ರವಾನೆ ಆಗುತ್ತಿದೆ.

'ಸಂಚಾರ ನಿಯಮ ಉಲ್ಲಂಘನೆಯಿಂದ ಅಪಘಾತಗಳು ಹೆಚ್ಚಾಗುತ್ತಿವೆ' ಎಂಬುದು ರಸ್ತೆ ಸುರಕ್ಷತಾ ಸಮಿತಿ ಅಧ್ಯಯನದಿಂದ ಗೊತ್ತಾಗಿತ್ತು. ಜನರಲ್ಲಿ ನಿಯಮಗಳ ಜಾಗೃತಿ ಮೂಡಿದರೆ ಅಪಘಾತಗಳು ಕಡಿಮೆಯಾಗಬಹುದೆಂಬ ಕಾರಣಕ್ಕೆ ದಂಡದ ಮೊತ್ತವನ್ನು ಸರ್ಕಾರ ಹೆಚ್ಚಿಸಿದೆ. ಇದನ್ನೇ ಬಂಡವಾಳ ಮಾಡಿಕೊಂಡ ಕೆಲ ಪೊಲೀಸರು, 'ದಂಡದ ಮೊತ್ತ ಹೆಚ್ಚಿದೆ. ಇದ್ದಷ್ಟು ಕೊಟ್ಟು ರಶೀದಿ ಕೇಳದೇ ಸ್ಥಳದಿಂದ ಹೋಗಿ' ಎಂದು ನೇರವಾಗಿ ಹೇಳಿ ಜನರಿಂದ ಹಣ ಪಡೆಯುತ್ತಿದ್ದಾರೆ. ಈ ಸಂಬಂಧ ಹಲವರು ಪೊಲೀಸ್ ಹಿರಿಯ ಅಧಿಕಾರಿಗಳಿಗೂ ದೂರು ನೀಡಿದ್ದಾರೆ.

'ದಂಡ ಹೆಚ್ಚಳ ಮಾಡಿರುವುದು ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಟ್ಟಿದೆ' ಎಂದು ಹೆಣ್ಣೂರು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ ಮುನಿರಾಜು ದೂರಿದರು.

ಖಾಸಗಿ ಕಂಪನಿ ಉದ್ಯೋಗಿ ಭರತ್, 'ಇಂದಿರಾನಗರ ರಸ್ತೆ ಬದಿಯಲ್ಲಿ ಬೈಕ್ ನಿಲ್ಲಿಸಿದ್ದೆ. ಅಲ್ಲಿ ಯಾವುದೇ ನೋ ಪಾರ್ಕಿಂಗ್ ಫಲಕವಿರಲಿಲ್ಲ. ಪೊಲೀಸರು ನನ್ನ ಬೈಕ್ ಟೋಯಿಂಗ್ ಮಾಡಿಕೊಂಡು ಹೋಗಿದ್ದರು. ಬೈಕ್ ನಿಲ್ಲಿಸಿದ್ದ ಜಾಗಕ್ಕೆ ಹೋದಾಗ ಪೊಲೀಸರು, 'ಪಾರ್ಕಿಂಗ್ ಫಲಕವಿರುವ ಜಾಗದಲ್ಲಿ ಮಾತ್ರ ವಾಹನ ನಿಲ್ಲಿಸಬೇಕು. ಉಳಿದೆಲ್ಲ ಕಡೆ ನೋ ಪಾರ್ಕಿಂಗ್' ಎಂದಿದ್ದರು. ₹1,650 ದಂಡ ಕಟ್ಟುವಂತೆ ಹೇಳಿದ್ದರು. ಅಷ್ಟು ಹಣವಿಲ್ಲವೆಂದು ತಿಳಿಸಿದ್ದೆ. ₹ 500 ಕೊಟ್ಟು ಹೋಗುವಂತೆ ಹೇಳಿದ್ದರು' ಎಂದರು.

ಪೊಲೀಸರಿಗೆ ಅನುಕೂಲ ಮಾಡಿಕೊಟ್ಟ ಲಾಕ್‌ಡೌನ್; ಯಶವಂತಪುರದ ನಿವಾಸಿ ಎಂ. ರಾಜಶೇಖರ್, 'ಲಾಕ್‌ಡೌನ್ ಸಮಯದಲ್ಲಿ ಎಲ್ಲರ ದುಡಿಮೆ ಕಡಿಮೆಯಾಗಿದೆ. ಯಾರ ಬಳಿಯೂ ಹಣವಿಲ್ಲ. ದುಬಾರಿ ದಂಡ ಕಟ್ಟುವ ಸ್ಥಿತಿಯಲ್ಲೂ ಇಲ್ಲ. ದೊಡ್ಡ ಮೊತ್ತ ಪಾವತಿಸಲಾಗದ ಜನ, ಕೈಲಾದಷ್ಟು ಕೊಡುತ್ತಿದ್ದಾರೆ. ಇದು ಪೊಲೀಸರಿಗೆ ಮತ್ತಷ್ಟು ಅನುಕೂಲ ಮಾಡಿಕೊಟ್ಟಿದೆ' ಎಂದರು.

ರಾಜಾಜಿನಗರದ ವ್ಯಾಪಾರಿ ಶೇಖರ್, 'ವಾಹನ ಪರಿಶೀಲನೆ ನೆಪದಲ್ಲಿ ಜನರನ್ನು ಅಡ್ಡಗಟ್ಟುತ್ತಿರುವ ಕೆಲ ಪೊಲೀಸರು, ಹಳೇ ಪ್ರಕರಣಗಳಿರುವುದಾಗಿ ಹೇಳಿ ದಂಡ ಕೇಳುತ್ತಿದ್ದಾರೆ. ದಂಡದ ಮೊತ್ತ ಹೆಚ್ಚಿದ್ದರೆ, ಎಷ್ಟು ಸಾಧ್ಯವೂ ಅಷ್ಟು ಕೊಟ್ಟು ಹೋಗಿ ಎನ್ನುತ್ತಿದ್ದಾರೆ' ಎಂದರು.

'ದಂಡ ವಸೂಲಿ ವ್ಯವಸ್ಥೆಯಿಂದ ಸರ್ಕಾರಕ್ಕೆ ನಷ್ಟವಾಗುತ್ತಿದೆ. ಕೆಲ ಪೊಲೀಸರು ತಮ್ಮಲ್ಲಿಯೇ ಹಣ ಹಂಚಿಕೊಂಡು ಭ್ರಷ್ಟಾಚಾರ ಮುಂದುವರಿಸಿದ್ದಾರೆ. ಇಂಥವರ ಮೇಲೆ ಹಿರಿಯ ಅಧಿಕಾರಿಗಳು ಕಣ್ಣಿಟ್ಟು, ಶಿಸ್ತುಕ್ರಮ ಜರುಗಿಸಬೇಕು' ಎಂದೂ ಆಗ್ರಹಿಸಿದರು.

ಟೋಯಿಂಗ್ ಸಿಬ್ಬಂದಿಯೇ ಮಧ್ಯವರ್ತಿಗಳು: 'ನನ್ನ ಮಗನ ಸ್ನೇಹಿತನ ದ್ವಿಚಕ್ರ ವಾಹನವನ್ನು ಪೊಲೀಸರು ಟೋಯಿಂಗ್ ಮಾಡಿದ್ದರು. ₹ 1,650 ದಂಡ ಪಾವತಿಸುವಂತೆ ಹೇಳಿದ್ದರು. ಅಷ್ಟು ಹಣವಿಲ್ಲವೆಂದು ಹೇಳಿದ್ದಕ್ಕೆ ₹ 650ಕ್ಕೆ ವ್ಯವಹಾರ ಕುದುರಿಸಿ ವಾಹನ ಬಿಟ್ಟು ಕಳುಹಿಸಿದ್ದಾರೆ' ಎಂದು ಇಂದಿರಾನಗರದ ಜೆಸುನಾ ಹೇಳಿದರು.

'ಪೊಲೀಸರಿಗಿಂತಲೂ ಟೋಯಿಂಗ್ ವಾಹನದ ಸಿಬ್ಬಂದಿಯೇ ನೇರವಾಗಿ ಹಣ ಕೇಳುತ್ತಿದ್ದಾರೆ. ಪೊಲೀಸರು ಹಾಗೂ ಸಾರ್ವಜನಿಕರ ನಡುವೆ ಮಧ್ಯವರ್ತಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಈ ಬಗ್ಗೆ ಕಮಿಷನರ್ ಕ್ರಮ ಕೈಗೊಳ್ಳಬೇಕು' ಎಂದೂ ಒತ್ತಾಯಿಸಿದರು.

ದ್ವಿಚಕ್ರ ವಾಹನಗಳನ್ನು ಟೋಯಿಂಗ್ ಮಾಡುತ್ತಿರುವುದು

ನಿತ್ಯ ಸಂಚಾರ ಸದಾ ಕಿರಿಕಿರಿ 4

ಕ್ರಮ ಕೈಗೊಂಡರೂ ದುರ್ವರ್ತನೆ ಮುಂದುವರಿಕೆ

ನೋ ಪಾರ್ಕಿಂಗ್ ಸ್ಥಳದಲ್ಲಿ ನಿಲ್ಲಿಸುವ ವಾಹನಗಳನ್ನು ಟೋಯಿಂಗ್ ಮಾಡುವ ಜವಾಬ್ದಾರಿಯನ್ನು ಖಾಸಗಿ ಏಜೆನ್ಸಿಯವರಿಗೆ ವಹಿಸಲಾಗಿದೆ. 'ಟೈಗರ್' ವಾಹನಗಳಿಗೆ ಕ್ಯಾಮೆರಾ ಸಹ ಅಳವಡಿಸಲಾಗಿದೆ. ಇದರ ನಡುವೆಯೂ ಸಿಬ್ಬಂದಿ ದುರ್ವರ್ತನೆ ತೋರುತ್ತಿದ್ದಾರೆ ಎಂದು ವಾಹನ ಸವಾರರು ದೂರಿದ್ದಾರೆ.

ಸಾರ್ವಜನಿಕರ ಜೊತೆ ಸೌಜನ್ಯದಿಂದ ವರ್ತಿಸುವಂತೆ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಸೂಚನೆ ನೀಡಿದ್ದಾರೆ. ದುರ್ವರ್ತನೆ ತೋರಿದ್ದ ಕೆಲವರ ವಿರುದ್ಧ ಕ್ರಮವನ್ನೂ ಕೈಗೊಂಡಿದ್ದಾರೆ. ಅಷ್ಟಾದರೂ ಸಿಬ್ಬಂದಿಗಳ ವರ್ತನೆಗೆ ಕಡಿವಾಣ ಬಿದ್ದಿಲ್ಲ.

ನಿಯಮಗಳನ್ನು ಪಾಲಿಸದ ವಾಹನಗಳ ಟೋಯಿಂಗ್ ಮಾಡುವ ಸಿಬ್ಬಂದಿ, ವಾಹನ ನಿಲುಗಡೆ ಸ್ಥಳದಲ್ಲೂ ಜನರ ಜೊತೆ ಅನುಚಿತವಾಗಿ ವರ್ತಿಸುತ್ತಿದ್ದಾರೆ. ತಾಳ್ಮೆ ಕಳೆದುಕೊಂಡ ಜನ, ಟೋಯಿಂಗ್ ಸಿಬ್ಬಂದಿ ಮೇಲೆ ಹಲ್ಲೆ ಮಾಡಿರುವ ಘಟನೆಗಳೂ ರಾಜಾಜಿನಗರ ಹಾಗೂ ಯಲಹಂಕದಲ್ಲಿ ಇತ್ತೀಚೆಗೆ ನಡೆದಿವೆ.

'ಆನ್‌ಲೈನ್‌ನಲ್ಲಿ ದಂಡದ ರಶೀದಿ ಸಿಗಲಿ'

'ಸ್ಥಳದಲ್ಲಿ ದಂಡ ಪಾವತಿ ಮಾಡಿದರೂ ಕೆಲ ಪೊಲೀಸರು ದಂಡದ ರಶೀದಿ ನೀಡುತ್ತಿಲ್ಲ. ನಾವು ಪಾವತಿಸುವ ಹಣ ಸರ್ಕಾರಕ್ಕೆ ಹೋಗುತ್ತದೆಯೋ ಅಥವಾ ಪೊಲೀಸರ ಜೇಬಿಗೂ ಎಂಬುದು ತಿಳಿಯುತ್ತಿಲ್ಲ. ಹೀಗಾಗಿ, ನಾವು ಕಟ್ಟಿದ ದಂಡದ ರಶೀದಿ ಆನ್‌ಲೈನ್‌ನಲ್ಲಿ ಸಿಗುವ ವ್ಯವಸ್ಥೆ ಮಾಡಬೇಕು' ಎಂದು ಮಲ್ಲೇಶ್ವರದ ಸಚಿನ್ ಆಗ್ರಹಿಸಿದ್ದಾರೆ.

'ಕಾನೂನು ಜಾರಿಯಲ್ಲಿ ಪ್ರಮುಖ ಪಾತ್ರ ವಹಿಸಿರುವ ಪೊಲೀಸರ ಬಗ್ಗೆ ಗೌರವ ಹೆಚ್ಚಿದೆ. ಯಾವುದೇ ಇಲಾಖೆಗೆ ಸಂಬಂಧಪಟ್ಟ ಘಟನೆಗಳು ನಡೆದಾಗ ಪೊಲೀಸರೇ ಮೊದಲಿಗೆ ಜನರ ಸಮಸ್ಯೆ ಆಲಿಸುತ್ತಾರೆ. ಇಂಥ ಪೊಲೀಸರು, ದಂಡ ಸಂಗ್ರಹ ವ್ಯವಸ್ಥೆಯಲ್ಲೂ ಪಾರದರ್ಶಕತೆ ಕಾಪಾಡಿಕೊಂಡು ಗೌರವ ಉಳಿಸಿಕೊಳ್ಳಬೇಕು' ಎಂದಿದ್ದಾರೆ.

'ಸಂಚಾರ ನಿಯಮ ಉಲ್ಲಂಘಿಸಿ ಸಿಕ್ಕಿಬಿದ್ದವರಿಗೆ ದಂಡ ವಿಧಿಸಬೇಕು. ಅದರ ರಶೀದಿ ಸಂಬಂಧಪಟ್ಟ ವ್ಯಕ್ತಿಗೆ ಆನ್‌ಲೈನ್ ಮೂಲಕ ಸಿಗುವಂತಾಗಬೇಕು. ರಶೀದಿ ಸಿಗದಿದ್ದರೆ, ಅಂಥ ಪೊಲೀಸರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು. ಇದರಿಂದ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬಹುದು' ಎಂದಿದ್ದಾರೆ.

ಬಾಡಿವೋರ್ನ್ ಕ್ಯಾಮೆರಾ ಎಲ್ಲಿ?

'ದಂಡ ಸಂಗ್ರಹ ಹಾಗೂ ಕರ್ತವ್ಯ ನಿರ್ವಹಣೆ ವೇಳೆ ಧರಿಸಲೆಂದು ಸಂಚಾರ ಪೊಲೀಸರಿಗೆ ಬಾಡಿವೋರ್ನ್ ಕ್ಯಾಮೆರಾಗಳನ್ನು ನೀಡಲಾಗಿದೆ. ಬಹುತೇಕರು ತಮ್ಮ ಅಕ್ರಮಗಳು ಬಯಲಾಗುತ್ತವೆಂಬ ಕಾರಣಕ್ಕೆ ಕ್ಯಾಮೆರಾಗಳನ್ನೇ ಧರಿಸುತ್ತಿಲ್ಲ' ಎಂದು ಸಾರ್ವಜನಿಕರು ಆರೋಪಿಸಿದರು.

'ದಂಡ ಸಂಗ್ರಹಿಸಲು ನಿಲ್ಲುವ ಕೆಲ ಎಎಸ್‌ಐ, ಪಿಎಸ್‌ಐ ಬಳಿ ಯಾವುದೇ ಬಾಡಿವೋರ್ನ್ ಕ್ಯಾಮೆರಾ ಇರುವುದಿಲ್ಲ. ಹೀಗಾಗಿ, ಅವರೆಲ್ಲ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಬಾಡಿವೋರ್ನ್ ಕ್ಯಾಮೆರಾ ಧರಿಸುವುದನ್ನು ಮೊದಲು ಕಡ್ಡಾಯ ಮಾಡಬೇಕು. ಅದರಲ್ಲಿ ದೃಶ್ಯ ಸೆರೆಯಾಗುವ ರೀತಿಯಲ್ಲೇ ವಾಹನಗಳನ್ನು ನಿಲ್ಲಿಸಿ ದಂಡ ಸಂಗ್ರಹಿಸಬೇಕು' ಎಂದೂ ಒತ್ತಾಯಿಸಿದರು.

'ಕಮಿಷನರ್ ಆದೇಶಕ್ಕೂ ಕಿಮ್ಮತ್ತಿಲ್ಲ'

'ಕಣ್ಣಿಗೆ ಕಾಣುವ ನಿಯಮಗಳ ಉಲ್ಲಂಘನೆಯಾದರೆ ಮಾತ್ರ ವಾಹನಗಳನ್ನು ಅಡ್ಡಗಟ್ಟಿ. ವಿನಾಕಾರಣ ವಾಹನ ನಿಲ್ಲಿಸಿ ಕಿರಿಕಿರಿ ಉಂಟು ಮಾಡಬೇಡಿ' ಎಂದು ಕಮಿಷನರ್ ಪದೇ ಪದೇ ಹೇಳುತ್ತಿದ್ದಾರೆ. ಇದಕ್ಕೆಲ್ಲ ಸಂಚಾರ ಪೊಲೀಸರು ಕಿಮ್ಮತ್ತು ನೀಡುತ್ತಿಲ್ಲ.

ಎಎಸ್‌ಐ ನೇತೃತ್ವದ ತಂಡಗಳು ದಂಡ ಸಂಗ್ರಹ ಕೆಲಸ ಮಾಡುತ್ತಿವೆ. ಅದರಲ್ಲಿ ಕಾನ್‌ಸ್ಟೆಬಲ್‌ಗಳೂ ಇದ್ದಾರೆ. ಕಮಿಷನರ್ ಆದೇಶ ನಮಗೆ ಸಂಬಂಧವಿಲ್ಲದಂತೆ ಅವರೆಲ್ಲ ವರ್ತಿಸುತ್ತಿದ್ದಾರೆ. 'ನಿತ್ಯವೂ ಇಷ್ಟೇ ಪ್ರಕರಣ ದಾಖಲಿಸಬೇಕು' ಎಂಬ ಗುರಿ ನೀಡಿರುವುದರಿಂದಲೇ ಸಿಬ್ಬಂದಿ, ಸಿಕ್ಕ ಸಿಕ್ಕ ವಾಹನಗಳನ್ನು ಅಡ್ಡಗಟ್ಟಿ ದಂಡ ಸಂಗ್ರಹಿಸುತ್ತಿದ್ದಾರೆ. ಈ ಹಿಂದೆ ಬೆಂಗಳೂರಿನ ಕಮಿಷನರ್ ಆಗಿದ್ದ ಇಂದಿನ ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, 'ವಿನಾಕಾರಣ ವಾಹನ ಅಡ್ಡಗಟ್ಟಬೇಡಿ' ಎಂದಿದ್ದರು. ನಂತರ ಬಂದ ಕಮಿಷನರ್ ಸುನೀಲ್‌ಕುಮಾರ್ ಹಾಗೂ ಈಗಿನ ಕಮಲ್ ಪಂತ್ ಅವರು ಸಹ ಈ ಬಗ್ಗೆ ಪೊಲೀಸರಿಗೆ ಸೂಚನೆ ನೀಡಿದ್ದಾರೆ. ಅದು ಪಾಲನೆಯಾಗುತ್ತಿಲ್ಲವೆಂಬ ಆರೋಪವಿದೆ. 'ಕಮಿಷನರ್ ಮಾತು ಕೇಳದ ಸಂಚಾರ ಪೊಲೀಸರು, ಯಾರ ಮಾತು ಕೇಳುತ್ತಾರೆ' ಎಂದು ಜನ ಪ್ರಶ್ನಿಸುತ್ತಿದ್ದಾರೆ.

ಸುದ್ದಿ 2 ನಿಮಿಷ

ಮಾನವ ಕಳ್ಳಸಾಗಣೆ:ಎರಡು ಸ್ಥಳಗಳಲ್ಲಿ ಎನ್‌ಐಎ ಶೋಧ

ಬೆಂಗಳೂರು: ಬಾಂಗ್ಲಾದೇಶದಿಂದ ಮಾನವ ಕಳ್ಳಸಾಗಣೆ ಪ್ರಕರಣ ಸಂಬಂಧ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ಬೆಂಗಳೂರಿನ ಎರಡು ಸ್ಥಳಗಳಲ್ಲಿ ಭಾನುವಾರ ಶೋಧ ನಡೆಸಿದರು.

ಬಾಂಗ್ಲಾದೇಶದ ಮಾನವ ಕಳ್ಳಸಾಗಣೆದಾರರು ಹಾಗೂ ಸಾಗಣೆಗೊಂಡ ಸಂತ್ರಸ್ತರಿಗೆ ನಕಲಿ ಗುರುತಿನ ಚೀಟಿ ಸೃಷ್ಟಿಸುತ್ತಿರುವ ಶಂಕಿತ ಆರೋಪಿಯ ಬಗ್ಗೆ ಸಿಕ್ಕಿದ್ದ ಮಾಹಿತಿ ಮೇರೆಗೆ ಶೋಧ ನಡೆಸಿರುವುದಾಗಿ ಎನ್‌ಐಎ ಮೂಲಗಳು ತಿಳಿಸಿವೆ.

ಶೋಧದ ವೇಳೆ ದೋಷಪೂರಿತ ಹಾಗೂ ನಕಲಿ ದಾಖಲೆಗಳನ್ನು ತಯಾರಿಸಲು ಬಳಸಲಾದ ಹಾರ್ಡ್ ಡಿಸ್ಕ್ ಮತ್ತು ಮೊಬೈಲ್ ಸೇರಿದಂತೆ ಆರು ಡಿಜಿಟಲ್ ಸಾಧನಗಳನ್ನು ಜಪ್ತಿ ಮಾಡಿರುವುದಾಗಿ ಪ್ರಕಟಣೆ ತಿಳಿಸಿದೆ. ಜೂನ್‌ನಲ್ಲಿ ರಾಮಮೂರ್ತಿನಗರ ವ್ಯಾಪ್ತಿಯ ಮನೆಯೊಂದರ ಮೇಲೆ ಪೊಲೀಸರು ದಾಳಿ ನಡೆಸಿದಾಗ 13 ಆರೋಪಿಗಳು ಸಿಕ್ಕಿಬಿದ್ದಿದ್ದರು. ಈ ವೇಳೆ ಬಾಂಗ್ಲಾದೇಶದ ಏಳು ಮಹಿಳೆಯರು ಹಾಗೂ ಒಂದು ಮಗುವನ್ನು ಮಾನವ ಕಳ್ಳಸಾಗಣೆದಾರರ ವಶದಿಂದ ರಕ್ಷಿಸಲಾಗಿತ್ತು.

ಉದ್ಯೋಗ ಕೊಡಿಸುವ ನೆಪದಲ್ಲಿ ಮಹಿಳೆಯರನ್ನು ಬಾಂಗ್ಲಾದೇಶದಿಂದ ಭಾರತಕ್ಕೆ ಕಳ್ಳಸಾಗಣೆ ಮಾಡಲಾಗುತ್ತಿದ್ದು, ಬಳಿಕ ಅವರನ್ನು ವೇಶ್ಯಾವಾಟಿಕೆಗೆ ದೂಡಲಾಗುತ್ತಿತ್ತು ಎಂಬ ಮಾಹಿತಿ ಲಭ್ಯವಾಗಿದ್ದರಿಂದ ಎನ್‌ಐಎ ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿತ್ತು.

ಉದ್ಯಮಿ ಮನೆಯಲ್ಲಿ ಕಳ್ಳತನ

ಬೆಂಗಳೂರು: ಉದ್ಯಮಿಯೊಬ್ಬರ ಮನೆಯಲ್ಲಿದ್ದ ಅಮೆರಿಕನ್ ಡಾಲರ್ ಹಾಗೂ ಲಕ್ಷಾಂತರ ಹಣ ಕಳ್ಳತನ ಮಾಡಿದ್ದ ಆರೋಪದಡಿ ನಾಲ್ಕು ಆರೋಪಿಗಳನ್ನು ಮಾಗಡಿ ರಸ್ತೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ದೀಪಕ್, ಸುರೇಶ್ ಬಹದ್ದೂರ್, ಕಮಲ್ ಬಹದ್ದೂರ್ ಮತ್ತು ರಮೇಶ್ ಬಂಧಿತ ಆರೋಪಿಗಳು. ಇವರೆಲ್ಲರೂ ಉದ್ಯಮಿ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದರು' ಎಂದು ಪೊಲೀಸರು ತಿಳಿಸಿದರು.

'ಗ್ರಾನೈಟ್ ಉದ್ಯಮಿ ಆಗಿರುವ ವಿಜಯ್ ಅವರು ಅಮೆರಿಕದಲ್ಲಿರುವ ತನ್ನ ಮಗನಿಗೆ ತಲುಪಿಸಲು ಡಾಲರ್‌ಗಳನ್ನು ಮನೆಯಲ್ಲಿ ಇಟ್ಟಿದ್ದರು. ಈ ವಿಚಾರ ತಿಳಿದಿದ್ದ ಆರೋಪಿಗಳು, ಆ.4ರಂದು ಮನೆಯಲ್ಲಿ ಯಾರೂ ಇಲ್ಲದಿದ್ದಾಗ ಡಾಲರ್‌ಗಳು ಹಾಗೂ ಲಕ್ಷಾಂತರ ನಗದು ಕದ್ದು ಪರಾರಿಯಾಗಿದ್ದರು' ಎಂದು ವಿವರಿಸಿದರು.

'ಆರೋಪಿಗಳನ್ನು ಬಂಧಿಸಿ ₹18.40 ಲಕ್ಷ ನಗದು ಹಾಗೂ ಮೂರು ಸಾವಿರ ಅಮೆರಿಕನ್ ಡಾಲರ್‌ಗಳನ್ನು ಜಪ್ತಿ ಮಾಡಲಾಗಿದೆ. ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದೂ ಹೇಳಿದರು.

'ಕ್ಯಾಮ್ಸ್' ಪ್ರಧಾನ ಕಾರ್ಯದರ್ಶಿ ಹಲ್ಲೆ ಯತ್ನ: ಬಂಧನ

ಬೆಂಗಳೂರು: ಖಾಸಗಿ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟದ (ಕ್ಯಾಮ್ಸ್) ಪ್ರಧಾನ ಕಾರ್ಯದರ್ಶಿ ಡಿ.ಶಶಿಕುಮಾರ್ ಮೇಲೆ ಇತ್ತೀಚೆಗೆ ನಡೆದಿದ್ದ ಹಲ್ಲೆ ಯತ್ನ ಪ್ರಕರಣದಲ್ಲಿ ಐದು ಮಂದಿ ಆರೋಪಿಗಳನ್ನು ಜಾಲಹಳ್ಳಿ ಪೊಲೀಸರು ಬಂಧಿಸಿದ್ದಾರೆ.

'ವಿವಿಧ ಠಾಣೆಗಳಲ್ಲಿ ರೌಡಿಶೀಟರ್‌ಗಳಾಗಿರುವ ದಿಲೀಪ್, ಅಭಿ, ಕಾರ್ತಿಕ್, ಪವನ್, ಭರತ್ ಬಂಧಿತರು. ಆರೋಪಿಗಳಿಂದ ಮಾರಕಾಸ್ತ್ರಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಜುಲೈ 29ರ ರಾತ್ರಿ ಜಾಲಹಳ್ಳಿಯಲ್ಲಿರುವ ಶಶಿಕುಮಾರ್ ಅವರ ನಿವಾಸದ ಬಳಿ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದರು. ಈ ವೇಳೆ ಶಶಿಕುಮಾರ್ ಅವರ ತೊಡೆ ಹಾಗೂ ಬಲಗೈಗೆ ಗಾಯವಾಗಿತ್ತು. ಆತ್ಮರಕ್ಷಣೆಗಾಗಿ ಶಶಿಕುಮಾರ್ ಪಿಸ್ತೂಲ್ ತೋರಿಸುತ್ತಿದ್ದಂತೆ ದುಷ್ಕರ್ಮಿಗಳು ಪರಾರಿಯಾಗಿದ್ದರು. ಬಳಿಕ ಜಾಲಹಳ್ಳಿ ಠಾಣೆಗೆ ಶಶಿಕುಮಾರ್ ದೂರು ನೀಡಿದ್ದರು.

'ಪತ್ತೆ ಕಾರ್ಯದ ವೇಳೆ ಆರೋಪಿಗಳ ಸುಳಿವು ಸಿಕ್ಕಿತ್ತು. ಆರು ತಿಂಗಳ ಹಿಂದೆ ಶಶಿಕುಮಾರ್ ಕೊಲೆಗೆ ಆರೋಪಿಗಳು ಸಂಚು ರೂಪಿಸಿದ್ದರು. ಇದಕ್ಕಾಗಿ ಶಶಿಕುಮಾರ್ ಮನೆ ಸಮೀಪದ ಮನೆಯೊಂದರಲ್ಲಿ ಆರೋಪಿಗಳು ಬಾಡಿಗೆಗೆ ಇದ್ದರು' ಎಂದು ಪೊಲೀಸರು ವಿವರಿಸಿದರು.

'ಮನೆ ಮೇಲೆ ದಾಳಿ ನಡೆಸಿ, ಕೃತ್ಯಕ್ಕೆ ಬಳಸಿದ್ದ ಒಂದು ಪಿಸ್ತೂಲ್, ಮೂರು ಜೀವಂತ ಗುಂಡುಗಳು, ಮಚ್ಚು ಮತ್ತು ಲಾಂಗುಗಳು, ಎರಡು ದ್ವಿಚಕ್ರ ವಾಹನ ಹಾಗೂ ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದೂ ಹೇಳಿದರು.

ಆರೋಪಿಗಳಿಂದ ಜಪ್ತಿ ಮಾಡಿರುವ ಮಾರಕಾಸ್ತ್ರಗಳು.

ಅಪರಾಧ ಸುದ್ದಿ

ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕಾಗಿ ಸುಪಾರಿ?

'ವಿಚಾರಣೆಯಲ್ಲಿ ಕ್ಯಾಮ್ಸ್ ಪ್ರಧಾನ ಕಾರ್ಯದರ್ಶಿ ಸ್ಥಾನ ಪಡೆಯುವ ಉದ್ದೇಶದಿಂದ ಶಶಿಕುಮಾರ್ ಅವರ ಕೊಲೆಗೆ ಸುಪಾರಿ ನೀಡಿರುವ ಶಂಕೆ ವ್ಯಕ್ತವಾಗಿದೆ. ಆತನೇ ಆರೋಪಿಗಳಿಗೆ ಬಾಡಿಗೆ ಮನೆ ಮಾಡಿಕೊಟ್ಟು, ಶಶಿಕುಮಾರ್ ಅವರ ಚಲನವಲನ ಗಮನಿಸಲು ಸೂಚಿಸಿದ್ದ. ಶಶಿಕುಮಾರ್ ಕೊಲೆಯಿಂದ ಕಾರ್ಯದರ್ಶಿ ಸ್ಥಾನ ತನಗೆ ಸಿಗುವ ದುರಾಸೆಯಿಂದ ಈ ಕೃತ್ಯ ನಡೆಸಲಾಗಿದ್ದು, ಘಟನೆ ಬಳಿಕ ತಲೆಮರೆಸಿಕೊಂಡಿದ್ದಾನೆ. ಈತನೂ ಸೇರಿದಂತೆ ಉಳಿದ ಆರು ಮಂದಿ ಆರೋಪಿಗಳ ಪತ್ತೆ ಕಾರ್ಯ ಮುಂದುವರಿದಿದೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಸಾಲ ವಾಪಸ್ ನೀಡದೆ ವಂಚನೆ, ಜೀವ ಬೆದರಿಕೆ ಆರೋಪ

ಮಾಜಿ ಶಾಸಕರ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಮಾಜಿ ಸಚಿವ ಆರ್.ಎಲ್.ಜಾಲಪ್ಪ ಅವರ ಪುತ್ರ ಹಾಗೂ ದೊಡ್ಡಬಳ್ಳಾಪುರದ ಮಾಜಿ ಶಾಸಕ ಜೆ.ನರಸಿಂಹಸ್ವಾಮಿ ಅವರು ಚುನಾವಣೆ ವೇಳೆ ಪಡೆದಿದ್ದ ಹಣ ವಾಪಸ್ ನೀಡದೆ ವಂಚಿಸಿದ್ದಾರೆ ಮತ್ತು ಹಣ ಕೇಳಿದ್ದಕ್ಕೆ ಜೀವ ಬೆದರಿಕೆ ಹಾಕಿದ್ದಾರೆ' ಎಂದು ಆರೋಪಿಸಿ ಸಂಗಮ್ ದೇವ್ ಎಂಬುವವರು ಸಂಜಯನಗರ ಠಾಣೆಗೆ ದೂರು ನೀಡಿದ್ದಾರೆ.

'ಡಾಲರ್ಸ್ ಕಾಲೊನಿ ನಿವಾಸಿಯಾಗಿರುವ ಪತ್ರಕರ್ತ ಎಚ್.ಸಂಗಮ್ ದೇವ್, ನರಸಿಂಹಸ್ವಾಮಿ ಮತ್ತು ಅವರ ಪತ್ನಿ ನಾಗಮಣಿ ವಿರುದ್ಧ ವಂಚನೆ ಆರೋಪ ಮಾಡಿದ್ದಾರೆ. ಸಂಗಮ್ ಅವರ ದೂರಿನ ಮೇರೆಗೆ ಇಬ್ಬರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ನನಗೆ ಸ್ನೇಹಿತರಾಗಿದ್ದ ನರಸಿಂಹಸ್ವಾಮಿ ಅವರು ಪತ್ನಿಯೊಂದಿಗೆ ಮನೆಗೆ ಬಂದಿದ್ದರು. 2018ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಖರ್ಚಿಗಾಗಿ ₹3 ಕೋಟಿ ಹಣ ಕೇಳಿದ್ದರು. ನನಗೆ ಪರಿಚಯವಿದ್ದವರ ಬಳಿಯಿಂದ ಹಂತ ಹಂತವಾಗಿ ಹಣ ಹೊಂದಿಸಿ, ಅವರಿಗೆ ನೀಡಿದ್ದೆ. ಆದರೆ, ಚುನಾವಣೆಯಲ್ಲಿ ಅವರು ಸೋಲು ಕಂಡರು. ₹85 ಲಕ್ಷ ಮಾತ್ರ ವಾಪಸ್ ನೀಡಿದ್ದು, ಉಳಿದ ಹಣ ನೀಡದೆ ವಂಚಿಸಿದ್ದಾರೆ' ಎಂದು ಸಂಗಮ್ ದೂರಿನಲ್ಲಿ ತಿಳಿಸಿದ್ದಾರೆ.

'ಬಾಕಿ ಹಣ ಕೇಳಲು ಅವರ ಮನೆಯ ಬಳಿ ತೆರಳಿದಾಗ ಹಣ ನೀಡದೆ, ಜೀವ ಬೆದರಿಕೆ ಹಾಕಿದ್ದಾರೆ. ಈ ಸಂಬಂಧ ಕ್ರಮ ಕೈಗೊಳ್ಳಬೇಕು' ಎಂದೂ ಒತ್ತಾಯಿಸಿದ್ದಾರೆ.

'ಈ ಬಗ್ಗೆ ಸದ್ಯಕ್ಕೆ ಏನೂ ಪ್ರತಿಕ್ರಿಯೆ ನೀಡುವುದಿಲ್ಲ. ಸಾಲ ನೀಡಿರುವ ಹಾಗೂ ಆರೋಪಗಳ ಬಗ್ಗೆ ಮಾಹಿತಿ ಸಂಗ್ರಹಿಸಿ, ಮೂರು ದಿನಗಳ ನಂತರ ಇವುಗಳಿಗೆ ಉತ್ತರ ನೀಡುತ್ತೇನೆ' ಎಂದು ಜೆ.ನರಸಿಂಹಸ್ವಾಮಿ 'ಪ್ರಜಾವಾಣಿ'ಗೆ ತಿಳಿಸಿದರು.

'ಕಾಂಗೊದಲ್ಲಿ ಭಾರತೀಯರ ಮೇಲೆ ಹಲ್ಲೆ, ಲೂಟಿ'

ಮೈಸೂರು: 'ಕಾಂಗೊ ದೇಶದ ಪ್ರಜೆಯೊಬ್ಬರು ಬೆಂಗಳೂರಿನಲ್ಲಿ ಅನುಮಾನಾಸ್ಪದ ರೀತಿಯಲ್ಲಿ ಸಾವನ್ನಪ್ಪಿದ ಘಟನೆಗೆ ಪ್ರತೀಕಾರವಾಗಿ ಆ ದೇಶದಲ್ಲಿ ಭಾರತೀಯರ ಮೇಲೆ ಹಲ್ಲೆ ನಡೆಸುತ್ತಿದ್ದು, ಹಲವು ಅಂಗಡಿಗಳನ್ನು ಕೊಳ್ಳೆ ಹೊಡೆಯಲಾಗಿದೆ' ಎಂದು ಕಾಂಗೊ ದೇಶದ ರಾಜಧಾನಿ ಕಿನ್‌ಶಾಸದಲ್ಲಿ ನೆಲೆಸಿರುವ ಮೈಸೂರು ಜಿಲ್ಲೆ, ಎಚ್.ಡಿ.ಕೋಟೆ ತಾಲ್ಲೂಕಿನ ವಿಜಯ್ ದೂರಿದ್ದಾರೆ.

'ಕಾಂಗೊ ಪ್ರಜೆ ಮೃತರಾದ ಸುದ್ದಿ ಸಾಮಾಜಿಕ ಮಾಧ್ಯಮಗಳು, ಸುದ್ದಿವಾಹಿನಿಗಳಲ್ಲಿ ಹರಡಿದ ಬೆನ್ನಲ್ಲೇ ಭಾರತೀಯರನ್ನು ಗುರಿಯಾಗಿಸಿ ದಾಳಿ ನಡೆಯುತ್ತಿದೆ. ಐದು ದಿನಗಳಿಂದ ಮನೆಯಿಂದ ಹೊರಗೆ ಇಳಿದಿಲ್ಲ. ಆತಂಕದಿಂದಲೇ ದಿನ ದೂಡುತ್ತಿದ್ದೇವೆ' ಎಂದು ಭಾನುವಾರ ದೂರವಾಣಿ ಮೂಲಕ 'ಪ್ರಜಾವಾಣಿ'ಗೆ ತಿಳಿಸಿದರು.

ರೌಡಿ ಮಜರ್ ಕೊಲೆ: ಬಂಧನ

ಬೆಂಗಳೂರು: ನಗರದ ದೇವರ ಜೀವನಹಳ್ಳಿ (ಡಿ.ಜೆ.ಹಳ್ಳಿ) ಠಾಣೆ ವ್ಯಾಪ್ತಿಯಲ್ಲಿ ರೌಡಿ ಮಜರ್ ಖಾನ್ ಅಲಿಯಾಸ್ ಭಟ್ಟಿ ಮಜರ್ ಕೊಲೆ ಪ್ರಕರಣದಲ್ಲಿ ಒಂದೇ ಕುಟುಂಬದ ಮೂವರು ಮಹಿಳೆಯರು ಸೇರಿದಂತೆ ಏಳು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಮೊಹಮ್ಮದ್ ಶಾಬಾಜ್, ಅಲೀಂ, ಫೈರೋಜ್, ಮುಸ್ತಾಕ್, ರೇಷ್ಮಾ, ಸಮೀನಾ ಮತ್ತು ಹಸೀನಾ ಬಂಧಿತರು' ಎಂದು ಪೊಲೀಸರು ತಿಳಿಸಿದರು.

'ಶಿವರಾಜ ರಸ್ತೆಯಲ್ಲಿ ಮಜರ್ ಖಾನ್‌ನನ್ನು ಶನಿವಾರ ಕೊಲೆ ಮಾಡಲಾಗಿತ್ತು. ಮಜರ್‌ನ ಎರಡನೇ ಹೆಂಡತಿ ಯಾಸ್ಮೀನ್, ಸಾಕೀಬ್ ಎಂಬುವನ ಜೊತೆ ಪರಾರಿಯಾಗಿದ್ದಳು. ಪತ್ನಿ ದೂರವಾಗಲು ಶಾಬಾಜ್ ಮತ್ತು ಅವನ ಕುಟುಂಬಸ್ಥರು ಸಹಾಯ ಮಾಡಿದ್ದಾರೆ ಎಂದು ಮಜರ್ ಭಾವಿಸಿದ್ದ' ಎಂದು ಮಾಹಿತಿ ನೀಡಿದರು.

'ಇದೇ ವಿಚಾರಕ್ಕೆ ಮಜರ್ ಅವರ ಮನೆಯ ಬಳಿ ಆಗಾಗ ತೆರಳಿ, ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದ. ಶಾಬಾಜ್‌ನ ತಾಯಿ ರೇಷ್ಮಾ ಶನಿವಾರ ಅಂಗಡಿಗೆ ಹೋಗಿ ಬರುತ್ತಿದ್ದಾಗ ಸಾರ್ವಜನಿಕವಾಗಿ ನಿಂದಿಸಿದ್ದ. ಈ ವಿಚಾರವನ್ನು ರೇಷ್ಮಾ ತನ್ನ ಮನೆಯವರಿಗೆ ತಿಳಿಸಿದ್ದಳು. ಮನೆವರೆಗೂ ಬಂದಿದ್ದ ಮಜರ್ ಅವಾಚ್ಯ ಶಬ್ದಗಳಿಂದ ಬೈದಿದ್ದ. ಈ ವೇಳೆ ಗಲಾಟೆ ಆರಂಭಗೊಂಡು, ಕುಟುಂಬಸ್ಥರು ಸೇರಿ ಮಾರಕಾಸ್ತ್ರಗಳಿಂದ ಕೊಲೆ ಮಾಡಿ, ರಸ್ತೆಯಲ್ಲಿ ಶವ ಬಿಸಾಡಿದ್ದರು' ಎಂದು ವಿವರಿಸಿದರು.

'ಆರೋಪಿಗಳು ಹೆಬ್ಬಾಳ ಬಳಿಯ ಬಸ್ ನಿಲ್ದಾಣದಿಂದ ಬೇರೆ ಸ್ಥಳಕ್ಕೆ ತೆರಳುತ್ತಿದ್ದರು. ಈ ಮಾಹಿತಿ ಆಧರಿಸಿ ಏಳು ಮಂದಿಯನ್ನೂ ಬಂಧಿಸಲಾಯಿತು. ತಲೆಮರೆಸಿಕೊಂಡಿರುವ ಇಬ್ಬರಿಗಾಗಿ ಶೋಧ ನಡೆಯುತ್ತಿದೆ' ಎಂದೂ ಹೇಳಿದರು.

ಸಿಎಂ ಮನೆ ಎದುರು ಮಹಿಳೆ ಪ್ರತಿಭಟನೆ

ಬೆಂಗಳೂರು:ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಈ ಬಾರಿ ನಡೆಯಲಿರುವ ಸ್ವಾತಂತ್ರ್ಯೋತ್ಸವಕ್ಕೆ ಬೇರೆ ನಿರೂಪಕರಿಗೂ ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸಿ ದೂರದರ್ಶನದ ರಂಗಭೂಮಿ ಕಲಾವಿದೆ ವಿ.ಗಿರಿಜಾ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನಿವಾಸ ಎದುರು ಭಾನುವಾರ ಏಕಾಂಗಿ ಪ್ರತಿಭಟನೆ ನಡೆಸಿದರು.

'ಹಲವು ವರ್ಷಗಳಿಂದ ಈ ಕಾರ್ಯಕ್ರಮಗಳಿಗೆ ನಿರೂಪಕರನ್ನು ಬದಲಾವಣೆ ಮಾಡಿಲ್ಲ. ಕೆಲವೇ ನಿರೂಪಕರಿಗೆ ನಿರಂತರವಾಗಿ ನಿರೂಪಣೆಯ ಅವಕಾಶ ಕಲ್ಪಿಸಲಾಗುತ್ತಿದೆ. ಈ ಬಾರಿಯೂ ಅದೇ ನಿರೂಪಕರಿಗೆ ಅವಕಾಶ ನೀಡಲಾಗಿದೆ' ಎಂದು ದೂರಿದರು.

ಪ್ರತಿಭಟನೆ ವೇಳೆ ಗಿರಿಜಾ ಅವರನ್ನು ಪೊಲೀಸರು ತಡೆದರು. ಆದರೂ ಪ್ರತಿಭಟನೆ ಮುಂದುವರಿಸಿದ್ದರಿಂದ ಅವರನ್ನು ವಶಕ್ಕೆ ಪಡೆದರು.

ಪಾನಮತ್ತನಾಗಿ ಕಾರು ಚಲಾಯಿಸಿದ್ದ ಡಿಜೆ ಸುಹಾಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನಶಂಕರಿ ವ್ಯಾಪ್ತಿಯಲ್ಲಿ ಶನಿವಾರ ರಾತ್ರಿ ನಡೆದಿದ್ದ ಕಾರು–ಬೈಕ್ ನಡುವಿನ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಪಾನಮತ್ತನಾಗಿ ಕಾರು ಚಲಾಯಿಸಿದ್ದ ವ್ಯಕ್ತಿ ಪದ್ಮನಾಭನಗರ ನಿವಾಸಿ ಸುಹಾಸ್ ವೆಂಕಟೇಶ್ (26) ಎಂದು ಪೊಲೀಸರು ಪತ್ತೆ ಹಚ್ಚಿದ್ದಾರೆ.

'ಸುಹಾಸ್ ಡಿಜೆ ಎಂದು ತಿಳಿದುಬಂದಿದೆ. ಬೈಕ್ ಸವಾರರಾದ ಬನಶಂಕರಿಯ ಕಾವೇರಿ ನಗರದಲ್ಲಿ ವಾಸವಿದ್ದ ರಾಜಸ್ಥಾನದ ಕೇತಾರಾಂ (40) ಹಾಗೂ ಕೀಮಾರಂ (20) ಮೃತಪಟ್ಟಿದ್ದರು'.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Industrial & Factory

Outskirts

FACTORY FOR SALE
1) Plot area 20000 sq m2 Build up area 4000 sq m2 Kundaim Ind. Estate Kundaim Goa.
2) Plot area 13000 sqm2 build up area 6500 sqm2 Kundaim Ind. Estate Kundaim
3) Industrial land plot area 7387 sqm2 Opp. Hindustan Foods Company Usgaon Ponda -Goa.
7020793947
9422059384

Residential/ Commercial

Multiple Locations

CANARA BANK owned residential property for sale at Rajaji Nagar, Bengaluru and Dollars Colony, RMV Layout, Bengaluru. Please contact: 9449860134 /8951357925. For more details, Visit: www.canarabank.com> Tenders> Expression of interest. Last date of submission extended upto 16.08.2021. 3.00 pm

REAL ESTATE BUYING

Industrial & Factory

General

WANTED INDUSTRIAL Land outright purchase 5-10 acres/ good location/ Bangalore. European MNC client. Blumefield Industrial Realty & Projects Private Limited. 9900570439

RENTAL PROPERTIES

Accommodation Available

Commercial

COMMERCIAL ACCOMMODATION available in M.G. Road, Raheja Tower 1305 sqft 11th floor, fully furnished Centralised AC Office for Contact: 8867115586.

EDUCATIONAL

General

NIIT | ICICI Bank
BECOME A BANKING PROFESSIONAL AT ICICI BANK
With a PG Diploma in Sales and Relationship Banking
Eligibility: 19-25 years of age with min. 50% in X, XII and Graduation.



Call Now: 1800 200 7261

BUSINESS

Business to Business

Finance

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

Business Offers

Finance

INVEST 10K-TO 2-Lacs in Trading, Multiple Businesses. Weekly/Monthly 10% secured Fixed Returns. Agents,VRS,RTD, Housewives, Freelancers Also Welcome (Good Income).Call:- 7892818780.

JOB OPPORTUNITIES

Teachers/ Professors

ST. JOSEPH'S COLLEGE OF LAW
18, Residency Road, Bengaluru - 560 025
Mobile: 94815 45478
Tel: 080-2222 3352
E-mail: career@sjcl.edu.in
Website: www.sjcl.edu.in
WANTED
Full / Part Time Assistant Professors in:
- Law
- Political Science
- Sociology
- Commerce
- Part Time Counsellor
NET / KSET, Ph.D and experienced Teachers preferred.
Apply before 14th August 2021 either by mail or post to the above address.

Part-Time Jobs

PANDEMIC SITUATION Lost Job. MNC Provide Work From Home 30 to 35K Call: 7019215243/ 9886641282

Engg/ Production Technical

WANTED B.E Mechanical Engineer Trainees Fresher's for an Aircraft Component Manufacturing Industry. Training period 1YEAR, Stipend 0-6 Months-Rs.12000, 7-12 Months Rs.14000. Mail Your resume to mail@ayyappa-cnc.com

Multiple Vacancy

REQUIRED IMMEDIATELY HR, Administration, Manager, Accounts, Supervisor, technical Mechanical, Electronics, Electrical, Computer Engineers-7676760299/ 7676760399

PERSONAL

Change of Name

LATA SHENDE, W/o SHENDE PADMAKAR KEWALRAM, 14845641W, SEP/MT, Vill- PARSODI (RAYYAT), ARJUNI (MORGAON), GONDIA, MAHARASHTRA, have changed my name from LATA SHENDE to LATA PADMAKAR SHENDE, 07/08/2021, Notary K.V. Mani, Bangalore

SUBRAMANI M, Father/o, 14833484H, SEP/MT, BALACHANDAR S, Vill- AGRAVARAM, MUKUNDARAYAPURAM, WALAJA, VELLORE, TAMIL NADU, have changed my name from SUBRAMANI M to MANI MUNUSAMY, 06/08/2021, Notary K.V.Mani, Bangalore

GUDDI DEVI, Wife/o, JC681904P, SUB, HARISH CHANDRA SHUKLA, Vill- JETHWARA, LALGANGAJHARA, PRATAPGARH, UTTAR PRADESH, have changed my name from GUDDI DEVI to GUDDI SHUKLA, 05/08/2021, Notary K.V. Mani, Bangalore

SHENDE PADMAKAR KEWALRAM, 14845641W, SEP/MT, Vill- PARSODI (RAYYAT), ARJUNI (MORGAON), GONDIA, MAHARASHTRA, have changed my Daughter's name from CHAITALI to CHAITALI PADMAKAR SHENDE, 07/08/2021, Notary K.V. Mani, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Financial Services

WE ORGANISE Loans PL/BL/HL/LAP from Banks/NBFC. Unsecured chequeFin.for Business (Minimum Turnover 50L-pm). 50L-to-5 Cr. Call: 8904047577.

EDUCATION SPECIAL
We are coming out with special offer for Admission Notice, Education Success Congratulation Ads
For details contact: Jerry: 9731810277
Vishal: 9845114560 Tanveer: 9886213331
E-mail: dhclassifieds@deccanherald.co.in

ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಅಡಿಯಲ್ಲಿ 506 ಐತಿಹಾಸಿಕ, ಸಾಂಸ್ಕೃತಿಕ ತಾಣಗಳು

ರಾಜ್ಯದ ಸ್ಮಾರಕಗಳಲ್ಲಿ ಮೂಲಸೌಲಭ್ಯ ಕೊರತೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್ಐ) ಅಡಿ ಬರುವ ರಾಜ್ಯದ 506 ಐತಿಹಾಸಿಕ, ಸಾಂಸ್ಕೃತಿಕ ಮತ್ತು ಕಲಾತ್ಮಕ ಸ್ಮಾರಕಗಳಿರುವ ತಾಣದಲ್ಲಿ ಮೂಲ ಸೌಲಭ್ಯಗಳ ಕೊರತೆ ಕಾಡುತ್ತಿದೆ. ಕುಡಿಯುವ ನೀರು, ಶೌಚಾಲಯದಂಥ ಮೂಲಸೌಲಭ್ಯಗಳಿರುವ ಸ್ಮಾರಕಗಳ ಪ್ರಮಾಣ ಶೇ 15ಕ್ಕಿಂತಲೂ ಕಡಿಮೆ!

ಕೇಂದ್ರ ಸರ್ಕಾರದ ಸಂರಕ್ಷಣೆಯಲ್ಲಿರುವ ಅತೀ ಹೆಚ್ಚು ಸ್ಮಾರಕಗಳಿರುವ ರಾಜ್ಯಗಳ ಸಾಲಿನಲ್ಲಿ ಉತ್ತರ ಪ್ರದೇಶ (743) ಮೊದಲ ಸ್ಥಾನದಲ್ಲಿದ್ದರೆ, ನಂತರದ ಸ್ಥಾನ ಕರ್ನಾಟಕದ್ದು. ಅಲ್ಲದೆ, ವೈಫೈ ಸೌಲಭ್ಯ ಇರುವ ಸ್ಮಾರಕಗಳು ಅತೀ ಹೆಚ್ಚು (22) ರಾಜ್ಯದಲ್ಲಿದೆ. ತಂತ್ರಜ್ಞಾನದ ವಿಚಾರದಲ್ಲಿ ರಾಜ್ಯದ ಸ್ಮಾರಕಗಳು ಮುಂಚೂಣಿಯಲ್ಲಿದ್ದರೂ, ಮೂಲಸೌಲಭ್ಯದ ಕೊರತೆ ಅವುಗಳ ಪಾಲಿಗೆ ಕಪ್ಪು ಚುಕ್ಕೆಯಾಗಿವೆ.

ರಾಜ್ಯದ 506 ಸ್ಮಾರಕಗಳ ಪೈಕಿ 53 ರಲ್ಲಿ (ಶೇ 10.5) ಮಾತ್ರ ಶೌಚಾಲಯ ವ್ಯವಸ್ಥೆಯಿದೆ. ಕೇವಲ 69 ರಲ್ಲಿ (ಶೇ 13.6) ಕುಡಿಯುವ ನೀರಿನ ಸೌಲಭ್ಯವಿದೆ.

100ರಲ್ಲಿ (ಶೇ 20) ಮಾತ್ರ ಕುಳಿತುಕೊಳ್ಳಲು ಬೆಂಚುಗಳಿವೆ. 249 ಸ್ಮಾರಕಗಳಲ್ಲಿ ಮಾತ್ರ ಸ್ಥಳದ ಇತಿಹಾಸ ಪರಿಚಯಿಸುವ ಫಲಕಗಳಿವೆ. 160 ತಾಣಗಳಿಗೆ ತೆರಳಲು ಸಮರ್ಪಕ ಸಂಪರ್ಕ ರಸ್ತೆಗಳೇ ಇಲ್ಲ.

ಈ ಬಗ್ಗೆ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಇಲಾಖೆಯ ಪುರಾತತ್ವ ಶಾಸ್ತ್ರಜ್ಞ ಶಿವಕಾಂತ ಬಾಜಪೇಯಿ, 'ಸ್ಮಾರಕಗಳಲ್ಲಿ ಮೂಲಸೌಲಭ್ಯ ಒದಗಿಸುವುದು ನಿರಂತರ ಪ್ರಕ್ರಿಯೆ. ಈ ನಿಟ್ಟಿನಲ್ಲಿ, ರಾಜ್ಯ ಸರ್ಕಾರದಿಂದ ಅಗತ್ಯವಾದ ಸಹಕಾರ ಸಿಗುತ್ತಿದೆ. ಹೆಚ್ಚಿನ ಸ್ಮಾರಕಗಳಿಗೆ ಸದ್ಯದಲ್ಲೇ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗುವುದು' ಎಂದರು.

'ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ರಾಜ್ಯದ ಪುರಾತತ್ವ ಇಲಾಖೆಯನ್ನು ನಂಬುವುದಿಲ್ಲ. 200 ವರ್ಷ ಹಳೆಯ ವಸ್ತುವೊಂದನ್ನು ಪತ್ತೆ ಹಚ್ಚಿದರೂ ಅದನ್ನು ರಾಜ್ಯ ಸರ್ಕಾರ ಪ್ರವಾಸೋದ್ಯಮ ಇಲಾಖೆಯ ಅಧೀನಕ್ಕೆ ತರುತ್ತಿದೆ. ಹೀಗಾಗಿ, ಎಎಸ್ಐಗೆ ಹೋಲಿಸಿದರೆ, ಪುರಾತತ್ವ ವಸ್ತುಗಳ ಸಂರಕ್ಷಣೆಯಲ್ಲಿ ರಾಜ್ಯ ಸರ್ಕಾರ ಬಹಳ ಹಿಂದಿದೆ. ಸ್ಮಾರಕಗಳ ಸಂರಕ್ಷಣೆ ಮತ್ತು ಭದ್ರತೆ ವಿಷಯವನ್ನು ಎಎಸ್ಐಗೆ ಬಿಟ್ಟು ಮೂಲ ಸೌಲಭ್ಯ ಒದಗಿಸುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕು' ಎಂದು ಈ ಕ್ಷೇತ್ರದ ತಜ್ಞರೊಬ್ಬರು ಅಭಿಪ್ರಾಯ ವ್ಯಕ್ತಪಡಿಸಿದರು.

ಲಭ್ಯ ಮಾಹಿತಿ ಪ್ರಕಾರ, ಇಲಾಖೆಯ ಅಡಿಯಲ್ಲಿ ಕರ್ನಾಟಕದಲ್ಲಿರುವ ಮೂರು ವೃತ್ತಗಳಲ್ಲಿರುವ (ಬೆಂಗಳೂರು, ಹಂಪಿ, ಧಾರವಾಡ) ಸ್ಮಾರಕಗಳ ಸಂರಕ್ಷಣೆ ಮತ್ತು ಭದ್ರತೆಗೆ ಎಎಸ್ಐ ಕಳೆದ 5 ವರ್ಷಗಳಲ್ಲಿ ವಾರ್ಷಿಕ ಕನಿಷ್ಠ ₹ 21 ಕೋಟಿಯಿಂದ ₹ 28.55 ಕೋಟಿ ವರೆಗೂ ವೆಚ್ಚ ಮಾಡಿದೆ.

12 ಸ್ಮಾರಕಗಳಲ್ಲಿ ಎಎಸ್ಐ ಪ್ರವೇಶ ಶುಲ್ಕ ಸಂಗ್ರಹಿಸುತ್ತಿದೆ. ಅಂದರೆ, ಎಎಸ್ಐಗೆ ಸೀಮಿತ ವರಮಾನ ಮಾತ್ರ ಬರುತ್ತಿದೆ. ಹೀಗಾಗಿ, ಹೆಚ್ಚಿನ ಅನುದಾನ ಬಳಕೆಗೆ ಅವಕಾಶ ಇರುವ ರಾಜ್ಯ ಪ್ರವಾಸೋದ್ಯಮ ಇಲಾಖೆ, ಈ ಸ್ಮಾರಕಗಳಿಗೆ ಮೂಲ ಸೌಲಭ್ಯ ಒದಗಿಸಲು ಮುಂದಾಗಬೇಕು ಎಂದು ತಜ್ಞರು ಹೇಳಿದರು.

ಪುರಾತತ್ವ ಸ್ಮಾರಕಗಳ ಪರಿಣತರೊಬ್ಬರು ಮಾತನಾಡಿ, 'ಎಎಸ್ಐ ಅಡಿಯಲ್ಲಿರುವ ಎಲ್ಲ ಸ್ಮಾರಕಗಳಲ್ಲಿ ಶೌಚಾಲಯ ಕಡ್ಡಾಯವಾಗಿ ಬೇಕೆಂದೇನೂ ಇಲ್ಲ. ಬಹುತೇಕ ಸ್ಮಾರಕಗಳು ಪಟ್ಟಣ ಅಥವಾ ಗ್ರಾಮಗಳಲ್ಲಿವೆ. ಹಾಸನ ಜಿಲ್ಲೆಯ ಹುಲಿಕೆರೆಯಲ್ಲಿರುವ ಕಲ್ಯಾಣಿ ಅಂಥವುಗಳಲ್ಲಿ ಒಂದು. ಸ್ಥಳೀಯ ಪಂಚಾಯಿತಿಗಳಿಗೆ ಪ್ರವಾಸೋದ್ಯಮ ಇಲಾಖೆ ಅನುದಾನ ನೀಡಿ, ಅಂಥ ಸ್ಮಾರಕಗಳಿಗೆ ಮೂಲ ಸೌಲಭ್ಯಗಳನ್ನು ಒದಗಿಸಬೇಕು' ಎಂದರು.

ಸ್ಮಾರಕಗಳ ಅಭಿವೃದ್ಧಿ ಮತ್ತು ಸಂರಕ್ಷಣೆಗೆ ಎಎಸ್ಐ ಕರ್ನಾಟಕದ ವೆಚ್ಚ (₹ ಕೋಟಿಗಳಲ್ಲಿ)

ಎಎಸ್ಐ ವೃತ್ತ	2017-18	2018-19	2019-20	2020-21
ಬೆಂಗಳೂರು	10.56	9.85	11.1	7.5
ಹಂಪಿ	6.6	5.19	10	7.75
ಧಾರವಾಡ	5.98	6.4	7.45	5.85

ರೇಸ್ ಬೈಕ್ ರೈಡರ್ ಅರವಿಂದ ಕೆ.ಪಿ. ರನ್ನರ್‌ಅಪ್

ಮಂಜು ಪಾವಗಡಗೆ 'ಬಿಗ್‌ಬಾಸ್' ಪಟ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಜಾಭಾರತ' ಖ್ಯಾತಿಯ ಹಾಸ್ಯಕಲಾವಿದ ಮಂಜು ಪಾವಗಡ ಅವರು ಕಲರ್ಸ್ ಕನ್ನಡ ವಾಹಿನಿಯ 'ಬಿಗ್‌ಬಾಸ್' 8ನೇ ಆವೃತ್ತಿಯ ವಿಜೇತರಾಗಿ ಹೊರಹೊಮ್ಮಿದ್ದಾರೆ. ಅಂತರರಾಷ್ಟ್ರೀಯ ಮಟ್ಟದ ರೇಸ್ ಬೈಕ್ ರೈಡರ್ ಅರವಿಂದ ಕೆ.ಪಿ. ರನ್ನರ್‌ಅಪ್ ಆಗಿದ್ದಾರೆ.

120 ದಿನಗಳ ಬಿಗ್‌ಬಾಸ್ ಪಯಣದ 'ಗ್ರ್ಯಾಂಡ್ ಫಿನಾಲೆ' ಭಾನುವಾರ ನಡೆಯಿತು. ಕಾರ್ಯಕ್ರಮದಲ್ಲಿ ನಿರೂಪಕ, ನಟ ಸುದೀಪ್ ಅವರು ವಿಜೇತ ಸ್ಪರ್ಧಿಯ ಹೆಸರನ್ನು ಘೋಷಿಸಿದರು. ವಿಜೇತ ಸ್ಪರ್ಧಿ ಮಂಜು ಪಾವಗಡ ಅವರಿಗೆ ಸುದೀಪ್ ₹53 ಲಕ್ಷ ನಗದು ಹಾಗೂ ಟ್ರೋಫಿ ನೀಡಿದರು.

ರನ್ನರ್‌ಅಪ್ ಅರವಿಂದ್ ಅವರಿಗೆ ₹11 ಲಕ್ಷ ಚೆಕ್ ಹಾಗೂ ಟ್ರೋಫಿಯನ್ನು ನೀಡಲಾಯಿತು. ಮಂಜು ಅವರು 45,03,495 ಮತ ಹಾಗೂ ಅರವಿಂದ್ 43,35,957 ಮತ ಪಡೆದಿದ್ದರು.

'ಇದು ಅದೃಷ್ಟ ಅಲ್ಲ. ಇವರ ಸಾಮರ್ಥ್ಯದಿಂದ ಇದನ್ನು ಸಾಧಿಸಿದ್ದಾರೆ. 120 ದಿನಗಳ ಸುದೀರ್ಘ ಪಯಣ ಈ 8ನೇ ಆವೃತ್ತಿ. ಅರವಿಂದ್ ಹಾಗೂ ಮಂಜು ಇಬ್ಬರೂ ಈ ಸ್ಥಾನಕ್ಕೆ ಅರ್ಹರು' ಎಂದು ಸುದೀಪ್ ಹೇಳಿದರು.

ಮಂಜು ಪಾವಗಡ ಮಾತನಾಡಿ, 'ನನಗೆ ಇಷ್ಟು ಮತ ನೀಡಿದ ನಾಡಿನ ಜನತೆಗೆ ಧನ್ಯವಾದ. ನಾನು ಗೆಲ್ಲಲು ಮೂಲ ಕಾರಣ ನನ್ನ ಪ್ರತಿಸ್ಪರ್ಧಿಗಳು. ಎಲ್ಲರಿಗೂ ತುಂಬಾ ಕಾಟ ಕೊಟ್ಟಿದ್ದೇನೆ. ನನ್ನ ಜೊತೆ ಎಲ್ಲರೂ ಖುಷಿಯಾಗಿದ್ದರು. ಮಜಾಭಾರತ ತಂಡಕ್ಕೆ ಈ ಗೆಲುವನ್ನು ಅರ್ಪಿಸುತ್ತಿದ್ದೇನೆ. ನನ್ನ ಜೀವನ ಬದಲಿಸಿದ ಶೋ ಅದು. ನನಗೆ ಅರವಿಂದ್ ಸ್ಫೂರ್ತಿ. ಸಿಕ್ಕಿದ ಬಹುಮಾನದ ಮೊತ್ತವನ್ನು ಏನು ಮಾಡಬೇಕು ಎಂದು ಗೊತ್ತಾಗುತ್ತಿಲ್ಲ' ಎಂದರು.

ಅರವಿಂದ್ ಮಾತನಾಡಿ, 'ಬಿಗ್‌ಬಾಸ್ ನೀಡಿದ ಅವಕಾಶಕ್ಕೆ ಧನ್ಯವಾದ. ಹಲವು ಪಾಠ ಕಲಿತಿದ್ದೇನೆ. ಸುದೀಪ್ ಅವರಿಂದ ಹಲವು ಸಲಹೆಯನ್ನು ನಾನು ಪಡೆದಿದ್ದೇನೆ' ಎಂದರು.

ಕಳೆದ ವರ್ಷ ಬಿಗ್‌ಬಾಸ್ ಶೋ ನಡೆದಿರಲಿಲ್ಲ. ಕೋವಿಡ್ ಪಿಡುಗಿನ ನಡುವೆ ವಿಳಂಬವಾದರೂ ಕಳೆದ ಫೆ.28ರಂದು 8ನೇ ಆವೃತ್ತಿಯು ಭರ್ಜರಿಯಾಗಿ ಸೆಟ್ಟೇರಿತ್ತು. ಸೆಲೆಬ್ರಿಟಿ ಆವೃತ್ತಿಯಾಗಿದ್ದ ಈ ಬಾರಿಯ ಬಿಗ್‌ಬಾಸ್‌ನಲ್ಲಿ ಹಿರಿಯ ನಟ ಶಂಕರ್ ಅಶ್ವತ್ಥ್, ನಟಿಯರಾದ ಶುಭಾ ಪೂಂಜಾ, ನಿಧಿ ಸುಬ್ಬಯ್ಯ, ವೈಷ್ಣವಿ ಗೌಡ, ಗೀತಾ ಭಾರತಿ ಭಟ್, ಮಜಾಭಾರತ ಖ್ಯಾತಿಯ ಮಂಜು ಪಾವಗಡ ಹೀಗೆ 17 ಖ್ಯಾತನಾಮ ಸ್ಪರ್ಧಿಗಳೇ ಇದ್ದರು. ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿದ್ದ ಸಂದರ್ಭದಲ್ಲಿ ಮುಂಜಾಗ್ರತಾ ಕ್ರಮವಾಗಿ ಮೇ 8ರಂದು ಶೋ ಸ್ಥಗಿತಗೊಳಿಸುವ ನಿರ್ಧಾರವನ್ನು ಕಲರ್ಸ್ ಕನ್ನಡ ಚಾನೆಲ್ ತೆಗೆದುಕೊಂಡಿತ್ತು. ಬಿಗ್‌ಬಾಸ್ ಕನ್ನಡ ಆವೃತ್ತಿಯ ಇತಿಹಾಸದಲ್ಲೇ ಈ ರೀತಿ ಶೋ ಅರ್ಧಕ್ಕೇ ನಿಂತಿರುವ ಘಟನೆ ಇದೇ ಮೊದಲಾಗಿತ್ತು. ಬಿಗ್‌ಬಾಸ್ ಎರಡನೇ ಇನ್ನಿಂಗ್ಸ್ ಜೂ.23ಕ್ಕೆ ಪುನರಾರಂಭಗೊಂಡಿತ್ತು. ಈ ಸಂದರ್ಭದಲ್ಲಿ ವೈಷ್ಣವಿ, ಅರವಿಂದ್, ಪ್ರಶಾಂತ್ ಸಂಬರಗಿ, ದಿವ್ಯಾ ಉರುಡುಗ, ದಿವ್ಯಾ ಸುರೇಶ್, ಶಮಂತ್, ರಘು ಗೌಡ, ಮಂಜು ಪಾವಗಡ, ಶುಭಾ ಪೂಂಜ, ನಿಧಿ ಸುಬ್ಬಯ್ಯ, ಚಕ್ರವರ್ತಿ ಚಂದ್ರಚೂಡ ಮತ್ತು ಪ್ರಿಯಾಂಕ ತಿಮ್ಮೇಶ್ ಮನೆಯೊಳಗೆ ಮತ್ತೆ ಪ್ರವೇಶ ಮಾಡಿದ್ದರು.

ಮಂಜು ಪಾವಗಡ ಅವರ ಹೆಸರನ್ನು ಘೋಷಿಸಿದ ನಟ ಸುದೀಪ್

ಮಂಜು ಪಾವಗಡ

ವಿದ್ಯಾರ್ಥಿಗಳೊಂದಿಗೆ ರಾಜಾನುಕುಂಟೆ ಇನ್‌ಸ್ಪೆಕ್ಟರ್ ನವೀನ್ ಕುಮಾರ್ ಸಂವಾದ ಮಾಡಿದರು. ಮಾವಳಿಪುರ ಶ್ರೀನಿವಾಸ್, ಕೆಂಪಣ್ಣ, ಟಿ.ರಮೇಶ್, ಅಮ್ಮು ಕೇರ್ ಸಂಸ್ಥೆಯ ನಿರ್ಮಲಾ ನಾಯಕ್, ಸುರೇಶ್ ಇದ್ದರು.

ವಿದ್ಯಾರ್ಥಿಗಳಿಗೆ ಮೇಷ್ಟ್ರಾದ ಇನ್‌ಸ್ಪೆಕ್ಟರ್

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: 'ಗಿಡಗಳನ್ನು ನಾವು ಏಕೆ ನೆಡಬೇಕು? ಹಣ್ಣಿನ ಗಿಡಗಳನ್ನು ನೆಡುವುದರಿಂದ ಏನು ಪ್ರಯೋಜನ? ಗಿಡ ನೆಡಲು ಮಾವಳಿಪುರ ಗ್ರಾಮವನ್ನೇ ಏಕೆ ಆಯ್ಕೆ ಮಾಡಿಕೊಂಡಿರಿ?'

ಹೀಗೆ ಪ್ರಶ್ನೆಗಳನ್ನು ರಾಜಾನುಕುಂಟೆ ಇನ್‌ಸ್ಪೆಕ್ಟರ್ ನವೀನ್ ಕುಮಾರ್ ವಿದ್ಯಾರ್ಥಿ ಗಳಿಗೆ ಕೇಳಿ ಉತ್ತರಗಳನ್ನು ಪಡೆದರು.

ಅಮ್ಮು ಕೇರ್ ಸಂಸ್ಥೆಯು ಮಾವಳಿಪುರ ಗ್ರಾಮದಲ್ಲಿ ಆಯೋಜಿಸಿದ್ದ ಸಾವಿರ ಸಸಿ ನೆಡುವ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಅವರು ಕೆಲ ಹೊತ್ತು ವಿದ್ಯಾರ್ಥಿಗಳಿಗೆ ಮೇಷ್ಟ್ರಾಗಿ ಉಪನ್ಯಾಸ ನೀಡಿದರು.

'ನಿಜವಾದ ಸ್ವರ್ಗವನ್ನು ನಾವು ಪಡೆಯಬೇಕೆಂದರೆ ಮರಗಳನ್ನು ನಾವು ನೆಡಬೇಕು. ಮರಗಳನ್ನು ಬೆಳೆಸಿದರೆ ಅದು ಮುಂದಿನ ತಲೆಮಾರಿಗೆ ನಾವು ಕೊಡುವ ಅತ್ಯಂತ ಬೆಲೆ ಬಾಳುವ ಉಡುಗೊರೆ. ಹಿಂದಿನವರು ನಮಗೆ ಎಷ್ಟೆಲ್ಲ ಉಡುಗೊರೆಯನ್ನು ಕೊಟ್ಟು ಹೋಗಿದ್ದಾರೆ. ಆ ಉಡುಗೊರೆಗಳನ್ನು ನಾವು ಜೋಪಾನ ಮಾಡಿಕೊಳ್ಳಬೇಕು. ಇಲ್ಲದ್ದರೆ ನಾವು ಈ ಭೂಮಿ ಮೇಲೆ ಬದುಕುವುದು ಕಷ್ಟವಾಗುತ್ತದೆ' ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಮಾವಳಿಪುರ ಶ್ರೀನಿವಾಸ್, ಗ್ರಾಮ ಪಂಚಾಯಿತಿ ಸದಸ್ಯರಾದ ವಿಜಯ್ ಕುಮಾರ್, ಟಿ.ರಮೇಶ್, ಅಮ್ಮು ಕೇರ್ ಸಂಸ್ಥೆಯ ನಿರ್ಮಲಾ ನಾಯಕ್, ಸುರೇಶ್ ಭಾಗವಹಿಸಿದ್ದರು.

'ನೀರಜ್ ಚೋಪ್ರಾಗೆ ತರಬೇತಿ ನೀಡಿದ್ದ ಕಾಶೀನಾಥ್‌ಗೆ ₹ 10 ಲಕ್ಷ ಬಹುಮಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಜಾವೆಲಿನ್ ಥ್ರೋದಲ್ಲಿ ಚಿನ್ನದ ಪದಕ ಗೆದ್ದುಕೊಂಡು ಇತಿಹಾಸ ನಿರ್ಮಿಸಿದ ನೀರಜ್ ಚೋಪ್ರಾ ಅವರಿಗೆ ತರಬೇತಿ ನೀಡಿದ್ದ ಉತ್ತರಕನ್ನಡ ಜಿಲ್ಲೆಯ ಶಿರಸಿಯ ಕಾಶೀನಾಥ್ ನಾಯ್ಕ್ ಅವರಿಗೆ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ ₹ 10 ಲಕ್ಷ ನಗದು ಬಹುಮಾನ ಘೋಷಿಸಿದ್ದಾರೆ.

'ನೀರಜ್ ಚೋಪ್ರಾ ಚಿನ್ನದ ಪದಕಕ್ಕೆ ಮುತ್ತಿಕ್ಕುವಲ್ಲಿ ಕನ್ನಡಿಗ ಕಾಶೀನಾಥ್ ನಾಯ್ಕ್ ಪಾತ್ರವೂ ಇದೆ. 2010ರ ಕಾಮನ್ವೆಲ್ತ್ ಕ್ರೀಡಾಕೂಟದಲ್ಲಿ ಕಾಶೀನಾಥ್ ಜಾವೆಲಿನ್ ಥ್ರೋದಲ್ಲಿ ಕಂಚಿನ ಪದಕ ಗಳಿಸಿದ್ದರು. ಕ್ರೀಡಾ ಸಾಧಕ ಕಾಶೀನಾಥ್ ಗರಡಿಯಲ್ಲಿ ಪಳಗಿದ ನೀರಜ್, ಸ್ವರ್ಣಪದಕ ಗಳಿಸಿ ದೇಶದ ಗೌರವವನ್ನು ಹೆಚ್ಚಿಸಿದ್ದಾರೆ' ಎಂದು ಸಚಿವರು ಹೇಳಿದ್ದಾರೆ.

'ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅಮೋಘ ಸಾಧನೆ ಮಾಡಿದ ಭಾರತದ 7 ಕ್ರೀಡಾಪಟುಗಳನ್ನು ರಾಜ್ಯ ಸರ್ಕಾರದಿಂದ ಸನ್ಮಾನಿಸಲಾಗುವುದು. ಈ ಬಗ್ಗೆ ಈಗಾಗಲೇ ಮುಖ್ಯಮಂತ್ರಿ ಜೊತೆ ಚರ್ಚಿಸಿದ್ದೇನೆ. ಇದೇ ಸಂದರ್ಭದಲ್ಲಿ ಕಾಶೀನಾಥ್ ಅವರನ್ನೂ ಸನ್ಮಾನಿಸಲಾಗುವುದು' ಎಂದಿದ್ದಾರೆ.

'ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವುದೂ ದೊಡ್ಡ ಸಾಧನೆ. ಟೋಕಿಯೊ ಒಲಿಂಪಿಕ್‌ನಲ್ಲಿ ಉತ್ತಮ ಸಾಧನೆ ತೋರಿದ ಕನ್ನಡಿಗರಾದ ಅದಿತಿ ಅಶೋಕ್, ಶ್ರೀಹರಿ ನಟರಾಜ್, ಫವಾದ್ ಮಿರ್ಜಾ ಅವರನ್ನೂ ಸನ್ಮಾನಿಸಲಾಗುವುದು' ಎಂದೂ ಅವರು ಹೇಳಿದ್ದಾರೆ.

ಜವಾಹರಲಾಲ್ ನೆಹರು ಪ್ರತಿಮೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪುಷ್ಪನಮನ ಸಲ್ಲಿಸಿದರು

ನೆಹರು ಪ್ರತಿಮೆ ಮರುಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ವತಂತ್ರ ಭಾರತದ ಮೊದಲ ಪ್ರಧಾನಿಯಾಗಿ ಜವಾಹರಲಾಲ್ ನೆಹರು ಅವರು ಭಾರತ ನಿರ್ಮಾಣದ ಕಲ್ಪನೆಯನ್ನು ಸಾಕಾರಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸೌಧದ ಮುಂಭಾಗದಲ್ಲಿ ಮರುಸ್ಥಾಪಿಸಿದ ಜವಾಹರಲಾಲ್ ನೆಹರು ಪ್ರತಿಮೆಯನ್ನು ಭಾನುವಾರ ಅನಾವರಣಗೊಳಿಸಿ, ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, 'ನಮ್ಮ ಮೆಟ್ರೊ ಕಾಮಗಾರಿ ಕಾರಣಕ್ಕೆ ಸ್ಥಳಾಂತರಗೊಂಡಿದ್ದ ಪ್ರತಿಮೆಯನ್ನು ಮರು ಸ್ಥಾಪಿಸುವ ಮೂಲಕ ವಿಧಾನಸೌಧದ ಮೆರಗು ಹೆಚ್ಚಿಸಿದಂತಾಗಿದೆ' ಎಂದರು.

'ರಾಷ್ಟ್ರದ ಆಡಳಿತ ಚುಕ್ಕಾಣಿಯನ್ನು ಬ್ರಿಟಿಷರಿಂದ ಭಾರತಕ್ಕೆ ತೆಗೆದುಕೊಂಡು ಮುಂದಿನ ಆಡಳಿತವನ್ನು ನಡೆಸುವಲ್ಲಿ ಮಹತ್ವದ ಪಾತ್ರ ವಹಿಸಿದ ನೆಹರು ಅವರು, ಕೈಗಾರಿಕೆ ಸೇರಿದಂತೆ ಹಲವು ಕ್ಷೇತ್ರಗಳನ್ನು ಅಭಿವೃದ್ಧಿಗೊಳಿಸಿ ನವ ಭಾರತ ನಿರ್ಮಾಣಕ್ಕೆ ಭದ್ರ ಬುನಾದಿ ಹಾಕಿದ್ದರು' ಎಂದರು.

ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಇದ್ದರು.

ಖಾತೆ ಹಂಚಿಕೆ: ಹೆಚ್ಚುತ್ತಿರುವ ಬೇಗುದಿ

ಒಂದನೇ ಪುಟದಿಂದ

ಆದರೆ, ಮುಖ್ಯಮಂತ್ರಿ ಭೇಟಿ ಬಳಿಕವೂ ಈ ಸಚಿವರು ತಮ್ಮ ಬೇಡಿಕೆ ಯಿಂದ ಹಿಂದೆ ಸರಿದಿಲ್ಲ.

ಪಟ್ಟು ಬಿಡದ ಆನಂದ್ ಸಿಂಗ್: ಪರಿಸರ, ಜೀವಿಶಾಸ್ತ್ರ ಮತ್ತು ಪ್ರವಾಸೋದ್ಯಮ ಖಾತೆ ತಮಗೆ ಬೇಡ ಎಂಬ ನಿಲುವಿನಿಂದ ಆನಂದ್ ಸಿಂಗ್ ಹಿಂದೆ ಸರಿದಿಲ್ಲ. ಭಾನುವಾರ ಬೆಳಿಗ್ಗೆಯೇ ಕುಟುಂಬ ಸಮೇತರಾಗಿ ಮುಖ್ಯಮಂತ್ರಿಯವರ ಆರ್.ಟಿ. ನಗರದ ನಿವಾಸಕ್ಕೆ ಬಂದ ಅವರು, ಪ್ರಬಲ ಖಾತೆ ನೀಡುವಂತೆ ಒತ್ತಡ ಹೇರಿದರು.

ಮುಖ್ಯಮಂತ್ರಿಯವರ ಜತೆ ಕೆಲ ಕಾಲ ಚರ್ಚೆ ನಡೆಸಿದ ಆನಂದ್ ಸಿಂಗ್, ಯಾವುದೇ ಪ್ರತಿಕ್ರಿಯೆ ನೀಡದೆ ತೆರಳಿದರು. ಭೇಟಿ ವೇಳೆ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಕೂಡ ಇದ್ದರು.

ಎಂಟಿಬಿ ಅಸಮಾಧಾನ: ಬೊಮ್ಮಾಯಿ ಭೇಟಿ ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಪೌರಾಡಳಿತ, ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ಯಮಗಳ ಖಾತೆ ಸಚಿವ ಎಂ.ಟಿ.ಬಿ.ನಾಗರಾಜ್, 'ನನಗೆ ಈಗ ಕೊಟ್ಟಿರುವ ಖಾತೆಯಿಂದ ಹಿಂಬಡ್ತಿಯಾಗಿದೆ. 'ಎ' ದರ್ಜೆಯಿಂದ 'ಬಿ' ದರ್ಜೆಗೆ ತಂದಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಹಿಂದೆ ನಾನು ವಸತಿ ಖಾತೆ ನೀಡುವಂತೆ ಕೇಳಿದ್ದೆ. ಈ ಬಾರಿ ಅದಕ್ಕಿಂತಲೂ ಉತ್ತಮ ಖಾತೆ ನೀಡುತ್ತಾರೆ ಎಂಬ ವಿಶ್ವಾಸ ವಿತ್ತು. ಇಂಧನ, ಸಮಾಜ ಕಲ್ಯಾಣ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ, ಸಾರಿಗೆ ಖಾತೆಗಳಲ್ಲಿ ಒಂದನ್ನು ಕೊಡಲಿ' ಎಂದು ಆಗ್ರಹಿಸಿದರು.

'ಖಾತೆ ಬದಲಾವಣೆ ಬೇಡಿಕೆಗೆ ಸಂಬಂಧಿಸಿ ವರಿಷ್ಠರ ಜತೆ ಚರ್ಚಿಸುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ. ಸದ್ಯಕ್ಕೆ ಬದಲಾವಣೆ ಸಾಧ್ಯವಿಲ್ಲ ಎಂದೂ ಹೇಳಿದ್ದಾರೆ. ಅವರ ಮಾತಿನ ಮೇಲೆ ನಂಬಿಕೆ ಇಟ್ಟಿದ್ದೇನೆ. ಜನರ ಜತೆ ಸೇರಿ ಕೆಲಸ ಮಾಡುವ ಖಾತೆ ಬೇಕು' ಎಂದರು.

ಯಡಿಯೂರಪ್ಪ ಜತೆ ಚರ್ಚೆ: ಸಚಿವರ ಅತೃಪ್ತಿಯ ಬೆನ್ನಲ್ಲೇ ಬಸವರಾಜ ಬೊಮ್ಮಾಯಿ ಅವರು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿಮಾಡಿ, ಖಾತೆ ಹಂಚಿಕೆ ಕುರಿತ ಅಸಮಾಧಾನದ ಬಗ್ಗೆ ಸಮಾಲೋಚನೆ ನಡೆಸಿದರು.

ಶಾಸಕರ ಅಸಮಾಧಾನವೂ ತಣಿದಿಲ್ಲ

ಸಂಪುಟದಲ್ಲಿ ಸ್ಥಾನ ದೊರೆಯದಿರುವ ಬಿಜೆಪಿ ಶಾಸಕರ ಅಸಮಾಧಾನವೂ ತಣಿದಿಲ್ಲ. ಬೊಮ್ಮನಹಳ್ಳಿ ಶಾಸಕ ಎಂ.ಸತೀಶ್ ರೆಡ್ಡಿ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭಾನುವಾರ ಭೇಟಿಮಾಡಿ ಅಸಮಾಧಾನ ಹೊರಹಾಕಿದ್ದಾರೆ.

ಮುಖ್ಯಮಂತ್ರಿ ಭೇಟಿ ಬಳಿಕ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, 'ನಾನು 1990 ರಿಂದಲೂ ಬೆಂಗಳೂರಿನಲ್ಲಿ ಪಕ್ಷ ಕಟ್ಟಿ, ಬೆಳೆಸಿದ ಪ್ರಮುಖರಲ್ಲಿ ಒಬ್ಬ. ಈಗ ಸಂಪುಟದಲ್ಲಿರುವ ಬೆಂಗಳೂರಿನವರ ಪೈಕಿ ಆರ್. ಅಶೋಕ ಮತ್ತು ಡಾ.ಸಿ.ಎನ್. ಅಶ್ವತ್ಥ ನಾರಾಯಣ ಮಾತ್ರ ಪಕ್ಷ ಸಂಘಟನೆಗೆ ದುಡಿದವರು. ಉಳಿದವರೆಲ್ಲ ಹೊರಗಿನಿಂದ ಬಿಜೆಪಿಗೆ ಬಂದವರು' ಎಂದು ಬೇಸರ ವ್ಯಕ್ತಪಡಿಸಿದರು.

ಕುಡಚಿ ಶಾಸಕ ಪಿ. ರಾಜೀವ್ ಕೂಡ ಸಂಪುಟದಲ್ಲಿ ಸ್ಥಾನ ದೊರೆಯದೇ ಇರುವ ಬಗ್ಗೆ ಫೇಸ್‌ಬುಕ್ ಮೂಲಕ ಅಸಮಾಧಾನ ಬಹಿರಂಗಪಡಿಸಿದ್ದಾರೆ.

'ಗೌರವ ಉಳಿಸುವ ಭರವಸೆ'

'ನಿಮ್ಮ ಗೌರವ ಉಳಿಸಲು ಏನೇನು ಮಾಡಬೇಕೊ ಆ ಎಲ್ಲ ಪ್ರಯತ್ನಗಳನ್ನೂ ಮಾಡುತ್ತೇನೆ ಎಂಬ ಭರವಸೆಯನ್ನು ಆನಂದ್ ಸಿಂಗ್ ಅವರಿಗೆ ನೀಡಿದ್ದೇನೆ' ಎಂದು ವಿಧಾನಸೌಧದ ಬಳಿ ಸುದ್ದಿಗಾರರಿಗೆ ಮುಖ್ಯಮಂತ್ರಿ ಹೇಳಿದರು.

'ಅವರು ತಮ್ಮ ಭಾವನೆಗಳನ್ನು ಹಂಚಿಕೊಂಡಿದ್ದಾರೆ. ಅವರ ಭಾವನೆಗಳು ನಮಗೂ ಅರ್ಥವಾಗುತ್ತವೆ. ನನ್ನ ಭರವಸೆಯನ್ನು ಆನಂದ್ ಸಿಂಗ್ ಒಪ್ಪಿಕೊಂಡು ಹೋಗಿದ್ದಾರೆ' ಎಂದು ಹೇಳಿದರು.

'ಪ್ರತಿ ತಿಂಗಳು ಸಚಿವರ ಮೌಲ್ಯಮಾಪನ'

ಒಂದನೇ ಪುಟದಿಂದ

'ನಮ್ಮ ವಿಚಾರದ ಬದ್ಧತೆ ಇದ್ದವರಿಗೂ ಅವಕಾಶ ನೀಡಿದ್ದೇವೆ. ಆರಗ ಜ್ಞಾನೇಂದ್ರ, ಸುನಿಲ್‌ಕುಮಾರ್, ಹಾಲಪ್ಪ ಆಚಾರ್ ಮತ್ತು ಬಿ.ಸಿ.ನಾಗೇಶ್ ಅವರಿಗೆ ಅವಕಾಶ ನೀಡಿದ್ದೇವೆ. ಹೊರಗಿನಿಂದ ಬಂದವರು ಮತ್ತು ಬಿಜೆಪಿ ಮೂಲದವರ ಮಧ್ಯೆ ಸಮತೋಲನ ಮಾಡಿದ್ದೇವೆ' ಎಂದರು.

'ಎಲ್ಲರಿಗೂ ಒಳ್ಳೆಯ ಖಾತೆಗಳನ್ನೇ ಹಂಚಿದ್ದೇವೆ. ಉತ್ತಮ ಕೆಲಸ ಮಾಡುವ ಮೂಲಕ ಸಚಿವರು ತಮ್ಮ ಸಾಮರ್ಥ್ಯವನ್ನು ಸಾಬೀತು ಮಾಡಬೇಕು. ಸಂಘದ ಮೂಲದವರಿಗೆ ಆದ್ಯತೆ ನೀಡಿಲ್ಲ ಎಂಬ ಮಾತು ಸರಿಯಲ್ಲ' ಎಂದು ಕಟೀಲ್ ತಿಳಿಸಿದರು.

'ಸರ್ಕಾರ ಸಾಕಷ್ಟು ಕಾರ್ಯಕ್ರಮಗಳನ್ನು ರೂಪಿಸಿದ್ದರೂ ಅವುಗಳನ್ನು ಜನರನ್ನು ತಲುಪಿಸಲು ಸಾಧ್ಯವಾಗಿಲ್ಲ. ಮುಂದಿನ ಎರಡು ವರ್ಷಗಳಲ್ಲಿ ಯಡಿಯೂರಪ್ಪ ಮತ್ತು ಬೊಮ್ಮಾಯಿ ಸರ್ಕಾರಗಳು ಮಾಡಿರುವ ಕೆಲಸಗಳನ್ನು ನಾವು ಸರ್ಕಾರದ ಮುಖವಾಣಿಯಾಗಿ ಜನರ ಬಳಿ ಒಯ್ಯುತ್ತೇವೆ' ಎಂದರು.

ಪಕ್ಷದ ಸಂಘಟನೆಯನ್ನು ಬಲಪಡಿಸಲು, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳು, ವಿಧಾನ ಪರಿಷತ್ ಚುನಾವಣೆ, ಬಿಬಿಎಂಪಿ ಚುನಾವಣೆ ಹಾಗೂ ವಿಧಾನಸಭೆ ಚುನಾವಣೆಗಳಿಗೆ ಸಜ್ಜಾಗಲು ಇದೇ ತಿಂಗಳಿನಿಂದ ಸಂಘಟನಾತ್ಮಕ ಸರಣಿ ಸಭೆ, ಸಮಾವೇಶ ನಡೆಸಲಾಗುವುದು ಎಂದು ಹೇಳಿದರು.

ನೂತನ ಸಚಿವರು ರಾಜ್ಯದ ಜನತೆಯ ನಿರೀಕ್ಷೆಗೆ ತಕ್ಕಂತೆ ಕ್ರಿಯಾಶೀಲತೆಯಿಂದ ಹೆಚ್ಚು ಶ್ರಮವಹಿಸಿ ಕೆಲಸ ಮಾಡಬೇಕು

ನಳಿನ್ ಕುಮಾರ್ ಕಟೀಲ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಯಡಿಯೂರಪ್ಪ ಶಕ್ತಿ ಸಂಪೂರ್ಣ ಬಳಕೆ: ಮುಂಬರುವ ಎಲ್ಲ ಚುನಾವಣೆಗಳಲ್ಲೂ ಯಡಿಯೂರಪ್ಪ ಅವರ ಮಾರ್ಗದರ್ಶನ ಮತ್ತು ಶಕ್ತಿಯನ್ನು ಬಳಸಿಕೊಳ್ಳುತ್ತೇವೆ ಎಂದು ನಳಿನ್ ತಿಳಿಸಿದರು.

ಅಲ್ಲದೆ, ಗಣೇಶ ಹಬ್ಬದ ಬಳಿಕ ಅವರು ನಡೆಸಲು ಉದ್ದೇಶಿಸಿರುವ ಯಾತ್ರೆಗೆ ಸಂಪೂರ್ಣ ಬೆಂಬಲ ನೀಡುತ್ತೇವೆ. ಮುಂದಿನ ಜನವರಿಯಿಂದ ವಿಧಾನ ಸಭಾ ಚುನಾವಣೆ ದೃಷ್ಟಿಯಿಂದ 1 ವರ್ಷಗಳ ಕಾಲ ದೊಡ್ಡ ಸಮಾವೇಶಗಳನ್ನು ನಡೆಸಲಾಗುವುದು ಎಂದರು.

ಲವ್ ಜಿಹಾದ್: ರಾಷ್ಟ್ರೀಯ ಕಾನೂನು ರೂಪಿಸಲು ಒತ್ತಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಲವ್ ಜಿಹಾದ್ ಮತ್ತು ಕಾನೂನುಬಾಹಿರ ಮತಾಂತರವನ್ನು ತಡೆಯಲು ರಾಷ್ಟ್ರೀಯ ಕಾನೂನು ರೂಪಿಸುವಂತೆ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಭಾನುವಾರ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಈ ಮೂಲಕ ಉತ್ತರ ಪ್ರದೇಶ ಚುನಾವಣೆಯ ಹಿನ್ನೆಲೆಯಲ್ಲಿ ವಿಎಚ್‌ಪಿ ಕಠಿಣ ಹಿಂದುತ್ವ ಸಂದೇಶ ರವಾನಿಸಿದೆ.

ಮತಾಂತರ ವಿರೋಧಿ ಕಾನೂನನ್ನು ಜಾರಿಗೊಳಿಸಿದ್ದಕ್ಕಾಗಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಇದೇ ವೇಳೆ ವಿಎಚ್‌ಪಿ ಅಭಿನಂದಿಸಿದೆ.

'ಮತಾಂತರ ಮತ್ತು ಲವ್ ಜಿಹಾದ್ ಜಾಲವು ಭಾರತದಾದ್ಯಂತ ಹರಡಿದೆ. ಇದು ಸುಸಂಸ್ಕೃತ ಸಮಾಜ ಮತ್ತು ರಾಷ್ಟ್ರಕ್ಕೆ ಅಪಾಯಕಾರಿ' ಎಂದು ಎಂದು ವಿಎಚ್‌ಪಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.

ಮೀರತ್‌ನಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ವಿಎಚ್‌ಪಿ ಜಂಟಿ ಪ್ರಧಾನ ಕಾರ್ಯದರ್ಶಿ ಸುರೇಂದ್ರ ಜೈನ್, 'ಇನ್ನು ಮುಂದೆ ಪ್ರಾಂತ್ಯದಲ್ಲಿ ಯಾವುದೇ ಹಿಂದೂ ಕುಟುಂಬದ ಮೇಲೆ ಕಿರುಕುಳ ನಡೆಯುವುದಿಲ್ಲ. ಸಾರ್ವಜನಿಕ ಜಾಗೃತಿ ಮೂಡಿಸಲಾಗುವುದು. ಇದರಿಂದ ಭವಿಷ್ಯದಲ್ಲಿ ಹಿಂದೂ ಕುಟುಂಬ ವಲಸೆ ಹೋಗುವಂತಹ ಸಂದರ್ಭವೇ ಎದುರಾಗುವುದಿಲ್ಲ' ಎಂದು ಅವರು ಹೇಳಿದರು.

ನಿಧನ ವಾರ್ತೆ

ಎಚ್. ವೆಂಕಟೇಶ್

ಬೆಂಗಳೂರು: ಮಲ್ಲತ್ತಹಳ್ಳಿಯ ನಿವಾಸಿ ಎಚ್.ವೆಂಕಟೇಶ್ (73) ಖಾಸಗಿ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ.

ಕೆಂಗೇರಿ ಸಮೀಪದ ಕೊಮ್ಮಘಟ್ಟ ಚಿತಾಗಾರದಲ್ಲಿ ಸೋಮವಾರ ಮಧ್ಯಾಹ್ನ 12 ಗಂಟೆಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಎಕ್ಸ್‌ಎಚ್ ನಂ.:49

ರೆಜಿಸ್ಟರ್ಡ್.ಎ/ಡಿ ದಸ್ತಿ/ ಅಫಿಕ್ಸೇಶನ್/ ಬೀಟ್ ಆಫ್ ಡ್ರಮ್ & ಪಬ್ಲಿಕೇಶನ್/ ನೋಟಿಸ್ ಬೋರ್ಡ್ ಆಫ್ ಡಿಆರ್‌ಟಿ

ಮಾರಾಟ ಘೋಷಣೆ

ವಸೂಲಾತಿ ಅಧಿಕಾರಿಯವರ ಕಚೇರಿ – 1

ಸಾಲಗಳ ವಸೂಲಾತಿ ನ್ಯಾಯಧಿಕರಣ–1, ಮುಂಬೈ

2ನೇ ಮಹಡಿ, ಟೆಲೆಫೋನ್ ಭವನ, ಸ್ಟ್ರಾಂಡ್ ರೋಡ್, ಕೊಲಬಾ ಮಾರ್ಕೆಟ್, ಕೊಲಬಾ, ಮುಂಬೈ–400005

ಆರ್. ಪಿ. ನಂ. 81/2015 ದಿನಾಂಕ: 03.08.2021

ಆದಾಯ ತೆರಿಗೆ ಕಾಯ್ದೆ, 1961ಕ್ಕೆ ಎರಡನೇ ಷೆಡ್ಯೂಲ್‌ನ ನಿಯಮಗಳು 38, 52(2) ಗಳನ್ನು ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಿಗೆ ಸಂದಾಯ ಆಗಬೇಕಿರುವ ಸಾಲಗಳ ವಸೂಲಾತಿ ಕಾಯ್ದೆ, 1993ರೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ಅಡಿಯಲ್ಲಿ ಮಾರಾಟ ಘೋಷಣೆ

ಕೆನರಾ ಬ್ಯಾಂಕ್ .... ಸರ್ಟಿಫಿಕೇಟ್ ಹೋಲ್ಡರ್

ವಿರುದ್ಧ

ಅಧಿಕೃತ ಲಿಕ್ವಿಡೇಟರ್ & ಇತರರು .... ಸರ್ಟಿಫಿಕೇಟ್ ಡೆಬ್ಟರ್

ಸಿ.ಡಿ–1: ಅಧಿಕೃತ ಲಿಕ್ವಿಡೇಟರ್, ಬಾಂಬೆ ಉಚ್ಚ ನ್ಯಾಯಾಲಯ, ಐಎಇಸಿ ಲಿಮಿಟೆಡ್‌ನ ಲಿಕ್ವಿಡೇಟರ್, ಬ್ಯಾಂಕ್ ಆಫ್ ಇಂಡಿಯಾ ಬಿಲ್ಡಿಂಗ್, 5ನೇ ಮಹಡಿ, ಎಂ.ಜಿ.ರೋಡ್, ಫೋರ್ಟ್, ಮುಂಬೈ–400023.

ಸಿ.ಡಿ–2: ಶ್ರೀ. ಎಂ.ಗಣಪತರಾಮ್, ಧವಿದಾಸ್, ವಿ.ಪಿ.ರೋಡ್, ಸಾಂತಾಕ್ರೂಜ್ (ಈಸ್ಟ್), ಬಾಂಬೆ–400055.

ಸಿ.ಡಿ–3: ಶ್ರೀ. ಬಿ.ಕೆ.ಗರುಡಾಚಾರ್, 41, ಮೈಸೂರ್ ಕಾಲೋನಿ, ಚೆಂಬೂರ್, ಬಾಂಬೆ–400074.

ಸಿ.ಡಿ–4: ಶ್ರೀ. ಟಿ.ಎಸ್.ಚಂಪಕಾಂತ್, 5, "ಚಿತ್ರಾ", ವೆಸ್ಟ್ ಅವೆನ್ಯೂ, ಸಾಂತಾಕ್ರೂಜ್ (ವೆಸ್ಟ್), ಬಾಂಬೆ–400054.

ಸಿ.ಡಿ–5: ಶ್ರೀ. ವಿ.ಡಿ.ಚಾರ್, 46, ಮೈಸೂರ್ ಕಾಲೋನಿ, ಚೆಂಬೂರ್, ಬಾಂಬೆ–400074.

ಸಿ.ಡಿ–6: ಸಂಬಂಧಿತ ಸೊಸೈಟಿ/ಎಂಐಡಿಸಿ/ತಲತಿ/ಬಿಎಂಸಿ ಪ್ರಾಧಿಕಾರಗಳು.

1. ಅದಾಗ್ಯೂ ಮಾನ್ಯ ಪ್ರಿಸೈಡಿಂಗ್ ಆಫೀಸರ್‌ರವರು ಒರಿಜಿನಲ್ ಅಪ್ಲಿಕೇಶನ್ ನಂ. 349/2001 ವಿಷಯದಲ್ಲಿ ರಿಕವರಿ ಸರ್ಟಿಫಿಕೇಟ್ ಹೊರಡಿಸಿದ್ದು, ಸರ್ಟಿಫಿಕೇಟ್ ಡೆಬ್ಟರ್‌ಗಳಿಂದ ರೂ. 9,25,25,179.70 (ರೂಪಾಯಿ ಒಂಬತ್ತು ಕೋಟಿ ಇಪ್ಪತ್ತೈದು ಲಕ್ಷ ಇಪ್ಪತ್ತೈದು ಸಾವಿರದ ಒಂದು ನೂರ ಎಪ್ಪತ್ತೊಂಬತ್ತು ಮತ್ತು ಎಪ್ಪತ್ತು ಪೈಸೆ ಮಾತ್ರ) ಮೊತ್ತವನ್ನು ಬಡ್ಡಿ ಹಾಗೂ ಶುಲ್ಕಗಳ ಸಮೇತ ಮತ್ತು ರಿಕವರಿ ಸರ್ಟಿಫಿಕೇಟ್/ಡಿಕ್ರಿ ಪ್ರಕಾರ ವಸೂಲಾತಿ ಮಾಡಿಕೊಳ್ಳಲು ಸೂಚಿಸಿದ್ದಾರೆ.

...

ಕ್ರ. ಸಂ.	ಸ್ವತ್ತಿನ ವಿವರ	ಪರಿಶೀಲನಾ ದಿನಾಂಕ	ಮೀಸಲು ಬೆಲೆ (ರೂ.)	ಇಎಂಡಿ ಮೊತ್ತ (ರೂ.)	ಬಿಡ್ ಹೆಚ್ಚಳ ಮೊತ್ತ (ರೂ.)
1)	...	09.09.2021 ಬೆಳಿಗ್ಗೆ 11:00 ರಿಂದ ಸಂಜೆ 04:30 ಗಂಟೆ	115.44 ಕೋಟಿಗಳು	12.00 ಕೋಟಿಗಳು	10,00,000/-
2)	...	08.09.2021 ಬೆಳಿಗ್ಗೆ 11:00 ರಿಂದ ಸಂಜೆ 04:30 ಗಂಟೆ	12.95 ಕೋಟಿಗಳು	1.30 ಕೋಟಿಗಳು	5,00,000/-
3)	...	07.09.2021 ಬೆಳಿಗ್ಗೆ 11:00 ರಿಂದ ಸಂಜೆ 04:30 ಗಂಟೆ	7.64 ಕೋಟಿಗಳು	80,00,000/-	5,00,000/-
4)	...	04.09.2021 ಬೆಳಿಗ್ಗೆ 11:00 ರಿಂದ ಸಂಜೆ 04:30 ಗಂಟೆ	3.59 ಕೋಟಿಗಳು	36,00,000/-	5,00,000/-

...

03 ಆಗಸ್ಟ್, 2021 ರಂದು ನನ್ನ ಕೈಯಾರೆ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/- ವಸೂಲಾತಿ ಅಧಿಕಾರಿ–I, ಡಿಆರ್‌ಟಿ–I, ಮುಂಬೈ

ಪ್ರಜಾವಾಣಿ ಕ್ಲಬ್‌ಹೌಸ್‌ನಲ್ಲಿ ಕಾವ್ಯಾಸ್ವಾದದ ಮಧ್ಯೆ ಬಿಸಿ ಹುಟ್ಟಿಸಿದ ಚರ್ಚೆ

‘ಅತ್ಯಾಚಾರ ಖಂಡಿಸುವಾಗ ಜಾತಿ ತಾರತಮ್ಯ ಇದೆಯೆ?’

ಶ್ರೀದೇವಿ ಕೆರೆಮನೆ

ಸುಬ್ಬು ಹೊಲೆಯಾರ್

ಶಶಿಕಲಾ ವಸ್ತ್ರದ

ಎಂ.ಆರ್.ಕಮಲ

ನಂದಿನಿ ಹೆದ್ದುರ್ಗ

ಆರಿಫ್ ರಾಜಾ

ಬೆಂಗಳೂರು: ‘ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರವನ್ನು ಖಂಡಿಸುವಾಗ ಕವಯತ್ರಿಯರು ಸಂತ್ರಸ್ತೆಯ ಜಾತಿ ನೋಡುತ್ತಾರೆಯೇ’ ಎನ್ನುವ ಪ್ರಶ್ನೆ ಭಾನುವಾರ ನಡೆದ ಪ್ರಜಾವಾಣಿ ಕ್ಲಬ್‌ಹೌಸ್ ಕಾರ್ಯಕ್ರಮದಲ್ಲಿ ತೀವ್ರ ಚರ್ಚೆಗೆ ಕಾರಣವಾಯಿತು.

‘ಕವಿತೆ ಬರೆಯುವ ಕಷ್ಟ- ಸುಖ’ ಕುರಿತು ಪ್ರಜಾವಾಣಿ ‘ಆಲದಮರ’ದಡಿ ನಡೆದ ಸಂವಾದದಲ್ಲಿ ಶಶಿಕಲಾ ವಸ್ತ್ರದ, ಎಂ.ಆರ್.ಕಮಲ, ಶ್ರೀದೇವಿ ಕೆರೆಮನೆ, ನಂದಿನಿ ಹೆದ್ದುರ್ಗ, ಸುಬ್ಬು ಹೊಲೆಯಾರ್ ಮತ್ತು ಆರಿಫ್ ರಾಜಾ ಭಾಗವಹಿಸಿದ್ದರು.

ಆರಂಭದಲ್ಲಿ ಕವಿತೆ ಕಟ್ಟುವಲ್ಲಿ ಕವಯತ್ರಿಯರು ಅನುಭವಿಸುತ್ತಿರುವ ಸಂಕಟಗಳ ಬಗ್ಗೆ ನಾಲ್ವರು ಕವಯತ್ರಿಯರೂ ಗಮನ ಸೆಳೆದರು. ‘ಸಾಂಸಾರಿಕ ಜಂಜಡದಲ್ಲಿ ಮುಳುಗಿರುವ ಮಹಿಳೆಯರ ಅಭಿವ್ಯಕ್ತಿ ಎಷ್ಟೋ ಸಲ ಪಾತ್ರೆ ತೊಳೆಯುವ ನೀರಿನಲ್ಲಿ ಸೋರಿಹೋಗುತ್ತದೆ’ ಎಂದು ಕಮಲ ಅವರು ಗಮನ ಸೆಳೆದರೆ, ‘ನನ್ನ ಮಟ್ಟಿಗೆ ಕವಿತೆ ಕಟ್ಟುವುದಲ್ಲ, ಹುಟ್ಟುವುದು’ ಎಂದು ನಂದಿನಿ ಹೇಳಿದರು.

ಆದರೆ ಬಳಿಕ ಮಾತನಾಡಿದ ಕವಿ ಸುಬ್ಬು ಹೊಲೆಯಾರ್ ಎತ್ತಿದ ದಲಿತತ್ವದ ಪ್ರಶ್ನೆ ಚರ್ಚೆಯ ದಿಕ್ಕನ್ನು ಬದಲಾಯಿಸಿತು.

‘ತಳಸಮುದಾಯದ ಮಹಿಳೆಯರ ಮೇಲೆ ದೌರ್ಜನ್ಯ ನಡೆದಾಗ ಇತರ ಸಮುದಾಯದ ಲೇಖಕಿಯರು ಏಕೆ ಗಟ್ಟಿಯಾಗಿ ಧ್ವನಿ ಎತ್ತುವುದಿಲ್ಲ? ಎಲ್ಲ ಹೆಣ್ಣುಮಕ್ಕಳ ಸಂವೇದನೆಯೂ ಒಂದೇ ಆಗುವುದಿಲ್ಲವೇಕೆ?’ ಎಂದು ಸುಬ್ಬು ಹೊಲೆಯಾರ್ ಪ್ರಶ್ನೆ ಎತ್ತಿದರು. ದೆಹಲಿಯ ನಿರ್ಭಯಾ ಪ್ರಕರಣ ಮತ್ತು ವಿಜಯಪುರದ ದಾನಮ್ಮ ಅತ್ಯಾಚಾರ ಪ್ರಕರಣದ ಕುರಿತ ಪ್ರತಿಭಟನೆಯಲ್ಲಿನ ತಾರತಮ್ಯವನ್ನು ಅವರು ಉಲ್ಲೇಖಿಸಿದರು. ಈ ಮಾತಿಗೆ ಕವಯತ್ರಿಯರಿಂದ ವಿಭಿನ್ನ ಪ್ರತಿಕ್ರಿಯೆಗಳು ವ್ಯಕ್ತವಾದವು.

‘ದೇಶದಲ್ಲಿ ಎಲ್ಲೇ ಮಹಿಳೆಯ ಮೇಲೆ ಅತ್ಯಾಚಾರ ನಡೆದರೂ ಅದು ನಮ್ಮ ಮೇಲೆಯೇ ನಡೆದ ದೌರ್ಜನ್ಯದಂತೆ ನಡುಕ ಹುಟ್ಟಿಸುತ್ತದೆ. ನಾವೇ ಮರಗಟ್ಟಿ ಹೋಗುವ ಸ್ಥಿತಿ ನಿರ್ಮಾಣವಾಗುತ್ತದೆ. ಬಹುತೇಕ ಲೇಖಕಿಯರು ತಮ್ಮ ಸಾಹಿತ್ಯದಲ್ಲಿ ಇದನ್ನು ಖಂಡಿಸಿದ್ದಾರೆ’ ಎಂದು ಕಮಲ ಹೇಳಿದರೆ, ‘ಮಹಿಳೆಯರನ್ನು ಹೀಗೆ ಜಾತಿ, ವರ್ಗಗಳಲ್ಲಿ ಪ್ರತ್ಯೇಕಿಸಿ ನೋಡುವುದು ಸರಿಯಲ್ಲ. ಮಹಿಳೆಯರ ವಿರುದ್ಧ ದೌರ್ಜನ್ಯ ಎನ್ನುವುದೇ ಮುಖ್ಯವಾಗುತ್ತದೆ’ ಎಂದು ನಂದಿನಿ ಹೆದ್ದುರ್ಗ ಅಭಿಪ್ರಾಯಪಟ್ಟರು.

‘ಇಂತಹ ತಲ್ಲಣಗಳನ್ನು ಅಕ್ಷರ ರೂಪಕ್ಕೆ ಇಳಿಸುವುದು ಬಹಳ ಯಾತನಾಮಯ ಅನುಭವ. ದಲಿತ ಅಂತಲ್ಲ, ಇಲ್ಲಿ ಮಹಿಳೆಯರ ವಿರುದ್ಧ ಪುರುಷ ಸಮಾಜದ ಮನಃಸ್ಥಿತಿಯೇ ನಡುಕ ಹುಟ್ಟಿಸುತ್ತದೆ’ ಎಂದು ಶ್ರೀದೇವಿ ಕೆರೆಮನೆ ವಿವರಿಸಿದರು.

ಸಭಿಕರಾಗಿದ್ದ ಹಿರಿಯ ಕವಯತ್ರಿ ಲಲಿತಾ ಸಿದ್ಧಬಸವಯ್ಯ, ‘ಎಲ್ಲ ಮಹಿಳೆಯರೂ ದಲಿತರೇ. ಆದರೆ ದಲಿತರಾಗಿ ಹುಟ್ಟಿದ ಮಹಿಳೆಯರು ಎರಡು ಪಟ್ಟು ದಲಿತರು’ ಎಂದರು. ‘ಲೇಖಕಿಯರ ವಿರುದ್ಧ ಈ ರೀತಿಯ ಆರೋಪ ಸರಿಯಲ್ಲ. ಬಂಡಾಯ ಮತ್ತು ದಲಿತ ಸಾಹಿತ್ಯ ಚಳವಳಿಯಲ್ಲಿ ಎಲ್ಲ ಲೇಖಕಿಯರೂ ಇಂತಹ ದೌರ್ಜನ್ಯಗಳನ್ನು ಕಟುವಾಗಿ ಖಂಡಿಸಿದ್ದಾರೆ’ ಎಂದು ಗಮನ ಸೆಳೆದರು.

ಮೊದಲು ಮಾತನಾಡಿದ ಶಶಿಕಲಾ ವಸ್ತ್ರದ, ‘ಆರಂಭದಲ್ಲಿ ನಾನೂ ಪ್ರೀತಿ ಪ್ರೇಮದ ಕುರಿತೇ ಕವಿತೆ ಬರೆದೆ. ಬಳಿಕ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಖಂಡಿಸಿ ಬರೆಯುತ್ತಾ ಸ್ತ್ರೀವಾದಿ ಆದೆ. ಕಾವ್ಯದಲ್ಲಿ ಮಾನವೀಯ ಪ್ರೇಮ ಇರಬೇಕು. ಎಲ್ಲ ಕೆಡುಕುಗಳನ್ನೂ ನಿವಾರಿಸಿ ಒಳಿತನ್ನು ಪೋಷಿಸುವ ಶಕ್ತಿ ಸ್ತ್ರೀಕಾವ್ಯಕ್ಕೆ ಇರಬೇಕು’ ಎಂದು ಹೇಳಿದರು.

‘ಕವಿತೆ ಎನ್ನುವುದು ಆ ಕ್ಷಣದ ಸ್ರಾವ. ಲಯ, ಚಡಪಡಿಕೆ ಎಲ್ಲವನ್ನೂ ಹಿಡಿದಿಟ್ಟುಕೊಳ್ಳಬೇಕು. ನಾನು ಬರೆಯುವ ಸಮಯಕ್ಕೆ ಕಾಯುವ ಬದಲು ಬಹಳ ಸಲ ಕವಿತೆಗಳನ್ನು ರೆಕಾರ್ಡ್ ಮಾಡಿಕೊಳ್ಳುತ್ತೇನೆ. ಕಾವ್ಯದ ಗುಂಗು ಮೂಲತಃ ವೈಯಕ್ತಿಕವಾದದ್ದು. ಇಲ್ಲಿ ಬಿರಿಯಾನಿಯ ಪ್ರಸ್ತಾಪ ಬಂದಾಕ್ಷಣ ಅದು ಧಾರ್ಮಿಕವಾಗುವುದಿಲ್ಲ’ ಎಂದು ಆರಿಫ್ ರಾಜಾ ಹೇಳಿದರು.

ಚರ್ಚೆಯಲ್ಲಿ ರವಿಕುಮಾರ್ ಟೆಲೆಕ್ಸ್, ಸಂಧ್ಯಾ ಹೊನಗುಂಟಿಕರ್, ಸಿಂಧುಚಂದ್ರ, ಸುಧಾ ಚಿದಾನಂದಗೌಡ, ನಳಿನಾ ಅವರೂ ಭಾಗವಹಿಸಿದ್ದರು.

ಸುದ್ದಿ 2 ನಿಮಿಷ

‘ಜಲವಿವಾದಗಳಲ್ಲಿ ಸಮರ್ಥ ವಾದ, ಕಾನೂನು ತಂಡ ಬಲಪಡಿಸಲು ಕ್ರಮ’

ಬಾಗಲಕೋಟೆ: ‘ನೆರೆ ರಾಜ್ಯಗಳ ಜೊತೆಗಿನ ಜಲ ವಿವಾದಗಳಲ್ಲಿ ರಾಜ್ಯದ ವಾದ ಸಮರ್ಪಕವಾಗಿ ಮಂಡಿಸಲು ಆಗುವಂತೆ ಕಾನೂನು ತಂಡವನ್ನು ಬಲಪಡಿಸಲಾಗುವುದು’ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನೀರಿನ ವಿವಾದಗಳು ಹಲವು ನ್ಯಾಯಮಂಡಳಿಗಳ ಮುಂದಿವೆ. ಕೆಲವು ನ್ಯಾಯಾಲಯದಲ್ಲಿವೆ. ರಾಜ್ಯಕ್ಕೆ ಹಂಚಿಕೆಯಾದ ನೀರಿನ ಸದ್ಬಳಕೆಗೆ ಕ್ರಿಯಾಯೋಜನೆ ರೂಪಿಸಲು ತಜ್ಞರು, ಕಾನೂನು ಪಂಡಿತರನ್ನು ಒಳಗೊಂಡ ತಂಡವನ್ನು ರಚಿಸಲಾಗುವುದು ಎಂದು ತಿಳಿಸಿದರು.

‘ರಾಜ್ಯ ಪಾಲಿಗೆ ಹಂಚಿಕೆಯಾಗಿರುವುದು ಮಾತ್ರವಲ್ಲ, ಹೆಚ್ಚುವರಿಯಾಗಿ ಪಡೆದುಕೊಳ್ಳಲು ಎಲ್ಲೆಲ್ಲಿ ಅವಕಾಶಗಳಿವೆ ಎಂಬುದನ್ನು ಅಧ್ಯಯನ ಮಾಡಿ ಕಾನೂನಾತ್ಮಕ ಹೋರಾಟದ ಮೂಲಕ ನ್ಯಾಯ ಪಡೆಯಲಾಗುವುದು’ ಎಂದು ಹೇಳಿದರು.

‘ನಮ್ಮ ನೀರು ಬಳಕೆಗೆ ಯಾರ ಅಪ್ಪಣೆಯೂ ಬೇಕಿಲ್ಲ. ಕಾನೂನಾತ್ಮಕವಾಗಿಯೇ ಮೇಕೆದಾಟು ಯೋಜನೆಯನ್ನು ಕುಡಿಯುವ ನೀರು ಪೂರೈಕೆ, ವಿದ್ಯುತ್ ಉತ್ಪಾದನೆಗೆ ಮಾಡಿಯೇ ತೀರುತ್ತೇವೆ. ತಮಿಳುನಾಡಿನ ಅಣ್ಣಾಮಲೈ ಅವರ ಹೋರಾಟ ಅರ್ಥಹೀನ’ ಎಂದರು.

ವಾಲ್ಮೀಕಿ ಸಮಾಜದ ಇನ್ನಿಬ್ಬರಿಗೆ ಸಚಿವ ಸ್ಥಾನ: ಸ್ವಾಮೀಜಿ ಬೇಡಿಕೆ

ಚಿಕ್ಕಬಳ್ಳಾಪುರ: ‘ವಾಲ್ಮೀಕಿ ನಾಯಕರು ರಾಜ್ಯದ ನಾಲ್ಕನೇ ದೊಡ್ಡ ಸಮುದಾಯ. ಸಚಿವ ಸಂಪುಟದಲ್ಲಿ ಸಮುದಾಯದ ಒಬ್ಬರಿಗಷ್ಟೇ ಅವಕಾಶ ನೀಡಲಾಗಿದೆ. ಜನಸಂಖ್ಯೆ ಆಧಾರದಲ್ಲಿ ಇನ್ನೂ ಇಬ್ಬರಿಗೆ ಅವಕಾಶ ನೀಡಬೇಕು’ ಎಂದು ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿ ಆಗ್ರಹಿಸಿದ್ದಾರೆ.

ಭಾನುವಾರ ಮಾತನಾಡಿದ ಅವರು, ‘ಈ ಬಗ್ಗೆ ಬಿಜೆಪಿ ಹೈಕಮಾಂಡ್ ಮತ್ತು ಮುಖ್ಯಮಂತ್ರಿ ಅವರಿಗೆ ಒತ್ತಾಯಿಸುತ್ತೇವೆ. ’ಯಡಿಯೂರಪ್ಪ ಅವರನ್ನೇ ಸಿ.ಎಂ ಸ್ಥಾನದಲ್ಲಿ ಮುಂದುವರಿಸಲು ವೀರಶೈವ ಲಿಂಗಾಯತರು ಆಗ್ರಹಿಸಿದರು. ನಮ್ಮ ದೇಶವನ್ನು ಜಾತ್ಯತೀತ ಎನ್ನಬಹುದು. ಆದರೆ ಇಲ್ಲಿ ಜಾತಿಯೇ ಸತ್ಯ. ಇದನ್ನು ಸಮುದಾಯ ಅರ್ಥ ಮಾಡಿಕೊಳ್ಳಬೇಕು‘ ಎಂದರು.

ವಾಲ್ಮೀಕಿ ಸಮುದಾಯಕ್ಕೆ ಶೇ 7.5ರಷ್ಟು ಮೀಸಲಾತಿ ನೀಡುವ ಬಗ್ಗೆ ಹಿಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಭರವಸೆ ನೀಡಿದ್ದರು. ನನ್ನ ಮೇಲೆ ನಂಬಿಕೆ ಇಡಿ ಎಂದಿದ್ದರು. ಈಗ ಮಾಜಿಯಾಗಿ ಮೊಮ್ಮಕ್ಕಳ ಆಡಿಸುತ್ತಿದ್ದಾರೆ. ಒಟ್ಟಾರೆ, ನಮ್ಮನ್ನು ಮತಬ್ಯಾಂಕ್ ಮಾಡಿಟ್ಟುಕೊಳ್ಳುತ್ತಿದ್ದಾರೆ ಎನ್ನುವುದನ್ನು ಸಮುದಾಯ ಅರ್ಥ ಮಾಡಿಕೊಳ್ಳಬೇಕು’ ಎಂದು ಅಭಿಪ್ರಾಯಪಟ್ಟರು.

‘ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ’ ಚಿತ್ರಕ್ಕೆ ಸ್ಟುಟ್‌ಗಾರ್ಟ್ ಚಿತ್ರೋತ್ಸವದಲ್ಲಿ ಪ್ರಶಸ್ತಿ


ಗಿರೀಶ್ ಕಾಸರವಳ್ಳಿ

ಬೆಂಗಳೂರು: ಗಿರೀಶ್ ಕಾಸರವಳ್ಳಿ ನಿರ್ದೇಶನದ ‘ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ’ ಚಿತ್ರವು ಜರ್ಮನಿಯ ಸ್ಟುಟ್‌ಗಾರ್ಟ್ ಚಿತ್ರೋತ್ಸವದಲ್ಲಿ ಶ್ರೇಷ್ಠ ನಿರ್ದೇಶಕ ಪ್ರಶಸ್ತಿಗೆ (ಡೈರೆಕ್ಟರ್ಸ್ ವಿಷನ್ ಅವಾರ್ಡ್) ಭಾಜನವಾಗಿದೆ.

ನಿರ್ಮಾಪಕ ಎಸ್.ವಿ.ಶಿವಕುಮಾರ್ ಅವರು ಸಂಗಮ ಫಿಲಂಸ್ ಲಾಂಛನದಲ್ಲಿ ನಿರ್ಮಿಸಿರುವ ಈ ಚಿತ್ರವು ಸಾಹಿತಿ ಜಯಂತ ಕಾಯ್ಕಿಣಿ ಅವರ ‘ಹಾಲಿನ ಮೀಸೆ’ ಕಥೆಯನ್ನು ಆಧರಿಸಿದೆ. ಕಥೆಯ ಪಾತ್ರವೊಂದನ್ನು ಬೆಳೆಸಿ ಸಮಕಾಲೀನ ಸಾಮಾಜಿಕ ಜ್ವಲಂತ ದ್ವಂದ್ವವನ್ನು ಅಳವಡಿಸಿಕೊಳ್ಳಲಾಗಿದೆ. ಸುಖವನ್ನು ಅರಸುತ್ತಾ ಹೋಗುವ ಈ ಕಾಲದ ಪಯಣ ಮನಃಶಾಂತಿಗೆ ಎರವಾಗುತ್ತಿದೆಯೇ ಎನ್ನುವ ದಾಸರ ಪದದಲ್ಲಿ ವ್ಯಕ್ತವಾಗುವ ಆತಂಕವೂ ಚಿತ್ರದ ಸತ್ವವಾಗಿದೆ.

ಹಳ್ಳಿಯ ವಾತಾವರಣ ಬೆಳವಣಿಗೆಗೆ ತೊಡಕಾಗಿದೆ ಎಂದು ಭಾವಿಸುವ ನಾಗರಾಜ ಸ್ಥಳಾಂತರದ ಕನಸು ಕಾಣುತ್ತಿರುತ್ತಾನೆ. ದೊಡ್ಡವನಾಗಿ ನಗರ ಸೇರಿ ಗೃಹಸ್ಥನಾಗಿ, ಜೀವನದಲ್ಲಿ ಯಶಸ್ವಿಯಾಗುತ್ತಾ ಹೋದಂತೆ ಭವ ಜೀವನದ ಆಕರ್ಷಣೆ ಅವನನ್ನು ಬೇರೆಯೇ ವ್ಯಕ್ತಿಯನ್ನಾಗಿ ರೂಪಿಸುತ್ತದೆ. ಬಾಲ್ಯದಲ್ಲಿ ಅನುಭವಿಸಿದ ಅವಮಾನ, ನೋವು ಅವನ ಮನಸ್ಸು ಹದಗೊಳಿಸಿತೇ? ಅಸೂಕ್ಷ್ಮ ಮಾಡಿತೇ? ಸುಖ ಅರಸಿ ಹೋಗುವ ಪಯಣ ಮನಶಾಂತಿಗೆ ಎರವಾಗುತ್ತಿದೆಯೇ ಎಂಬುದನ್ನು ಚಿತ್ರ ತೆರೆದಿಡಲಿದೆ.

ಚಿತ್ರದಲ್ಲಿನ ಕರಾವಳಿಯ ಬದುಕಿನ ಭಾಗವನ್ನು ಉಡುಪಿಯ ಸುತ್ತಲಿನ ಪರಿಸರದಲ್ಲೂ, ನಗರಜೀವನದ ದೃಶ್ಯಗಳನ್ನು ಬೆಂಗಳೂರಿನಲ್ಲೂ ಚಿತ್ರೀಕರಿಸಲಾಗಿದೆ. ಕೊರೊನಾ ನಿಯಂತ್ರಣಕ್ಕೆ ಬಂದ ನಂತರ ಚಿತ್ರ ಬಿಡುಗಡೆಗೆ ಚಿತ್ರತಂಡ ನಿರ್ಧರಿಸಿದೆ. ತಾರಾಗಣದಲ್ಲಿ ದೃಶಾ ಕೊಡಗು, ಆರಾಧ್ಯಾ, ಪ್ರವರ್ಥ ರಾಜು ಮತ್ತಿತರಿದ್ದಾರೆ.

ಅಸಮಾಧಾನ ವ್ಯಕ್ತಪಡಿಸಿದ ತೋಟಗಾರಿಕೆ ಸಚಿವ ಮುನಿರತ್ನ

‘ತ್ಯಾಗ’ದ ಕತೆಯನ್ನೇ ಎಷ್ಟು ದಿನ ಹೇಳ್ತೀರಿ?

ಪ್ರಜಾವಾಣಿ ವಾರ್ತೆ

ತುಮಕೂರು: ‘ತ್ಯಾಗಮಾಡಿ ಬಂದಿದ್ದೇವೆ. ನಮ್ಮಿಂದಲೇ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಿದೆ’ ಎಂಬ ವಿಚಾರವನ್ನೇ ಎಷ್ಟು ದಿನ ಕಾಲ ಹೇಳಿಕೊಂಡು ಓಡಾಡುತ್ತೀರಿ?’ ಎಂದು ತೋಟಗಾರಿಕೆ ಸಚಿವ ಮುನಿರತ್ನ ಅಸಮಾಧಾನ ವ್ಯಕ್ತಪಡಿಸಿದರು.

ತಮ್ಮ ಜತೆಯಲ್ಲಿ ಪಕ್ಷ ತೊರೆದು ಬಂದು ಬಿಜೆಪಿ ಸೇರಿದವರು ಸಚಿವರಾದ ನಂತರ ಇಂತಹುದೇ ಖಾತೆ ಕೊಡಬೇಕು ಎಂದು ಕ್ಯಾತೆ ತೆಗೆದಿರುವುದನ್ನು ವಿರೋಧಿಸಿದರು.

ಸಿದ್ಧಗಂಗಾ ಮಠಕ್ಕೆ ಭಾನುವಾರ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ‘ಆಗ ತ್ಯಾಗ ಮಾಡಿದ್ದೇವೆ. ಈಗ ದೊಡ್ಡ ಖಾತೆಯೇ ಬೇಕು ಎಂದು ಕೇಳುವುದು ತಪ್ಪು. ಬಿಜೆಪಿಗೆ ನಮ್ಮ ಕೊಡುಗೆ ಏನೂ ಇಲ್ಲ. ನಾವಿದ್ದ ಪಕ್ಷಕ್ಕೆ ರಾಜೀನಾಮೆ ನೀಡಿ ಬಂದಿದ್ದೇವೆ. ಶಾಸಕರನ್ನು ಮಾಡಿ, ಈಗ ಸಚಿವ ಸ್ಥಾನ ಕೊಟ್ಟಿದ್ದಾರೆ. ದೊಡ್ಡ ಖಾತೆ ಕೇಳುವುದು ಸರಿಯಲ್ಲ’ ಎಂದರು.

ಮುನಿರತ್ನ

‘ಮೊದಲು ಪಕ್ಷಕ್ಕೆ ಕೆಲಸ ಮಾಡಬೇಕು. ನಾನು ಎರಡು ವರ್ಷ ಏನೂ ಇಲ್ಲದೆ ಸುಮ್ಮನೆ ಪಕ್ಷದ ಕೆಲಸ ಮಾಡಿಕೊಂಡಿದ್ದೆ. ಪಕ್ಷ ಈಗ ಗುರುತಿಸಿದೆ. ತಾಳ್ಮೆಯಿಂದ ಇರಬೇಕು. ಎಲ್ಲಾ ಇವತ್ತೇ ಆಗಬೇಕು ಎಂದರೆ ಹೇಗೆ? ಇವತ್ತು ಏನು ಸಿಗುತ್ತದೆ ಅದನ್ನೆಲ್ಲಾ ಅನುಭವಿಸಿ, ಮತ್ತೆ ವಾಪಸು ಹೋಗಬೇಕೆಂಬ ಉದ್ದೇಶವಿದೆಯೆ?’ ಎಂದು ಕುಟುಕಿದರು.

ಬಿಜೆಪಿಯ 105 ಶಾಸಕರು ಇಲ್ಲದಿದ್ದರೆ ನಾವು ಮಂತ್ರಿಗಳಾಗುತ್ತಿರಲಿಲ್ಲ. ಪಕ್ಷ ನಮಗೆ ಏನು ಅನ್ಯಾಯ ಮಾಡಿದೆ. ಮೊದಲು ಪಕ್ಷದ ಕೆಲಸ ಮಾಡಿ. ನಂತರ ಅಧಿಕಾರ ಬರುತ್ತದೆ ಎಂದು ಸಲಹೆ ಮಾಡಿದರು.

ಸಂಪುಟದಿಂದ ಕೈಬಿಟ್ಟದ್ದಕ್ಕೆ ಬೇಸರವಿಲ್ಲ, ಪಕ್ಷ ಕಟ್ಟುತ್ತೇನೆ: ಸವದಿ

ಅಥಣಿ: ‘2023ರಲ್ಲಿ ಪಕ್ಷ ನನಗೆ ಟಿಕೆಟ್ ಕೊಡಲಿ ಅಥವಾ ಬಿಡಲಿ, ನನ್ನ ಮತ ಬಿಜೆಪಿಗೆ. ಸಚಿವ ಸಂಪುಟದಿಂದ ಕೈಬಿಟ್ಟದ್ದಕ್ಕೆ ನನಗೆ ವರಿಷ್ಠರ ಮೇಲೆ ಬೇಸರವಿಲ್ಲ, ಅಸಮಾಧಾನ ಇಲ್ಲ’ ಎಂದು ವಿಧಾನಪರಿಷತ್ ಸದಸ್ಯ ಲಕ್ಷ್ಮಣ ಸವದಿ ಹೇಳಿದರು.

ಭಾನುವಾರ ತಮ್ಮ ನಿವಾಸದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ‘ಬಿಸಿಲಿಗೆ ಒಣಗುವ, ಮಳೆಗೆ ಚಿಗುರುವ ವ್ಯಕ್ತಿ ನಾನಲ್ಲ. ಪಕ್ಷ ಸಂಘಟನೆಯೇ ನನ್ನ ಗುರಿ’ ಎಂದರು.

‘ಯಡಿಯೂರಪ್ಪನವರು ಮೂರು ವರ್ಷ ಡಿಸಿಎಂ ಆಗಿ ಮುಂದುವರಿಸಲಾಗುವುದು ಎಂದಿದ್ದರು. ಈಗ ರಾಜಕೀಯ ಚಿತ್ರಣ ಬದಲಾಗಿದೆ. ಆತ್ಮೀಯ ಸ್ನೇಹಿತ ಬೊಮ್ಮಾಯಿ ಸಿ.ಎಂ ಆಗಿದ್ದು, ಸಂತೋಷವಾಗಿದೆ’ ಎಂದರು.

‘ರಾಷ್ಟ್ರೀಯ ನಾಯಕರು ಎಲ್ಲವನ್ನೂ ನೋಡುತ್ತಿದ್ದಾರೆ. ಲಾಬಿ ಮಾಡಿದವರಿಗೆ ಮಂತ್ರಿಸ್ಥಾನ ಸಿಗುತ್ತದೆ ಎಂಬುದು ಸುಳ್ಳು, ಆ ಪದ್ಧತಿ ಬಿಜೆಪಿಯಲ್ಲಿಲ್ಲ. ಅದೆಲ್ಲ ಇರುವುದು ಕಾಂಗ್ರೆಸ್ ಪಕ್ಷದಲ್ಲಿ’ ಎಂದರು.

‘ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ನನ್ನ ಆಯ್ಕೆ ಬಗ್ಗೆ ಗೊತ್ತಿಲ್ಲ. ಇದು ಮಾಧ್ಯಮಗಳ ಮಾತು. ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಒಳ್ಳೆಯ ಸಂಘಟನಾಕಾರ. ಅವರ ನೇತೃತ್ವದಲ್ಲೇ ಚುನಾವಣೆ ಎದುರಿಸುತ್ತೇವೆ’ ಎಂದರು.

ಕರ್ನಾಟಕ ಸರ್ಕಾರ
GOVERNMENT OF KARNATAKA
ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ
VIJAYANAGAR INSTITUTE OF MEDICAL SCIENCES, BALLARI
Cantonment Area, STD- 08392, Director:- 242 387, PA:- 235 201, Fax: 08392-235 202, Principal:- 235 204,
e-mail : directorvimsBallari@gmail.com website: www.vimsBallari.org.in
No. VIMS/SUP/TEND/59/2021–22, ದಿನಾಂಕ: 07.08.2021

ಅಲ್ಪಾವಧಿ ಇ-ಟೆಂಡರ್ ಅಧಿಸೂಚನೆ

ವಿಮ್ಸ್ ಸಂಸ್ಥೆಯ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗೆ ಸರ್ಜಿಕಲ್ ಡಿಸ್ಪೊಸಬಲ್ಸ್ ಗಳನ್ನು ಕೋವಿಡ್–19 ಸಲುವಾಗಿ ಸರಬರಾಜು ಮಾಡಲು ಅರ್ಹ ಟೆಂಡರುದಾರರಿಂದ ಕೆ.ಟಿ.ಪಿ.ಪಿ ಅಧಿನಿಯಮ–1999 ಮತ್ತು ನಿಯಮ–2000 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ–ಪೋರ್ಟಲ್ ಮೂಲಕ ಈ ಕೆಳಗಿನಂತೆ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ ಹಾಗು ಹೆಚ್ಚಿನ ಮಾಹಿತಿಯನ್ನು ಕಾರ್ಯಾಲಯದ ಕಛೇರಿ ಅವಧಿಯಲ್ಲಿ ಪಡೆಯಲು ಮತ್ತು ವೆಬ್‌ಸೈಟ್: https://eproc.karnataka.gov.in ಮೂಲಕ ಪಡೆಯಲು ಕೋರಿದೆ.

01	ಟೆಂಡರ್ ಫಾರಂ ಅನ್ನು ವೆಬ್‌ಸೈಟ್ – http// eproc.karnataka.gov.in ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭದ ದಿನಾಂಕ	07.08.2021
02	ಟೆಂಡರಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	10.08.2021 Up to 5.00 PM
03	ಪ್ರಿ ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ	11.08.2021 @ 11.30 AM in the Chamber of Director, VIMS, Ballari.
04	ಸ್ಯಾಂಪಲ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ	On or before 16.08.2021. up to 4.00 PM to the Medical Superintendent, Medical College Hospital, VIMS, Ballari.
05	ಟೆಂಡರನ್ನು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	16.08.2021 up to 5.00 PM
06	ಟೆಂಡರಿನ ಟೆಕ್ನೋ–ಕಮರ್ಷಿಯಲ್ ಬಿಡ್ ಅನ್ನು ತೆರೆಯುವ ದಿನಾಂಕ ಮತ್ತು ಸಮಯ (ಮೊದಲನೇ ಬಿಡ್)	17.08.2021 @ 5.15 AM
07	ಸದರಿ ಟೆಂಡರಿನ ಅಂದಾಜು ಮೊತ್ತ	163.97 Lakhs
08	EMD	Submit the EMD Declaration as per the Annexure-II

ಸಹಿ/– ನಿರ್ದೇಶಕರು, ವಿಮ್ಸ್, ಬಳ್ಳಾರಿ.

ಸೆರೆ ಹಿಡಿದ ಕೋತಿಗಳಿಗೆ ಆಹಾರ ನೀಡದ ಆರೋಪ

ಚಾಮರಾಜನಗರ: ತಾಲ್ಲೂಕಿನ ಕಾಗಲವಾಡಿ ಗ್ರಾಮದಲ್ಲಿ ಉಪಟಳ ಕೊಡುತ್ತಿದ್ದ ಕೋತಿಗಳನ್ನು ಸೆರೆ ಹಿಡಿದು ಆಹಾರ ನೀಡದೆ ಎರಡು ಬೋನುಗಳಲ್ಲಿ ಕೂಡಿ ಹಾಕಲಾಗಿದೆ ಎಂಬ ಆರೋಪ ಕೇಳಿ ಬಂದಿದೆ.

ಹೀಗಾಗಿ, ಅರಣ್ಯ ಇಲಾಖೆ ಹಾಗೂ ಪೊಲೀಸ್ ಸಿಬ್ಬಂದಿ ಶನಿವಾರ ರಾತ್ರಿ ಗ್ರಾಮಕ್ಕೆ ಭೇಟಿ ನೀಡಿ ಕೋತಿಗಳನ್ನು ಕಾಡಿಗೆ ಬಿಟ್ಟಿರುವ ಪ್ರಸಂಗ ನಡೆದಿದೆ. ಗ್ರಾಮ ಪಂಚಾಯಿತಿ ವತಿಯಿಂದ 50ಕ್ಕೂ ಹೆಚ್ಚು ಕೋತಿಗಳನ್ನು ಸೆರೆ ಹಿಡಿಯಲಾಗಿತ್ತು.

ಕೋತಿಗಳನ್ನು ಬೋನಿನಲ್ಲಿ ಕೂಡಿ ಹಾಕಿರುವುದನ್ನು ವಿಡಿಯೊ ಮಾಡಿದ್ದ ಗ್ರಾಮದ ಯುವಕರೊಬ್ಬರು, ‘ಮೂರು ದಿನಗಳಿಂದ ಇವುಗಳಿಗೆ ಆಹಾರ ನೀಡಿಲ್ಲ’ ಎಂದು ಆರೋಪಿಸಿದ್ದರು. ಈ ವಿಡಿಯೊ ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಹರಿದಾಡಿತ್ತು.

ಶಿವಮೊಗ್ಗದಲ್ಲಿ ತಗ್ಗಿದ ಮಳೆ

ಶಿವಮೊಗ್ಗ: ಜಿಲ್ಲೆಯಲ್ಲಿ ನಾಲ್ಕು ದಿನಗಳಿಂದ ಮಳೆ ಪ್ರಮಾಣ ತಗ್ಗಿದ್ದು, ಭಾನುವಾರ ಬಿಡುವು ನೀಡಿದೆ. ಹಿನ್ನೀರು ಭಾಗದಲ್ಲಿ ಮಳೆ ಪ್ರಮಾಣ ತಗ್ಗಿರುವ ಕಾರಣ ಜಲಾಶಯಗಳ ಒಳಹರಿವು ಕಡಿಮೆಯಾಗಿದೆ

ವಿದ್ಯಾರ್ಥಿನಿಗೆ ಲೈಂಗಿಕ ದೌರ್ಜನ್ಯ: ಶಿಕ್ಷಕ ಬಂಧನ

ಪ್ರಜಾವಾಣಿ ವಾರ್ತೆ

ಸುಬ್ರಹ್ಮಣ್ಯ: ವಿದ್ಯಾರ್ಥಿನಿ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಲ್ಲದೆ, ಬೆದರಿಕೆ ಒಡ್ಡಿದ ಆರೋಪದಡಿ ಇಲ್ಲಿನ ಪ್ರೌಢಶಾಲಾ ಶಿಕ್ಷಕರೊಬ್ಬರನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ. ಆರೋಪಿ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ರಾಯಚೂರಿನ ಗುರುರಾಜ್ ಬಂಧಿತ ಶಿಕ್ಷಕ. ಇವರು ಪ್ರಾಜೆಕ್ಟ್ ವರ್ಕ್ ನೆಪದಲ್ಲಿ ವಿದ್ಯಾರ್ಥಿನಿಯನ್ನು ಮನೆಗೆ ಕರೆಯಿಸಿಕೊಳ್ಳುತ್ತಿದ್ದರು. ಪುಸಲಾಯಿಸಿ ವಿವಸ್ತ್ರಗೊಳಿಸಿ ಮೊಬೈಲ್ ಮೂಲಕ ಫೋಟೋ ತೆಗೆಯುತ್ತಿದ್ದರು. ಅದನ್ನು ತೋರಿಸಿ ಮನೆಯಿಂದ ಹಣ ತರುವಂತೆ ಬೆದರಿಕೆ ಹಾಕುತ್ತಿದ್ದರು. ಈ ಶಿಕ್ಷಕರಿಗೆ ಪತ್ನಿಯೂ ಸಾಥ್ ನೀಡುತ್ತಿದ್ದರು ಎಂದು ವಿದ್ಯಾರ್ಥಿನಿಯ ತಾಯಿ ಈ ಕುರಿತು ಠಾಣೆಗೆ ನೀಡಿದ ದೂರಿನಲ್ಲಿ ಆರೋಪಿಸಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	119.50	25,308	5,458
ಹಾರಂಗಿ	2,859	2,854.34	7,076	12,704
ಕಬಿನಿ	2284.00	2,282.13	13,000	9,000
ಹೇಮಾವತಿ	2,922	2,920.21	10,591	12,100
ಲಿಂಗನಮಕ್ಕಿ	1,819	1,811.30	22,635	-
ಸೂಪಾ (ಮೀ)	564	554.20	14,071	3,450
ಮಾಣಿ	594	584.34	4,800	-
ತುಂಗಭದ್ರಾ	1,633	1,631.90	60,780	62,519
ಮಲಪ್ರಭಾ	2079.5	2,076.60	4,450	1,394
ಘಟಪ್ರಭಾ	2175	2,172.46	9,917	7,703
ಭದ್ರಾ	186	184.5	25,217	28,562
ಆಲಮಟ್ಟಿ (ಮೀ)	519.6	519.24	95,436	72,601
ನಾರಾಯಣಪುರ (ಮೀ)	492.25	491.85	80,000	81,010

* ನೆಲಮಟ್ಟದಿಂದ

ಒಬಿಸಿ ಗುರುತಿಸಲು ರಾಜ್ಯಗಳಿಗೆ ಅಧಿಕಾರ ನೀಡಲು ಕ್ರಮ

ಸಂವಿಧಾನ ತಿದ್ದುಪಡಿ ಮಸೂದೆ ಮಂಡನೆ ಇಂದು

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂಗಾರು ಅಧಿವೇಶನವು ನಾಲ್ಕನೇ ಹಾಗೂ ಕೊನೆಯ ವಾರಕ್ಕೆ ಕಾಲಿರಿಸಿದ್ದು, ಆಡಳಿತ ಮತ್ತು ಪ್ರತಿಪಕ್ಷಗಳ ನಡುವಿನ ಕಂದಕ ಇನ್ನಷ್ಟು ಹೆಚ್ಚಾಗಿದೆ. ಈ ನಡುವೆ, ಇತರ ಹಿಂದುಳಿದ ವರ್ಗಗಳನ್ನು (ಒಬಿಸಿ) ಗುರುತಿಸುವ ರಾಜ್ಯಗಳ ಅಧಿಕಾರವನ್ನು ಮರಳಿಕೊಡುವ ಮಹತ್ವದ ಸಂವಿಧಾನ ತಿದ್ದುಪಡಿ ಮಸೂದೆ ಮಂಡಿಸಲು ಸರ್ಕಾರ ಸಜ್ಜಾಗಿದೆ.

ಸಂವಿಧಾನದ 127ನೇ ತಿದ್ದುಪಡಿ ಮಸೂದೆಯು ಸೋಮವಾರ ಲೋಕಸಭೆಯಲ್ಲಿ ಮಂಡನೆಯಾಗಲಿದ್ದು, ಪೆಗಾಸಸ್ ಪ್ರಕರಣದ ಬಗ್ಗೆ ಚರ್ಚೆಗೆ ಒತ್ತಾಯಿಸಿ ಪಟ್ಟುಹಿಡಿದು ನಡೆಸುತ್ತಿರುವ ಪ್ರತಿಭಟನೆಯನ್ನು ಪ್ರತಿಪಕ್ಷಗಳು ನಿಲ್ಲಿಸುವ ಸಾಧ್ಯತೆಯಿದೆ. ಕಲಾಪಕ್ಕೆ ಅಡ್ಡಿಪಡಿಸಿದಲ್ಲಿ, ಒಬಿಸಿ ವರ್ಗ ಗುರುತಿಸುವ ಅಧಿಕಾರ ರಾಜ್ಯಗಳಿಗೆ ಕೊಡಲು ಪ್ರತಿಪಕ್ಷಗಳು ಅಡ್ಡಿಯಾದವು ಎಂದು ಸರ್ಕಾರ ಹೇಳಬಹುದು. ಇದು ಉತ್ತರ ಪ್ರದೇಶ ಮತ್ತು ಪಂಜಾಬ್ ವಿಧಾನಸಭೆಗೆ ಕೆಲವೇ ತಿಂಗಳಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಪರಿಣಾಮ ಬೀರಬಹುದು ಎಂಬ ಕಳವಳ ವಿರೋಧ ಪಕ್ಷಗಳಲ್ಲಿ ಇದೆ.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ಲೋಕಸಭೆ ಮತ್ತು ರಾಜ್ಯಸಭೆಯ ಪ್ರತಿಪಕ್ಷಗಳ ಸದನ ನಾಯಕರು ಸೋಮವಾರ ಬೆಳಿಗ್ಗೆ 10 ಗಂಟೆಗೆ ಸಭೆ ಸೇರಲಿದ್ದಾರೆ.

‘ಇಂದಿರಾ ಕ್ಯಾಂಟೀನ್ ಹೆಸರು ಬದಲಿಸಿದರೆ ಹೋರಾಟ’

ಗೋಕಾಕ: ‘ಬಿಜೆಪಿ ನಾಯಕರು ಇಂದಿರಾ ಕ್ಯಾಂಟೀನ್ ಹೆಸರು ಬದಲಾವಣೆ ಬಗ್ಗೆ ಮಾತನಾಡುತ್ತಿದ್ದು, ಹೆಸರು ಬದಲಿಸಿದರೆ ಕಾಂಗ್ರೆಸ್ ಪಕ್ಷದಿಂದ ಉಗ್ರವಾಗಿ ಪ್ರತಿಭಟಿಸಲಿದೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಎಚ್ಚರಿಸಿದರು.

ಇಲ್ಲಿ ಭಾನುವಾರ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ‘ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರು, ಬಡವರಿಗಾಗಿ ಕೆಲಸ ಮಾಡಿದವರು. ಹಿಂದುಳಿದ ವರ್ಗದ ಜನರಿಗಾಗಿಯೇ ಜೀವನ ಮುಡುಪಾಗಿಟ್ಟವರು. ಆ ಉದ್ದೇಶದಿಂದಲೇ ‘ಇಂದಿರಾ ಕ್ಯಾಂಟೀನ್’ ಎಂದು ಹೆಸರಿಡಲಾಗಿದೆ. ಅದರ ಹೆಸರು ಬದಲಿಸುವ ಬಿಜೆಪಿ ನಾಯಕರ ಯೋಚನೆ ಸರಿಯಲ್ಲ’ ಎಂದರು.

ಶಿಕ್ಷಣದ ದಿಕ್ಕು-ದೆಸೆ

ಬೆಂಗಳೂರು: ‘ಬೇಕಿದೆ ಮೌಲ್ಯಮಾಪನ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಭಾನುವಾರ (ಆ.8) ಪ್ರಕಟವಾದ ‘ಒಳನೋಟ’ ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಮೊಬೈಲ್ ಬಂತು, ಪುಸ್ತಕ ಮರೆಯಾಯ್ತು

ಆನ್‌ಲೈನ್ ಶಿಕ್ಷಣದಿಂದ ವಿದ್ಯಾರ್ಥಿಗಳಿಗೆ ಪುಸ್ತಕಗಳಿಗಿಂತ ಮೊಬೈಲ್‌ನಲ್ಲಿ ಗೇಮ್‌ಗಳ ಹಾವಳಿ ತುಂಬಾ ಪರಿಣಾಮ ಬೀರಿವೆ. ಇತ್ತ ಕೂಲಿಕಾರ ಕುಟುಂಬಗಳ ಮಕ್ಕಳಿಗೆ ಆನ್‌ಲೈನ್ ಶಿಕ್ಷಣ ನುಂಗಲಾರದ ತುತ್ತು. ಸಾಲ ಮಾಡಿ ಮೊಬೈಲ್ ಖರೀದಿಸಿದರೂ ಇಂಟರ್‌ನೆಟ್ ಸಂಪರ್ಕಕ್ಕಾಗಿ ಪರದಾಟ ತಪ್ಪಲಿಲ್ಲ. ಒಟ್ಟಾರೆ ಆನ್‌ಲೈನ್ ಶಿಕ್ಷಣದ ಹೆಸರಲ್ಲಿ ಮೊಬೈಲ್‌ಗಳು ಲಗ್ಗೆ ಇಟ್ಟು, ಪುಸ್ತಕಗಳು ಮರೆಯಾಗಿವೆ.

ಹನುಮಂತ ಕಂಚಿಕೇರಿ, ಹಂಪಿ

ಆನ್‌ಲೈನ್ ಕಲಿಕೆ ಮಾದರಿಯಲ್ಲ

ಆನ್‌ಲೈನ್ ಶಿಕ್ಷಣದಲ್ಲಿ ಕಲಿಕೆಗಿಂತ ಸಮಯ ಹಾಳಾಗುತ್ತಿರುವುದೇ ಹೆಚ್ಚು. ಚಿಕ್ಕ ಮಕ್ಕಳಿಗೆ ಆನ್‌ಲೈನ್ ಶಿಕ್ಷಣದ ಅರಿವೇ ಇರುವುದಿಲ್ಲ. ಅವಿದ್ಯಾವಂತ ಪೋಷಕರೂ ಇದರ ಬಗ್ಗೆ ಹೆಚ್ಚಿನ ಜ್ಞಾನ ಹೊಂದಿರುವುದಿಲ್ಲ. ಈ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳು ಕಲಿತ ಶಿಕ್ಷಣ ಸಮಂಜಸವಾಗಿರುವುದಿಲ್ಲ. ಮಕ್ಕಳು ತರಗತಿಯಲ್ಲೇ ನಿಜವಾದ ಶಿಕ್ಷಣವನ್ನು ಪಡೆಯುತ್ತಾರೆ.

ಅಶೋಕ್, ನೆಲಮಂಗಲ, ಬೆಂಗಳೂರು ಗ್ರಾಮಾಂತರ

ಆನ್‌ಲೈನ್ ಶಿಕ್ಷಣ ಸುಲಭಗೊಳಿಸಿ

ಲಾಕ್‌ಡೌನ್‌ನಿಂದಾಗಿ ಮಕ್ಕಳ ಕಲಿಕಾ ವೇಗ ಕ್ಷೀಣಿಸಿದೆ. ಉಳ್ಳವರಿಗೆ ಮೊಬೈಲ್ ಶಿಕ್ಷಣ ಸಿಕ್ಕಿತು. ಇಲ್ಲದವರು ಶಿಕ್ಷಣದಿಂದಲೇ ದೂರವಾಗಿದ್ದಾರೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಆನ್‌ಲೈನ್ ಶಿಕ್ಷಣ ಸುಲಭದ ಮಾತಲ್ಲ. ಅವರಿಗೆ ಆನ್‌ಲೈನ್ ಶಿಕ್ಷಣವನ್ನು ಶಿಕ್ಷಕರೇ ಹತ್ತಿರಕ್ಕೆ ತಲುಪಿಸಬೇಕಿದೆ.

ಎಂ.ಕೆ.ಶಿವರಾಜ್, ಗದಗ

ಪಾಠ ಪುನರಾವರ್ತನೆ ಆಗಲಿ

ಪರೀಕ್ಷೆ ಮತ್ತು ಮೌಲ್ಯಮಾಪನವಿಲ್ಲದ ವಿದ್ಯಾಭ್ಯಾಸ ವಿದ್ಯಾರ್ಥಿಗಳನ್ನು ಕಲಿಕೆಯ ಕಡೆಗೆ ಆಸಕ್ತಿ ಇಲ್ಲದಂತೆ ಮಾಡುತ್ತದೆ. ವಿದ್ಯಾರ್ಥಿಗಳ ಮೌಲ್ಯಮಾಪನಕ್ಕೆ ವಿಶೇಷ ಆದ್ಯತೆ ನೀಡಬೇಕು. ವಿದ್ಯಾರ್ಥಿಗಳಿಗೆ ಹಿಂದಿನ ತರಗತಿಗಳ ಪಾಠಗಳನ್ನೇ ಪುನರಾವರ್ತಿಸುವುದು ಅಗತ್ಯ. ನಂತರ ಈ ಸಾಲಿನ ಪಠ್ಯಕ್ರಮ ಬೋಧಿಸುವುದು ಸರಿಯಾದ ಕ್ರಮ.

ನೇತ್ರಾವತಿ, ಬೆಂಗಳೂರು

ಕಲಿಕೆ ಮೌಲ್ಯಮಾಪನ ಅಗತ್ಯ



ಆನ್‌ಲೈನ್ ಶಿಕ್ಷಣದಿಂದ ಮಕ್ಕಳ ಕಲಿಕೆ ಎಷ್ಟರ ಮಟ್ಟಿಗೆ ಪ್ರಗತಿಯಲ್ಲಿದೆ ಎಂಬ ಮೌಲ್ಯಮಾಪನ ಅಗತ್ಯ. ಮುಂದಿನ ತರಗತಿಗಳಲ್ಲಿ ಶಿಕ್ಷಣ ಮುಂದುವರಿಸಲು ವಿದ್ಯಾರ್ಥಿಗಳು ಸಜ್ಜಾಗಿದ್ದಾರೆಯೇ? ಎಂಬುದನ್ನು ಪತ್ತೆ ಹಚ್ಚಬೇಕು. ಈ ವಿಚಾರದಲ್ಲಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳತ್ತ ಹೆಚ್ಚಿನ ಗಮನ ಹರಿಸಬೇಕು. ಎಷ್ಟೋ ವಿದ್ಯಾರ್ಥಿಗಳು ಆನ್‌ಲೈನ್ ಶಿಕ್ಷಣಕ್ಕೆ ಒಗ್ಗಿಕೊಂಡಿಲ್ಲ.

ಗುರುಮೂರ್ತಿ, ಚಿತ್ರದುರ್ಗ

ಭೌತಿಕ ತರಗತಿಗಳು ಮುಖ್ಯ

ಕೋವಿಡ್‌ನಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯ ಅತಂತ್ರ ಸ್ಥಿತಿಯಲ್ಲಿದೆ. ಶಿಕ್ಷಣದ ಮಹತ್ವ ತಿಳಿಯಬೇಕಾದರೆ ಭೌತಿಕ ತರಗತಿಗಳು ಬಹುಮುಖ್ಯ ಪಾತ್ರವಹಿಸುತ್ತವೆ. ರಾಜ್ಯದಲ್ಲಿ ಇಂಟರ್‌ನೆಟ್ ಸಮಸ್ಯೆಯಿಂದ ಬಹುತೇಕ ವಿದ್ಯಾರ್ಥಿಗಳು ಆನ್‌ಲೈನ್ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಆನ್‌ಲೈನ್ ಬೋಧನೆಯೂ ವಿದ್ಯಾರ್ಥಿಗಳ ಮೇಲೆ ನೇರ ಪರಿಣಾಮ ಬೀರುವುದಿಲ್ಲ.

ವಿಜಯ ಕುಮಾರ್, ವಿಜಯನಗರ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ನೋಂದಾಯಿತ ಟೆಂಡರುದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ(ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
		ಮುಖ್ಯ ಅಭಿಯಂತರರ ಕಚೇರಿ(ತ್ಯಾ.ನೀ.ನಿ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.			
1	ತ್ಯಾ.ನೀ.ನಿ– ಚಲ್ಲಘಟ್ಟ ವ್ಯಾಲಿ	ಬೆಂಜಮಂ/ಕಾನಿಅ(ತ್ಯಾ.ನೀ.ನಿ)–(ಸಿ.ವಿ)/ಪಿಬಿ/593/2021–22 ದಿನಾಂಕ: 02.08.2021	ರೂ. 48.14 ಲಕ್ಷಗಳು / ರೂ. 97,000/–	16.08.2021ರ ಸಂಜೆ 04:00 ಗಂಟೆಯವರೆಗೆ	17.08.2021ರ ಸಂಜೆ 4:05 ಗಂಟೆಗೆ
2		ಬೆಂಜಮಂ/ಕಾನಿಅ(ತ್ಯಾ.ನೀ.ನಿ)–(ಸಿ.ವಿ)/ಪಿಬಿ/621/2021–22 ದಿನಾಂಕ: 04.08.2021	ರೂ. 25.66 ಲಕ್ಷಗಳು / ರೂ. 52,000/–		17.08.2021ರ ಸಂಜೆ 4:15 ಗಂಟೆಗೆ
3		ಬೆಂಜಮಂ/ಕಾನಿಅ(ತ್ಯಾ.ನೀ.ನಿ)–(ಸಿ.ವಿ)/ಪಿಬಿ/623/2021–22 ದಿನಾಂಕ: 05.08.2021	ರೂ. 98.33 ಲಕ್ಷಗಳು / ರೂ.1.97 ಲಕ್ಷಗಳು		17.08.2021ರ ಸಂಜೆ 4:10 ಗಂಟೆಗೆ
		ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾ.ನೀ.ನಿ–ಸಿ.ವ್ಯಾಲಿ)			
4	ತ್ಯಾ.ನೀ.ನಿ – ಹೆಬ್ಬಾಳ	ಬೆಂಜಮಂ/ಕಾನಿಅ(ತ್ಯಾ.ನೀ.ನಿ)–ಹೆಚ್/ಪಿಬಿ/556/2021–22 ದಿನಾಂಕ: 06.08.2021	ರೂ. 92.26 ಲಕ್ಷಗಳು / ರೂ. 1.85 ಲಕ್ಷಗಳು	23.08.2021ರ ಸಂಜೆ 05:30 ಗಂಟೆಯವರೆಗೆ	25.08.2021 ಮಧ್ಯಾಹ್ನ 12:00 ಗಂಟೆಗೆ
		ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾ.ನೀ.ನಿ–ಹೆಬ್ಬಾಳ)			
		ಮುಖ್ಯ ಅಭಿಯಂತರರ ಕಚೇರಿ(ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.			
5	ಕೇಂದ್ರ	ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/819/2021–22 ದಿನಾಂಕ: 05.08.2021 (ಪ. ಜಾತಿಗೆ ಮೀಸಲು)	ರೂ. 17,04,726/– / ರೂ. 21,400/–	16.08.2021ರ ಸಂಜೆ 05:00ಗಂಟೆಯವರೆಗೆ	18.08.2021ರ ಸಂಜೆ 05:01 ಗಂಟೆಯ ನಂತರ
6		ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/820/2021–22 ದಿನಾಂಕ: 05.08.2021 (ಪ. ಪಂಗಡಕ್ಕೆ ಮೀಸಲು)	ರೂ. 8,93,214/– / ರೂ. 11,200/–		
7		ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/821/2021–22 ದಿನಾಂಕ: 05.08.2021 (ಪ. ಜಾತಿಗೆ ಮೀಸಲು)	ರೂ. 14,88,932/– / ರೂ. 18,700/–		
		ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಕೇಂದ್ರ)			
		ಮುಖ್ಯ ಅಭಿಯಂತರರ ಕಚೇರಿ(ವಿನ್ಯಾಸ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.			
8	ಡಿಸಿ & ಬಿವಿಎಂ	ಬೆಂಜಮಂ/ಕಾನಿಅ(ಡಿಸಿ&ಬಿವಿಎಂ)ಡಿ/ಪಿಬಿ/ಬಿವಿಎಂ/1485/2021–22 ದಿನಾಂಕ: 06.08.2021	ರೂ. 18,47,000/– / ರೂ. 46,175/–	16.08.2021ರ ಸಂಜೆ 04:00 ಗಂಟೆಯವರೆಗೆ	18.08.2021ರ ಮಧ್ಯಾಹ್ನ 12:00 ಗಂಟೆಗೆ
		ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಡಿಸಿ & ಬಿವಿಎಂ)			

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತಾದ ಹೆಚ್ಚಿನ ವಿವರಗಳನ್ನು https://eproc.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/DDU/RA/1093/2021-22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೆ.ಎಂ.ಎಫ್ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ ನಿಯಮಿತ
ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು–560 029
ಫೋನ್: 26096832/26096910/877 ಫ್ಯಾಕ್ಸ್: 080–25536105
Email: purchase@kmf.coop

ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್–303/2021–22 ದಿನಾಂಕ: 07.08.2021

ದೀರ್ಘಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ ಬೆಂಗಳೂರು, ಈ ಕೆಳಕಂಡ ವಿವರಗಳಂತೆ Turnkey ಆಧಾರದಲ್ಲಿ ಖಾರದ ಉತ್ಪನ್ನಗಳನ್ನು ತಯಾರಿಸುವ ಯಂತ್ರೋಪಕರಣಗಳನ್ನು ಸರಬರಾಜು ಮಾಡಿ ಅಳವಡಿಸುವ ಯೋಜನೆಗೆ ಪ್ರತಿಷ್ಠಿತ ಸಂಸ್ಥೆದಾರರಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ https://eproc.karnataka.gov.in ಗೆ ಭೇಟಿ ನೀಡಿ ಪಡೆಯಬಹುದಾಗಿದೆ.

ಕ್ರ. ಸಂ.	ವಿವರ	ಇ.ಎಂ.ಡಿ. (ರೂ.)
1	Supply installation commissioning & testing, of 05 MT per day capacity Savouries (bennemuruku, kharaboondi, masalakodubale and Bombay mixture) production line with various equipment's On turnkey basis, as per Tender document.	5,30,000/-

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅನ್ನು ದಿನಾಂಕ 10.09.2021 ರಂದು ಸಂಜೆ 5.00 ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ.
ಇನ್ನಿತರ ವಿವರಗಳನ್ನು ಟೆಂಡರ್‌ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ ಪರವಾಗಿ
ಸಹಿ/–
ನಿರ್ದೇಶಕರು (ಖರೀದಿ)

ಕಲಿಕೆಗೆ ಪೂರಕ ಅಭ್ಯಾಸದ ಹಾಳೆಗಳು

ಆರ್.ಬಿ. ಗುರುಬಸವರಾಜ

ಮಾಹಿತಿ ತಂತ್ರಜ್ಞಾನದ ಇಂದಿನ ಯುಗದಲ್ಲಿ ಮಾಹಿತಿ ಸಂಗ್ರಹಣೆಯು ಹೆಚ್ಚುತ್ತಲೇ ಇದೆ. ಆದರೆ ಆ ಮಾಹಿತಿಯನ್ನು ಹೇಗೆ ಬಳಸಬೇಕು ಮತ್ತು ಜ್ಞಾನವನ್ನು ಹೇಗೆ ಹೊಸ ಉತ್ಪನ್ನವಾಗಿಸಬೇಕು ಎಂಬುದನ್ನು ಶಿಕ್ಷಣವು ಗಟ್ಟಿಗೊಳಿಸುತ್ತದೆ. ಮಾಹಿತಿಯನ್ನು ರಚಿಸುವ ಮತ್ತು ಬಳಸುವ ಪ್ರಕ್ರಿಯೆಯಲ್ಲಿ ತ್ವರಿತ ಬದಲಾವಣೆಗಳು ಆಗಿರುವುದರಿಂದ ಸಮಾಜದ ನಿರೀಕ್ಷೆಗಳು ಸಹ ಬದಲಾಗಿವೆ. ಕೋವಿಡ್ ನಂತರ ತಂತ್ರಜ್ಞಾನ ಆಧಾರಿತ ಕಲಿಕೆಯು ಹೆಚ್ಚು ವ್ಯಾಪಕವಾಗುತ್ತಿದೆ. ಇದು ಕಲಿಸುವವರಿಗೂ, ಕಲಿಯುವವರಿಗೂ ಮತ್ತು ಪಾಲಕರಿಗೂ ಕಿರಿಕಿರಿ ಎನಿಸಿದೆ. ಸಾಂಪ್ರದಾಯಿಕ ಬೋಧನೆ ಹಾಗೂ ಕಲಿಕೆಗಳು ತಾತ್ಕಾಲಿಕವಾಗಿ ದೂರವಾಗುತ್ತಿವೆ. ಆದರೂ ಸಾಂಪ್ರದಾಯಿಕ ಕಲಿಕೆಯನ್ನು ಮುಂದುವರೆಸಲು ಶಿಕ್ಷಕರು ಶ್ರಮಿಸುತ್ತಿದ್ದಾರೆ. ಇದರ ಭಾಗವಾಗಿ ಅಭ್ಯಾಸದ ಹಾಳೆ (ವರ್ಕ್‌ಶೀಟ್)ಗಳು ಹೆಚ್ಚು ಪ್ರಸ್ತುತವಾಗುತ್ತಿವೆ.

> ಅಭ್ಯಾಸದ ಹಾಳೆಗಳು ಪಠ್ಯಪುಸ್ತಕಗಳಿಗಿಂತ ಆಕರ್ಷಕವಾಗಿದ್ದು, ಮನರಂಜನಾತ್ಮಕ ಕಲಿಕೆಗೆ ಪೂರಕವಾಗಿರುವುದರಿಂದ ಎಲ್ಲಾ ಹಂತದ ಕಲಿಕೆದಾರರಿಗೂ ಆಪ್ತವಾಗಿವೆ. ಬಹುತೇಕ ಮಕ್ಕಳು ಪಠ್ಯ ಕಲಿಕೆಗಿಂತ ಅಭ್ಯಾಸದ ಹಾಳೆಗಳ ಕಲಿಕೆಯಲ್ಲಿ ಹೆಚ್ಚು ಉತ್ಸಾಹದಿಂದ ತೊಡಗುತ್ತಾರೆ.

ಅಭ್ಯಾಸದ ಹಾಳೆಗಳೆಂದರೇನು?

ಕಲಿಕೆಯನ್ನು ದೃಢಪಡಿಸಲು ಬಳಸುವ ಕಾಗದವೇ ಅಭ್ಯಾಸದ ಹಾಳೆ. ಸ್ಮಾರ್ಟ್ ಕಲಿಕಾ ವಿಧಾನಗಳ ಮೂಲಕ ವಿಷಯ/ಪರಿಕಲ್ಪನೆಯನ್ನು ಅರ್ಥೈಸಿಕೊಂಡು ಸೃಜನಾತ್ಮಕ ಚಟುವಟಿಕೆ ಮೂಲಕ ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ಅಭ್ಯಾಸದ ಹಾಳೆಗಳು ಸಹಾಯ ಮಾಡುತ್ತವೆ. ಪಠ್ಯಪುಸ್ತಕದ ಹೊರತಾಗಿಯೂ ಕಲಿಕಾರ್ಥಿಗಳನ್ನು ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸುವಲ್ಲಿ ಕಲಿಕಾ ಹಾಳೆಗಳು ಮಹತ್ವದ ಪಾತ್ರ ವಹಿಸುತ್ತವೆ. ಅಭ್ಯಾಸದ ಹಾಳೆಗಳ ಬಹುಮುಖ್ಯ ಉಪಯೋಗವೇನೆಂದರೆ ಪಾಲಕರೂ ಸಹ ಸುಲಭವಾಗಿ ಕಲಿಕಾ ವಿಧಾನವನ್ನು ಅರ್ಥೈಸಿಕೊಂಡು ಮಗು ಕಲಿಯಲು ಸಹಾಯ ಮಾಡಬಹುದು. ಅಭ್ಯಾಸದ ಹಾಳೆಯಲ್ಲಿನ ಚಟುವಟಿಕೆಗಳು ಬಹುತೇಕವಾಗಿ ಮೋಜಿನಿಂದ ಕೂಡಿದ್ದು ಮಕ್ಕಳು ಖುಷಿಯಿಂದ ಕಲಿಕೆಯಲ್ಲಿ ಪಾಲ್ಗೊಳ್ಳುತ್ತಾರೆ.

ಎನ್.ಸಿ.ಎಫ್-2005, ಶಿಕ್ಷಣ ಹಕ್ಕು ಕಾಯ್ದೆ-2009 ಹಾಗೂ ಹೊಸ ಶಿಕ್ಷಣ ನೀತಿ-2020ರ ಆಶಯಕ್ಕೆ ಪೂರಕವಾಗಿ ಅಭ್ಯಾಸದ ಹಾಳೆಯಲ್ಲಿನ ಪ್ರತಿ ಕಲಿಕಾಂಶವು ಶಿಶುಕೇಂದ್ರಿತವಾಗಿ ರಚಿತವಾಗಿರುತ್ತದೆ. ಅಲ್ಲದೇ ಅಭ್ಯಾಸದ ಹಾಳೆಗಳು ಚಿತ್ರಗಳಿಂದ ಕೂಡಿದ್ದು, ಆಕರ್ಷಕ ವಿನ್ಯಾಸದಲ್ಲಿ ರೂಪುಗೊಂಡಿರುತ್ತವೆ. ಇಲ್ಲಿ ಕೇವಲ ಬರವಣಿಗೆಗೆ ಒತ್ತು ನೀಡದೇ, ಪಠ್ಯಾಂಶವನ್ನು ಓದಿ ಅರ್ಥೈಸಿಕೊಂಡು ತನ್ನದೇ ಶೈಲಿಯಲ್ಲಿ ಕಲಿಕೆಯನ್ನು ವ್ಯಕ್ತಪಡಿಸಲು ಅವಕಾಶ ಇರುತ್ತದೆ. ಮಗುವಿನ ಕಲಿಕೆಯನ್ನು ವಿವಿಧ ಆಯಾಮಗಳಲ್ಲಿ ಮೌಲ್ಯಮಾಪನ ಮಾಡಲು ವಿವಿಧ ಕಲಿಕಾ ಚಟುವಟಿಕೆ ನೀಡಲಾಗಿರುತ್ತದೆ. ಸರಿ-ತಪ್ಪು ತಿಳಿಸುವ, ಗುರುತಿಸುವ, ವರ್ಗೀಕರಿಸುವ, ವ್ಯತ್ಯಾಸ ತಿಳಿಸುವ, ಜೋಡಿಸುವ, ನಕಲು ಮಾಡುವ, ತನ್ನದೇ ಸ್ವಯಂ ಉತ್ತರ ನೀಡುವ ಚಟುವಟಿಕೆಗಳನ್ನು ಅಭ್ಯಾಸದ ಹಾಳೆಗಳು ಹೊಂದಿರುತ್ತವೆ. ಮಗುವಿನ ಸ್ವಯಂ ಕಲಿಕೆಗೆ ಅಗತ್ಯವಾದ ಎಲ್ಲಾ ಅಂಶಗಳನ್ನು ಅಭ್ಯಾಸದ ಹಾಳೆಗಳು ಒಳಗೊಂಡಿರುತ್ತವೆ.

ಅಭ್ಯಾಸದ ಹಾಳೆಗಳು ಸಂಪೂರ್ಣವಾಗಿ ರಚನಾವಾದದ ಹಿನ್ನೆಲೆಯಲ್ಲಿ ರೂಪುಗೊಂಡಿವೆ. ರಚನಾವಾದವು 5-ಇ ಅಂಶಗಳನ್ನು ಒಳಗೊಂಡಿದೆ. ಅವುಗಳೆಂದರೆ, ತೊಡಗಿಸಿಕೊ(ಎಂಗೇಜ್), ಅನ್ವೇಷಿಸು(ಎಕ್ಸ್‌ಪ್ಲೋರ್), ಅಭಿವ್ಯಕ್ತಿಸು (ಎಕ್ಸ್‌ಪ್ಲೆನೇಶನ್), ವಿಸ್ತರಿಸು(ಎಲಾಬೊರೇಟ್) ಮತ್ತು ಮೌಲ್ಯಮಾಪಿಸು(ಇವ್ಯಾಲ್ಯುಯೇಷನ್). ಕಲಿಕೆಯ ಐದು ಹಂತಗಳು ಅಭ್ಯಾಸ ಹಾಳೆಯಲ್ಲಿ ಅಡಕವಾಗಿರುವುದರಿಂದ ಇವು ಮನೋವೈಜ್ಞಾನಿಕ ಹಿನ್ನೆಲೆಯಲ್ಲಿ ರೂಪುಗೊಂಡ ಹಾಳೆಗಳಾಗಿವೆ. ಅಭ್ಯಾಸದ ಹಾಳೆಗಳ ಮೂಲಕ ಕಲಿಕಾರ್ಥಿಯು ತನಗೆ ಬೇಕಾದ ಜ್ಞಾನವನ್ನು ತಾನೇ ಕಟ್ಟಿಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಗುತ್ತಾನೆ. ಮಗು ತನಗೆ ಬೇಕಾದ ಜ್ಞಾನವನ್ನು ತಾನೇ ಕಟ್ಟಿಕೊಳ್ಳುವಂತಾಗಬೇಕು ಎಂಬುದನ್ನು ರಾಷ್ಟ್ರೀಯ ಶಿಕ್ಷಣ ನೀತಿಯು ಒತ್ತಿ ಹೇಳುತ್ತದೆ.

ಅಭ್ಯಾಸದ ಹಾಳೆಗಳ ಪ್ರಯೋಜನಗಳು

- ಪರಿಣಾಮಕಾರಿಯಾದ ಸ್ವತಂತ್ರ ಕಲಿಕೆಗೆ ಸಹಕಾರಿ. ಅಭ್ಯಾಸದ ಹಾಳೆಗಳನ್ನು ಬಳಸಿ ಕಲಿಕಾರ್ಥಿಯು ಸ್ವತಃ ಕಲಿಕೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಕಲಿಕೆಯು ಪರಿಣಾಕಾರಿಯಾಗುವುದರ ಜೊತೆಗೆ ಶಾಶ್ವತವಾಗಿರುತ್ತದೆ.
- ಇದು ಸುಲಭ ಹಂತಗಳ ವೈಯಕ್ತಿಕ ಕಲಿಕಾ ವಿಧಾನವಾಗಿದೆ. ಅಭ್ಯಾಸದ ಹಾಳೆಗಳ ಮೂಲಕ ಮಗು ಹಂತ ಹಂತವಾದ ಕಲಿಕೆಯನ್ನು ಗಳಿಸಿಕೊಳ್ಳುತ್ತದೆ. ಇದು ಶಿಶುಕೇಂದ್ರಿತ ಕಲಿಕಾ ವಿಧಾನವಾಗಿರುವುದರಿಂದ ಮಗು ಆಸಕ್ತಿಯಿಂದ ಕಲಿಕೆಯಲ್ಲಿ ತೊಡಗಿಕೊಳ್ಳುತ್ತದೆ.
- ಅಭ್ಯಾಸದ ಹಾಳೆಗಳು ಮಗುವಿಗೆ ಮುಕ್ತ ಕಲಿಕಾ ಸಮಯದ ಅವಕಾಶವನ್ನು ಕಲ್ಪಿಸುತ್ತದೆ. ಅಂದರೆ ಮಗು ತನಗೆ ಅನುಕೂಲವಾದ ಸಮಯದಲ್ಲಿ ಕಲಿಕೆಗೆ ತೊಡಗಿಸಿಕೊಳ್ಳಲು ಅವಕಾಶ ಇರುತ್ತದೆ.
- ಕಲಿಕಾರ್ಥಿಗಳ ಕಾರ್ಯಕ್ಷಮತೆಯನ್ನು ಅಳೆಯಲು ಸಹಕಾರಿ. ಕಲಿಕಾರ್ಥಿಗಳ ಸಾಮರ್ಥ್ಯ ಮತ್ತು ದೌರ್ಬಲ್ಯಗಳ ಕ್ಷೇತ್ರಗಳನ್ನು ಗುರುತಿಸಲು ಅಭ್ಯಾಸದ ಹಾಳೆಗಳು ಸಹಕಾರಿಯಾಗಿವೆ.
- ಇವು ಕೇವಲ ಕಲಿಯಲು ಮಾತ್ರವಲ್ಲ. ಬದಲಾಗಿ ಕಲಿಕಾರ್ಥಿಯು ಕಲಿತಿರುವುದನ್ನು ಮರುಸೃಷ್ಟಿಸಲು ಅವಕಾಶ ನೀಡುತ್ತವೆ. ಮಕ್ಕಳು ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳಲು ಸಹಕಾರಿಯಾಗಿವೆ.
- ಹೋಂವರ್ಕ್ ಕಿರಿಕಿರಿಯನ್ನು ತಪ್ಪಿಸಿ ಸಂತಸದಿಂದ ಅಭ್ಯಾಸದಲ್ಲಿ ತೊಡಗುವಂತೆ ಮಾಡುತ್ತವೆ. ಇದು ನನ್ನ ಕಲಿಕೆಯ ಭಾಗ ಎಂಬುದನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡುತ್ತವೆ.
- ಇದರಲ್ಲಿನ ಚಟುವಟಿಕೆಗಳು ಪೋಷಕರಿಗೂ ಸುಲಭವಾಗಿ ಅರ್ಥವಾಗುವಂತೆ ಇರುವುದರಿಂದ ಅವರೂ ಸಹ ಮಕ್ಕಳ ಕಲಿಕೆಯಲ್ಲಿ ಭಾಗವಹಿಸಲು ಅನುಕೂಲವಾಗುತ್ತದೆ.
- ಅಭ್ಯಾಸದ ಹಾಳೆಗಳು ಮಕ್ಕಳನ್ನು ಸ್ಕ್ರೀನ್‌ನಿಂದ ದೂರ ಇಡುತ್ತವೆ. ಇದರಲ್ಲಿನ ವೈವಿಧ್ಯಮಯ ಚಟುವಟಿಕೆಗಳು ಮಕ್ಕಳಿಗೆ ಅಮಿತಾನಂದ ನೀಡುವುದರಿಂದ ಮೊಬೈಲ್, ಐಪಾಡ್, ಟ್ಯಾಬ್, ಕಂಪ್ಯೂಟರ್, ಟಿವಿಗಳಂತಹ ಗ್ಯಾಜೆಟ್‌ಗಳಿಂದ ದೂರ ಇರಲು ಸಹಕಾರಿಯಾಗಿವೆ.
- ಇವು ಮಕ್ಕಳನ್ನು ಪಠ್ಯದಾಚೆಗಿನ ಕಲಿಕೆಯನ್ನು ಪ್ರೋತ್ಸಾಹಿಸುತ್ತವೆ. ಅವರ ಆಲೋಚನೆಗೆ ಅನುಗುಣವಾಗಿ ಅನ್ವೇಷಣೆಯಲ್ಲಿ ತೊಡಗಲು ಉತ್ತೇಜಿಸುತ್ತವೆ. ಹೊಸ ಕಲಿಕೆಯ ಮೂಲಕ ಪರಿಕಲ್ಪನೆಗಳನ್ನು ಸುಧಾರಿಸುತ್ತವೆ.
- ಈ ಹಾಳೆಗಳ ಕಾರ್ಯವು ಮಕ್ಕಳಿಗೆ ಮೋಜು ಎನಿಸುವಂತೆ ಭಾಸವಾಗುತ್ತದೆ. ಹಾಗಾಗಿ ಸ್ವಪ್ರೇರಣೆಯಿಂದ ಕಲಿಕೆಯಲ್ಲಿ ತೊಡಗಿಕೊಳ್ಳುತ್ತಾರೆ. ಆಟ ಮತ್ತು ಇನ್ನಿತರೇ ಚಟುವಟಿಕೆಗಳನ್ನು ಇದಕ್ಕಾಗಿಯೇ ಮೀಸಲಿಡಲು ಬಯಸುತ್ತಾರೆ.
- ಅಭ್ಯಾಸದ ಹಾಳೆಗಳು ಮುದ್ರಿತ ರೂಪದಲ್ಲಿರುವುದರಿಂದ ಪುನರಾರ್ತಿತ ಕಲಿಕೆಗೆ ಸಹಕಾರಿಯಾಗಿವೆ. ಆ ಮೂಲಕ ಕಲಿಕಾರ್ಥಿಯು ತನ್ನ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಹಕಾರಿಯಾಗಿವೆ.
- ವಿದ್ಯಾರ್ಥಿಗಳ ಕಲಿಕಾ ಪ್ರಗತಿಯ ಮೇಲೆ ನಿಗಾ ಇಡಲು ಸುಲಭವಾದ ಸಾಧನವಾಗಿರುವುದರಿಂದ ಮೌಲ್ಯಮಾಪನಕ್ಕೆ ಪೂರಕ ಸಾಮಗ್ರಿ ಒದಗಿಸುತ್ತವೆ.

ಅಭ್ಯಾಸದ ಹಾಳೆಗಳು ಹೀಗಿರಲಿ..

- ಕಲಿಕಾರ್ಥಿಯ ಕಲಿಕಾ ಮಟ್ಟಕ್ಕೆ ತಕ್ಕಂತೆ ಅಭ್ಯಾಸದ ಹಾಳೆಗಳಿರಬೇಕು.
- ಆಕರ್ಷಕ ವಿನ್ಯಾಸ ಹಾಗೂ ವೈವಿಧ್ಯಮಯ ಚಟುವಟಿಕೆಗಳಿರಬೇಕು.
- ಮನೋರಂಜನಾತ್ಮಕ ಅಂಶಗಳಿಂದ ಕೂಡಿರಬೇಕು.
- ಕಲಿಕಾ ಹಂತಗಳ ಸ್ಪಷ್ಟತೆ ಇರಬೇಕು.
- ಚಿಂತನಶೀಲ ಕೌಶಲಗಳಿಂದ ರೂಪಿತವಾಗಿರಬೇಕು.
- ಹೆಚ್ಚಿನ ಅಭ್ಯಾಸಕ್ಕೆ ಪ್ರೇರಣೆ ನೀಡುವಂತಿರಬೇಕು.
- ವಿಶ್ಲೇಷಣೆ ಮತ್ತು ವಿವರಣೆಗಳಿಗೆ ಸೂಕ್ತ ಮಾರ್ಗಸೂಚಿಗಳಿರಬೇಕು.
- ಹೊಸ ಆಲೋಚನೆಗಳನ್ನು ದಾಖಲಿಸಲು ಅವಕಾಶ ಇರಬೇಕು.
- ಕಲಿಕೆ ಹೊರೆಯಾಗದಂತೆ ಎಚ್ಚರಿಕೆ ವಹಿಸಬೇಕು.

ಅಭಿರುಚಿಗೆ ಆಸಕ್ತಿಗೆ ಆಫ್‌ಬೀಟ್ ಕೋರ್ಸ್‌ಗಳು

ಮನಸ್ವಿ

ಶಿಕ್ಷಣ ಎಂದರೆ ಪದವಿ, ಸ್ನಾತಕೋತ್ತರ ಪದವಿ, ಎಂಜಿನಿಯರಿಂಗ್ ಎನ್ನುವ ಕಾಲ ಈಗ ಬದಲಾಗಿದೆ. ವ್ಯಕ್ತಿಯ ಅಭಿರುಚಿ ಹಾಗೂ ಆಸಕ್ತಿಗೆ ಹೊಂದುವಂತಹ ಹಲವು ಆಫ್‌ಬೀಟ್ ಹಾಗೂ ಡಿಪ್ಲೊಮಾ ಕೋರ್ಸ್‌ಗಳಿವೆ. ಫ್ಯಾಂಟಸಿ ವರ್ಲ್ಡ್, ಟೀ ಟೇಸ್ಟಿಂಗ್, ಪೆಟ್ ಗ್ರೂಮಿಂಗ್‌ನಂತಹ ಹಲವು ಕೋರ್ಸ್‌ಗಳು ಈಗ ಭಾರತದಲ್ಲೂ ಬೇಡಿಕೆ ಪಡೆದುಕೊಳ್ಳುತ್ತಿವೆ. ಈ ವಿಷಯಗಳಿಗೆ ಸಂಬಂಧಿಸಿ ಹಲವು ಭಾರತೀಯ ವಿಶ್ವವಿದ್ಯಾಲಯಗಳು ಡಿಪ್ಲೊಮಾ ಕೋರ್ಸ್‌ಗಳನ್ನು ಆರಂಭಿಸಿವೆ.

ಟೀ ಟೇಸ್ಟಿಂಗ್

ಇದು ಟೀಯ ಸ್ವಾದ ಹಾಗೂ ಗುಣಮಟ್ಟವನ್ನು ಪರಿಶೀಲಿಸುವ ಕೋರ್ಸ್. ವಿವಿಧ ಬಗೆಯ ಟೀಗಳ ರುಚಿ ನೋಡಿ ಅವುಗಳ ಗುಣಮಟ್ಟ ಪರಿಶೀಲನೆ ಮಾಡುವ ಈ ಕೋರ್ಸ್ ಭಾರತದಲ್ಲಿ ಬೇಡಿಕೆಯ ಕೋರ್ಸ್‌ಗಳಲ್ಲಿ ಒಂದಾಗಿದೆ. ದಿಪ್ರಾಸ್ ಇನ್‌ಸ್ಟಿಟ್ಯೂಟ್ ಆಫ್ ಪ್ರೊಫೆಶನಲ್ ಸ್ಟಡೀಸ್, ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಫ್ಯೂಚರಿಸ್ಟಿಕ್ ಸ್ಟಡೀಸ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪ್ಲಾಂಟೇಶನ್ ಮ್ಯಾನೇಜ್‌ಮೆಂಟ್, ಅಸ್ಸಾಂ ಅಗ್ರಿಕಲ್ಚರ್ ಯೂನಿವರ್ಸಿಟಿಗಳಲ್ಲಿ ಈ ಕೋರ್ಸ್ ಇದೆ.

ಬೊಂಬೆಯಾಟ

ಬಹಳ ಹಿಂದಿನಿಂದಲೂ ಭಾರತದಲ್ಲಿ ಮನರಂಜನೆ ನೀಡುವ ಉದ್ದೇಶದಿಂದ ಬೊಂಬೆಯಾಟ ಹೆಚ್ಚು ಖ್ಯಾತಿ ಪಡೆದಿತ್ತು. ಈ ಬೊಂಬೆಯಾಟದ ಮೂಲಕವೇ ಮಕ್ಕಳಿಗೆ ನೈತಿಕ ಶಿಕ್ಷಣದ ಕುರಿತು ಪಾಠ ಹೇಳಲಾಗುತ್ತಿತ್ತು. ಈಗ ಪಪೆಟ್ರಿ ಅಥವಾ ಬೊಂಬೆಯಾಟವನ್ನೇ ವೃತ್ತಿಪರ ಕೋರ್ಸ್ ಆಗಿ ಆಯ್ಕೆ ಮಾಡಿಕೊಳ್ಳಬಹುದಾಗಿದೆ. ಕೋಲ್ಕತ್ತಾ ಪಪೆಟ್ ಥಿಯೇಟರ್, ಮುಂಬೈ ಯೂನಿವರ್ಸಿಟಿ ಆಫ್ ಇಂಡಿಯಾ ಈ ಕೋರ್ಸ್ ಅನ್ನು ಪರಿಚಯಿಸಿವೆ. ಫೈನ್ ಆರ್ಟ್ಸ್ ಭಾಗವಾಗಿರುವ ಬೊಂಬೆಯಾಟದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಯನ್ನೂ ಮಾಡಬಹುದಾಗಿದೆ.

ಪೆಟ್ ಗ್ರೂಮಿಂಗ್

ಮನುಷ್ಯರು ಸಲೂನ್, ಬ್ಯೂಟಿ ಪಾರ್ಲರ್‌ಗಳಿಗೆ ಹೋಗಿ ತಮ್ಮ ಅಂದ-ಚೆಂದ ಹೆಚ್ಚಿಸಿಕೊಳ್ಳುವಂತೆ ಸಾಕುಪ್ರಾಣಿಗಳ ಅಂದವನ್ನು ಹೆಚ್ಚಿಸಲು ಸಲೂನ್‌ಗಳು ಇರುತ್ತವೆ. ಅಲ್ಲಿ ಅವುಗಳಿಗೆ ಸ್ನಾನ ಮಾಡಿಸುವುದು, ಬ್ರಷ್ ಮಾಡಿಸುವುದು, ಅವುಗಳನ್ನು ಸ್ಟೈಲಿಶ್ ಆಗಿ ಕಾಣುವಂತೆ ಮಾಡುವುದು, ಹೇರ್ ಕಟಿಂಗ್, ಟ್ರಿಮ್ಮಿಂಗ್ ಮಾಡುವುದು ಮುಂತಾದವನ್ನು ಪೆಟ್ ಗ್ರೂಮರ್‌ಗಳು ಮಾಡುತ್ತಾರೆ. ಹಿಂದೆಲ್ಲಾ ವಿದೇಶಗಳಲ್ಲಿ ಹೆಚ್ಚು ಪ್ರಾಮುಖ್ಯ ಪಡೆದಿದ್ದ ಈ ಕೋರ್ಸ್‌ಗೆ ಈಗ ಭಾರತದಲ್ಲೂ ಬೇಡಿಕೆ ಹೆಚ್ಚುತ್ತಿದೆ. ಭಾರತದಲ್ಲಿನ ಅನೇಕ ವಿಶ್ವವಿದ್ಯಾಲಯಗಳು ಈಗ ಪೆಟ್ ಗ್ರೂಮಿಂಗ್ ಡಿಪ್ಲೊಮಾ ಕೋರ್ಸ್‌ಗಳನ್ನು ಆರಂಭಿಸಿವೆ. ಪಿಯುಸಿ ಅಥವಾ ಡಿಗ್ರಿ ಮುಗಿಸಿದ ಬಳಿಕವೂ ಈ ಕೋರ್ಸ್ ಮಾಡಬಹುದು.

ಪರ್ವತಾರೋಹಣ- ಸಾಹಸ ಶಿಕ್ಷಣ

ನಿಮಗೆ ಟ್ರೆಕ್ಕಿಂಗ್ ಮಾಡುವುದು, ಸಾಹಸ ಕ್ರೀಡೆಗಳಲ್ಲಿ ಭಾಗವಹಿಸುವ ಆಸಕ್ತಿ ಇದ್ದರೆ ನೀವು ಈ ಕೋರ್ಸ್ ಮಾಡಬಹುದು. ಗುಡ್ಡ ಹತ್ತುವುದು, ಸಾಹಸ ಜಲಕ್ರೀಡೆಗಳು ಮುಂತಾದವುಗಳನ್ನು ಈ ಕೋರ್ಸ್ ಒಳಗೊಂಡಿದೆ. ಈ ಕೋರ್ಸ್ ಮಾಡುವ ಮೂಲಕ ತರಬೇತುದಾರರಾಗಿ ಕೂಡ ವೃತ್ತಿ ಆರಂಭಿಸಬಹುದು. ವಿದೇಶಗಳಲ್ಲೂ ಈ ಕೋರ್ಸ್ ಮಾಡಿದವರಿಗೆ ಹೆಚ್ಚಿನ ಬೇಡಿಕೆ ಇದೆ.

ಘೋಸ್ಟ್ ಅಧ್ಯಯನ

ಘೋಸ್ಟ್‌ಯ ಕುರಿತು ಹಲವು ಸಿನಿಮಾಗಳು, ಟಿವಿ ಷೋಗಳು, ಪುಸ್ತಕಗಳು ಹಾಗೂ ವಿಡಿಯೊ ಗೇಮ್‌ಗಳು ಇವೆ. ಈ ಘೋಸ್ಟ್ ಅವತರಣಿಕೆಗಳಿಗೆ ಸಂಬಂಧಿಸಿ ಹಾರರ್ ಸ್ಕ್ರಿಪ್ಟ್ ಬರೆಯುವುದು, ಹಾರರ್ ಸ್ಥಳಗಳನ್ನು ಗುರುತು ಮಾಡುವುದು ಮುಂತಾದ ಕೆಲಸಗಳನ್ನು ಘೋಸ್ಟ್ ಅಧ್ಯಯನ ಮಾಡಿದವರು ಮಾಡುತ್ತಾರೆ. ಇತ್ತೀಚೆಗೆ ಘೋಸ್ಟ್ ಕುರಿತಾದ ಗೇಮ್‌ಗಳು ಹೆಚ್ಚುತ್ತಿರುವ ಕಾರಣ ಅದರ ಮೇಲೂ ಕೆಲಸ ಮಾಡಬಹುದು. ಇದಕ್ಕೆ ಭವಿಷ್ಯದಲ್ಲಿ ಹೆಚ್ಚಿನ ಬೇಡಿಕೆ ಇದ್ದು ಈ ಕೋರ್ಸ್ ಮಾಡಿದವರಿಗೆ ಬೇಡಿಕೆಯೂ ಹೆಚ್ಚಿದೆ.

ಆಲ್ಕೋಹಾಲ್ ಟೆಕ್ನಾಲಜಿ

ಆಲ್ಕೋಹಾಲ್ ಅಥವಾ ಮದ್ಯ ಎನ್ನುವುದು ಪ್ರಪಂಚದಲ್ಲೇ ಅತೀ ಹೆಚ್ಚು ಆದಾಯ ತಂದುಕೊಡುವುದಾಗಿದೆ. ಆಲ್ಕೋಹಾಲ್ ಟೆಕ್ನಾಲಜಿಯಲ್ಲಿ ಮದ್ಯ ತಯಾರಿಯ ತಂತ್ರಜ್ಞಾನದ ಕುರಿತು ವಿವರವಾದ ಮಾಹಿತಿ ತಿಳಿದುಕೊಳ್ಳಬಹುದಾಗಿದೆ. ಆಲ್ಕೋಹಾಲ್ ತಯಾರಿಕಾ ಕ್ಷೇತ್ರ ಎನ್ನುವುದು ಹೆಚ್ಚು ಬೇಡಿಕೆಯಲ್ಲಿರುವ ಕ್ಷೇತ್ರವಾದ ಈ ಕೋರ್ಸ್‌ಗೂ ಬೇಡಿಕೆ ಹೆಚ್ಚಿದೆ.

ಶೈಕ್ಷಣಿಕ ಹಾದಿಯಲ್ಲಿ 'ಶಿಕ್ಷಣ' ತಂಡದ ಸಾಧನೆ ಈ ವಿಡಿಯೊವನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ. prajavani.net ನಲ್ಲೂ ವಿಡಿಯೊ ಲಭ್ಯ.

ಪ್ರಜಾವಾಣಿ ನೋಡಿಯೊ

ವಿದ್ಯಾರ್ಥಿ ವೇತನ ಕೈಪಿಡಿ

ನಿಕಾನ್ ಸ್ಕಾಲರ್‌ಶಿಪ್ ಪ್ರೋಗ್ರಾಮ್ 2021–22

ವಿವರ: ಛಾಯಾಗ್ರಹಣದಲ್ಲಿ ಆಸಕ್ತಿ ಇರುವ ಪಿಯುಸಿ ಮುಗಿಸಿರುವವರಿಂದ ನಿಕಾನ್ ಪ್ರೈವೇಟ್ ಲಿಮಿಟೆಡ್ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಹತೆ: ಮೂರು ತಿಂಗಳು ಅಥವಾ ಅದಕ್ಕಿಂತ ಹೆಚ್ಚು ಕಾಲ ಛಾಯಾಗ್ರಹಣ ಕೋರ್ಸ್ ಇರಲಿದೆ. ಕುಟುಂಬದ ವಾರ್ಷಿಕ ಆದಾಯವು 6 ಲಕ್ಷಕ್ಕಿಂತ ಕಡಿಮೆ ಇರಬೇಕು.

ಆರ್ಥಿಕ ಸಹಾಯ: ₹ 1 ಲಕ್ಷದವರೆಗೆ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31 ಆಗಸ್ಟ್, 2021

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ **ಹೆಚ್ಚಿನ ಮಾಹಿತಿಗೆ:** www.b4s.in/praja/NSP5

ಕೀಪ್ ಇಂಡಿಯಾ ಸ್ಮೈಲಿಂಗ್ ಫೌಂಡೇಶನ್ ಸ್ಕಾಲರ್‌ಶಿಪ್ ಪ್ರೋಗ್ರಾಮ್

ವಿವರ: 10ನೇ ತರಗತಿ ನಂತರದ ಮತ್ತು ಪದವಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಂದ ಕೋಲ್ಗೇಟ್-ಪಾಮೋಲಿವ್ (ಇಂಡಿಯಾ) ಲಿಮಿಟೆಡ್ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಹತೆ: ಈ ವರ್ಷದ 10ನೇ ತರಗತಿಯಲ್ಲಿ ಶೇ 75 ರಷ್ಟು ಮತ್ತು ಪಿಯುಸಿಯಲ್ಲಿ ಶೇ 60ರಷ್ಟು ಅಂಕ ಪಡೆದವರು ಅರ್ಜಿ ಸಲ್ಲಿಸಬಹುದಾಗಿದೆ. ಕುಟುಂಬದ ವಾರ್ಷಿಕ ಆದಾಯವು ₹ 5 ಲಕ್ಷ ಮೀರಿರಬಾರದು.

ಆರ್ಥಿಕ ಸಹಾಯ: ಮೂರು ವರ್ಷದವರೆಗೆ ವರ್ಷಕ್ಕೆ ₹30 ಸಾವಿರ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31 ಆಗಸ್ಟ್, 2021

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ

ಹೆಚ್ಚಿನ ಮಾಹಿತಿಗೆ: www.b4s.in/praja/KISSP01 **ಕೃಪೆ:** buddy4study.com

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ -37

491. ಈ ಕೆಳಗಿನವುಗಳಲ್ಲಿ ಯಾವುದು ಕಾವೇರಿ ನದಿಯ ಉಪನದಿಯಲ್ಲ?
ಎ) ಕೊಯ್ನಾ ಬಿ) ಹೇಮಾವತಿ
ಸಿ) ಕಬಿನಿ ಡಿ) ಅರ್ಕಾವತಿ

492. ದೇವಿ ಪ್ರಸಾದ್ ಶೆಟ್ಟಿ ಇವರು ಪ್ರಸಿದ್ಧ
ಎ) ಹೃದ್ರೋಗತಜ್ಞ ಬಿ) ನೇತ್ರಶಾಸ್ತ್ರಜ್ಞ
ಸಿ) ಮನೋವೈದ್ಯ ಡಿ) ಎಲುಬು-ಕೀಲು ತಜ್ಞ

493. ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಯಾವ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ?
ಎ) ಅಹಮದಾಬಾದ್ ಬಿ) ರಾಜಕೋಟ್
ಸಿ) ಲಕ್ನೋ ಡಿ) ವಾರಾಣಸಿ

494. ಟೋಕಿಯೊದಲ್ಲಿ ಪ್ರಸ್ತುತ ನಡೆಯುತ್ತಿರುವ ಒಲಿಂಪಿಕ್ ಕ್ರೀಡಾಕೂಟದ ಭಾರ ಎತ್ತುವಿಕೆ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದ ಭಾರತದ ಮಹಿಳಾ ಕ್ರೀಡಾಪಟು ಯಾರು?
ಎ) ಮೀರಾಬಾಯಿ ಚಾನು ಬಿ) ಪಿ.ವಿ.ಸಿಂಧು
ಸಿ) ಮೇರಿ ಕೋಮ್ ಡಿ) ಸಾನಿಯಾ ಮಿರ್ಜಾ

495. ಈಶಾನ್ಯ ಮಾನ್ಸೂನ್‌ನಿಂದ ತಮಿಳುನಾಡಿಗೆ ಸಾಮಾನ್ಯವಾಗಿ ಮಳೆಯಾಗುವುದು ಯಾವ ತಿಂಗಳಿನಲ್ಲಿ?
ಎ) ಜೂನ್-ಆಗಸ್ಟ್ ಬಿ) ಅಕ್ಟೋಬರ್-ಡಿಸೆಂಬರ್
ಸಿ) ಜನವರಿ-ಮಾರ್ಚ್ ಡಿ) ಯಾವುದೂ ಅಲ್ಲ

496. 'ಗೋಲ್ ಗುಂಬಜ್' ಯಾರ ಸಮಾಧಿ?
ಎ) ಮಹಮ್ಮದ್ ಆದಿಲ್ ಷಾ
ಬಿ) ಯೂಸುಫ್ ಆದಿಲ್ ಷಾ
ಸಿ) ಮುಮ್ತಾಜ್ ಬೇಗಂ
ಡಿ) ಸಿಕಂದರ್ ಆದಿಲ್ ಷಾ

497. ಸಿಂಡಿಕೇಟ್ ಬ್ಯಾಂಕ್ ಸ್ಥಾಪನೆಯಾದ ವರ್ಷ
ಎ) 1921 ಬಿ) 1922 ಸಿ) 1924 ಡಿ) 1925

498. ಪ್ರಶಸ್ತಿ ವಿಜೇತ ಚಿತ್ರಗಳಾದ 'ತಬರನ ಕಥೆ', 'ದ್ವೀಪ' ಹಾಗೂ 'ಗುಲಾಬಿ ಟಾಕೀಸ್' ಚಿತ್ರಗಳ ನಿರ್ದೇಶಕ ಯಾರು
ಎ) ನಾಗತಿಹಳ್ಳಿ ಚಂದ್ರಶೇಖರ್
ಬಿ) ಗಿರೀಶ್ ಕಾಸರವಳ್ಳಿ
ಸಿ) ಸುನಿಲ್ ಕುಮಾರ್ ದೇಸಾಯಿ
ಡಿ) ಪುಟ್ಟಣ್ಣ ಕಣಗಾಲ್

499. ಮ್ಯಾರಥಾನ್ ಓಟದಲ್ಲಿ ಕ್ರಮಿಸಬೇಕಾದ ದೂರವೆಷ್ಟು?
ಎ) 26.385 ಕಿ.ಮೀ ಬಿ) 42.195 ಕಿ.ಮೀ
ಸಿ) 15.600 ಕಿ.ಮೀ ಡಿ) 30 ಕಿ.ಮೀ

500. ಮೂಲಭೂತ ಕರ್ತವ್ಯಗಳನ್ನು ಭಾರತ ಸಂವಿಧಾನಕ್ಕೆ ಸೇರ್ಪಡೆ ಮಾಡಿದ ವರ್ಷ
ಎ) 1976 ಬಿ) 1978 ಸಿ) 1980 ಡಿ) 1991

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ–36 ರ ಉತ್ತರ: 481. ಡಿ, 482. ಬಿ, 483. ಬಿ, 484. ಡಿ, 485. ಡಿ, 486. ಡಿ, 487. ಎ, 488. ಡಿ, 489. ಸಿ, 490. ಎ

ಕಮರ್ಷಿಯಲ್ ಪೈಲಟ್ ಆಗುವುದು ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್ ಕುಮಾರ್

- **ನಾನು ಕಮರ್ಷಿಯಲ್ ಪೈಲಟ್ ಆಗಬೇಕೆಂದುಕೊಂಡಿದ್ದೇನೆ. ಆದರೆ ಆರ್ಥಿಕ ಸಮಸ್ಯೆಯಿದೆ. ಒಬಿಸಿಗೆ ಅನ್ವಯವಾಗುವ ಸ್ಕಾಲರ್‌ಶಿಪ್ ಸೌಲಭ್ಯಗಳಿವೆಯೇ?**

ಚವಾಣ್, ಮೈಸೂರು.

- **ನಾನು ದ್ವಿತೀಯ ಸೈನ್ಸ್ ಪಿಯುಸಿ ಈಗಷ್ಟೇ ಮುಗಿಸಿದ್ದು ಕಮರ್ಷಿಯಲ್ ಪೈಲಟ್ ಆಗಬೇಕೆಂದುಕೊಂಡಿದ್ದೇನೆ. ಕಮರ್ಷಿಯಲ್ ಪೈಲಟ್ ಲೈಸೆನ್ಸ್ (ಸಿಪಿಎಲ್) ನಂತರ ಏರ್‌ಲೈನ್‌ನಲ್ಲಿ ಉದ್ಯೋಗ ಸಿಗಬಹುದೇ? ಬಿಎಸ್‌ಸಿ ಏವಿಯೇಷನ್ ಎಲ್ಲಿ ಮಾಡಬಹುದು? ಪೈಲಟ್ ಉದ್ಯೋಗಕ್ಕೆ ಭವಿಷ್ಯ ಹೇಗಿದೆ.**

ಗೀತ ಗಣೇಶ್, ಬೆಂಗಳೂರು.

ಕಮರ್ಷಿಯಲ್ ಪೈಲಟ್ ಆಗಲು ಅನುಕೂಲವಾಗುವ ಅನೇಕ ಕೋರ್ಸ್‌ಗಳಿವೆ. ಉದಾಹರಣೆಗೆ ಬಿಎಸ್‌ಸಿ (ಏವಿಯೇಷನ್), ಬಿಟೆಕ್ (ಏರೋಸ್ಪೇಸ್ ಎಂಜಿನಿಯರಿಂಗ್) ಇತ್ಯಾದಿ. ಆದರೆ, ಈ ಪದವಿಗಳ ಆಧಾರದ ಮೇಲೆ ಸಿಪಿಎಲ್ ಸಿಗುವುದಿಲ್ಲ; ಆದರೆ, ಸ್ವಲ್ಪ ಸುಲಭವಾಗಬಹುದು. ಸಿಪಿಎಲ್‌ಗಾಗಿ ಡಿಜಿಸಿಎ ಅನುಮೋದಿತ ಸಂಸ್ಥೆಗಳಲ್ಲಿ ತರಬೇತಿ ಪಡೆದು ಕನಿಷ್ಠ 200 ಗಂಟೆಗಳಷ್ಟು ಹಾರಾಟದ ನಂತರ ಸಿಪಿಎಲ್‌ಗೆ ಪ್ರಯತ್ನಿಸಬಹುದು.

ಈಗ ಕೋವಿಡ್ ಕಾರಣದಿಂದ ಏರ್‌ಲೈನ್ಸ್ ಉದ್ದಿಮೆ ಸಂಕಷ್ಟದಲ್ಲಿದೆ. ಆದರೆ, ಇನ್ನೆರಡು ಮೂರು ವರ್ಷಗಳಲ್ಲಿ ಪುನಶ್ಚೇತನಗೊಂಡು ಪ್ರಗತಿಯ ಹಾದಿಗೆ ಬರುವ ನಿರೀಕ್ಷೆಯಿದೆ.

ಒಬಿಸಿ ವರ್ಗದ ಸಿಪಿಎಲ್ ಕೋರ್ಸ್ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಸೌಲಭ್ಯವಿದೆ. ಹೆಚ್ಚಿನ ವಿವರಗಳಿಗೆ ಗಮನಿಸಿ: http://socialjustice.nic.in/SchemeList/Send/4?mid=32549

- **ಫುಲ್ ಸ್ಟ್ಯಾಕ್ ಡೆವಲಪರ್ ಕೋರ್ಸ್ ಮತ್ತು ವೆಬ್ ಡಿಸೈನರ್/ ಡೆವಲಪರ್ ನಡುವಿನ ವ್ಯತ್ಯಾಸ, ಮಾಹಿತಿ ಮತ್ತು ಉದ್ಯೋಗಾವಕಾಶಗಳ ಬಗ್ಗೆ ತಿಳಿಸಿ.**

ಮಧುಸೂಧನ್, ಬೆಂಗಳೂರು.

ವೆಬ್ ಡಿಸೈನರ್ ಕೋರ್ಸ್‌ಗಳಲ್ಲಿ ಡಿಸೈನ್ ಸಂಬಂಧಿತ ತಂತ್ರಜ್ಞಾನವನ್ನು ಕಲಿಸಲಾಗುತ್ತದೆ; ಹಾಗಾಗಿ ಇದೊಂದು ಸೃಜನಾತ್ಮಕ ವೃತ್ತಿ. ಫುಲ್ ಸ್ಟ್ಯಾಕ್ ಡೆವಲಪರ್ಸ್, ಫ್ರಂಟ್ ಎಂಡ್ ಮತ್ತು ಬ್ಯಾಕ್ ಎಂಡ್ ಕೆಲಸಗಳಿಗೆ ಅನ್ವಯವಾಗುವ ಎಲ್ಲಾ ತಂತ್ರಜ್ಞಾನಗಳಲ್ಲಿ ಪರಿಣತಿ ಹೊಂದಿರುತ್ತಾರೆ. ಹಾಗಾಗಿ, ವೆಬ್ ಡಿಸೈನ್ ಕೋರ್ಸ್ ಒಂದು ಸೀಮಿತ ವಲಯದ ಡಿಸೈನ್ ತಂತ್ರಜ್ಞಾನಗಳಿಗೆ ಸಂಬಂಧಿಸಿದ್ದು ಫುಲ್ ಸ್ಟ್ಯಾಕ್ ಡೆವಲಪರ್ ಕೋರ್ಸ್ ದತ್ತಾಂಶ, ಸರ್ವರ್, ಸಿಸ್ಟಮ್ಸ್, ಗ್ರಾಹಕ ಸಂಬಂಧಿತ ಬಹುಬಗೆಯ ಕೌಶಲಗಳನ್ನು ಕಲಿಸುವ ಸಮಗ್ರವಾದ ಕೋರ್ಸ್. ಹಾಗಾಗಿ, ಫುಲ್ ಸ್ಟ್ಯಾಕ್ ಡೆವಲಪರ್‌ಗಳಿಗೆ ಹೆಚ್ಚಿನ ಬೇಡಿಕೆಯಿದೆ.

- **ನಾನು ಈಗ ದ್ವಿತೀಯ ಪಿಯುಸಿ (ಸೈನ್ಸ್) ಓದುತ್ತಿದ್ದೇನೆ. ನಾನು ಸಿಎ ಮಾಡಲು ಸಾಧ್ಯವೇ?**

ನಿತೀಶ್, ಹೊನ್ನಾಳಿ.

ಪಿಯುಸಿ (ಸೈನ್ಸ್) ಮುಗಿಸಿ ಸಿಎ ಫೌಂಡೇಷನ್ ಕೋರ್ಸ್ ಮಾಡಬೇಕು. ನಂತರ ಇಂಟರ್‌ಮೀಡಿಯೆಟ್ ಮತ್ತು ಫೈನಲ್ ಕೋರ್ಸ್‌ಗಳನ್ನು ಮಾಡಬೇಕು. ಹೆಚ್ಚಿನ ವಿವರಗಳಿಗೆ ಗಮನಿಸಿ: https://www.icai.org/

- **ನಾನು ಪಿಯುಸಿ ಮುಗಿಸಿ ಸಿಇಟಿಗೆ ತಯಾರಿ ನಡೆಸುತ್ತಿದ್ದೇನೆ. ಯಾವ ಎಂಜಿನಿಯರಿಂಗ್ ಕೋರ್ಸಿಗೆ ಭವಿಷ್ಯದಲ್ಲಿ ಉತ್ತಮ ಅವಕಾಶಗಳಿವೆ?**

ಬೃಂದಾ, ಮೈಸೂರು.

- **ನಾನು ಪ್ರಥಮ ಪಿಯುಸಿ ಓದುತ್ತಿದ್ದೇನೆ. ಬಿಟೆಕ್ (ಕಂಪ್ಯೂಟರ್ ಸೈನ್ಸ್) ಕೋರ್ಸ್ ಮಾಡಿದರೆ ಒಳ್ಳೆಯದೇ? ಬಿಟೆಕ್ ಮತ್ತು ಬಿಇ ಕೋರ್ಸ್‌ಗಳ ನಡುವಿನ ವ್ಯತ್ಯಾಸ ಮತ್ತು ಉದ್ಯೋಗಾವಕಾಶಗಳ ಬಗ್ಗೆ ತಿಳಿಸಿ.**

ಪವನ್, ಶಿವಮೊಗ್ಗ.

ಎಂಜಿನಿಯರಿಂಗ್ ಕೋರ್ಸ್‌ನಲ್ಲಿ ಹಲವಾರು ಸ್ಪೆಷಲೈಜೇಷನ್‌ಗಳಿವೆ. ಯಾವುದೇ ಸ್ಪೆಷಲೈಜೇಷನ್ ಮಾಡಿದರೂ ಸಹ, ಕೋರ್ಸ್ ಫಲಿತಾಂಶ ಉತ್ಕೃಷ್ಟವಾಗಿದ್ದರೆ ಬೇಡಿಕೆ ಇದೆ. ಕಂಪ್ಯೂಟರ್ ಸೈನ್ಸ್, ಐಟಿ, ರೊಬಾಟಿಕ್ಸ್, ಆರ್ಟಿಫಿಷಿಯಲ್ ಇಂಟಲಿಜೆನ್ಸ್, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್, ಮೆಕ್ಯಾನಿಕಲ್ ಇತ್ಯಾದಿ ಕೋರ್ಸ್‌ಗಳಿಗೆ ಹೆಚ್ಚಿನ ಬೇಡಿಕೆ ಇದೆ.

ವಿಶ್ವವಿದ್ಯಾಲಯಗಳ ಸಂಪ್ರದಾಯ ಮತ್ತು ಆದ್ಯತೆಯಂತೆ ಎಂಜಿನಿಯರಿಂಗ್ ಕೋರ್ಸ್‌ಗಳನ್ನು ಬಿಟೆಕ್ ಅಥವಾ ಬಿಇ ಎಂದು ಗುರುತಿಸಲಾಗುತ್ತದೆ. ಹಾಗಾಗಿ, ಈಗ ನಾಮಾವಳಿಯ ಭಿನ್ನತೆಯನ್ನು ಬಿಟ್ಟರೆ ಕೋರ್ಸ್‌ಗಳಲ್ಲಿ ವ್ಯತ್ಯಾಸಗಳಿಲ್ಲ. ಹಾಗೂ, ಉದ್ಯೋಗದ ದೃಷ್ಟಿಯಿಂದ ಎರಡೂ ಕೋರ್ಸ್‌ಗಳಿಗೆ ಸರಿಸಮನಾದ ಮಾನ್ಯತೆಯಿದೆ.

ಎಂಜಿನಿಯರಿಂಗ್ ಕೋರ್ಸ್ ಮಾಡಲು ತಾರ್ಕಿಕ ಪ್ರತಿಪಾದನಾ ಕೌಶಲ, ಸಮಸ್ಯೆಗಳಿಗೆ ಪರಿಹಾರವನ್ನೊದಗಿಸುವ ಕೌಶಲ ಮತ್ತು ವಿಶ್ಲೇಷಣಾ ಕೌಶಲಗಳ ಜೊತೆಗೆ ಆಯಾ ಸ್ಪೆಷಲೈಜೇಷನ್ ಸಂಬಂಧಿತ ವಿಷಯಗಳಲ್ಲಿ ಆಸಕ್ತಿ ಮತ್ತು ಸ್ವಾಭಾವಿಕ ಪ್ರತಿಭೆ ಇರಬೇಕು.

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

Scholarships
BBA-Aviation, B.Com, BBA, BCA
2021-2022
• Student must have passed 12th Std with 80%
• Student or family member affected by Covid-19
Conditions apply

HBS
HINDUSTAN BUSINESS SCHOOL
OTHER COURSES
M.Com • MBA Aviation
9740037853
8971404357
P. B. No. 3776, Ashwathanagar, Marathahalli, Bengaluru - 560037 Toll Free: 1800 425 8650
Ph: 080-25238650, 25232217, 7795087448
Email: admissions@hindustanacademy.edu.in
www.hindustanacademy.edu.in
Scan for more details

❦ ಸುಭಾಷಿತ ❦

ಹಣದಿಂದ ಖರೀದಿಸಬಹುದಾದ ವಸ್ತುಗಳಿಗಾಗಿ ನಿಮ್ಮ ಹಣವನ್ನು ವ್ಯಯ ಮಾಡಿ. ಹಣದಿಂದ ಖರೀದಿಸಲಾಗದ ಸಂಗತಿಗಳಿಗಾಗಿ ನಿಮ್ಮ ಸಮಯವನ್ನು ವ್ಯಯ ಮಾಡಿ.

–ಹರುಕಿ ಮುರಾಕಮಿ

ಪುನರ್ ನಾಮಕರಣ ಪ್ರಹಸನ ಸಾಕು ಜನರ ಬದುಕಿನ ಸುಧಾರಣೆ ಆಗಬೇಕು

ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿ ಹೆಸರನ್ನು 'ಮೇಜರ್ ಧ್ಯಾನಚಂದ್ ಖೇಲ್ ರತ್ನ' ಪ್ರಶಸ್ತಿ ಎಂದು ಬದಲಾಯಿಸಲು ನಿರ್ಧರಿಸಿರುವ ಕೇಂದ್ರ ಸರ್ಕಾರದ ನಡೆ, ರಾಜಕಾರಣದ ಆಟವೇ ಹೊರತು ಕ್ರೀಡಾಸ್ಫೂರ್ತಿಯನ್ನು ಎತ್ತಿಹಿಡಿಯುವ ಪ್ರಯತ್ನವಲ್ಲ. ಸಂಸ್ಥೆ, ಸರ್ಕಾರಿ ಕಾರ್ಯಕ್ರಮ ಅಥವಾ ಆಟದ ಮೈದಾನಗಳಿಗೆ ಹಿಂದಿನ ಸರ್ಕಾರಗಳು ಮಾಡಿದ ನಾಮಕರಣವನ್ನು ಅಧಿಕಾರದಲ್ಲಿರುವ ಪಕ್ಷ ಬದಲಾಯಿಸುವ ಕ್ಷುಲ್ಲಕ ರಾಜಕಾರಣದಿಂದ ಜನರಿಗೆ ಅಥವಾ ದೇಶದ ಅಭಿವೃದ್ಧಿಗೆ ಉಪಯೋಗವೇನೂ ಇಲ್ಲ. ನಾಲ್ಕು ದಶಕಗಳ ನಂತರ ಭಾರತೀಯ ಹಾಕಿ ಆಟಗಾರರು ಒಲಿಂಪಿಕ್ಸ್‌ನಲ್ಲಿ ಪದಕ ಸಾಧನೆ ಮಾಡಿರುವ ಸಂದರ್ಭವನ್ನು ಬಳಸಿಕೊಂಡಿರುವ ಸರ್ಕಾರ, ಭಾರತೀಯ ಹಾಕಿಯ ದಂತಕಥೆ ಧ್ಯಾನಚಂದ್ ಹೆಸರನ್ನು ರಾಜಕೀಯ ಕಾರಣಗಳಿಗಾಗಿ ನೆನಪಿಸಿಕೊಂಡಿದೆ. ಧ್ಯಾನಚಂದ್ ಅವರ ಹೆಸರಿನಿಂದ ಕ್ರೀಡಾಕ್ಷೇತ್ರದ ಉನ್ನತ ಪ್ರಶಸ್ತಿಯನ್ನು ಗುರುತಿಸುವುದು ತಾರ್ಕಿಕವಾಗಿ ಸರಿ. ಆದರೆ, ಈಗಾಗಲೇ ಚಾಲ್ತಿಯಲ್ಲಿರುವ ಪ್ರಶಸ್ತಿಯೊಂದರ ಹೆಸರನ್ನು ಬದಲಿಸುವ ಮೂಲಕ ಧ್ಯಾನಚಂದ್ ಅವರನ್ನು ಗೌರವಿಸುವುದು ಸರಿಯಲ್ಲ. ಹಾಕಿ ಮಾಂತ್ರಿಕನಿಗೆ ಗೌರವ ಸಲ್ಲಿಸುವ ಉದ್ದೇಶ ಪ್ರಾಮಾಣಿಕವಾಗಿದ್ದಲ್ಲಿ, ಭಾರತೀಯ ಹಾಕಿಗೆ ಕಾಯಕಲ್ಪ ನೀಡಲು ಹೊಸ ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿಕೊಳ್ಳಬಹುದಿತ್ತು. ಯುವ ಹಾಕಿ ಆಟಗಾರರ ಶೋಧ ಹಾಗೂ ಅವರ ಸಾಮರ್ಥ್ಯವರ್ಧನೆಗೆ ಯೋಜನೆಗಳನ್ನು ರೂಪಿಸಬಹುದಿತ್ತು. ಅಲ್ಲದೆ, ಕ್ರೀಡಾಕ್ಷೇತ್ರಕ್ಕೆ ಸಲ್ಲಿಸಿದ ಜೀವಮಾನ ಸಾಧನೆಗಾಗಿ ಧ್ಯಾನಚಂದ್ ಹೆಸರಿನ ಪ್ರಶಸ್ತಿಯನ್ನು ಕೇಂದ್ರ ಸರ್ಕಾರ ಈಗಾಗಲೇ ನೀಡುತ್ತಿದೆ. ಈಗ ಧ್ಯಾನಚಂದ್‌ರ ಹೆಸರಿನಿಂದಲೇ ಮತ್ತೊಂದು ಪ್ರಶಸ್ತಿಯನ್ನು ನೀಡಲು ಹೊರಟಿರುವ ಔಚಿತ್ಯ ಪ್ರಶ್ನಾರ್ಹ. ಅಸಂಗತ ತರ್ಕ, ಒತ್ತಾಯಗಳನ್ನು ನಿರ್ಲಕ್ಷಿಸುವುದರಲ್ಲಿ ಸರ್ಕಾರದ ವಿವೇಕ ಮತ್ತು ಪ್ರಶಸ್ತಿಗಳ ಗೌರವ ಅಡಗಿದೆ.

ಹೆಸರುಗಳಿಗೆ ಸಂಬಂಧಿಸಿದ ಪ್ರಹಸನಗಳನ್ನು ತಪ್ಪಿಸುವ ದಿಸೆಯಲ್ಲಿ ಪ್ರಶಸ್ತಿ, ಕಾರ್ಯಕ್ರಮ, ಸಂಸ್ಥೆಗಳಿಗೆ ನಾಮಕರಣ ಮಾಡುವ ಕುರಿತು ಸ್ಪಷ್ಟವಾದ ಮಾರ್ಗಸೂಚಿಯೊಂದು ಅಗತ್ಯ

ಕ್ರೀಡಾಪ್ರಶಸ್ತಿಗೆ ರಾಜಕಾರಣಿಯ ಹೆಸರು ಇರುವುದನ್ನು ವಿರೋಧಿಸುವವರು ವಿಶ್ವದ ಅತಿದೊಡ್ಡ ಕ್ರಿಕೆಟ್ ಕ್ರೀಡಾಂಗಣವಾದ ಅಹಮದಾಬಾದ್‌ನ ಮೊಟೇರಾ ಸ್ಟೇಡಿಯಂಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಹೆಸರನ್ನು ನಾಮಕರಣ ಮಾಡಿದ್ದನ್ನು ನೆನಪಿಸಿಕೊಳ್ಳಬೇಕು. 'ಗುಜರಾತ್ ಸ್ಟೇಡಿಯಂ' ಎಂದು ಕರೆಸಿಕೊಳ್ಳುತ್ತಿದ್ದ ಕ್ರೀಡಾಂಗಣವನ್ನು 1982ರಲ್ಲಿ 'ಸರ್ದಾರ್ ಪಟೇಲ್ ಸ್ಟೇಡಿಯಂ' ಎಂದು ಹೆಸರಿಸಲಾಗಿತ್ತು. 2015-16ರಲ್ಲಿ ಮತ್ತೊಮ್ಮೆ ಕ್ರೀಡಾಂಗಣದ ಮರು ನಿರ್ಮಾಣಕ್ಕೆ ಚಾಲನೆ ದೊರೆತು, ಇತ್ತೀಚೆಗೆ ಪೂರ್ಣಗೊಂಡ ಅಂಗಳಕ್ಕೆ ನರೇಂದ್ರ ಮೋದಿ ಅವರ ಹೆಸರಿಡಲಾಗಿದೆ. ನರೇಂದ್ರ ಮೋದಿ ಅವರ ಬದಲಾಗಿ ಕ್ರಿಕೆಟ್ ಸಾಧಕರೊಬ್ಬರ ಹೆಸರನ್ನು ಕ್ರೀಡಾಂಗಣಕ್ಕೆ ನಾಮಕರಣ ಮಾಡುವ ಮೂಲಕ ಸರ್ಕಾರದ ಗೌರವ ಹೆಚ್ಚಿಸಿಕೊಳ್ಳುವ ಹಾಗೂ ಸಾರ್ವಜನಿಕವಾಗಿ ನೈತಿಕ ಮಾದರಿಯೊಂದಕ್ಕೆ ನಾಂದಿ ಹಾಡುವ ಅವಕಾಶವನ್ನು ಬಿಜೆಪಿ ಬಿಟ್ಟುಕೊಟ್ಟಿತ್ತು. ಪಕ್ಷದ ಮುಖಂಡರ ಹೆಸರುಗಳನ್ನು ಕ್ರೀಡಾಂಗಣಗಳಿಗೆ ಇರಿಸುವ ಕಾಂಗ್ರೆಸ್ ಪಕ್ಷದ ನಡವಳಿಕೆಯನ್ನು ವಿರೋಧಿಸಿಕೊಂಡು ಬಂದ ಬಿಜೆಪಿ, ಈಗ ಅಧಿಕಾರದಲ್ಲಿರುವಾಗ ಕಾಂಗ್ರೆಸ್ ದಾರಿಯಲ್ಲಿಯೇ ನಡೆದಿದೆ. ಕೇಂದ್ರ ಸರ್ಕಾರದ ಪುನರ್ ನಾಮಕರಣದ ನಿರ್ಧಾರ ರಾಜ್ಯ ಸರ್ಕಾರಗಳಿಗೂ ಮಾದರಿಯಾಗಿ ಒದಗಿಬಂದಿದೆ. ಮುಸ್ಲಿಂ ಆಡಳಿತದ ಸ್ಮೃತಿಗಳನ್ನು ನೆನಪಿಸುವ ಊರುಗಳ ಹೆಸರುಗಳನ್ನು ಬದಲಿಸುವ ಉತ್ಸಾಹವನ್ನು ಬಿಜೆಪಿ ಅಧಿಕಾರದಲ್ಲಿರುವ ರಾಜ್ಯ ಸರ್ಕಾರಗಳು ಪ್ರದರ್ಶಿಸುತ್ತಿವೆ. ಕರ್ನಾಟಕದಲ್ಲಿ ಬಡವರಿಗೆ ಕಡಿಮೆ ದರದಲ್ಲಿ ಆಹಾರ ನೀಡುತ್ತಿರುವ 'ಇಂದಿರಾ ಕ್ಯಾಂಟೀನ್'ಗಳನ್ನು ಅನ್ನಪೂರ್ಣೇಶ್ವರಿ ಹೆಸರಿನಲ್ಲಿ ಗುರುತಿಸಬೇಕೆನ್ನುವ ವಾದವೂ ರಾಜಕೀಯ ಚೇಷ್ಟೆಯಲ್ಲದೆ ಬೇರೇನೂ ಅಲ್ಲ. ಇಂಥ ಬದಲಾವಣೆಗಳು ರಾಜಕೀಯ ಮೇಲಾಟಗಳಿಗೆ ಕಾರಣವಾಗಿ, ಅಧಿಕಾರದಲ್ಲಿರುವ ಪಕ್ಷಗಳು ಬದಲಾಗುತ್ತಾ ಹೋದಂತೆ ಪುನರ್ ನಾಮಕರಣ ಪ್ರಹಸನಗಳು ಮತ್ತೆ ಮತ್ತೆ ನಡೆದರೆ ಆಶ್ಚರ್ಯವೇನಿಲ್ಲ. ಯಾವುದೇ ಸರ್ಕಾರ ಮಾಡಬೇಕಾಗಿರುವುದು ಸ್ಮೃತಿಗಳನ್ನು ಬದಲಿಸುವ ಕೆಲಸವನ್ನಲ್ಲ; ಜನಸಾಮಾನ್ಯರ ಬದುಕನ್ನು ಸುಧಾರಿಸುವ ಕೆಲಸ. ಆಡಳಿತದ ವೈಫಲ್ಯವನ್ನು ಮರೆಮಾಚಿ ಜನರ ಗಮನವನ್ನು ಬೇರೆಡೆ ಸೆಳೆಯುವ ತಂತ್ರಗಾರಿಕೆ ಪುನರ್ ನಾಮಕರಣಗಳ ಹಿಂದಿದೆ.

ಕೋವಿಡ್ ಎರಡನೇ ಅಲೆಯಿಂದ ಚೇತರಿಸಿಕೊಳ್ಳುವ ಮೊದಲೇ ಮೂರನೇ ಅಲೆಯ ಆತಂಕ ದೇಶವನ್ನು ಕಾಡುತ್ತಿದೆ. ಇಂಥ ಸಂಕಷ್ಟದ ಸಮಯದಲ್ಲಿ ಆರೋಗ್ಯ ಕ್ಷೇತ್ರವನ್ನು ಬಲಪಡಿಸುವ ಹಾಗೂ ಜನರ ನೈತಿಕ–ಆರ್ಥಿಕ ಶಕ್ತಿಯನ್ನು ಹೆಚ್ಚಿಸಲು ಅಗತ್ಯವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾದ ಸರ್ಕಾರ, ಉನ್ನತ ಪ್ರಶಸ್ತಿಯೊಂದರ ಹೆಸರು ಬದಲಿಸಿದ್ದನ್ನೇ ಸಾಧನೆಯಾಗಿ ಬಿಂಬಿಸಿಕೊಳ್ಳುವ ಮೂಲಕ ಜನರ ಗಮನವನ್ನು ಬೇರೆಡೆ ಸೆಳೆಯಲು ಹೊರಟಂತಿದೆ. ಹೆಸರು ಬದಲಿಸಿದ್ದೇ ಸಾಧನೆ ಎನ್ನುವಂತೆ ಸರ್ಕಾರ ಪ್ರಚಾರ ಪಡೆಯುವುದು ಹಾಗೂ ಅದನ್ನು ವಿರೋಧಿಸುವುದರಲ್ಲೇ ಪ್ರತಿಪಕ್ಷಗಳು ತಮ್ಮೆಲ್ಲ ಸಾಮರ್ಥ್ಯ ಬರಿದು ಮಾಡಿಕೊಳ್ಳುವುದು ಜನರಿಗೆ ಉತ್ತರದಾಯಿತ್ವ ಹೊಂದಿರುವ ರಾಜಕಾರಣದ ಲಕ್ಷಣವಲ್ಲ. ನಾಮಕರಣವೂ ಒಂದು ಸಾಧನೆ; ಪುನರ್ ನಾಮಕರಣವೂ ಒಂದು ಸಾಧನೆ ಎನ್ನುವ ಕೆಟ್ಟ ಮನಃಸ್ಥಿತಿಯಿಂದ ರಾಜಕೀಯ ಪಕ್ಷಗಳು ಹೊರಬರಬೇಕು. ಹೊಸ ಕಾರ್ಯಕ್ರಮಗಳನ್ನು ರೂಪಿಸಿ, ಅವುಗಳಿಗೆ ನಾಮಕರಣ ಮಾಡುವಲ್ಲಿ ಸರ್ಕಾರ ಸೃಜನಶೀಲತೆ ತೋರಿದರೆ, ಅದನ್ನು ಯಾರೂ ಆಕ್ಷೇಪಿಸುವುದಿಲ್ಲ. ಅದರ ಬದಲಾಗಿ ಇರುವುದನ್ನು ಮುರಿದು ಕಟ್ಟುವುದರಲ್ಲಿ ಸೃಜನಶೀಲತೆಯೂ ಇಲ್ಲ, ಅದು ಸಾಧನೆಯೂ ಅಲ್ಲ. ಹೆಸರುಗಳಿಗೆ ಸಂಬಂಧಿಸಿದ ಪ್ರಹಸನಗಳನ್ನು ತಪ್ಪಿಸುವ ನಿಟ್ಟಿನಲ್ಲಿ, ಪ್ರಶಸ್ತಿ, ಕಾರ್ಯಕ್ರಮ, ಸಂಸ್ಥೆಗಳಿಗೆ ನಾಮಕರಣ ಮಾಡುವ ಕುರಿತು ಸ್ಪಷ್ಟವಾದ ಮಾರ್ಗಸೂಚಿಯೊಂದು ಅಗತ್ಯ. ಅಂಥ ಮಾರ್ಗಸೂಚಿ ರೂಪಿಸಲು ಪ್ರಸಕ್ತ ಪುನರ್ ನಾಮಕರಣ ವಿವಾದ ಪ್ರೇರಣೆಯಾಗಲಿ.

ದಿನದ ಟ್ವೀಟ್

ಹೆಮ್ಮೆಯ ಯೋಧರು

2008ರ ಮುಂಬೈ ದಾಳಿಯಲ್ಲಿ, ಮಾಜಿ ಯೋಧ ತುಕಾರಾಂ ಓಂಬ್ಳೆ ಅವರು ಭಯೋತ್ಪಾದಕನೊಬ್ಬನನ್ನು ಸೆರೆಹಿಡಿದಿದ್ದರಿಂದ, ಕೃತ್ಯದಲ್ಲಿ ಪಾಕಿಸ್ತಾನದ ನೇರ ಪಾಲ್ಗೊಳ್ಳುವಿಕೆಯ ಬಗ್ಗೆ ಸ್ಪಷ್ಟವಾದ ಪುರಾವೆ ಲಭಿಸಿತ್ತು. ಪ್ರಸ್ತುತ, ಹರಿಯಾಣದ ಸಣ್ಣ ಹಳ್ಳಿಗೆ ಸೇರಿದ ಸೇವಾನಿರತ ಯೋಧ ನೀರಜ್ ಚೋಪ್ರಾ, ಅಥ್ಲೆಟಿಕ್ಸ್‌ನಲ್ಲಿ ಐತಿಹಾಸಿಕ ಒಲಿಂಪಿಕ್ ಚಿನ್ನದ ಪದಕವನ್ನು ಜಯಿಸಿದ್ದಾರೆ.

ಬ್ರಹ್ಮ ಚೆಲ್ಲನಿ, ಚಿಂತಕ, ಲೇಖಕ

ಕಿಡಿನುಡಿ

ಈ ಹಿಂದೆ ನಮ್ಮ ಪಕ್ಷದ ಕಾರ್ಯಕರ್ತರಿಗೆ ಯಾರಾದರೂ ಹೊಡೆದರೆ ತಿರುಗಿಸಿ ಹೊಡೆಯೋದಕ್ಕೆ ನಮಗೆ ಶಕ್ತಿ ಇರಲಿಲ್ಲ. ಎಂತಹ ಸಂದರ್ಭ ಬಂದರೂ ಶಾಂತವಾಗಿರಿ ಎನ್ನುತ್ತಿದ್ದರು ಹಿರಿಯರು. ಈಗ ಯಾರಾದರೂ ಮೈ ಮುಟ್ಟಿದರೆ, ಯಾವುದರಲ್ಲಿ ಹೊಡೀತಾರೋ ಅದರಲ್ಲಿಯೇ ಹೊಡೆದು, ಒಂದಕ್ಕೆ ಎರಡು ತೆಗೆದುಬಿಡಿ ಎನ್ನುವಷ್ಟರ ಮಟ್ಟಿಗೆ ಬಿಜೆಪಿ ಬೆಳೆದಿದೆ. ಇವತ್ತು ಇಡೀ ಪ್ರಪಂಚದಲ್ಲಿ ಬಿಜೆಪಿ ಹೇಗೆ ಬೆಳೆದಿದೆ ಎಂಬುದು ಎಲ್ಲರಿಗೂ ಗೊತ್ತಿದೆ.

ಕೆ.ಎಸ್.ಈಶ್ವರಪ್ಪ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 9-8-1996

- **ನಾರಾಯಣಪುರ ಅಣೆ ತನಿಖೆಗೆ ರೆಡ್ಡಿ ಸಮಿತಿ**

ಬೆಂಗಳೂರು, ಆ. 8– ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣಪುರ ಅಣೆಕಟ್ಟೆ ದುರ್ಬಲಗೊಂಡಿದೆ ಎಂಬ ಮತ್ತು ಇದೇ ಅಣೆಯ ಎಡದಂಡೆ ಕಾಲುವೆ ದುರಸ್ತಿ ನೆಪದಲ್ಲಿ ನೂರಾರು ಕೋಟಿ ಮೊತ್ತದ ಹಣ ದುರುಪಯೋಗ ಆಗಿದೆ ಎಂಬ ಆರೋಪಗಳ ತನಿಖೆಯನ್ನು ಕೆ.ಸಿ. ರೆಡ್ಡಿ ನೇತೃತ್ವದ ಉನ್ನತಾಧಿಕಾರ ತಾಂತ್ರಿಕ ಸಮಿತಿಗೆ ವಹಿಸುವುದಾಗಿ ಸರ್ಕಾರ ವಿಧಾನಸಭೆಯಲ್ಲಿ ಇಂದು ಪ್ರಕಟಿಸಿತು.

ಈ ಅಣೆಕಟ್ಟೆ ಮತ್ತು ಕಾಲುವೆಯ ಸ್ಥಿತಿ ಕುರಿತು ಮಾಡಿದ ಪ್ರಸ್ತಾಪಕ್ಕೆ ಉತ್ತರಿಸಿದ ಭಾರಿ ನೀರಾವರಿ ಸಚಿವ ಕೆ.ಎನ್. ನಾಗೇಗೌಡರು ಈ ತನಿಖೆಯನ್ನು ಪ್ರಕಟಿಸಿದರಲ್ಲದೆ, ಸಮಿತಿ ಈ ವಿಚಾರದಲ್ಲಿ ಕೇಳಿಬಂದಿರುವ ಎಲ್ಲಾ ಆರೋಪಗಳನ್ನು ಸಾದ್ಯಂತವಾಗಿ ಪರಿಶೀಲಿಸಲಿದೆ ಎಂದರು.

50 ವರ್ಷಗಳ ಹಿಂದೆ

ಸೋಮವಾರ, 9-8-1971

- **ಬನ್ನೇರುಘಟ್ಟದಲ್ಲಿ ರಾಷ್ಟ್ರೀಯ ಅರಣ್ಯೋದ್ಯಾನ ಅಭಿವೃದ್ಧಿ ಯೋಜನೆಯ ಉದ್ಘಾಟನೆ**

ಬೆಂಗಳೂರು, ಆ. 8– ಇಲ್ಲಿಂದ ಹದಿನೈದು ಮೈಲಿಗಳ ದೂರವಿರುವ ಪ್ರವಾಸಿ ಹಾಗೂ ಯಾತ್ರಾಸ್ಥಳವಾಗಿರುವ ಬನ್ನೇರುಘಟ್ಟದಲ್ಲಿ 20 ಚದರ ಮೈಲಿಗಳ ರಾಷ್ಟ್ರೀಯ ಅರಣ್ಯೋದ್ಯಾನ ಅಭಿವೃದ್ಧಿ ಯೋಜನೆಯನ್ನು ರಾಜ್ಯಪಾಲ ಶ್ರೀ ಧರ್ಮವೀರ ಅವರು ಇಂದು ಉದ್ಘಾಟಿಸಿದರು.

ಸಸಿಯೊಂದನ್ನು ನೆಡುವ ಮೂಲಕ ಉದ್ಘಾಟನೆ ನೆರವೇರಿಸಿದ ರಾಜ್ಯಪಾಲರು, 'ಅರಣ್ಯದ ಸುತ್ತಲಿರುವ ಪ್ರದೇಶದಲ್ಲಿ ಜಾನುವಾರು ವಿಮೆ ಯೋಜನೆಯನ್ನು ಜಾರಿಗೆ ತರುವುದರಿಂದ, ಜನರು ಜಾನುವಾರು ಹಿಡಿಯುವ ವನ್ಯಮೃಗಗಳನ್ನು ಕೊಲ್ಲುವ ಪ್ರಕರಣಗಳನ್ನು ತಪ್ಪಿಸಬಹುದು' ಎಂದು ಹೇಳಿದರು.

ಕ್ರೀಡೆಯ ಬಗೆಗಿನ ನಮ್ಮ ಮನೋಧೋರಣೆ ಬದಲಾಗಬೇಕಿದೆ

ಬೆಳೆವ ಕ್ರೀಡಾಸಿರಿ ಮೊಳಕೆಯಲ್ಲೇ ಕಾಣಿ

ವಿಶ್ಲೇಷಣೆ

ಗಿರೀಶ ದೊಡ್ಡಮನಿ

ನೀರಜ್ ಚೋಪ್ರಾ ಹೆಸರು ಈಗ ಮನೆಮಾತಾಗಿದೆ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನೀರಜ್, ಜಾವೆಲಿನ್ ಥ್ರೋನಲ್ಲಿ ಚಿನ್ನದ ಪದಕ ಜಯಿಸುತ್ತಿದ್ದಂತೆಯೇ ದೇಶದಾದ್ಯಂತ ಸಂಭ್ರಮ ಗರಿಗೆದರಿತು. ದೇಶಭಕ್ತಿ, ಕ್ರೀಡಾಪ್ರೀತಿಯ ಭಾವ ಹೊನಲಾಗಿ ಹರಿಯಿತು. ಹಳ್ಳಿಯ ಹುಡುಗರಿಂದ ಹಿಡಿದು ರಾಷ್ಟ್ರಪತಿಯವರೆಗೆ ಎಲ್ಲರೂ ಅಭಿನಂದನೆಯ ಮಳೆಗರೆದರು. ಹರಿಯಾಣದ ಕೃಷಿ ಕುಟುಂಬದ ಹುಡುಗನಿಗೆ ಹತ್ತಾರು ಕೋಟಿ ರೂಪಾಯಿ ಬಹುಮಾನ ಹರಿದುಬಂತು.

ಆದರೆ, 23 ವರ್ಷದ ಈ ಹುಡುಗ ಮಾತ್ರ ಒಂದೇ ದಿನದಲ್ಲಿ ತಾರೆಯಾಗಿದ್ದಲ್ಲ. ಅವರ ಸಾಧನೆಯ ಹಿಂದಿನ ಪ್ರಮುಖ ವ್ಯಕ್ತಿ ಕೋಚ್, ಜರ್ಮನಿಯ ಯುವೆ ಹಾನ್ ಎರಡು ವರ್ಷಗಳ ಹಿಂದೆ ಇಲ್ಲಿಯ ವ್ಯವಸ್ಥೆಗಳ ಬಗ್ಗೆ ಜುಗುಪ್ಸೆಗೊಂಡು ತಮ್ಮ ದೇಶಕ್ಕೆ ಮರಳಿದ್ದರೆ, ಈ ಚಿನ್ನದ ಕ್ಷಣ ಬಹುಶಃ ಮರೀಚಿಕೆಯಾಗುತ್ತಿತ್ತೇನೋ?

'ನಾನು ಚೋಪ್ರಾಗೆ ಎರಡು ಭರ್ಜಿಗಳಿಗಾಗಿ ಬೇಡಿಕೆ ಸಲ್ಲಿಸಿದ್ದೆ. ಕೆಲವು ದಿನಗಳಾದರೂ ಅವು ಬರಲಿಲ್ಲ. ನಂತರ ವಿಚಾರಿಸಿದಾಗ, ಸಂಬಂಧಪಟ್ಟ ವ್ಯಕ್ತಿಯು ನಾನು ಮನವಿ ಮಾಡಿದ್ದ ಇ- ಮೇಲ್ ಅನ್ನೇ ತೆರೆದು ನೋಡಿರಲಿಲ್ಲ. ಇಲ್ಲಿ ವೃತ್ತಿಪರತೆಯ ಕೊರತೆ ಇದೆ' ಎಂದು ಹಾನ್ ಎರಡು ವರ್ಷಗಳ ಹಿಂದೆ ಅಸಮಾಧಾನ ವ್ಯಕ್ತಪಡಿಸಿದ್ದರು.

ಹೋದ ಜೂನ್‌ನಲ್ಲಿ ಪಟಿಯಾಲದಲ್ಲಿ ನೀರಜ್, ಶಿವಪಾಲ್ ಯಾದವ್ ಮತ್ತು ಅನುರಾಣಿ ಅವರಿಗೆ ತರಬೇತಿ ನೀಡುವಾಗಲೂ ಹಾನ್ ಬಹಳಷ್ಟು ತೊಂದರೆಗಳನ್ನು ಎದುರಿಸಿದ್ದರು. 'ಭಾರತ ಕ್ರೀಡಾ ಪ್ರಾಧಿಕಾರ, ಭಾರತ ಅಥ್ಲೆಟಿಕ್ ಫೆಡರೇಷನ್‌ಗಳನ್ನು ಸುಧಾರಿಸುವುದು ಕಷ್ಟ. ಒಲಿಂಪಿಕ್ ಕೂಟಕ್ಕೆ ಹೋಗುವ ಕ್ರೀಡಾಪಟುಗಳಿಗೆ ಸರಿಯಾದ ಪೋಷಕಾಂಶಯುಕ್ತ ಆಹಾರದ ವ್ಯವಸ್ಥೆಯಾಗುತ್ತಿಲ್ಲ. ಆಡಳಿತ ನಡೆಸುವವರಿಗೆ ಜ್ಞಾನವಿಲ್ಲವೋ ಅಥವಾ ನಿರ್ಲಕ್ಷ್ಯ ಧೋರಣೆಯೋ ಗೊತ್ತಿಲ್ಲ. ನನಗೂ ಹಿಂದಿನ ಬಾಕಿ ನೀಡುವುದಿಲ್ಲವೆಂದು ಬೆದರಿಸಿ ಹೊಸ ಗುತ್ತಿಗೆಗೆ ಸಹಿ ಮಾಡಿಸಿಕೊಂಡಿದ್ದಾರೆ' ಎಂದು ಮಾಧ್ಯಮಗಳ ಮುಂದೆ ಅವರು ಆರೋಪಿಸಿದ್ದರು.

ನೀರಜ್ ಒಲಿಂಪಿಕ್ ಪದಕ ಜಯಿಸುವ ನಿರೀಕ್ಷೆಯು ಮೂರು ವರ್ಷಗಳಿಂದಲೂ ಇದೆ. ಅವರಿಗೇ ಇಂತಹ ಪರಿಸ್ಥಿತಿ ಎದುರಾದರೆ, ಉಳಿದವರ ಪಾಡೇನು?

ಮಹಿಳೆಯರ ಬಾಕ್ಸಿಂಗ್‌ನಲ್ಲಿ ಕಂಚಿನ ಪದಕ ಜಯಿಸಿದ ಲವ್ಲಿನಾ ಬೊರ್ಗೊಹೈನ್ ಟೋಕಿಯೊದಲ್ಲಿ 69 ಕೆ.ಜಿ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ಜಯಿಸಿದ್ದೇ ತಡ, ಅವರ ಮನೆಯಿರುವ ಅಸ್ಸಾಂ ರಾಜ್ಯದ ಗೋಲ್‌ಘಾಟ್ ಜಿಲ್ಲೆಯ ಸರುಪಥರ್ ಗ್ರಾಮಕ್ಕೆ ಟಾರ್ ರಸ್ತೆ ಮಾಡುವ ಕೆಲಸ ಆರಂಭವಾಯಿತು. ಇದೀಗ ಅವರು ಈ ರಸ್ತೆಯ ಮೂಲಕ ತಮ್ಮ ಮನೆಗೆ ಮರಳಲಿದ್ದಾರೆ. ಆದರೆ, ಇದಕ್ಕೂ ಮುನ್ನ ಮಳೆಗಾಲದಲ್ಲಿ ಕೆಸರು ಗದ್ದೆಯಂತಾಗುತ್ತಿದ್ದ ರಸ್ತೆಯಲ್ಲಿ ಅದೆಷ್ಟು ಬಾರಿ ಬೀಳುತ್ತ, ಏಳುತ್ತ ಬಾಕ್ಸಿಂಗ್ ತರಬೇತಿ, ಶಾಲೆಗಳಿಗೆ ಹೋಗಿರಬಹುದು? ಲೆಕ್ಕ ಇಟ್ಟವರಾರು?

ಬೆಳ್ಳಿ ಗೆದ್ದ ವೇಟ್‌ಲಿಫ್ಟರ್ ಮೀರಾಬಾಯಿ ಚಾನು ಬಾಲ್ಯದಲ್ಲಿ ಅಭ್ಯಾಸಕ್ಕಾಗಿ ತಮ್ಮ ಮನೆಯಿಂದ ನಗರಕ್ಕೆ ತೆರಳಲು ಹೆದ್ದಾರಿಯಲ್ಲಿ ಸಾಗುತ್ತಿದ್ದ ಲಾರಿಗಳನ್ನು ಅವಲಂಬಿಸಿದ್ದರು. ಈಚೆಗೆ ಆ ಲಾರಿ ಚಾಲಕರನ್ನು ಕರೆದು ಸತ್ಕರಿಸಿದರು. 41 ವರ್ಷದ ನಂತರ ಒಲಿಂಪಿಕ್ ಕೂಟದಲ್ಲಿ ಪದಕ ಗೆದ್ದ ಭಾರತ ಪುರುಷರ ಹಾಕಿ ತಂಡದ 'ಗೋಡೆ' ಪಿ.ಆರ್.ಶ್ರೀಜೇಶ್ ಅವರು ಗೋಲ್‌ಕೀಪಿಂಗ್ ಅರಂಭಿಸಲು ಇಷ್ಟಪಟ್ಟಾಗ, ಕಿಟ್ ಕೊಡಿಸಲು ಮನೆಯಲ್ಲಿದ್ದ ಹಸು ಮಾರಿ ಅವರ ತಂದೆ ದುಡ್ಡು ಹೊಂದಿಸಿದ್ದರಂತೆ.

ಈಗಷ್ಟೇ ಅಲ್ಲ, ಈ ಹಿಂದಿನ ಒಲಿಂಪಿಕ್ಸ್ ಸಂದರ್ಭದಲ್ಲಿಯೂ ಇಂತಹ ಕಥೆಗಳು ಅದೆಷ್ಟೋ ವರದಿಯಾಗಿದ್ದವು. ಬಡತನ, ಸಮಾಜದ ವ್ಯಂಗ್ಯ, ಸರ್ಕಾರದ ನಿರ್ಲಕ್ಷ್ಯದ ನಡುವೆಯೂ ಒಲಿಪಿಕ್ಸ್‌ನಂತಹ ಮಹಾ ಕ್ರೀಡಾಮೇಳದಲ್ಲಿ ಸ್ಪರ್ಧಿಸುವ ಮಟ್ಟಕ್ಕೆ ಬೆಳೆಯುವುದು ಸುಲಭಸಾಧ್ಯವಲ್ಲ. ನಗರದ ಮಧ್ಯಮವರ್ಗದ ಕುಟುಂಬದ ಮಕ್ಕಳಿಗೂ ಇದು ಕಷ್ಟ. ಏಕೆಂದರೆ, ಕ್ರಿಕೆಟ್ ರಂಗಿನ ಥಳುಕು ಬಳುಕು ಶ್ರೀಮಂತಿಕೆಯ ಮುಂದೆ ಉಳಿದ ಆಟಗಳತ್ತ ಆಸಕ್ತಿ ತೋರಿದರೆ ಸಿಗುವ ಪ್ರೋತ್ಸಾಹ ಅಷ್ಟಕ್ಕಷ್ಟೆ. ಅದರ ನಡುವೆಯೂ ಸ್ವಯಂ ಪ್ರೇರಣೆಯೊಂದಿಗೆ ಆಟ ಮುಂದುವರಿಸುವುದು ಸುಲಭವಲ್ಲ. ಒಂದೊಮ್ಮೆ ಕುಟುಂಬದ ಪ್ರೋತ್ಸಾಹ ಸಿಕ್ಕರೂ, ಮಕ್ಕಳು ಯಾವ ಹಂತದವರೆಗೆ ಬೆಳೆಯಬಲ್ಲರು, ಅದಕ್ಕೆ ಸೂಕ್ತ ಸೌಲಭ್ಯಗಳು ಇವೆಯೇ, ಪ್ರತಿಭೆಗೆ ತಕ್ಕ ಮನ್ನಣೆ ನೀಡುವ ವ್ಯವಸ್ಥೆ ಇದೆಯೇ ಎಂಬ ಪ್ರಶ್ನೆಗಳಿಗೆ ಸೂಕ್ತ ಉತ್ತರ ಸಿಗುವುದು ಮಹಾನಗರಗಳಲ್ಲಿಯೂ ಸಾಧ್ಯವಿಲ್ಲ.

ಅದಕ್ಕಾಗಿಯೇ 130 ಕೋಟಿ ಜನಸಂಖ್ಯೆಯ ಭಾರತ, ಒಲಿಂಪಿಕ್ಸ್‌ನಲ್ಲಿ ಬೆರಳೆಣಿಕೆಯಷ್ಟು ಪದಕಗಳನ್ನು ಗೆಲ್ಲುತ್ತಿದೆ. ಆದರೆ ಈಗ ಕ್ರೀಡೆಯ ಬಗ್ಗೆ ಇರುವ ನಮ್ಮ ಧೋರಣೆಯನ್ನು ಬದಲಿಸಿಕೊಳ್ಳುವ ಅವಶ್ಯಕತೆ ಮತ್ತು ಅನಿವಾರ್ಯವನ್ನು ಟೋಕಿಯೊ ಒಲಿಂಪಿಕ್ಸ್ ತೋರಿಸಿಕೊಟ್ಟಿದೆ. ಆಟಗಳು ಕೇವಲ ಮನರಂಜನೆ ಅಥವಾ ಕಾಲಹರಣದ ಚಟುವಟಿಕೆಯಲ್ಲ ಎಂಬ ಅರಿವು ಮನೆಯಿಂದ ಆರಂಭವಾಗಬೇಕು. ಸಾಮಾನ್ಯರನ್ನು ಅಸಾಮಾನ್ಯರನ್ನಾಗಿ ರೂಪಿಸುವ ಶಕ್ತಿ ಇರುವ ಕ್ರೀಡೆಯು ಸಂಸ್ಕೃತಿಯಾಗಬೇಕಲ್ಲವೇ?

ತಮ್ಮ ಮಕ್ಕಳು ಕ್ರೀಡೆಯಲ್ಲಿ ಭವಿಷ್ಯ ರೂಪಿಸಿಕೊಳ್ಳಬಲ್ಲರೇ ಎಂದು ಪಾಲಕರು ಕೇಳುವುದು ನ್ಯಾಯಸಮ್ಮತವೇ ಆಗಿದೆ. ಅವರಿಗೆ ಅಭಯ ನೀಡುವ ಕೆಲಸ ಸರ್ಕಾರ ಮತ್ತು ಕ್ರೀಡಾಸಂಸ್ಥೆಗಳಿಂದ ಆಗಬೇಕು. ಗೆಲ್ಲುವ ಕುದುರೆಯ ಮೇಲೆ ಬಾಜಿ ಕಟ್ಟುವವರಿಗೆ ಕೊರತೆಯಿಲ್ಲ. ಆದರೆ ಕುದುರೆಗಳನ್ನು ಜಯಿಸುವ ಮಟ್ಟಕ್ಕೆ ಬೆಳೆಸುವ ಕೆಲಸ ಮೊದಲು ನಡೆಯಬೇಕು. ಗ್ರಾಮೀಣ ಮಟ್ಟದಿಂದಲೇ ಪ್ರತಿಭಾಶೋಧ, ಪೋಷಣೆ ಆರಂಭವಾಗಬೇಕು. ಕೈಗಾರಿಕೆ, ಕಾರ್ಪೊರೇಟ್ ಸಂಸ್ಥೆ, ಬ್ಯಾಂಕ್, ಸರ್ಕಾರದ ಇಲಾಖೆಗಳಲ್ಲಿ ಆಟಗಾರರಿಗೆ ನೌಕರಿ, ಪ್ರೋತ್ಸಾಹಧನ ನೀಡಬೇಕು. ಆಗ ಹೆಚ್ಚು ವಿಭಾಗಗಳಲ್ಲಿ ಸ್ಪರ್ಧಿಸಲು ತಂಡಗಳನ್ನು ಕಟ್ಟಲು ಸುಲಭವಾಗುತ್ತದೆ. ವಯೋಮಿತಿಯ ಸ್ಪರ್ಧೆಗಳು ಕಡ್ಡಾಯವಾಗಬೇಕು. ಏಕೆಂದರೆ, ಸ್ಪರ್ಧೆಗಳು ಹೆಚ್ಚು ಇದ್ದಷ್ಟೂ ಆಟಗಾರರು ಬೆಳಕಿಗೆ ಬರುತ್ತಾರೆ. ಒಲಿಂಪಿಕ್ ಅಲ್ಲದಿದ್ದರೂ ಇನ್ನಿತರ ಹಲವಾರು ರಾಷ್ಟ್ರೀಯ, ಅಂತರರಾಷ್ಟ್ರೀಯ ಕೂಟಗಳಲ್ಲಿಯೂ ಭಾಗವಹಿಸುವ ಅವಕಾಶ ಸಿಗಬಹುದಲ್ಲವೇ?

ಹೈದರಾಬಾದಿನಲ್ಲಿ ಬ್ಯಾಡ್ಮಿಂಟನ್, ಒಡಿಶಾದಲ್ಲಿ ಹಾಕಿ, ಈಶಾನ್ಯ ಭಾರತದಲ್ಲಿ ವೇಟ್‌ಲಿಫ್ಟಿಂಗ್, ಬಾಕ್ಸಿಂಗ್, ಫುಟ್‌ಬಾಲ್, ಹರಿಯಾಣದಲ್ಲಿ ಕುಸ್ತಿ, ಅಥ್ಲೆಟಿಕ್ಸ್‌ಗೆ ಸಿಗುತ್ತಿರುವ ಪ್ರೋತ್ಸಾಹವನ್ನು ಅಲ್ಲಗಳೆಯಲಾಗದು. ಇದು ಉಳಿದ ರಾಜ್ಯಗಳಿಗೂ ಮಾದರಿ. ಒಂದು ಪ್ರದೇಶದಲ್ಲಿ ಪ್ರಚಲಿತವಾಗಿರುವ ಕ್ರೀಡೆಯ ಬೆಳವಣಿಗೆಗೆ ಯೋಜನೆ ಜಾರಿ ಮಾಡಬೇಕು. ಸೌಲಭ್ಯಗಳು ಇರುವಲ್ಲಿ ಸ್ಥಳೀಯ ಪ್ರತಿಭೆಗಳನ್ನು ಗುರುತಿಸುವ ಕೆಲಸ ಆಗಬೇಕು.

ಮುಖ್ಯವಾಗಿ ಶಾಲೆ, ಕಾಲೇಜುಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರನ್ನು ಸಬಲಗೊಳಿಸಬೇಕು. ಏಕೆಂದರೆ, ಬೇರು ಮಟ್ಟದಲ್ಲಿ ಪ್ರತಿಭೆಗಳನ್ನು ಮೊದಲಿಗೆ ಗುರುತಿಸುವವರೇ ಅವರು. ಆದರೆ ತಾವು ಬೆಳೆಸಿದ ಕ್ರೀಡಾಪಟು ಅಂತರರಾಷ್ಟ್ರೀಯ ಮಟ್ಟದ ಸಾಧನೆ ಮಾಡಿದಾಗ, ತಮಗೆ ಯಾವ ಪುರಸ್ಕಾರವೂ ಸಿಗುತ್ತಿಲ್ಲ ಎನ್ನುವ ಹತಾಶೆ ಈ ವರ್ಗದಲ್ಲಿದೆ. ಅದನ್ನು ದೂರ ಮಾಡಬೇಕು. ದೈಹಿಕ ಶಿಕ್ಷಣ ಅವಧಿಗೂ ಉಳಿದ ವಿಷಯಗಳಿಗಿರುವಷ್ಟೇ ಪ್ರಾಧಾನ್ಯ ದೊರೆಯಬೇಕು.

ಇದರೊಂದಿಗೆ, ಪ್ರತಿಯೊಂದು ಕ್ರೀಡೆಯಲ್ಲಿ ಆಡುವ ಮಕ್ಕಳ ದತ್ತಾಂಶಗಳ ನಿರ್ವಹಣೆ ಶಿಸ್ತುಬದ್ಧವಾಗಿ ನಡೆಯಬೇಕು. ಡಿಜಿಟಲ್ ಯುಗದಲ್ಲಿ ಇದು ಅಸಾಧ್ಯವಲ್ಲ. ಕ್ರಿಕೆಟ್, ಟೆನಿಸ್, ಬ್ಯಾಡ್ಮಿಂಟನ್ ಕ್ರೀಡೆಗಳ ಯಶಸ್ಸಿನ ಹಿಂದಿರುವ ಗುಟ್ಟು ಕೂಡ ಇದೇ ಆಗಿದೆ. ಆದರೆ, ನೀರಜ್ ಚೋಪ್ರಾ ತಮ್ಮ 14ನೇ ವಯಸ್ಸಿನಲ್ಲಿ ರಾಜ್ಯ, ರಾಷ್ಟ್ರ ಮಟ್ಟದ ಕ್ರೀಡೆಯಲ್ಲಿ ಜಾವೆಲಿನ್ ಎಷ್ಟು ದೂರ ಎಸೆದಿದ್ದರು ಎಂದು ಹುಡುಕಿದರೆ ಮಾಹಿತಿ ಸಿಗುವುದಿಲ್ಲ. ವೃತ್ತಿಪರತೆ ಮತ್ತು ಪಾರದರ್ಶಕತೆಯಿಂದ ಮಾತ್ರ ಸಾಧನೆ ಸಾಧ್ಯ.

ಪದಕ, ಹೆಸರು, ಹಣದಾಚೆ ಕ್ರೀಡೆಯಿಂದ ಸಿಗುವ ಆರೋಗ್ಯವೂ ಕೋವಿಡ್ ಕಾಲಘಟ್ಟದಲ್ಲಿ ಅಮೂಲ್ಯ.

'ಜಟ್ಟಿ ಕಾಳಗದಿ ಗೆಲ್ಲದೊಡೆ ಗರಡಿಯ ಸಾಮು, ಪಟ್ಟುವರಸೆಗಳೆಲ್ಲ ವಿಫಲವೆನ್ನುವೆಯೇಂ?, ಮುಟ್ಟಿ ನೋಡವನ ಮೈಕಟ್ಟು ಕಬ್ಬಿಣ ಗಟ್ಟಿ, ಗಟ್ಟಿತನ ಗರಡಿ ಫಲ ಮಂಕುತಿಮ್ಮ'– ಡಿ.ವಿ.ಗುಂಡಪ್ಪನವರ ಕಗ್ಗ ಎಂದೆಂದಿಗೂ ಪ್ರಸ್ತುತ.

ಚುರುಮುರಿ

ಯಾವ ಭೂತ ಸ್ಟ್ರಾಂಗು?

• ಸುಮಂಗಲಾ

ಹಿರಿಯ ಕೋವಿಡಣ್ಣನಿಗೆ ಶಾನೆ ಬೇಜಾರಾಗಿತ್ತು. ಭರತವರ್ಷದಲ್ಲಿ, ವಿಶ್ವಮಟ್ಟದಲ್ಲಿ ಎಲ್ಲೆಲ್ಲೂ ಒಲಿಂಪಿಕ್ಸ್ ಪದಕ ಗೆದ್ದವರ ಕಥೆಗಳೇ ಪತ್ರಿಕೆಗಳ ಹೆಡ್‌ಲೈನಿನಲ್ಲಿ ಮಿಂಚುತ್ತಿವೆ. ಮಾರಿ-ಹೆಮ್ಮಾರಿ, ಚಂಡ-ಪ್ರಚಂಡ, ಕೊರೊನಾ ರಣಕೇಕೆ ಎಂದೆಲ್ಲ ಬೊಬ್ಬಿರಿಯುತ್ತಿದ್ದ ಟಿ.ವಿಗಳೂ ತಮ್ಮನ್ನು ಈ ಪರಿಯೊಳು ನಿರ್ಲಕ್ಷ್ಯ ಮಾಡುವುದೇ... ಈ ಹುಲುಮಾನವರು ತನ್ನನ್ನು ಕಾಲಕಸ ಮಾಡಿ, ಅದೆಂಥದೋ ಆಟದಲ್ಲಿ ಗೆಲ್ಲುವುದೇ ದೊಡ್ಡದೆನ್ನುತ್ತಾರಲ್ಲ ಎಂದುಕೊಳ್ಳುತ್ತಿದ್ದಾಗ, ಒಲಿಂಪಿಕ್ಸ್‌ನ ಐದು ಉಂಗುರ ಕುಣಿಯುತ್ತ ಬಂದಿತಲ್ಲಿಗೆ.

'ನೋಡಿದ್ಯಾ... ನೀನೆಷ್ಟೇ ಅಟ್ಟಹಾಸ ಮಾಡಿ, ತುಳಿದು ಹೊಸಕಿದ್ರೂ ಹೆಂಗೆ ಪುಟದೆದ್ದು ಆಟಗಾರರು ಆಡ್ತಿದಾರೆ, ಜನ ನೋಡ್ತಿದಾರೆ, ಸಂಭ್ರಮಿಸ್ತಿದಾರೆ... ನಿನಗಿಂತ ನಾನೇ ಸ್ಟ್ರಾಂಗು ಗುರು' ಎಂದು ನಕ್ಕಿತು.

'ಸುಮ್ನಿರಯ್ಯ... ಜನರ ಪ್ರಾಣವೇ ನನ್ನ ಕೈಯಲ್ಲಿದೆ. ಒಂದಾದ ನಂತರ ಒಂದು ಅಲೆಗಳು, ಒಂದಕ್ಕಿಂತ ಇನ್ನೊಂದು ಭೀಕರವಾದ ಆಲ್ಫಾ, ಬೀಟಾ, ಗಾಮಾ, ಡೆಲ್ಟಾ ಅವತೃತಿಗಳ ಸುನಾಮಿಯನ್ನೇ ಎಬ್ಬಿಸಿದ್ದೇನಲ್ಲ. ಮುಂದಿನ ಅಲೆ ಬರುತ್ತೆ ಇರು... ಯಾರು ಸ್ಟ್ರಾಂಗು ಅಂತ ಗೊತ್ತಾಗುತ್ತೆ' ಎಂದು ಅಬ್ಬರಿಸಿತು.

ಹಿಂದಿನಿಂದ ಯಾರೋ ಪಕಪಕನೆ ನಕ್ಕಂತಾಯಿತು. ಇಬ್ಬರೂ ಗಾಬರಿಯಿಂದ ತಿರುಗಿದರು. 'ನೀವೆಂಥ ಸ್ಟ್ರಾಂಗಯ್ಯಾ.... ನನ್ನ ಅಲುಗಾಡಿಸೋದಕ್ಕೆ ನೀವಲ್ಲ, ನಿಮ್ಮಪ್ಪ, ತಾತ ಬಂದ್ರೂ ಆಗಲ್ಲ' ಎಂದು ಗುಟುರು ಹಾಕುತ್ತ ಹುರಿಗಟ್ಟಿದ ಕಬಂಧಬಾಹುಗಳನ್ನು ತೋರಿಸುತ್ತ ಬಂದಿತು ಭರತವರ್ಷದ ಜಾತಿ ಭೂತ.

'ಹೋಯ್... ಕೋವಿಡಣ್ಣ... ನಿನ್ನೆ ಮೊನ್ನೆ ಬಂದಿರೋ ನಿನ್ನನ್ನ ಈ ಮನುಷ್ಯರು ಇನ್ನೊಂದೆರಡು ವರ್ಷದಲ್ಲಿ ನಿವಾರಿಸಿ ಒಗೀತಾರೆ. ನಾನು ಸಾವಿರಾರು ವರ್ಷಗಳಿಂದ ಇದೀನಿ... ಇನ್ನೂ ಸಾವಿರಾರು ವರ್ಷ ಇರ್ತೀನಿ! ಮೊನ್ನೆ ಭರತಮಾತೆಯ ಪುತ್ರಿಯರು ಒಲಿಂಪಿಕ್ಸ್ ಹಾಕಿಯಲ್ಲಿ ಬೆರಗಾಗೋ ಅಂಥ ಸಾಧನೆ ಮಾಡಿದ್ರು. ಅದ್ರಲ್ಲಿ ಒಬ್ಬಳು ದಲಿತ ಆಟಗಾರ್ತಿ ಊರಿಗೆ ಒಂದು ಮರಿಜಾತಿಹುಳವನ್ನ ಕಳಿಸಿ, ಹೆಂಗೆ ಅವಮಾನಿಸಿದೆ ನೋಡು. ಯಾರು ಎಂಥದ್ದೇ ಸಾಧನೆ ಮಾಡಿರ್ಲಿ... ನಾನು ಒಂದು ಮೊಟಕಿದ್ರೆ ಎಲ್ಲ ನೆಲಕ್ಕೇ! ನಿಮ್ಮೆಲ್ಲರಿಗಿಂತ ನಾನೇ ಸ್ಟ್ರಾಂಗು!' ಎಂದು ಅಟ್ಟಹಾಸ ಮಾಡಿತು.

ಸಂಗತ

ಮರೆಯಬಾರದ ಮಹೋನ್ನತ ಚಳವಳಿ

ಕ್ವಿಟ್ ಇಂಡಿಯಾ ಚಳವಳಿಯ ಸಂದರ್ಭವನ್ನು ನೆನೆಯುತ್ತಾ, ಆ ಚಳವಳಿಯ ಹುತಾತ್ಮರು ಮತ್ತು ವೀರರಿಗೆ ನಮ್ಮ ಶ್ರದ್ಧಾಂಜಲಿ ಸಲ್ಲಿಸಬೇಕಿದೆ

• ಡಿ.ಎಸ್.ನಾಗಭೂಷಣ

ಭಾರತದ ಸ್ವಾತಂತ್ರ್ಯ ಹೋರಾಟದ ನಿರ್ಣಾಯಕ ಘಟ್ಟವೆನಿಸಿರುವ, ಕನ್ನಡದಲ್ಲಿ 'ಭಾರತ ಬಿಟ್ಟು ತೊಲಗಿ' ಚಳವಳಿಯೆಂದು ಹೆಸರಾಗಿರುವ 1942ರ 'ಕ್ವಿಟ್ ಇಂಡಿಯಾ' ಚಳವಳಿಯಲ್ಲಿ ಕಾಂಗ್ರೆಸ್ ಸಮಾಜವಾದಿಗಳು ವಹಿಸಿದ ಧೀರೋದಾತ್ತ ಪಾತ್ರ ಮತ್ತು ಅವರು ನಿರ್ವಹಿಸಿದ 'ಕಾಂಗ್ರೆಸ್ ಬಾನುಲಿ'ಯ ಮಹತ್ವದ ಬಗ್ಗೆ ನಟರಾಜ್ ಹುಳಿಯಾರ್ ಬಹಳಷ್ಟು ಉಪಯುಕ್ತ ಮಾಹಿತಿ ನೀಡಿದ್ದಾರೆ (ಪ್ರ.ವಾ., ಆ. 7). ಈ ಚಳವಳಿಯ ನಾಯಕರನೇಕರ ಚಾರಿತ್ರ್ಯ ಹನನದ ಜುಗುಪ್ಸೆಕರ ಪ್ರಯತ್ನಗಳು ಎಗ್ಗಿಲ್ಲದೆ ನಡೆಯುತ್ತಿರುವ ಈ ದಿನಗಳಲ್ಲಿ, ಇಂದಿನ ಯುವಜನರು ಗಮನಿಸಬೇಕಾದ ಈ ಮಹತ್ವದ ಮಾಹಿತಿಯನ್ನು ನೀಡಿದ ಲೇಖಕರನ್ನು ಅಭಿನಂದಿಸುತ್ತಾ ಈ ಸಂಬಂಧ ಇನ್ನಷ್ಟು ಮಾಹಿತಿಯನ್ನು ಇಲ್ಲಿ ನೀಡುತ್ತಿರುವೆ:

ಗಾಂಧೀಜಿ 'ಮಾಡು ಇಲ್ಲವೆ ಮಡಿ' ಎಂಬ ಕರೆಯನ್ನು ರಾಷ್ಟ್ರಕ್ಕೆ ನೀಡಿದ ಆಗಸ್ಟ್ 8ರ ಮಾರನೆಯ ದಿನ ಭೂಗತರಾದ ರಾಮಮನೋಹರ ಲೋಹಿಯಾ ಅವರ ಗುಂಪಿನಲ್ಲಿ ಇದ್ದ ಇತರ ಯುವ ಸಮಾಜವಾದಿಗಳೆಂದರೆ, ರಮಾನಂದನ ಮಿಶ್ರ, ಕಮಲಾದೇವಿ ಚಟ್ಟೋಪಾಧ್ಯಾಯ, ಸಾಣೆ ಗುರೂಜಿ ಮತ್ತು ಪೂರ್ಣಿಮಾ ಬ್ಯಾನರ್ಜಿ. ಇವರೆಲ್ಲ ಮಾರುವೇಷದಲ್ಲಿ ಊರುಗಳಲ್ಲಿ ಸಂಚರಿಸುತ್ತಾ ತಾವು ಮಾಡಬೇಕಿದ್ದ ಕಾರ್ಯಾಚರಣೆಗಾಗಿ ಜನಸಂಪರ್ಕ ಮತ್ತು ಹಣ ಸಂಗ್ರಹಣೆಯಲ್ಲಿ ತೊಡಗಿದ್ದರು. ಜೊತೆಗೆ ತಮ್ಮ ಗುಂಪು ಸಿದ್ಧಪಡಿಸುತ್ತಿದ್ದ ಕರಪತ್ರಗಳನ್ನು ಹಂಚುತ್ತಿದ್ದರು. ಈ ಸಂದರ್ಭದಲ್ಲಿ ಲೋಹಿಯಾ ಬರೆದ ಪ್ರಮುಖ ಕರಪತ್ರಗಳೆಂದರೆ, 'ಕ್ರಾಂತಿಗಾಗಿ ಸಿದ್ಧತೆ', 'ಹೋರಾಟದ ಮುನ್ನಡೆ' ಮತ್ತು 'ಸ್ವಯಮಾಡಳಿತ ಹೇಗೆ?'. ಇದೆಲ್ಲದರ ಪರಿಣಾಮವೇ 'ಕಾಂಗ್ರೆಸ್ ರೇಡಿಯೊ' ಸ್ಥಾಪನೆ. ಇದಕ್ಕಾಗಿ ಲೋಹಿಯಾ ಕಲ್ಕತ್ತಾದಲ್ಲಿದ್ದ ಖ್ಯಾತ ಖಭೌತ ವಿಜ್ಞಾನಿ ಮೇಘಾನಂದ ಸಹಾ ಅವರಿಂದ ಉಪಕರಣಗಳ ಸಹಾಯ ಪಡೆದರಲ್ಲದೆ, ಭಾರತೀಯ ವಾಯುದಳದ ಮಜುಂದಾರ್ ಎಂಬ ಅಧಿಕಾರಿಯೊಬ್ಬರ ತಾಂತ್ರಿಕ ಸಹಕಾರವನ್ನೂ ಪಡೆದಿದ್ದರು.

ಸ್ವಾತಂತ್ರ್ಯ ಆಂದೋಲನದ ಯುವ ನಾಯಕರಾಗಿ ಕಲ್ಕತ್ತಾದಲ್ಲಿ ಬಹಳಷ್ಟು ಕಾಲ ನೆಲೆಸಿದ್ದ ಲೋಹಿಯಾ ಅವರಿಗೆ ಅಲ್ಲಿ ಹಲವು ವಲಯಗಳು ಮತ್ತು ಸ್ತರಗಳ ಸಂಪರ್ಕಗಳಿದ್ದವು. ಕಾಂಗ್ರೆಸ್ ಸಮಾಜವಾದಿ ಗುಂಪಿನ ಈ ಬಾನುಲಿಯಲ್ಲಿ, ದೇಶಭಕ್ತಿ ಗೀತೆಗಳು, ವಾರ್ತೆ, ಭಾಷಣಗಳು, ಘೋಷಣೆಗಳು ಮತ್ತು ಸಂದೇಶಗಳ ಜೊತೆಗೆ ಹೊರಗಿನಿಂದ 'ಕಳ್ಳಸಾಗಣೆ' ಮಾಡಿದ ಧ್ವನಿಮುದ್ರಣಗಳೂ ಇರುತ್ತಿದ್ದವು. ಅಂತಹ ಒಂದು ಮುಖ್ಯ ಧ್ವನಿಮುದ್ರಣವೆಂದರೆ, ಗಾಂಧಿಯವರ ಹುಟ್ಟಿದ ದಿನವಾದ ಅಕ್ಟೋಬರ್ 2ರ ಸಂದರ್ಭಕ್ಕಾಗಿ ಬ್ಯಾಂಕಾಕ್‌ನಿಂದ ಪಡೆದು ಪ್ರಸಾರ ಮಾಡಿದ ಸುಭಾಷ್‌ಚಂದ್ರ ಬೋಸ್ ಅವರ ಭಾಷಣ.

ಬೋಸ್ ಅವರು ಕಾಂಗ್ರೆಸ್ ಅನ್ನು ಮಾತ್ರವಲ್ಲ ದೇಶವನ್ನೂ ತ್ಯಜಿಸುವಂತೆ ಗಾಂಧಿ ಮಾಡಿದ್ದರು ಎಂದು ಇಂದು ಪ್ರಚಾರ ಮಾಡುತ್ತಿರುವ ಮತ್ತು ಅದನ್ನು ನಂಬುತ್ತಿರುವ ಜನರ ಕಣ್ಣು ತೆರೆಸುವಂತಿರುವ ಈ ಭಾಷಣದ ಕೆಲವು ಸಾಲುಗಳು ಹೀಗಿವೆ: 'ನಮಗೆ ರಾಷ್ಟ್ರೀಯ ಆತ್ಮಗೌರವ, ಆತ್ಮವಿಶ್ವಾಸವನ್ನು ಕಲಿಸಿದ, ಭಾರತೀಯರಿಗೆ ಅವರು ಸಲ್ಲಿಸಿರುವ ಸೇವೆಗಾಗಿ ಮತ್ತು ಸ್ವಾತಂತ್ರ್ಯ ಸಾಧನೆಗಾಗಿ ಇಡಲು ನಮಗೆ ಕಲಿಸಿದ ದೃಢ ಹೆಜ್ಜೆಗಳಿಗಾಗಿ ಭಾರತದ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಬೇಕಾದಂತಹ ಅಮೂಲ್ಯ ಕೊಡುಗೆ ಸಲ್ಲಿಸಿರುವ ಮಹಾನ್ ವ್ಯಕ್ತಿ ಮಹಾತ್ಮ ಗಾಂಧಿ... ಅವರು ತಮ್ಮ ದೇಶಭಕ್ತ ಸಂಗಾತಿಗಳೊಂದಿಗೆ ಸೆರೆಯಲ್ಲಿರುವ ಸದ್ಯದ ವಿಷಾದನೀಯ ಸಂದರ್ಭದಲ್ಲಿ ಅವರ ಕನಸನ್ನು ನನಸು ಮಾಡಲು ಅವರ ಅಭಿಮಾನಿಗಳು ಎಲ್ಲ ತ್ಯಾಗಗಳಿಗೆ ಸಿದ್ಧರಾಗಬೇಕಿದೆ'.



ಈ ಭಾಷಣದ ಪ್ರಸಾರ ಈ ಬಾನುಲಿಗೆ ಸಂಬಂಧಿಸಿದಂತೆ ಬ್ರಿಟಿಷ್ ಸರ್ಕಾರಕ್ಕೆ ಕೊನೆಯ ಎಚ್ಚರಿಕೆಯ ಗಂಟೆಯಂತೆ ಕೇಳಿಸಿತೆಂಬಂತೆ, ಶೀಘ್ರದಲ್ಲೇ ಈ ಜಾಗದ ಮೇಲೆ ಪೊಲೀಸರ ದಾಳಿಯಾಗಿ ಬಾನುಲಿ ಪ್ರಸಾರ ನಿಂತುಹೋಯಿತು. ಭೂಗತ ಕ್ರಾಂತಿಕಾರಿಗಳೆಲ್ಲ ಅಸ್ಸಾಂ ಪ್ರವೇಶಿಸಿ ನಂತರ ನೇಪಾಳ ಗಡಿ ದಾಟಿ ಹೋದರು. ಲೋಹಿಯಾ ಅವರು ಹಜಾರಿಭಾಗ್ ಸೆರೆಮನೆಯ ಗೋಡೆಯನ್ನು ಹಾರಿ ಪರಾರಿಯಾಗಿ ಯುವ ಕ್ರಾಂತಿಕಾರಿಯೆಂದು ದೇಶದಾದ್ಯಂತ ಪ್ರಸಿದ್ಧರಾಗಿದ್ದ ಇನ್ನೊಬ್ಬ ಕಾಂಗ್ರೆಸ್ ಸಮಾಜವಾದಿ ಜಯಪ್ರಕಾಶ ನಾರಾಯಣ ಅವರ ಜೊತೆ ಸೇರಿ, ಬಿಹಾರದ ಗಡಿ ಭಾಗಗಳಲ್ಲಿ 'ಸ್ವರಾಜ್ಯ ಗ್ರಾಮ'ಗಳನ್ನೂ, ದಳಗಳನ್ನೂ ಸ್ಥಾಪಿಸಿದರು. ಆನಂತರ ಪೊಲೀಸರ ಕಣ್ತಪ್ಪಿಸಲಾಗದೆ ಇಬ್ಬರೂ ಬೇರೆ ಬೇರೆಯಾಗಿ ಬಂಧನಕ್ಕೊಳಗಾಗಿ ಲಾಹೋರ್‌ಕೋಟೆ ಸೆರೆಮನೆ ಸೇರಿ ಚಿತ್ರಹಿಂಸೆಗೆ ಒಳಗಾದದ್ದು ಈಗ ಚರಿತ್ರೆ.

'ಕ್ವಿಟ್ ಇಂಡಿಯಾ' ಚಳವಳಿಯನ್ನು ನೆನಪಿಸಿಕೊಳ್ಳುತ್ತಿರುವ ಈ ಸಂದರ್ಭದಲ್ಲೇ ಈ ಚಳವಳಿಯ ಭಾಗವಾಗಿ ನಮ್ಮದೇ ಶಿವಮೊಗ್ಗ ಜಿಲ್ಲೆಯ ಈಸೂರು ಗ್ರಾಮಸ್ಥರು ತಮ್ಮದು 'ಸ್ವರಾಜ್ಯ ಗ್ರಾಮ'ವೆಂದು ಘೋಷಿಸಿಕೊಂಡು ನಡೆಸಿದ ವೀರ ಹೋರಾಟವನ್ನೂ ನಾವು ನೆನೆಯಬೇಕು. ಬ್ರಿಟಿಷ್ ಆಡಳಿತಶಾಹಿಯ ವಿರುದ್ಧ 1942ರ ಸೆಪ್ಟೆಂಬರ್ ಕೊನೆಯ ವಾರದಲ್ಲಿ 'ಏಸೂರು ಕೊಟ್ಟರೂ ಈಸೂರು ಕೊಡೆವು' ಎಂಬ ಘೋಷಣೆಯೊಂದಿಗೆ ನಡೆದ ಹೋರಾಟದ ಅಂತ್ಯದಲ್ಲಿ ಅಂತಿಮವಾಗಿ 5 ಜನ ಗಲ್ಲುಶಿಕ್ಷೆಗೂ ಮಹಿಳೆಯರೂ ಸೇರಿದಂತೆ ಇಪ್ಪತ್ತಕ್ಕೂ ಹೆಚ್ಚು ಜನ ಜೀವಾವಧಿ ಶಿಕ್ಷೆಗೂ ಒಳಗಾಗಬೇಕಾಯಿತು ಎಂಬುದನ್ನು ನೆನೆಯುತ್ತಾ ಈ ಹುತಾತ್ಮರಿಗೆ, ವೀರರಿಗೆ ನಮ್ಮ ಶ್ರದ್ಧಾಂಜಲಿ ಸಲ್ಲಬೇಕಿದೆ.

ವಾಚಕರ ವಾಣಿ

ಪ್ರದರ್ಶನಾತ್ಮಕ ರಾಷ್ಟ್ರಪ್ರೇಮವಷ್ಟೇ ಸಾಲದು

'ಟೋಕಿಯೊ ಒಲಿಂಪಿಕ್ಸ್ ಮುಗಿಯುತ್ತ ಬಂತಲ್ಲ, ಆದರೆ ಭಾರತಕ್ಕೆ ಒಂದು ಚಿನ್ನದ ಪದಕವೂ ಬಂದಿಲ್ಲವಲ್ಲ' ಎಂದುಕೊಳ್ಳುತ್ತಿರುವಾಗ ಜಾವೆಲಿನ್ ಸ್ಪರ್ಧೆಯಲ್ಲಿ ಅದು ಸಿಕ್ಕಿದೆ. 'ಸಿಕ್ಸ್ ಹಂಡ್ರೆಡ್ ಮಿಲಿಯನ್ ಅಂಡ್ ನಾಟ್ ಈವನ್ ಎ ಗೋಲ್ಡ್' (ಅರವತ್ತು ಕೋಟಿ ಜನ, ಆದರೂ ಒಂದು ಸ್ವರ್ಣ ಪದಕ ಇಲ್ಲ)– ಹಲವು ವರ್ಷಗಳ ಹಿಂದಿನ ನ್ಯೂಸ್ ಸ್ಟೋರಿಯ ಶೀರ್ಷಿಕೆ. ಈಗ ಒಟ್ಟು ಏಳು ಪದಕಗಳು, ನೂರ ಮೂವತ್ತು ಕೋಟಿ ಜನರ ಕ್ರೀಡಾಪ್ರತಿನಿಧಿಗಳಾಗಿ ಹೋಗಿದ್ದ ನೂರ ಇಪ್ಪತ್ತಾರು ಸ್ಪರ್ಧಿಗಳ ಸಾಧನೆ. ನಮ್ಮ ಮುಖ್ಯ ಸಾಮರ್ಥ್ಯ (ಕೋರ್ ಕಾಂಪಿಟೆನ್ಸ್) ಹಾಕಿ, ಕುಸ್ತಿಪದಕಗಳು ಬಂದಿವೆ; ಕೆಲವರು ವೈಯಕ್ತಿಕವಾಗಿ ಕೆಲವು ಕ್ರೀಡೆಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಮಿಂಚುತ್ತಿದ್ದಾರೆ (ಉದಾಹರಣೆಗೆ ಷಟ್ಲ್ ಬ್ಯಾಡ್ಮಿಂಟನ್)- ಅವರ ಸಾಧನೆ ನಿರೀಕ್ಷೆಗಿಂತ ಕಡಿಮೆ.

ಕೆಲವು ಈವೆಂಟ್‌ಗಳಲ್ಲಿ ಭಾರತ ಎಂಟ್ರಿ ಕೊಟ್ಟಿದೆ. ಆದರೆ 'ನಾವೂ ಓಡಿದೆವು' ಎಂದಂತೆ ಆಗಿದೆ. ಪ್ರಶಸ್ತಿ ವಿಜೇತರಿಗೆ ನಗದು ಪುರಸ್ಕಾರ ಘೋಷಿಸುವ ಸ್ಪರ್ಧೆಯೇ ನಡೆದಿದೆ. ಆದರೆ ಮೂರೇ ವರ್ಷಗಳಲ್ಲಿ ಬರುವ ಮುಂದಿನ ಒಲಿಂಪಿಕ್ಸ್‌ಗೆ, ಯಾವುದರಲ್ಲಿ ಭಾಗವಹಿಸಲೇಬೇಕು ಎಂಬುದೂ ಸೇರಿ ಇನ್ನಷ್ಟು ಸೂಕ್ತ ಆಯ್ಕೆ, ತರಬೇತಿ ಹೆಚ್ಚು ಉಪಯುಕ್ತವಾದೀತು. ಹೀರೊ ವರ್ಷಿಪ್, ಪ್ರದರ್ಶನಾತ್ಮಕ ರಾಷ್ಟ್ರಪ್ರೇಮ ಕೆಲಮಟ್ಟಿಗೆ ಕೆಲಸ ಮಾಡಬಹುದಷ್ಟೆ. ಸರ್ಕಾರ, ಸಂಘ–ಸಂಸ್ಥೆಗಳು ಇದನ್ನು ಅರಿಯುವುದೊಳಿತು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ರೋಮಾಂಚನ

ನೀರಜ್ ಚೋಪ್ರಾಗೆ
ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ
ಘೋಷಣೆಯಾದ ಕೂಡಲೇ
ವಿಶ್ವ ರಾಷ್ಟ್ರ ಬಾವುಟಗಳ ನಡುವೆ
ಭಾರತದ ಬಾವುಟ ಮೇಲೇರುವುದನ್ನು
ಕಂಡಾಗ ರೋಮಾಂಚನ,
ಈ ಚಿನ್ನದ ಹುಡುಗನಿಗೆ
ಕೋಟ್ಯಂತರ ಜನರ ನಮನ.

ನಂಜನಹಳ್ಳಿ ನಾರಾಯಣ
ಬೆಂಗಳೂರು

ಖಾತೆಗಾಗಿ ಕ್ಯಾತೆ ಸರಿಯೇ?

'ಕೊಟ್ಟ ಕುದುರೆಯನೇರಲರಿಯದೆ ಮತ್ತೊಂದು ಕುದುರೆಯನೇರ ಬಯಸುವರು ವೀರರೂ ಅಲ್ಲ ಧೀರರೂ ಅಲ್ಲ' ಎಂಬ ಅಲ್ಲಮನ ವಾಣಿಯನ್ನು ಖಂಡಿತವಾಗಿಯೂ ನೆನಪಿಸುತ್ತದೆ ಖಾತೆಗಾಗಿ ಕ್ಯಾತೆ ತೆಗೆಯುತ್ತಿರುವ ಇಂದಿನ ಮಂತ್ರಿಗಳ ಹುಚ್ಚಾಟ. ಕೊರೊನಾ ಸಂಕಷ್ಟದ ಈಗಿನ ಪರಿಸ್ಥಿತಿಯಲ್ಲಿ ಹಲವರು ಬದುಕಿನ ಬಗ್ಗೆಯೇ ಭರವಸೆ ಕಳೆದುಕೊಂಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ, ಕೊಟ್ಟ ಖಾತೆಯನ್ನು ನಿರ್ವಹಿಸದೆ ಇಂತಹುದೇ ಖಾತೆ ಬೇಕೆಂದು ಪಟ್ಟು ಹಿಡಿಯುವುದು ಎಷ್ಟು ಸರಿ? ಕೊಟ್ಟ ಖಾತೆ ಬೇಡವೆಂದವರ ಮಂತ್ರಿಗಿರಿ ರದ್ದುಪಡಿಸಿ ಹೊಸಬರಿಗೆ ಮಣೆ ಹಾಕಲು ಮುಖ್ಯಮಂತ್ರಿಗೆ ಇದೊಂದು ಸುವರ್ಣ ಅವಕಾಶ. ಅವರು ಈ ದಿಸೆಯಲ್ಲಿ ಕಾರ್ಯತತ್ಪರರಾದರೆ ಖಂಡಿತ ಅವರಿಗೆ ರಾಜ್ಯದ ಜನರ ಬೆಂಬಲ ಸಿಗಲಿದೆ.

ಪ್ರಕಾಶ್ ಮಲ್ಕಿಒಡೆಯರ್, ಹೂವಿನಹಡಗಲಿ

ಸಂಚಾರ ನಿಯಮ: ದಂಡ ವಸೂಲಿಯೇ ಸಾಧನೆಯಲ್ಲ

ಎಗ್ಗಿಲ್ಲದೆ ದಂಡ ವಸೂಲಿ ಮಾಡುವ ಸಂಚಾರ ಪೊಲೀಸರ ವರ್ತನೆಯು (ಪ್ರ.ವಾ., ಆ. 6) ಬದಲಾಗಬೇಕು ಎಂದು ಅಪೇಕ್ಷಿಸುವುದು ಬರೀ ಕನಸೇನೋ ಎನ್ನಿಸುತ್ತದೆ. ಸಂಚಾರ ಪೊಲೀಸರ ದಂಡ ವಸೂಲಿ ಕ್ರಮ ಇಂದು ನಿನ್ನೆಯದಲ್ಲ. ದಿನದಿಂದ ದಿನಕ್ಕೆ ಇದು ಹೆಚ್ಚುತ್ತಿದೆಯೇ ಹೊರತು ಸಂಚಾರ ನಿಯಮ ಉಲ್ಲಂಘಿಸುವವರ ಸಂಖ್ಯೆಯೇನೂ ಕಡಿಮೆಯಾಗಿಲ್ಲ. ಸಂಚಾರ ನಿಯಮಗಳನ್ನು ಉಲ್ಲಂಘಿಸುವ ವಾಹನ ಸವಾರರಿಗೆ ಪೊಲೀಸರು ಮಾರ್ಗದರ್ಶಕರಾಗಬೇಕೇ ವಿನಾ ಸಿಕ್ಕ ಸಿಕ್ಕಲ್ಲಿ ವಾಹನ ಅಡ್ಡಗಟ್ಟುವುದರಿಂದ ಸುರಕ್ಷತೆ ನಿಯಮಕ್ಕೆ ಅಡ್ಡಿಯಾಗುತ್ತದೆ.

ಇದಲ್ಲದೆ, ಇಂಥ ಠಾಣೆಯಿಂದ ಇಂತಿಷ್ಟು ದಂಡದ ಮೊತ್ತ ಸಂಗ್ರಹವಾಗಬೇಕು ಎಂಬ 'ಟಾರ್ಗೆಟ್' ಇಟ್ಟುಕೊಂಡು ಕರ್ತವ್ಯ ನಿರ್ವಹಿಸುವುದು ಮತ್ತು ಹೆಚ್ಚು ದಂಡ ಸಂಗ್ರಹವೇ ಸಾಧನೆ ಎಂಬ ಮನೋಭಾವ ತಾಳುವುದು ಜನಪರ ಕ್ರಮಗಳಲ್ಲ. ಸಂಚಾರ ನಿಯಮಗಳನ್ನು ಪಾಲಿಸಲು ವಾಹನ ಸವಾರರು ಎಷ್ಟು ಜವಾಬ್ದಾರರಾಗಿರುತ್ತಾರೋ ಅಷ್ಟೇ ಮುಖ್ಯವಾಗಿ ಮೂಲ ಸೌಕರ್ಯ ಒದಗಿಸುವ ಹೊಣೆಯನ್ನು ಸರ್ಕಾರ ಹೊತ್ತುಕೊಳ್ಳಬೇಕು.

ಡಾ. ಜಿ.ಬೈರೇಗೌಡ, ಬೆಂಗಳೂರು

ಕಾಯಂ ವ್ಯವಸ್ಥೆಗೆ ಸ್ವಪ್ರಯತ್ನವಿರಲಿ

'ಇಂಟರ್ನೆಟ್ ಮಾತ್ರ ನಂಬಿ ಬದುಕಲಾದೀತೇ?' ಎಂಬ ಕ್ಯಾಪ್ಟನ್ ಜಿ.ಆರ್. ಗೋಪಿನಾಥ್ ಅವರ ಲೇಖನ (ಪ್ರ.ವಾ., ಆ. 5) ಬಹಳ ಮಹತ್ವದ ವಿಷಯವನ್ನು ಪ್ರಸ್ತಾಪಿಸುತ್ತದೆ. ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಉತ್ಪಾದಕ ಮತ್ತು ಗ್ರಾಹಕರಿಗಿಂತ ಮಧ್ಯವರ್ತಿಗಳು, ವ್ಯವಹಾರಸ್ಥರು ಹೆಚ್ಚಿನ ಲಾಭ ಹೊಂದುತ್ತಾರೆ ಎನ್ನುವುದು ಸಾಮಾನ್ಯ ಗ್ರಹಿಕೆ. ವ್ಯಾಪಾರಸ್ಥರು ಯಾವಾಗಾದರೂ ನಷ್ಟ ಅನುಭವಿಸಿದರೂ ಒಂದು ಅವಧಿಯ ನಂತರ ಲಾಭ ಮಾಡಿಕೊಳ್ಳುತ್ತಾರೆ. ಇದಕ್ಕೆ ಕಾರಣ, ತಮ್ಮ ವ್ಯಾಪಾರಕ್ಕೆ ಸಂಬಂಧಿಸಿದಂತೆ ಅವರು ಪಡೆಯುವ ಮಾಹಿತಿ ಮತ್ತು ಅಂಕಿಅಂಶ. ಆದರೆ ಇಂತಹ ಮಾಹಿತಿ, ದತ್ತಾಂಶವನ್ನು ಪಡೆಯಲಾಗದ ರೈತರು ಸದಾ ನಷ್ಟವನ್ನೇ ಕಾಣುತ್ತಾರೆ.

'ಮೌಲ್ಯ ಇರುವ (ಉಪಯುಕ್ತ) ಎಲ್ಲವನ್ನೂ ಹಳ್ಳಿಗಳಲ್ಲಿ ಉತ್ಪಾದಿಸಲಾಗುತ್ತಿದೆ ಎಂದಾದರೆ, ಹಳ್ಳಿಗಳು ಬಡತನದಲ್ಲಿ ಇರುವುದು ಏಕೆ? ನಗರಗಳು ಶ್ರೀಮಂತಿಕೆಯಿಂದ ತುಂಬಿರುವುದು ಹೇಗೆ' ಎಂಬುದು ಲಿಯೊ ಟಾಲ್‌ಸ್ಟಾಯ್ ಅವರ ಪ್ರಶ್ನೆ. ಇದಕ್ಕೆ ಕಾರಣ ಅಸಂಘಟನೆ ಮತ್ತು ಮಾಹಿತಿಯ ಕೊರತೆ. ಇವು ರೈತರ ಬದುಕನ್ನು ಹಾಳುಗೆಡವುತ್ತಿವೆ. ಅಲ್ಲದೆ ಖರೀದಿದಾರರಿಗೆ ಏನು ಅಗತ್ಯ ಎನ್ನುವ ಅರಿವು ರೈತರಿಗಿಲ್ಲ. ಕೃಷಿಯನ್ನು ಸಾಂಪ್ರದಾಯಿಕ ರೀತಿಯಲ್ಲಿ ನಡೆಸುತ್ತಿರುವುದೂ ಕಾರಣವಾಗಿದೆ. ರೈತರ ಜೀವನ ಹಸನಾಗಲು ಅವರಿಗೆ ಮಾರುಕಟ್ಟೆಯಲ್ಲಿ ಬೆಲೆಗಳ ಏರಿಳಿತದ ಮಾಹಿತಿ, ಹವಾಮಾನದ ಮುನ್ಸೂಚನೆ, ಗ್ರಾಹಕರ ಅಭಿರುಚಿಗಳಲ್ಲಿನ ಬದಲಾವಣೆಯಂತಹ ಮಾಹಿತಿ ಸರಿಯಾಗಿ ಸಿಗಬೇಕು. ಸಹಕಾರಿ ತತ್ವದ ಅಡಿ ಉತ್ಪಾದಕ ಮತ್ತು ಮಾರಾಟ ಸಂಘಗಳನ್ನು ಸ್ವತಃ ರೈತರು ಏರ್ಪಡಿಸಿಕೊಳ್ಳಬೇಕು. ಸಹಕಾರಿ ಬೇಸಾಯ ಮತ್ತು ಸಮುದಾಯ ಕೃಷಿಗೆ ಸರ್ಕಾರ ಉತ್ತೇಜಿಸಬೇಕು. ಆಧುನಿಕ ಮೊಬೈಲ್ ಗ್ಯಾಜೆಟ್ ಬಳಸಿ ಗ್ರಾಹಕರೊಂದಿಗೆ ನೇರ ಮಾರಾಟ ವ್ಯವಸ್ಥೆ ನಿರ್ಮಿಸಿಕೊಳ್ಳಬೇಕು. ವಿದೇಶಿ ಮಾರುಕಟ್ಟೆಗೆ ಲಗ್ಗೆ ಹಾಕಿದರೆ ಫಲಿತಾಂಶ ಇನ್ನೂ ಉತ್ತಮ ಆಗಿರುತ್ತದೆ. ಅಮೆಜಾನ್, ಜೊಮ್ಯಾಟೊ ಇತ್ಯಾದಿಗಳು ತಾತ್ಕಾಲಿಕ ನೀರ್ಗುಳ್ಳೆಗಳು. ಕೊರೊನಾ ಸಂದರ್ಭದಲ್ಲಿ ನಗರಗಳಿಂದ ಗ್ರಾಮಗಳಿಗೆ ಹಿಂತಿರುಗಿ ಕೃಷಿ ಬದುಕಿಗೆ ಒಗ್ಗಿಕೊಂಡಿರುವುದು ಸಹಜತೆಗೆ, ಕಾಯಂ ವ್ಯವಸ್ಥೆಗೆ ನಿದರ್ಶನ.

ಬಿ.ಆರ್.ಅಣ್ಣಾಸಾಗರ, ಸೇಡಂ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಲಸಿಕೆ ಮಿಶ್ರಣದಿಂದ ಹೆಚ್ಚಿನ ಪರಿಣಾಮ?

ಭಾರತದಲ್ಲಿ ಕೋವಿಡ್‌ನ ಭಿನ್ನ ಲಸಿಕೆಗಳ ಸಂಯೋಜನೆಯ ಪರಿಣಾಮವನ್ನು ಪರೀಕ್ಷಿಸಲು ನಾಲ್ಕನೇ ಹಂತದ ಕ್ಲಿನಿಕಲ್ ಟ್ರಯಲ್ ನಡೆಸಲು ಭಾರತೀಯ ಪ್ರಧಾನ ಔಷಧ ನಿಯಂತ್ರಕರ (ಡಿಸಿಜಿಐ) ಅನುಮತಿ ದೊರೆತಿದೆ. ತಮಿಳುನಾಡಿನ ವೆಲ್ಲೋರ್‌ನ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜ್ (ಸಿಎಂಸಿ) ಈ ಕ್ಲಿನಿಕಲ್ ಟ್ರಯಲ್ ನಡೆಸಲಿದೆ.

ಭಾರತದಲ್ಲಿ ಈಗ ಕೋವಿಡ್ ನಿಯಂತ್ರಣಕ್ಕಾಗಿ ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಲಸಿಕೆಗಳನ್ನು ನೀಡಲಾಗುತ್ತಿದೆ. ಒಬ್ಬ ವ್ಯಕ್ತಿಗೆ ಯಾವುದಾದರೂ ಒಂದು ಲಸಿಕೆಯ ಎರಡು ಡೋಸ್ ನೀಡುವ ಪದ್ಧತಿ ಅನುಸರಿಸಲಾಗುತ್ತಿದೆ. ಆದರೆ ಈಗ ಎರಡೂ ಲಸಿಕೆಯ ಒಂದೊಂದು ಡೋಸ್ ನೀಡುವ ಕಾರ್ಯಸಾಧ್ಯತೆ ಮತ್ತು ಪರಿಣಾಮಗಳ ಬಗ್ಗೆ ಅಧ್ಯಯನ ನಡೆಸಲು ಅನುಮತಿ ದೊರೆತಿದೆ. ವೆಲ್ಲೋರ್‌ನ ಸಿಎಂಸಿ ಇಂತಹ ಒಂದು ಪ್ರಸ್ತಾವವನ್ನು ಡಿಸಿಜಿಐ ಮುಂದೆ ಇರಿಸಿತ್ತು. ಡಿಸಿಜಿಐ ಈಗ ಅದನ್ನು ಮಾನ್ಯ ಮಾಡಿದೆ.

ಈಗಾಗಲೇ ಸಾರ್ವಜನಿಕ ಬಳಕೆಗೆ ಲಭ್ಯವಿರುವ ಔಷಧ/ಲಸಿಕೆಗಳ ಸಂಯೋಜಿತ ಬಳಕೆಯ ಅಧ್ಯಯನವನ್ನು ನಾಲ್ಕನೇ ಹಂತದ ಕ್ಲಿನಿಕಲ್ ಟ್ರಯಲ್ ಎನ್ನಲಾಗುತ್ತದೆ. ಈ ಅಧ್ಯಯನದ ಭಾಗವಾಗಿ ಒಬ್ಬ ವ್ಯಕ್ತಿಗೇ ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್‌ನ ಒಂದೊಂದು ಡೋಸ್ ನೀಡಿ ಪರಿಣಾಮಗಳನ್ನು ಕಂಡುಕೊಳ್ಳಲು ವೆಲ್ಲೋರ್ ಸಿಎಂಸಿ ಕಾರ್ಯಯೋಜನೆ ಸಿದ್ಧಪಡಿಸಿದೆ.

‘ಈ ಅಧ್ಯಯನದಲ್ಲಿ 500-600 ಸ್ವಯಂಸೇವಕರು ಭಾಗಿಯಾಗಲಿದ್ದಾರೆ. ಎರಡು ರೀತಿಯ ಸಂಯೋಜನೆಯಲ್ಲಿ ಅಧ್ಯಯನ ನಡೆಸಲಾಗುತ್ತದೆ. ಮೊದಲು ಕೋವಿಶೀಲ್ಡ್ ಡೋಸ್ ನೀಡಿ, ನಂತರ ಕೋವ್ಯಾಕ್ಸಿನ್ ಡೋಸ್ ನೀಡುವುದು ಒಂದು ಸಂಯೋಜನೆ. ಮೊದಲು ಕೋವ್ಯಾಕ್ಸಿನ್ ಡೋಸ್ ನೀಡಿ, ನಂತರ ಕೋವಿಶೀಲ್ಡ್ ಡೋಸ್ ನೀಡುವುದು ಎರಡನೇ ರೀತಿಯ ಸಂಯೋಜನೆ. ಯಾವ ಸಂಯೋಜನೆಯು ಎಷ್ಟು ಪರಿಣಾಮಕಾರಿ ಎಂಬುದನ್ನು ಅಧ್ಯಯನದಲ್ಲಿ ಪರಿಶೀಲಿಸಲಾಗುತ್ತದೆ. ಎರಡೂ ಲಸಿಕೆಗಳು ಭಿನ್ನ ವಿಧಾನದ ಲಸಿಕೆಗಳು ಆಗಿರುವ ಕಾರಣ, ಸಂಯೋಜಿತ ಬಳಕೆಯಲ್ಲಿ ಅಡ್ಡಪರಿಣಾಮಗಳು ಉಂಟಾಗುತ್ತವೆಯೇ ಎಂಬುದನ್ನು ಪರಿಶೀಲಿಸುವುದು ಅಧ್ಯಯನದ ಪ್ರಧಾನ ಉದ್ದೇಶ’ ಎಂದು ವೆಲ್ಲೋರ್ ಸಿಎಂಸಿ ವಿವರಿಸಿದೆ.

ಡೋಸ್ ಮಿಶ್ರಣ ಹೇಗೆ?

ಫೈಜರ್	ಮೊಡೆರ್ನಾ
ಆಸ್ಟ್ರಾಜೆನೆಕಾ	ಫೈಜರ್/ಮೊಡೆರ್ನಾ
ಆಸ್ಟ್ರಾಜೆನೆಕಾ	ಎಂಆರ್‌ಎನ್‌ಎ
ಯಾವುದೇ ಲಸಿಕೆ	ಫೈಝರ್/ಸಿನೋಫಾರ್ಮ್
ಆಸ್ಟ್ರಾಜೆನೆಕಾ	ಯಾವುದೇ ಲಸಿಕೆ

‘ಪ್ರಯೋಗಗಳು ಸೀಮಿತ’

ಕೋವಿಡ್ ಲಸಿಕೆಗಳ ಮಿಶ್ರ ಡೋಸ್ ಪಡೆಯುವ ಬಗ್ಗೆ ವೈಯಕ್ತಿಕ ನಿರ್ಧಾರ ತೆಗೆದುಕೊಳ್ಳುವುದು ಸರಿಯಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆಯು ಈಗಾಗಲೇ ಎಚ್ಚರಿಸಿದ್ದು, ಇಂಥ ವಿಷಯದಲ್ಲಿ ಸಾರ್ವಜನಿಕ ಆರೋಗ್ಯ ಪ್ರಾಧಿಕಾರಗಳ ನಿರ್ಧಾರಕ್ಕೆ ಬದ್ಧವಾಗಿರಬೇಕು ಎಂದು ಹೇಳಿದೆ.

ಎರಡು ಭಿನ್ನ ಸಂಯೋಜನೆಗಳ ಲಸಿಕೆಯ ಪರಿಣಾಮದ ಬಗ್ಗೆ ನಡೆದಿರುವ ಅಧ್ಯಯನಗಳ ಬಗ್ಗೆ ಇನ್ನಷ್ಟು ಮಾಹಿತಿಯ ಅವಶ್ಯಕತೆ ಇದೆ. ಇದರೊಂದಿಗೆ, ಅದು ನೀಡಬಹುದಾದ ಪ್ರತಿರೋಧ ಶಕ್ತಿ ಹಾಗೂ ಸುರಕ್ಷತೆಯನ್ನೂ ಪರಿಗಣಿಸುವುದು ಅತ್ಯಗತ್ಯ. ಹೀಗಾಗಿ, ಪರಿಣಾಮದ ಅರಿವಿಲ್ಲದೇ ಪ್ರಯೋಗಕ್ಕೆ ಮುಂದಾಗುವುದು ಸಲ್ಲದು ಎಂದು ವಿಶ್ವ ಆರೋಗ್ಯಸಂಸ್ಥೆಯ ಮುಖ್ಯ ವಿಜ್ಞಾನಿ ಸೌಮ್ಯಾ ಸ್ವಾಮಿನಾಥನ್ ಹೇಳಿದ್ದಾರೆ.

‘ಕೋವಿಡ್–19 ತಡೆಯುವಲ್ಲಿ ಲಸಿಕೆಯ ಮಿಶ್ರ ಡೋಸ್ ಎಷ್ಟು ಪರಿಣಾಮಕಾರಿ ಎಂಬುದನ್ನು ಹೇಳಲು, ಈ ಬಗ್ಗೆ ಈಗ ನಡೆದಿರುವ ಪ್ರಯೋಗಗಳು ಸೀಮಿತ. ಫಲಿತಾಂಶಕ್ಕಾಗಿ ದೀರ್ಘಾವಧಿಯ ಅಧ್ಯಯನ ನಡೆಯದ ಹೊರತು ಈ ಮಿಶ್ರ ಲಸಿಕೆಯ ದಕ್ಷತೆ ಎಂಥದ್ದು ಅಥವಾ ಎಷ್ಟು ದಿನಗಳವರೆಗೆ ರಕ್ಷಣೆ ನೀಡಬಲ್ಲದು ಎಂಬುದನ್ನು ಹೇಳಲಾಗದು’ ಎನ್ನುತ್ತಾರೆ ಈ ಬಗ್ಗೆ ಸಂಶೋಧನೆ ನಡೆಸಿರುವ ಜರ್ಮನಿಯ ಹ್ಯಾಂಬರ್ಗ್‌ನ ಸಾರ್‌ಲ್ಯಾಂಡ್ ವಿಶ್ವವಿದ್ಯಾಲಯದ ವೈರಾಣುತಜ್ಞೆ ಮಾರ್ಟಿನಾ ಸೆಸ್ತರ್.

ವಿಭಿನ್ನ ಸಂಯೋಜನೆಗಳನ್ನು ಹೋಲಿಸುವುದು ಕೂಡ ಕಷ್ಟವಾದದ್ದು. ಇದು ಕೂಡ ಈ ಪ್ರಯೋಗದ ಮಿತಿಯಾಗಿದೆ. ಬಯಸಿದ ಫಲಿತಾಂಶ ಅಥವಾ ಪರಿಣಾಮಕ್ಕಾಗಿನ ಬೃಹತ್ ಪ್ರಮಾಣದ ಅಧ್ಯಯನ ತುಂಬಾ ಕಷ್ಟ. ಅಧ್ಯಯನದ ಪರಿಣಾಮವು ವಿರುದ್ಧವಾಗಿ ಬಂದ ಸಂದರ್ಭದಲ್ಲಿ, ನೈತಿಕತೆಯ ಪ್ರಶ್ನೆಯೂ ಉದ್ಭವಿಸುತ್ತದೆ ಎನ್ನುತ್ತಾರೆ ಅವರು. ಹೀಗಾಗಿಯೇ ರೋಗದ ವಿರುದ್ಧ ನೀಡಬಹುದಾದ ರಕ್ಷಣೆಯ ಬಗ್ಗೆ ನಿರ್ಧರಿಸುವ ಕುರಿತು ಪ್ರಯತ್ನಗಳಾಗುತ್ತಿಲ್ಲ ಎಂಬುದು ವಿಜ್ಞಾನಿಗಳ ಅಭಿಪ್ರಾಯ.

ಅಚಾತುರ್ಯದಿಂದ ಬೆಳಕಿಗೆ ಬಂದ ಸಾಧ್ಯತೆ

ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್‌ನ ಒಂದೊಂದು ಡೋಸ್ ಪಡೆದುಕೊಂಡರೆ ಕೋವಿಡ್ ನಿರೋಧಕ ಶಕ್ತಿ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗುತ್ತದೆ ಎಂಬುದು ಪತ್ತೆಯಾಗಿದೆ. ಸಿಬ್ಬಂದಿಯಿಂದ ಆದ ಅಚಾತುರ್ಯವು ಈ ಹೊಸ ಸಾಧ್ಯತೆಯ ಬಗ್ಗೆ ಅರಿವು ಮೂಡಿಸಿದೆ ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು (ಐಸಿಎಂಆರ್) ಹೇಳಿದೆ.

ಉತ್ತರ ಪ್ರದೇಶದ ಸಿದ್ಧಾರ್ಥನಗರದಲ್ಲಿ 18 ಜನರಿಗೆ ಅಚಾತುರ್ಯದ ಕಾರಣ ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್‌ನ ಒಂದೊಂದು ಡೋಸ್ ನೀಡಲಾಗಿತ್ತು. ಮೇ ತಿಂಗಳಿನಲ್ಲಿ ನಡೆದ ಈ ಅಚಾತುರ್ಯದ ಮೇಲೆ ಐಸಿಎಂಆರ್ ಅಧ್ಯಯನ ನಡೆಸಿತು. ಭಿನ್ನ ಡೋಸ್ ಪಡೆದವರ ಆರೋಗ್ಯದಲ್ಲಿ ಯಾವುದೇ ಅಡ್ಡಪರಿಣಾಮ ಉಂಟಾಗಿದೆಯೇ ಎಂಬುದನ್ನು ಪರಿಶೀಲಿಸುವುದು ಆ ಅಧ್ಯಯನದ ಉದ್ದೇಶವಾಗಿತ್ತು.

ಆದರೆ ಭಿನ್ನ ಡೋಸ್ ಪಡೆದ 18 ಜನರಲ್ಲೂ ಗಣನೀಯ ಅಡ್ಡಪರಿಣಾಮಗಳು ತಲೆದೋರಲಿಲ್ಲ. ಬದಲಿಗೆ ಅವರಲ್ಲಿ ಕೋವಿಡ್ ನಿರೋಧಕ ಶಕ್ತಿ ಉತ್ತಮಗೊಂಡಿತ್ತು. ಕೋವಿಶೀಲ್ಡ್‌ನ ಎರಡು ಡೋಸ್ ಪಡೆದ 40 ಮಂದಿ ಮತ್ತು ಕೋವ್ಯಾಕ್ಸಿನ್‌ನ ಎರಡು ಡೋಸ್ ಪಡೆದ 40 ಮಂದಿಯ ಜತೆಗೆ ಈ 18 ಜನರನ್ನು ಹೋಲಿಸಿ ನೋಡಲಾಗಿತ್ತು. ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್‌ನ ತಲಾ ಎರಡು ಡೋಸ್ ಪಡೆದಿದ್ದವರಿಗಿಂತ, ಎರಡೂ ಲಸಿಕೆಯ ಒಂದೊಂದು ಡೋಸ್ ಪಡೆದುಕೊಂಡಿದ್ದವರಲ್ಲಿ ಕೋವಿಡ್ ನಿರೋಧಕ ಶಕ್ತಿ ಹೆಚ್ಚಿನ ಪ್ರಮಾಣದಲ್ಲಿ ಇತ್ತು. ಆದರೆ ಈ ಅಧ್ಯಯನವನ್ನು ತಜ್ಞರ ಸಮಿತಿಯು ಇನ್ನಷ್ಟೇ ಪರಿಶೀಲಿಸಬೇಕಿದೆ ಎಂದು ಐಸಿಎಂಆರ್ ಮಾಹಿತಿ ನೀಡಿದೆ.

ವಿಶ್ವಾಸ ಹೆಚ್ಚಿಸಿದ ಅಧ್ಯಯನ ವರದಿಗಳು

ಕೊರೊನಾ ಸೋಂಕು ತಡೆಗಟ್ಟುವ ದಿಸೆಯಲ್ಲಿ ಎರಡು ವಿವಿಧ ಕಂಪನಿಗಳ ಲಸಿಕೆಗಳನ್ನು ನೀಡುವ ವಿದ್ಯಮಾನ ದಿನದಿಂದ ದಿನಕ್ಕೆ ಕುತೂಹಲಕ್ಕೆ ಕಾರಣವಾಗಿದೆ. ಹೀಗೆ ಮಾಡುವುದರಿಂದ ಪ್ರಬಲವಾದ ರೋಗನಿರೋಧಕ ವ್ಯವಸ್ಥೆ ರೂಪುಗೊಳ್ಳುತ್ತದೆ ಎಂದು ಅಧ್ಯಯನಗಳು ಅಭಿಪ್ರಾಯಪಟ್ಟಿವೆ. ಅಡ್ಡಪರಿಣಾಮಗಳ ಬಗ್ಗೆ ವಿಜ್ಞಾನಿಗಳು ಎಚ್ಚರಿಕೆಯನ್ನೂ ನೀಡಿದ್ದಾರೆ. ಸಾರ್ಸ್ ಕೋವ್–2 ಸೋಂಕಿನ ವಿರುದ್ಧ ಹೋರಾಡಲು ಎರಡು ಡೋಸ್‌ಗಳಲ್ಲಿ ಲಸಿಕೆ ನೀಡಲಾಗುತ್ತದೆ. ಅಸ್ಟ್ರಾಜೆನೆಕಾ ಮತ್ತು ಫೈಝರ್ ಲಸಿಕೆಗಳನ್ನು ಬೆರೆಸಿದರೆ ಪರಿಣಾಮ ಹೇಗಿರುತ್ತದೆ ಎಂಬ ಬಗ್ಗೆ ಜಗತ್ತಿನ ವಿವಿಧ ದೇಶಗಳಲ್ಲಿ ಅಧ್ಯಯನಗಳು ನಡೆದಿವೆ. ಬ್ರಿಟನ್, ಜರ್ಮನಿ ಮೊದಲಾದೆಡೆ ನಡೆದ ಅಧ್ಯಯನಗಳು ಪರಿಣಾಮಕಾರಿ ಎಂಬ ಅಭಿಪ್ರಾಯಕ್ಕೆ ಬಂದಿವೆ.

ಈ ಪರಿಕಲ್ಪನೆ ಹುಟ್ಟಿದ್ದು ಅನಿವಾರ್ಯ ಪರಿಸ್ಥಿತಿಯಲ್ಲಿ. ಆಸ್ಟ್ರಾಜೆನೆಕಾ ಲಸಿಕೆ ಪಡೆದ ಒಂದು ವಯೋಮಾನದ ಕೆಲವರಲ್ಲಿ ರಕ್ತ ಹೆಪ್ಪುಗಟ್ಟುವಿಕೆ ಕಂಡುಬಂದಿತು. ಹೀಗಾಗಿ ಕಳೆದ ಮಾರ್ಚ್ ತಿಂಗಳಲ್ಲಿ ಯುರೋಪ್‌ನ ಕೆಲವು ದೇಶಗಳು ಈ ಲಸಿಕೆ ನೀಡುವುದನ್ನು ನಿಲ್ಲಿಸಿದವು. ಎರಡನೇ ಡೋಸ್‌ಗೆ ಕಾಯುತ್ತಿದ್ದವರಿಗೆ ಮತ್ತೆ ಅದೇ ಕಂಪನಿಯ ಡೋಸ್ ನೀಡುವ ಬದಲು, ಬೇರೊಂದು ಕಂಪನಿಯ ಲಸಿಕೆ ನೀಡದೇ ಬೇರೆ ವಿಧಿ ಇರಲಿಲ್ಲ. ಹೀಗಾಗಿ ಲಸಿಕೆ ಮಿಶ್ರಣವನ್ನು ಐರೋಪ್ಯ ಒಕ್ಕೂಟದ ಹಲವು ದೇಶಗಳು ಶಿಫಾರಸು ಮಾಡುತ್ತಿವೆ.

ಮೇ 12ರಂದು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ವರದಿ ಪ್ರಕಟವಾಯಿತು. ಎರಡು ವಿಭಿನ್ನ ಲಸಿಕೆಗಳನ್ನು ನೀಡಿದರೂ, ಉತ್ತಮ ರೋಗನಿರೋಧಕ ಪ್ರತಿಕ್ರಿಯೆ ಕಂಡುಬಂದಿದೆ ಎಂದು ಬ್ರಿಟನ್‌ನ ಕಾಮ್–ಕೋವ್ ಅಧ್ಯಯನ ವರದಿ ತಿಳಿಸಿತು. ಮೇ ತಿಂಗಳಲ್ಲಿ ಸ್ಪೇನ್‌ನ ಮ್ಯಾಡ್ರಿಡ್‌ನ ಕಾರ್ಲೋಸ್ ಆರೋಗ್ಯ ಸಂಸ್ಥೆಯ ಸಂಶೋಧಕರು ಕಾಂಬಿವ್ಯಾಕ್ಸ್ ಪ್ರಯೋಗದ ಫಲಿತಾಂಶ ಪ್ರಕಟಿಸಿದರು. ಆಕ್ಸ್‌ಫರ್ಡ್-ಆಸ್ಟ್ರಾಜೆನೆಕಾ ಲಸಿಕೆ ಪಡೆದ 8-12 ವಾರಗಳ ನಂತರ ಫೈಝರ್ ಲಸಿಕೆ ಪಡೆದ ಜನರಲ್ಲಿ ಪ್ರಬಲವಾದ ರೋಗನಿರೋಧಕ ಶಕ್ತಿ ಉಂಟಾಗಿದೆ ಎಂಬುದನ್ನು ಅಧ್ಯಯನ ಕಂಡುಕೊಂಡಿತು.

ಪ್ರಯೋಗಾಲಯ ಪರೀಕ್ಷೆಗಳ ಪ್ರಕಾರ, ಅಸ್ಟ್ರಾಜೆನೆಕಾದ ಒಂದು ಡೋಸ್ ಪಡೆದ ವ್ಯಕ್ತಿಗೆ ಹೋಲಿಸಿದರೆ, ಎರಡು ವಿಭಿನ್ನ ಲಸಿಕೆಗಳನ್ನು ಪಡೆದವರಲ್ಲಿ 37 ಪಟ್ಟು ಹೆಚ್ಚು ಸಾರ್ಸ್ ಕೋವ್–2 ವೈರಾಣು ನಿಷ್ಕ್ರಿಯಗೊಳಿಸುವ ಪ್ರತಿಕಾಯಗಳು ಹಾಗೂ ನಾಲ್ಕು ಪಟ್ಟು ಹೆಚ್ಚು ಟಿ–ಸೆಲ್ಸ್ ಉತ್ಪಾದನೆಯಾಗುತ್ತವೆ ಎಂಬುದು ದೃಢಪಟ್ಟಿತು.

ಜರ್ಮನಿಯ ಹ್ಯಾಂಬರ್ಗ್‌ನಲ್ಲಿರುವ ಸಾರ್‌ಲ್ಯಾಂಡ್ ವಿಶ್ವವಿದ್ಯಾಲಯದ ಅಧ್ಯಯನದ ಪ್ರಕಾರ, ಎರಡೂ ಡೋಸ್ ಆಸ್ಟ್ರಾಜೆನೆಕಾ ಪಡೆದ ವ್ಯಕ್ತಿಗಿಂತ ಮಿಶ್ರಿತ ಡೋಸ್ ಪಡೆದ ವ್ಯಕ್ತಿಗಳಲ್ಲಿ ಪ್ರತಿರಕ್ಷಣಾ ಪ್ರತಿಕ್ರಿಯೆ ಉತ್ತಮವಾಗಿದೆ. ಜೂನ್ ಅಂತ್ಯದ ವೇಳೆಗೆ ಇದೇ ರೀತಿಯ ಪರಿಣಾಮವನ್ನು ತೋರಿಸುವ ಅಧ್ಯಯನಗಳು ಬಹಿರಂಗವಾದವು.

ಯಾವ ದೇಶಗಳಲ್ಲಿ ಪರಿಗಣನೆ?

ಲಸಿಕೆ ಪೂರೈಕೆಯಲ್ಲಿ ಆಗುತ್ತಿರುವ ವಿಳಂಬವೂ ಈ ವಿದ್ಯಮಾನಕ್ಕೆ ಕಾರಣ. ಅಲಭ್ಯತೆಯ ಕಾರಣ, ಎರಡನೇ ಡೋಸ್ ಲಸಿಕೆ ನೀಡಲು ವಿವಿಧ ದೇಶಗಳು ಅನ್ಯ ಕಂಪನಿಗಳ ಮೊರೆ ಹೋಗುತ್ತಿವೆ.

- **ಬ್ರಿಟನ್:** ಮೊದಲ ಲಸಿಕೆ ದಾಸ್ತಾನು ಇಲ್ಲದ ಸಂದರ್ಭಗಳು ಹಾಗೂ ಅತ್ಯಂತ ಅಪರೂಪದ ಸಂದರ್ಭಗಳಲ್ಲಿ ಎರಡನೇ ಡೋಸ್‌ಗಾಗಿ ಜನರಿಗೆ ಬೇರೆ ಲಸಿಕೆಯನ್ನು ಹಾಕಿಸಲು ಅವಕಾಶ ನೀಡುವ ಬಗ್ಗೆ ಜನವರಿಯಲ್ಲಿ ಬ್ರಿಟನ್ ಮಾಹಿತಿ ನೀಡಿತ್ತು. ಬೇರೆ ಲಸಿಕೆಯನ್ನು ಬೂಸ್ಟರ್ ಆಗಿ ಬಳಸುವ ಪರೀಕ್ಷೆಯಲ್ಲಿ ತೊಡಗಿಸಿಕೊಳ್ಳುವುದಾಗಿ ನೊವಾವಾಕ್ಸ್ ಮೇ 21ರಂದು ತಿಳಿಸಿತ್ತು
- **ಅಮೆರಿಕ:** ಫೈಜರ್ ಮತ್ತು ಮೊಡೆರ್ನಾ ಲಸಿಕೆಗಳನ್ನು ಎರಡೂ ಪ್ರತ್ಯೇಕ ಡೋಸ್‌ಗಳಾಗಿ ನೀಡಲು ಅವುಗಳ ಮಧ್ಯೆ ಕನಿಷ್ಠ 28 ದಿನ ಅಂತರವಿರಬೇಕು ಎಂದು ಅಮೆರಿಕದ ಸಿಡಿಸಿ ಜನವರಿಯಲ್ಲಿ ಪ್ರಕಟಿಸಿದ ಪರಿಷ್ಕೃತ ಮಾರ್ಗಸೂಚಿಯಲ್ಲಿ ತಿಳಿಸಿತ್ತು
- **ಬಹರೇನ್/ಯುಎಇ:** ಆರಂಭದಲ್ಲಿ ಯಾವುದೇ ಲಸಿಕೆ ಪಡೆದಿದ್ದರೂ, ಎರಡನೇ ಡೋಸ್ ಆಗಿ ಫೈಝರ್ ಅಥವಾ ಸಿನೋಫಾರ್ಮ್ ಲಸಿಕೆ ಪಡೆಯಬಹುದು ಎಂದು ಬಹರೇನ್, ಯುಎಇ ತಿಳಿಸಿವೆ
- **ಕೆನಡಾ:** ಆಸ್ಟ್ರಾಜೆನೆಕಾ ಲಸಿಕೆಯ ಮೊದಲ ಡೋಸ್ ಪಡೆದವರು ಫೈಝರ್ ಅಥವಾ ಮೊಡೆರ್ನಾ ಲಸಿಕೆಯನ್ನು ಎರಡನೇ ಡೋಸ್ ಆಗಿ ಪಡೆಯಲು ರಾಷ್ಟ್ರೀಯ ಸಲಹಾ ಸಮಿತಿ ಶಿಫಾರಸು ಮಾಡಿದೆ
- **ಚೀನಾ:** ಕ್ಲಿನಿಕಲ್ ಟ್ರಯಲ್ ನೋಂದಣಿ ಮಾಹಿತಿಯ ಪ್ರಕಾರ, ಚೀನಾದ ಸಂಶೋಧಕರು ಕಳೆದ ಏಪ್ರಿಲ್‌ನಲ್ಲಿ ಕ್ಯಾನ್ಸಿನೋ ಬಯಾಲಾಜಿಕ್ಸ್ ಮತ್ತು ಚೋಂಗ್‌ಕ್ವಿಂಗ್ ಜಿಫಿ ಬಯಾಲಾಜಿಕಲ್ ಪ್ರಾಡಕ್ಟ್ಸ್ ಸಂಸ್ಥೆಗಳು ಅಭಿವೃದ್ಧಿಪಡಿಸಿದ ಪ್ರತ್ಯೇಕ ಲಸಿಕೆಗಳನ್ನು ಒಂದೇ ವ್ಯಕ್ತಿಗೆ ನೀಡುವ ಬಗ್ಗೆ ಅಧ್ಯಯನ ನಡೆಸಿದ್ದರು
- **ಫಿನ್ಲೆಂಡ್:** ಆಸ್ಟ್ರಾಜೆನೆಕಾ ಲಸಿಕೆಯ ಮೊದಲ ಡೋಸ್ ಪಡೆದ 65ಕ್ಕಿಂತ ಕಡಿಮೆ ವಯಸ್ಸಿನವರು ಎರಡನೇ ಲಸಿಕೆಯಾಗಿ ಬೇರೊಂದು ಕಂಪನಿಯ ಡೋಸ್ ಪಡೆಯಬಹುದು ಎಂದು ಫಿನ್ಲೆಂಡ್ ಆರೋಗ್ಯ ಮತ್ತು ಕಲ್ಯಾಣ ಸಂಸ್ಥೆ ಏಪ್ರಿಲ್ 14ರಂದು ತಿಳಿಸಿತ್ತು
- **ಫ್ರಾನ್ಸ್:** ಇನ್ನೂ ಪ್ರಾಯೋಗಿಕವಾಗಿ ಪರೀಕ್ಷೆಗೆ ಒಳಪಡಿಸದಿದ್ದರೂ, ಆಸ್ಟ್ರಾಜೆನೆಕಾ ಪಡೆದ 55 ವರ್ಷದೊಳಗಿನವರು ಎರಡನೇ ಡೋಸ್ ಆಗಿ ಎಂಆರ್‌ಎನ್‌ಎ (mRNA) ಲಸಿಕೆಗಳನ್ನು ಪಡೆಯಬಹುದು ಎಂದು ಸರ್ಕಾರ ತಿಳಿಸಿತ್ತು
- **ನಾರ್ವೆ:** ಆಸ್ಟ್ರಾಜೆನೆಕಾ ಲಸಿಕೆಯ ಮೊದಲ ಡೋಸ್ ಪಡೆದವರಿಗೆ, ಎಮ್‌ಆರ್‌ಎನ್‌ಎ ಚುಚ್ಚುಮದ್ದನ್ನು ಎರಡನೇ ಡೋಸ್ ಆಗಿ ನೀಡಲಾಗುತ್ತದೆ ಎಂದು ಏಪ್ರಿಲ್ 23ರಂದು ನಾರ್ವೆ ಹೇಳಿತ್ತು
- **ರಷ್ಯಾ:** ಈ ಬಗ್ಗೆ ಆರೋಗ್ಯ ಸಚಿವಾಲಯದ ಸಮಿತಿಯು ಹೆಚ್ಚಿನ ದತ್ತಾಂಶವನ್ನು ಕೇಳಿದ್ದರಿಂದ, ಆಸ್ಟ್ರಾಜೆನೆಕಾ ಮತ್ತು ಸ್ಪುಟ್ನಿಕ್–ವಿ ಲಸಿಕೆಗಳನ್ನು ಸಂಯೋಜಿಸುವ ಕ್ಲಿನಿಕಲ್ ಪ್ರಯೋಗಕ್ಕೆ ಅನುಮೋದನೆ ನೀಡುವುದನ್ನು ರಷ್ಯಾ ತಡೆಹಿಡಿದಿದೆ ಎಂದು ಮೇ 28ರಂದು ರಾಯಿಟರ್ಸ್ ಸುದ್ದಿಸಂಸ್ಥೆ ವರದಿ ಮಾಡಿತ್ತು

ಆಧಾರ: ಪಿಟಿಐ, ನೇಚರ್, ಯುಎಸ್ ನ್ಯೂಸ್, ರಾಯಿಟರ್ಸ್

ಸಂಸತ್ ಸಮಿತಿಯ ವರದಿಯಲ್ಲಿ ಕಳವಳ

ಮುಚ್ಚಿದ ಶಾಲೆ ಪರಿಣಾಮ ತೀವ್ರ

ನವದೆಹಲಿ (ಪಿಟಿಐ): ಕೋವಿಡ್–19 ಸಾಂಕ್ರಾಮಿಕದಿಂದಾಗಿ ದೀರ್ಘ ಕಾಲ ಶಾಲೆಗಳನ್ನು ಮುಚ್ಚಿದ್ದರಿಂದ ಆಗಿರುವ ಪ್ರತಿಕೂಲ ಪರಿಣಾಮಗಳು ನಿರ್ಲಕ್ಷಿಸಲು ಸಾಧ್ಯವಿಲ್ಲದಷ್ಟು ಗಂಭೀರವಾಗಿವೆ ಎಂದು ಶಿಕ್ಷಣ, ಮಹಿಳೆ, ಮಕ್ಕಳು, ಯುವ ಜನರು ಮತ್ತು ಕ್ರೀಡೆಯ ಕುರಿತ ಸಂಸತ್ ಸ್ಥಾಯಿ ಸಮಿತಿಯ ವರದಿಯು ಹೇಳಿದೆ.

ಶಾಲೆಗಳು ಮುಚ್ಚಿರುವುದು ಕುಟುಂಬಗಳ ಸಾಮಾಜಿಕ ಸಂಬಂಧದ ಮೇಲೆ ಪ್ರತಿಕೂಲ ಪರಿಣಾಮ ಬೀರಿದ್ದೇ ಅಲ್ಲದೆ, ಮಕ್ಕಳನ್ನು ಮನೆ ಕೆಲಸದಲ್ಲಿ ತೊಡಗಿಸಿಕೊಳ್ಳುವುದನ್ನೂ ಹೆಚ್ಚಿಸಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ವರ್ಷಕ್ಕೂ ಹೆಚ್ಚಿನ ಅವಧಿಯಿಂದ ಶಾಲೆಗಳನ್ನು ಮುಚ್ಚಿರುವುದು ವಿದ್ಯಾರ್ಥಿಗಳ ಮಾನಸಿಕ ಆರೋಗ್ಯದ ಮೇಲೆ ಪ್ರಭಾವ ಬೀರಿದೆ. ಮಕ್ಕಳು ನಾಲ್ಕು ಗೋಡೆಯ ಒಳಗೆ ಬಂದಿಗಳಾಗಿರುವ ಸ್ಥಿತಿಯು ಹೆತ್ತವರು ಮತ್ತು ಮಕ್ಕಳ ನಡುವಣ ಸಂಬಂಧವನ್ನೂ ಬಾಧಿಸಿದೆ. ಬಾಲ್ಯ ವಿವಾಹ ಮತ್ತು ಅತ್ಯಂತ ಚಿಕ್ಕ ವಯಸ್ಸಿಗೆ ಮದುವೆ ಮಾಡಿಕೊಡುವುದಕ್ಕೂ ಶಾಲೆ ಮುಚ್ಚಿರುವುದು ಕಾರಣವಾಗಿದೆ. ಕಲಿಕಾ ಗುಣಮಟ್ಟ ಕಡಿಮೆ ಎಂಬ ಸಮಸ್ಯೆಯು ಸಾಂಕ್ರಾಮಿಕದ ಆರಂಭಕ್ಕೆ ಮೊದಲೂ ಇತ್ತು. ಸಾಂಕ್ರಾಮಿಕವು ಕಲಿಕಾ ಬಿಕ್ಕಟ್ಟನ್ನು ತೀವ್ರವಾಗಿಸಿದೆ. ದುರ್ಬಲ ಮತ್ತು ಹಿಂದುಳಿದ ಮಕ್ಕಳ ಮೇಲೆ ಪರಿಣಾಮ ಇನ್ನೂ ಹೆಚ್ಚು ಎಂದು ವರದಿಯಲ್ಲಿ ವಿವರಿಸಲಾಗಿದೆ.

‘ಶಾಲೆ ಮುಚ್ಚಿದ್ದರಿಂದಾಗಿ ಉಂಟಾದ ಕಲಿಕಾ ಅಂತರ ತುಂಬುವ ಯೋಜನೆಗಳು, ಆನ್‌ಲೈನ್ ಮತ್ತು ಆಫ್‌ಲೈನ್ ಶಿಕ್ಷಣ ಹಾಗೂ ಪರೀಕ್ಷೆಯ ಪರಾಮರ್ಶೆ, ಶಾಲೆ ತೆರೆಯಲು ಯೋಜನೆ’ ಎಂಬ ಹೆಸರಿನ ವರದಿಯನ್ನು ವಿನಯ ಪಿ.ಸಹಸ್ರಬುದ್ಧೆ ನೇತೃತ್ವದ ಸಮಿತಿಯು ಸಿದ್ಧಪಡಿಸಿದೆ. ವರದಿಯನ್ನು ಸಂಸತ್ತಿನಲ್ಲಿ ಮಂಡಿಸಲಾಗಿದೆ.

ಶಾಲಾ ಮಟ್ಟದ ವಿದ್ಯಾರ್ಥಿಗಳ ಗಣಿತ, ವಿಜ್ಞಾನ ವಿಷಯಗಳು ಮತ್ತು ಭಾಷಾ ಕಲಿಕೆಗೆ ದೊಡ್ಡ ರೀತಿಯಲ್ಲಿ ಹಿನ್ನಡೆ ಆಗಿದೆ. ಕಲಿಕಾ ನಷ್ಟವು ವಿದ್ಯಾರ್ಥಿಗಳ ಗ್ರಹಿಕೆಯ ಸಾಮರ್ಥ್ಯವನ್ನೇ ಕುಗ್ಗಿಸುವ ಅಪಾಯ ಇದೆ. ಬಡವರು, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಮೇಲೆ ಇದರಿಂದ ಹೆಚ್ಚು ಪರಿಣಾಮ ಆಗಿದೆ. ಈ ಸಮಸ್ಯೆ ಪರಿಹಾರಕ್ಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ವರದಿಯು ಶಿಫಾರಸು ಮಾಡಿದೆ.

ದೇಶದಾದ್ಯಂತ ಲಾಕ್‌ಡೌನ್ ಹೇರಿದ್ದರಿಂದಾಗಿ ಕಳೆದ ವರ್ಷದ ಮಾರ್ಚ್‌ನಲ್ಲಿ ಶಾಲೆಗಳನ್ನು ಮುಚ್ಚಲಾಗಿತ್ತು. ಕೆಲವು ರಾಜ್ಯಗಳಲ್ಲಿ ಕಳೆದ ಅಕ್ಟೋಬರ್‌ನಲ್ಲಿ ಶಾಲೆ ತೆರೆಯುವ ಯತ್ನ ಮಾಡಲಾಯಿತು. ಆದರೆ, ಕೋವಿಡ್–19 ಎರಡನೇ ಅಲೆಯು ಹೆಚ್ಚು ತೀವ್ರಗೊಂಡ ಕಾರಣ ಶಾಲೆಗಳನ್ನು ಮತ್ತೆ ಮುಚ್ಚಲಾಯಿತು.

ಶಿಫಾರಸುಗಳು

- ಶಾಲೆಗಳನ್ನು ತೆರೆಯುವ ಬಗ್ಗೆ ಸಮತೋಲನ ಮತ್ತು ತರ್ಕಬದ್ಧವಾದ ಕ್ರಮ ಕೈಗೊಳ್ಳಬೇಕು. ವಿಚಾರವು ಗಂಭೀರವಾಗಿದೆ ಎಂಬುದನ್ನು ನಿರ್ಲಕ್ಷಿಸಬಾರದು
- ಶಾಲೆಗಳು ಅತ್ಯಂತ ಬೇಗನೆ ತೆರೆಯುವಂತಾಗಲು ಎಲ್ಲ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸಂಬಂಧಿಸಿದ ಸಿಬ್ಬಂದಿಗೆ ಲಸಿಕೆ ಹಾಕಿಸಬೇಕು
- ವಿದ್ಯಾರ್ಥಿಗಳನ್ನು ತಂಡಗಳಾಗಿ ವಿಂಗಡಿಸಿ, ಪರ್ಯಾಯ ದಿನಗಳಲ್ಲಿ ತರಗತಿ ನಡೆಸಬಹುದು. ಪಾಳಿಗಳಲ್ಲಿಯೂ ತರಗತಿ ಆರಂಭಿಸಬಹುದು
- ವಿದ್ಯಾರ್ಥಿಗಳ ನಡುವೆ ಅಂತರ ಕಾಯ್ದುಕೊಳ್ಳಬೇಕು ಮತ್ತು ಸದಾ ಕಾಲ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಬೇಕು, ಕೈಯನ್ನು ಆಗಾಗ ಸ್ವಚ್ಛಗೊಳಿಸಿಕೊಳ್ಳಬೇಕು
- ಹಾಜರಾತಿಯ ಹೊತ್ತಿನಲ್ಲಿ ದೇಹದ ತಾಪ ಪರೀಕ್ಷಿಸಬೇಕು, ಸೋಂಕಿತ ವಿದ್ಯಾರ್ಥಿಗಳನ್ನು ಗುರುತಿಸಲು ಆರ್‌ಟಿ–ಪಿಸಿಆರ್ ಪರೀಕ್ಷೆ ನಡೆಸಬೇಕು
- ಪ್ರತಿ ಶಾಲೆಗೆ ವೈದ್ಯಕೀಯ ಆಮ್ಲಜನಕ ಸಾಂದ್ರಕದ ಕನಿಷ್ಠ ಎರಡು ಯಂತ್ರಗಳನ್ನು ಒದಗಿಸಬೇಕು
- ವೈದ್ಯಕೀಯ ನೆರವು ಲಭಿಸುವವರೆಗೆ ವಿದ್ಯಾರ್ಥಿಗಳ ಮೇಲೆ ಗಮನ ಹರಿಸಲು ತರಬೇತಿ ಪಡೆದ ಸಿಬ್ಬಂದಿ ಇರಬೇಕು
- ಆರೋಗ್ಯ ನಿರೀಕ್ಷಕರು, ಆರೋಗ್ಯ ಕಾರ್ಯಕರ್ತರು ಆಗಾಗ ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು
- ಶಾಲೆಗಳನ್ನು ತೆರೆಯಲು ಬೇರೆ ಬೇರೆ ದೇಶಗಳಲ್ಲಿ ಅಳವಡಿಸಿಕೊಳ್ಳಲಾಗಿರುವ ಅತ್ಯುತ್ತಮ ಪದ್ಧತಿಗಳ ಬಗ್ಗೆ ಗಮನ ಹರಿಸಬೇಕು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

‘**ಭಾರತವು** ಮೊದಲ ಬಾರಿಗೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿದೆ. ಜಗತ್ತಿನ ಜುಟ್ಟು ಈಗ ಭಾರತದ ಕೈಯಲ್ಲಿದೆ. ಪಾಕಿಸ್ತಾನ, ಟರ್ಕಿ ದಿಗ್ಭ್ರಾಂತಿಗೆ ಒಳಗಾಗಿವೆ’ ಎಂಬ ಬರಹದ ಪೋಸ್ಟರ್‌ಗಳು ಕಳೆದ ಮೂರ್ನಾಲ್ಕು ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ‘ನಮೋ ಹಿಂದೂಸ್ತಾನಿ’, ‘ನಮೋ ಇಂಡಿಯಾ’ ಸೇರಿದಂತೆ ವಿವಿಧ ಫೇಸ್‌ಬುಕ್ ಪೇಜ್‌ಗಳಲ್ಲಿ ಈ ಪೋಸ್ಟರ್‌ಗಳು ಷೇರ್ ಆಗುತ್ತಿವೆ.



ಭಾರತವು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಅಧ್ಯಕ್ಷ ಸ್ಥಾನ ವಹಿಸಿಕೊಂಡಿದ್ದು ಇದೇ ಮೊದಲಲ್ಲ ಎಂದು ಆಲ್ಟ್ ನ್ಯೂಸ್ ಹಾಗೂ ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆಗಳು ತಿಳಿಸಿವೆ. 1950ರಿಂದ ಭಾರತ ಈವರೆಗೆ 10 ಬಾರಿ ಅಧ್ಯಕ್ಷ ಹುದ್ದೆ ವಹಿಸಿಕೊಂಡಿದೆ. ಮಂಡಳಿಯಲ್ಲಿ ಐದು ಕಾಯಂ ಸದಸ್ಯ ದೇಶಗಳು ಸೇರಿ 15 ಸದಸ್ಯ ದೇಶಗಳಿವೆ. ಸದಸ್ಯ ದೇಶಗಳು ಪ್ರತಿ ಎರಡು ವರ್ಷಕ್ಕೊಮ್ಮೆ ಆಯ್ಕೆಯಾಗುತ್ತವೆ. ಪ್ರತಿ ದೇಶವು ಸರದಿ ಪ್ರಕಾರ ಒಂದು ತಿಂಗಳು ಅಧ್ಯಕ್ಷಗಿರಿ ನಡೆಸುತ್ತದೆ. ಭಾರತವು ಮತ್ತೆ ಡಿಸೆಂಬರ್‌ನಲ್ಲಿ ಅಧ್ಯಕ್ಷ ಹುದ್ದೆ ವಹಿಸಿಕೊಳ್ಳಲಿದೆ. ಕಾಯಂ ಸದಸ್ಯ-ದೇಶಗಳ ಪೈಕಿ ಚೀನಾ ವಿಟೊ ಅಧಿಕಾರ ಹೊಂದಿದ್ದು, ಕಾಯಂ ಸದಸ್ಯ ರಾಷ್ಟ್ರ ಆಗುವ ಭಾರತದ ಯತ್ನಕ್ಕೆ ಪೆಟ್ಟು ನೀಡುತ್ತಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ದೃಷ್ಟಿ ಚುಕ್ಕೆ

ದೃಷ್ಟಿ ಚುಕ್ಕೆಯದೊಂದನೆಲ್ಲ ಚಂದಂಗಳ್ಗ |
ಮಿಟ್ಟಿಹನು ಪರಮೇಷ್ಠಿ, ಶಶಿಗೆ ಮಶಿಯವೊಲು ||
ಗುಟ್ಟೇನೊ? ರಕ್ಷೆಯೋ? ಸಿಂಗರವೊ? ಹೇಳನವೊ ? |
ಮಷ್ಟು ಸೃಷ್ಟಿಗೆ ಬೊಟ್ಟು – ಮಂಕುತಿಮ್ಮ || 447 ||

ಪದ-ಅರ್ಥ: ದೃಷ್ಟಿ ಚುಕ್ಕೆಯದೊಂದನೆಲ್ಲ = ದೃಷ್ಟಿ-ಚುಕ್ಕೆ + ಅದೊಂದನು + ಎಲ್ಲ, ಚಂದಂಗಳ್ಗಮಿಟ್ಟಿಹನು = ಚಂದಂಗಳ್ಗೆ(ಚೆಂದವಾದವುಗಳಿಗೆಲ್ಲ) + ಇಟ್ಟಿಹನು, ಶಶಿ = ಚಂದ್ರ, ಮಶಿ = ಮಸಿ, ಕಪ್ಪು, ಹೇಳನ = ಚೇಷ್ಟೆ, ಮಷ್ಟು = ಕೊಳೆ.

ವಾಚ್ಯಾರ್ಥ: ಎಲ್ಲ ಚೆಂದಗಳಿಗೆ ಪರಬ್ರಹ್ಮ ಒಂದು ದೃಷ್ಟಿ ಚುಕ್ಕೆಯನ್ನಿಟ್ಟಿದ್ದಾನೆ, ಚಂದ್ರನಲ್ಲಿ ಕಪ್ಪನಿಟ್ಟಂತೆ. ಇದೊಂದು ಗುಟ್ಟೋ, ರಕ್ಷಣೆಯ ಬಗೆಯೋ, ಶೃಂಗಾರವೊ, ಅಥವಾ ಚೇಷ್ಟೆಯೋ? ಈ ಸುಂದರವಾದ ಸೃಷ್ಟಿಗೆ ಬಗ್ಗಡದ ಕೊಳೆಯೇ ದೃಷ್ಟಿ ಚುಕ್ಕೆ.

ವಿವರಣೆ: ಪ್ರಪಂಚದಲ್ಲಿ ಯಾವುದೂ ಪರಿಪೂರ್ಣವಲ್ಲ. ಯಾವುದೋ ಒಂದು ಕೊರತೆ ಅದಕ್ಕಿರುತ್ತದೆ. ಅಧ್ಯಾತ್ಮದಲ್ಲಿ ಹೇಳುವುದೆಂದರೆ ಪರಮಾತ್ಮನೊಬ್ಬನನ್ನುಳಿದು ಯಾವುದೂ ಸಂಪೂರ್ಣ ಸುಂದರವಲ್ಲ. ಅಷ್ಟು ಚೆಂದದ ಚಂದ್ರ ಆದರೆ ಅವನ ಮೈಮೇಲೆ ಕಪ್ಪು ಕಲೆಗಳು. ಸೂರ್ಯ ಅತ್ಯದ್ಭುತ. ಆದರೆ ಹತ್ತಿರ ಹೋದರೆ ಸುಟ್ಟುಬಿಟ್ಟಾನು. ಹಿಮಾಲಯದ ದೃಶ್ಯ ಮನೋಹರವಾದದ್ದು. ಅಲ್ಲಿ ಯಾವಾಗ ಹಿಮಪಾತವಾದೀತು, ಭೂಕುಸಿತ ಉಂಟಾದೀತು ಹೇಳುವುದು ಅಸಾಧ್ಯ. ಮನೋಹರವಾದ ಪರ್ವತದ ಹೃದಯದಲ್ಲಿ ಆಪತ್ತಿನ ಕಂಪನ. ಹುಲಿ, ಸಿಂಹಗಳೆಷ್ಟು ಚಂದ ನೋಡಲು? ಆದರೆ ಅವುಗಳ ಕ್ರೂರತೆ?

ಹೀಗೆ ಸೃಷ್ಟಿಯ ಪ್ರತಿಯೊಂದರಲ್ಲೂ, ಯಾವುದೋ ಒಂದು ಕೊರತೆ ಕಾಣುತ್ತದೆ. ಇದನ್ನು ಕಗ್ಗ ದೃಷ್ಟಿ ಚುಕ್ಕೆ ಎಂದು ಕರೆಯುತ್ತದೆ. ದೃಷ್ಟಿ ಬೊಟ್ಟನ್ನು ಮಕ್ಕಳಿಗೆ ಹಚ್ಚುತ್ತಾರೆ. ಪುಟ್ಟ ಮಕ್ಕಳನ್ನು ನೋಡುವುದೇ ಸಂತೋಷ. ಮುದ್ದಾದ ಹಾಲ್ಗೆನ್ನೆ, ಬಟ್ಟಲು ಕಂಗಳು, ಪುಟ್ಟ ಪುಟ್ಟ ಕೈಗಳು, ಫಕ್ಕನೆ ಅರಳುವ ಮುಖ, ತೊದಲು ಮಾತು ಯಾರನ್ನು ಸೆಳೆಯುವುದಿಲ್ಲ? ಹೀಗೆ ಮಕ್ಕಳು ಕಣ್ಮನ ಸೆಳೆಯುವ ಕೇಂದ್ರಬಿಂದುಗಳು. ಎಲ್ಲರಿಂದ ಮುದ್ದಾಡಿಸಿಕೊಂಡು ಮನೆಗೆ ಬಂದ ಮಗು ಕಿರಿಕಿರಿ ಮಾಡುತ್ತದೆ, ಅಳುತ್ತದೆ. ಆಗ ತಾಯಿಯೋ, ಮನೆಯ ಹಿರಿಯರೋ, ಮಗುವಿಗೆ ದೃಷ್ಟಿಯಾಗಿರಬೇಕು ಎಂದುಕೊಂಡು ದೃಷ್ಟಿಯನ್ನು ತೆಗೆಯುತ್ತಾರೆ. ಮರುದಿನ ಮಗುವಿಗೆ ಅಲಂಕಾರ ಮಾಡಿ ದೃಷ್ಟಿ ಬೊಟ್ಟು ಇಡುತ್ತಾರೆ. ಮಗುವಿಗೆ ಚೆಂದದ ಅಲಂಕಾರ ಮಾಡಿ ಅದರ ಕೆನ್ನೆಯ ಮೇಲೆ ಒಂದು ಚಿಕ್ಕ ಸಾದಿನ ಬೊಟ್ಟು ಇಡುತ್ತಾರೆ. ಇದರಿಂದ ಎರಡು ಕೆಲಸಗಳಾಗುತ್ತವೆ. ಮೊದಲನೆಯದು, ಮಗುವಿನ ಸೊಗಸು ಮತ್ತಷ್ಟು ಚೆನ್ನಾಗಿ ಕಾಣುತ್ತದೆ. ವಿಶಾಲವಾದ ಹಣೆಯ ಮೇಲೆ ಅಥವಾ ಕೆನ್ನೆಯ ಮೇಲಿನ ಕಪ್ಪು ಚುಕ್ಕೆ, ಏಕತಾನತೆಯನ್ನು ಮರೆಮಾಚುತ್ತದೆ. ಎರಡನೆಯದಾಗಿ, ಕಪ್ಪುಚುಕ್ಕೆ ಮಗುವಿನ ಅಂದವನ್ನು ಮರೆಮಾಚಿ, ನೋಡುವವರ ದೃಷ್ಟಿಯನ್ನು ತನ್ನೆಡೆಗೆ ಸೆಳೆಯುತ್ತದೆ. ಆದ್ದರಿಂದಲೇ ಅದು ದೃಷ್ಟಿಬೊಟ್ಟು – ದೃಷ್ಟಿಯನ್ನು ತನ್ನೆಡೆಗೆ ಸೆಳೆಯುವುದು.

ಈ ಕಗ್ಗ ಪರಮೇಷ್ಠಿಯ ಚತುರತೆಯ ಬಗ್ಗೆ ಹೇಳುತ್ತದೆ. ಇಡೀ ಪ್ರಪಂಚದಲ್ಲಿ ತಾನು ಸೃಷ್ಟಿಸಿದ ಪ್ರತಿಯೊಂದರಲ್ಲೂ ಒಂದು ಕೊರತೆಯ ದೃಷ್ಟಿಬೊಟ್ಟನ್ನು ಏಕೆ ಇಟ್ಟಿದ್ದಾನೆ? ಏನದರ ಗುಟ್ಟು? ಅದು ವ್ಯವಸ್ಥೆಯ ರಕ್ಷಣೆಗೋಸ್ಕರವೊ? ಅಲಂಕಾರವೊ? ಅಥವಾ ಒಂದು ಚೇಷ್ಟೆಯೋ? ಹಾಗಾದರೆ, ಜಗತ್ತಿನಲ್ಲಿರುವ ಕೊಳೆ ಕೂಡ ಅವನೇ ಯೋಜಿಸಿದ ದೃಷ್ಟಿಬೊಟ್ಟು ಇರಬಹುದೇ?

ಗುಂಡಣ್ಣ

ದಿನ ಭವಿಷ್ಯ

ಸೋಮವಾರ ಆಗಸ್ಟ್ 9, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಆಶ್ಲೇಷಾ ಪ್ರತಿಪದೆ ಗಂ. 30-33 (ಸಾ. 6-27) ಸೋಮವಾರ ನಿತ್ಯ ನಕ್ಷತ್ರ ಆಶ್ಲೇಷಾ ಗಂ. 10-20 (ಹ. 10-22) ವರೀಯನ್ ನಾಮ ಯೋಗ ಗಂ. 43-54 ಕಿಮಸ್ತುಘ್ನ ಕರಣ ಗಂ. 0-34 ಉಪರಿ ಬವ ಕರಣ 29-59 ವಿಷ ಗಂ. 40-45 ಅಮೃತ ಗಂ. 4-56 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 : ಸೂರ್ಯೋದಯ: 6-10 ಸೂರ್ಯಾಸ್ತ: 6-39 ಅದೃಷ್ಟ ಸಂಖ್ಯೆ 4, 7

ಮೇಷ: ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕಾಗಿ ಸ್ಥಾನ ಬದಲಾವಣೆಯ ಸಾಧ್ಯತೆ. ರೈತಾಪಿವರ್ಗದವರಿಗೆ ಆತಂಕದ ಕ್ಷಣಗಳು ಎದುರಾದೀತು. ಉದ್ಯೋಗ ಮತ್ತು ವ್ಯವಹಾರಸ್ಥರಿಗೆ ಉನ್ನತಿ ಕಂಡುಬರುವುದು. ಸಾಹಸೀ ಕೆಲಸಕ್ಕೆ ಕೈಹಾಕಲಿದ್ದೀರಿ.

ವೃಷಭ: ಉಪಾಧ್ಯಾಯರು, ಲೆಕ್ಕ ಪರಿಶೋಧಕರಿಗೆ ಉತ್ತಮ ಆದಾಯದೊಂದಿಗೆ ಸಾಮಾಜಿಕ ಮನ್ನಣೆ ದೊರಕುವ ಸಾಧ್ಯತೆ. ಯುವಜನರು ಕಠಿಣ ಸ್ಪರ್ಧೆಗಳನ್ನು ಎದುರಿಸಬೇಕಾದೀತು. ವರ್ಚಸ್ಸಿಗೆ ಧಕ್ಕೆಯಾಗುವ ಸಾಧ್ಯತೆ.

ಮಿಥುನ: ನೌಕರಿಯಲ್ಲಿರುವವರಿಗೆ ಅನಿರೀಕ್ಷಿತ/ ಅನಪೇಕ್ಷಿತ ವರ್ಗಾವಣೆ ಸಾಧ್ಯತೆ. ಮನೆಯಲ್ಲಿ ಶುಭ ಸಮಾರಂಭ ಏರ್ಪಡಿಸಲಿದ್ದೀರಿ. ಅಲಂಕಾರಿಕ ವಸ್ತುಗಳ ಖರೀದಿ ಮಾಡಲಿದ್ದೀರಿ. ಸಂಗಾತಿಯಿಂದ ಸಹಕಾರ ದೊರಕಲಿದೆ.

ಕರ್ಕಾಟಕ: ನಿಮ್ಮ ಬುದ್ಧಿಮತ್ತೆ ಬೆಳಕಿಗೆ ಬರಲಿದೆ. ಸಾಮಾಜಿಕ ಪ್ರಶಂಸೆಗೆ ಪಾತ್ರರಾಗಲಿದ್ದೀರಿ. ವ್ಯವಹಾರದಲ್ಲಿ ಯಶಸ್ಸು. ಆಹಾರ ಧಾನ್ಯಗಳ ವ್ಯಾಪಾರಸ್ಥರು ಮತ್ತು ದಾಸ್ತಾನುದಾರರಿಗೆ ವಿಶೇಷ ಅನುಕೂಲ.

ಸಿಂಹ: ನೌಕರಿಯಲ್ಲಿ ಪರಿಶ್ರಮದಿಂದಾಗಿ ಹೆಚ್ಚಿನ ಪ್ರಶಂಸೆ ಸಾಧ್ಯತೆ. ನಡವಳಿಕೆಯ ವಿಚಾರದಲ್ಲಿ ಹಿರಿಯರಿಂದ ವಿರೋಧ ಎದುರಿಸಬೇಕಾದೀತು. ವಿಪರೀತ ಧನವ್ಯಯ. ಸಾಲದ ವಿಚಾರದಲ್ಲಿ ಎಚ್ಚರಿಕೆ ಅಗತ್ಯ.

ಕನ್ಯಾ: ಅಬಕಾರಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುವವರಿಗೆ ಬಿಡುವಿಲ್ಲದ ಕೆಲಸದೊಂದಿಗೆ ಮೇಲಧಿಕಾರಿಗಳಿಂದ ಪ್ರಶಂಸೆ ಲಭ್ಯವಾಗಲಿದೆ. ಆರೋಗ್ಯದಲ್ಲಿ ವೈಪರಿತ್ಯ. ಮಿತ್ರರಿಂದ ಸ್ವಲ್ಪಮಟ್ಟಿನ ಕಿರಿಕಿರಿ.

ತುಲಾ: ಉದ್ಯೋಗದಲ್ಲಿ ವಿಶೇಷ ಅನುಕೂಲ. ಬಟ್ಟೆ, ಶೃಂಗಾರ ಸಾಮಗ್ರಿಗಳ ವ್ಯವಹಾರದಲ್ಲಿ ಉತ್ತಮ ಲಾಭ. ಚಿತ್ರನಟರು ನಿರ್ಮಾಪಕರಿಗೆ ಗೌರವಾದರಗಳು ದೊರಕಲಿವೆ. ಮಹಿಳಾ ರಾಜಕಾರಣಿಗಳಿಗೆ ಧನಾಗಮನ.

ವೃಶ್ಚಿಕ: ಗುತ್ತಿಗೆದಾರರಿಗೆ ಕಲ್ಲು, ಗಣಿ ಕೆಲಸಗಾರರಿಗೆ ಶ್ರೇಯಸ್ಸು. ವಾಹನಾದಿಗಳ ವ್ಯಾಪಾರದಲ್ಲಿ ಅಧಿಕ ಲಾಭ. ವ್ಯಾಜ್ಯಗಳು ರಾಜಿ ಸಂಧಾನದ ಮೂಲಕ ಇತ್ಯರ್ಥವಾಗುವ ಸಾಧ್ಯತೆ.

ಧನು: ನಿವೇಶನ ಅಥವಾ ಜಮೀನು ಖರೀದಿಯ ಸಾಧ್ಯತೆ. ಪತ್ರ ವ್ಯವಹಾರಗಳಲ್ಲಿ ಎಚ್ಚರಿಕೆ ವಹಿಸುವುದು ಉತ್ತಮ. ಕಬ್ಬಿಣ, ಉಕ್ಕು ಮುಂತಾದ ಲೋಹದ ವ್ಯಾಪಾರಿಗಳಿಗೆ ಅನುಕೂಲವಾಗಲಿದೆ.

ಮಕರ: ವ್ಯವಹಾರದಲ್ಲಿ ಹೊಸ ಯೋಜನೆಯೊಂದನ್ನು ಪ್ರಾರಂಭಿಸುವ ಸಾಧ್ಯತೆ. ಹೊಸ ವ್ಯಕ್ತಿಯೊಬ್ಬರ ಪರಿಚಯವಾಗಲಿದೆ. ಹತ್ತಿ, ನಾರು ವಸ್ತುಗಳ ವ್ಯಾಪಾರಸ್ಥರಿಗೆ ವಿಶೇಷ ಲಾಭವಾಗುವ ಸಾಧ್ಯತೆ. ಆರೋಗ್ಯದಲ್ಲಿ ವ್ಯತ್ಯಯ.

ಕುಂಭ: ಹಣಕಾಸು ಸಂಸ್ಥೆ ನಡೆಸುವವರಿಗೆ ಮತ್ತು ಬಟ್ಟೆ ವ್ಯಾಪಾರಿಗಳಿಗೆ ಹೆಚ್ಚಿನ ಅನುಕೂಲ. ಕಾರ್ಯನಿಮಿತ್ತ ದೂರ ಪ್ರಯಾಣ. ಆರೋಗ್ಯದ ವಿಚಾರದಲ್ಲಿ ಕಾಳಜಿ ಅಗತ್ಯ.

ಮೀನ: ಉದ್ಯೋಗದ ವಿಷಯದಲ್ಲಿ ಭಾಗ್ಯೋದಯವಾಗಲಿದೆ. ಮಿತ್ರರಿಂದ ಔದಾರ್ಯ. ಆರ್ಥಿಕ ಅಭಿವೃದ್ಧಿ. ಬಂಧುಗಳೊಂದಿಗೆ ಮನಸ್ತಾಪ ಸಾಧ್ಯತೆ ಕಂಡುಬರುತ್ತಿದೆ. ಸಂಯಮದಿಂದ ಎಲ್ಲವೂ ನಿರಾಳವಾಗಲಿದೆ.

ನಿಮ್ಮ ಜನ್ಮದಿನ 9-ಆಗಸ್ಟ್ ಇಂದು ಅತ್ಯಂತ ಶುಭದಾಯಕ. ಬಂಧುಗಳ ಸಹಕಾರದಿಂದ ಉತ್ತಮ ವ್ಯಾಪಾರ ವ್ಯವಹಾರ ನಡೆಸಲಿದ್ದೀರಿ. ವ್ಯಕ್ತಿ ನಿಷ್ಠೆಯಿಂದಾಗಿ ವಿಶ್ವಾಸವನ್ನು ಗಟ್ಟಿಗೊಳಿಸಿಕೊಳ್ಳಲಿದ್ದೀರಿ. ಮಹಿಳೆಯರಿಗೆ ಉತ್ತಮ ಉದ್ಯೋಗಾವಕಾಶಗಳು ದೊರಕಲಿದೆ. ದುಡುಕುತನದಿಂದಾಗಿ ಮಿತ್ರರಲ್ಲಿ ಒಡಕುಂಟಾದೀತು.

ಪದಬಂಧ 4683 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಎಕ್ಸಾಂಪಲ್ ಅನ್ನು ಕನ್ನಡೀಕರಿಸಿ! (5)
3.ಮನೆ ಬಾಗಿಲ ಕೆಳಗಿನ ಮರದ ಪಟ್ಟಿ (3)
5.ಕರ ಬಡಿದು ತಟ್ಟಿದ ಚಪ್ಪಾಳೆ (5)
7.ಮೃತ್ಯು ದೇವತೆಯಿದು (2)
9.ನೆನಪು ಮಾಡಿಕೊಂಡು ತೋರಿದ ಬಿನ್ನಾಣ (3)
11.ರಂಗೋಲಿ ಇಲ್ಲಿದೆ (2)
13.ನೆತ್ತರಿನಿಂದಿರಿಸಿದ ಬೊಟ್ಟು (5)
15.ಆತಂಕ ಹುಟ್ಟಿಸಿರುವ ಖೂನಿಗಾರ (3)
16. ಅಡುಗೆಯನ್ನು ಸಿದ್ಧಪಡಿಸುವ ಕೋಣೆ (5)

ಮೇಲಿಂದ ಕೆಳಕ್ಕೆ

1.ಮೇಲು ಹೊದಿಕೆಯಿದು (4)
2.ವಿಷಯಾಸಕ್ತನಿವನು (3)
4.ಮಾನವಂತನಿಗೆ ತೋರಿದ ಆದರ (3)
6.ಮೆಚ್ಚುಗೆಯನ್ನು ಹೀಗೆ ವ್ಯಕ್ತಪಡಿಸಿ (3)
8.ಸನ್ಯಾಸಿ ಗುರು ಮುಂತಾದವರ ವಾಸಸ್ಥಾನ (2)
9.ಒಡನೆಯೇ ಕಾಣಿಸಿಕೊಂಡಿರುವ ಯಜಮಾನತಿ (3)
10.ವಂಚನೆಗೊಂದು ಪರ್ಯಾಯ ಪದ (2)
12.ನೆರೆಮನೆ ಹತ್ತಿರವಿರುವ ಕಾರಾಗೃಹ (4)
13.ವಿರಳವಾಗಿ ಕಾಣುತ್ತಿರುವ ರಕ್ತ (3)
14.ಮುಕುರ ಇಲ್ಲಿದೆ (3)



4682ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಚಕ್ರವ್ಯೂಹ 3.ಮಡಿವಂತ 5.ಗಾಯಕ 6.ದಿನಕರ 8.ರಿಯಾಯತಿ 10.ಕಬಳಿಸು 12.ಅನಾದರ 14.ಮಲಯ 15.ರತ್ನಾಕರ 16.ತಳಪಾಯ

ಮೇಲಿಂದ ಕೆಳಕ್ಕೆ: 1.ಚತುಷ್ಪಾದಿ 2.ಹಟಗಾರ 3.ಮಧುಕರಿ 4.ತರಗತಿ 7.ನವಾಬ 9.ಯಡಿದ 10.ಕಡವರ 11.ಸುಮಧುರ 12.ಅಯಸ್ಕಾಂತ 13.ರಭಾಮಯ

ಸುಡೊಕು 5069

	2			5		8		
8			3		9		2	1
	4	3		1				7
	3	2				7		6
				7	2		9	
7	9				6			5
3	1		9		5		7	
	7			8		1	6	9
	6	9			1		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5068 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಯುತ ಎಚ್. ವೆಂಕಟೇಶ್ (ಮಲ್ಲತ್ತಹಳ್ಳಿ)
ಸಮಾಜ ಸೇವಕರು, ನಾಡ ಪ್ರಭು ಕೆಂಪೇಗೌಡ ಪ್ರಶಸ್ತಿ ಪುರಸ್ಕೃತರು
23-06-1945 - 08-08-2021
ಇಂದು ಬೆಳಿಗ್ಗೆ 8–00 ರಿಂದ 11–00 ಗಂಟೆವರೆಗೆ ಅಂತಿಮ ದರ್ಶನಕ್ಕೆ ಸ್ವಗೃಹದಲ್ಲಿ ವ್ಯವಸ್ಥೆ ಮಾಡಲಾಗಿದೆ. ವಿಳಾಸ: ನಂ. 10, ಮಧು ನಿಲಯ, 5ನೇ ಅಡ್ಡರಸ್ತೆ, 1ನೇ ಮುಖ್ಯರಸ್ತೆ, ಮಲ್ಲತ್ತಹಳ್ಳಿ, ಬೆಂಗಳೂರು. ಅಂತ್ಯಕ್ರಿಯೆ : ಕೆಂಗೇರಿ ಹಿಂದು ಶಾಂತಿಧಾಮ, ಸಮಯ: ಮಧ್ಯಾಹ್ನ 12ಕ್ಕೆ
ನಿಮ್ಮ ಆದರ್ಶಗಳೇ ನಮಗೆ ದಾರಿ ದೀಪ, ನಿಮ್ಮ ಆಶೀರ್ವಾದ ಎಂದೆಂದೂ ನಮ್ಮ ಮೇಲಿರಲಿ ಎಂದು ಕೋರುವ
ದುಃಖತಪ್ತರು: ಶ್ರೀಮತಿ ಸುಜಾತಾ ವೆಂಕಟೇಶ್, ಮಕ್ಕಳು ಮತ್ತು ಕುಟುಂಬ ವರ್ಗದವರು. ದೂ: +91-7899667939 / +91-9880910009

5ನೇ ವರ್ಷದ ಸವಿನೆನಪು

ಶ್ರೀಮತಿ ಎಸ್. ಎನ್. ಜಯಮ್ಮ
ಕೆ. ಎ. ಗಂಗಯ್ಯನವರ ಧರ್ಮಪತ್ನಿ
ಮರಣ: 9–8–2016
ನೀವು ನಮ್ಮ ಹೃದಯವನ್ನು ಪ್ರೀತಿ ಸ್ಫೂರ್ತಿ ಮತ್ತು ಉತ್ತೇಜನದಿಂದ ಸ್ಪರ್ಶಿಸಿದ ಪ್ರತೀ ಬಾರಿಯೂ ನೀವು ಅಮರರಾದಿರಿ. ನೀವು ನಮ್ಮ ನೆನಪುಗಳಲ್ಲಿ, ನಂಬಿಕೆಗಳಲ್ಲಿ ಮತ್ತು ನಮ್ಮ ಕಾರ್ಯಗಳಲ್ಲಿ ಜೀವಂತವಾಗಿದ್ದೀರಿ.
ಕೆ. ಎ. ಗಂಗಯ್ಯ, ನಾಗರತ್ನ, ಮತ್ತು ಸುಶೀಲಾ ಕುಟುಂಬದವರು
ಫೋನ್: 9741706509, 080-23327590

In Loving Memory

Shri C.S Sambashivan
The Value that you have taught us will lead us through out.
VAIKUNTA SAMARADHANA
will be held on Monday the 9th of August, 2021
Venue : No.193, Old no 49/6, 16th Cross, 4th Main, Malleshwaram, Bangalore 55. PH.9844801544
Deeply mourned by Family & Friends
Smt. Sri Lakshmi C.S and Smt.Vanishree C.S
Sri.B.G Ramshesh and Sri.Rupak T.K
Gautham G.R, Varun Rupak & Rishi Rupak

LOOKING FOR JOB OPPORTUNITY
Refer Classifieds on Wednesday

For Online Classified Booking
Name Change / Education / Property / Job / Services & many more
Log on to :
dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC,Degree, ITI ನವರು ನೇರನೇಮಕಾತಿ 18,000- 56,000/- ವಸತಿಯೂಟವಿದೆ. 7204853296, 7204396011

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800- 45000/-. 9980295449, 9902839010

TOYOTA, TVS, ವಿಡಿಯೋಕಾನ್, ಬ್ರಿಟಾನಿಯಾಗಳಿಗೆ ಬಿಗ್ ಬಜಾರ್‌ಗಳಿಗೆ SSLC,PUC,Degree ಯವರು, ITI ನವರು, (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ. 17,000- 56,000/- ವಸತಿಯೂಟವಿದೆ. 9611715755

ರಾವ್ ಸಂಸ್ಥೆಗೆ ವಯಸ್ಸಾದವರನ್ನು,ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂ ನರ್ಸ್‌ಗಳು, ಹುಡುಗಿಯರು ಬೇಕಾಗಿದ್ದಾರೆ.ಊಟ ವಸತಿಯಿದೆ. 10,000-15,000. 8951315839, 9880545002

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ,ಗಳಿಸಿ 15,000-25,000/-. ಕೊರಿಯರ್ ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9108059956, 9901929956

Wanted

ವಯಸ್ಸಾದವರನ್ನು ನೋಡಿಕೊಳ್ಳಲು ಮಹಿಳೆಯರು ಬೇಕಾಗಿದ್ದಾರೆ 18ವರ್ಷ ಮೆಲ್ಪಟ್ಟವರಿಗೆ ಉಚಿತ ಊಟವಸತಿಯೊಂದಿಗೆ 11000 ರಿಂದ 16000 ವರೆಗೆ ಸಂಬಳ. ಫೋ: 8139962883

Drivers

ಬೊಮ್ಮಸಂದ್ರ ಇಂಡಸ್ಟ್ರೀಯಲ್ ಎರಿಯಾದಲ್ಲಿರುವ ಕಾರ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿಗೆ ಅನುಭವವುಳ್ಳ ಆಟೋ ಚಾಲಕರು ಬೇಕಾಗಿದ್ದಾರೆ . ಸಂಪರ್ಕಿಸಿ : ಫೋನ್: 09940136089

ವ್ಯಾಪಾರ

Business to Business

Finance

ಸಾಲಗಳು ನಾವು ಎಲ್ಲಾ ರೀತಿಯ ಸಾಲಗಳನ್ನು ನೀಡುತ್ತೇವೆ. ವೈಯಕ್ತಿಕ, ವ್ಯವಹಾರ, ಆಸ್ತಿ, ವಸತಿ, ಕೃಷಿ, ಸ್ವಾಧೀನ ಮತ್ತು ಆಸ್ತಿಗಾಗಿ ಸಾಲ ನೀಡಲಾಗುತ್ತದೆ. ಮೊಬೈಲ್: 7837015557

HEALTH SPECIAL

ವಿಜಯ ಇಂಟರ್‌ನ್ಯಾಷನಲ್ ಹೆಲ್ತ್‌ಕೇರ್
ಯಾವುದೇ ಅಡ್ಡಪರಿಣಾಮವಿಲ್ಲದೆ ಹಲವು ಸಮಸ್ಯೆಗಳ ಚಿಕಿತ್ಸೆಗೆ ಸಂಪರ್ಕಿಸಿ

ಲೈಂಗಿಕ ರೋಗಗಳು, ಉದ್ರೇಕದ ಸಮಸ್ಯೆ, ಲೈಂಗಿಕ ನಿರಾಸಕ್ತಿ, ನಿದ್ರಾ ಸ್ಖಲನ, ಶೀಘ್ರ ಸ್ಖಲನ, ಲಿಂಗ ಚಿಕ್ಕದಾಗುವುದು, ನರ ದೌರ್ಬಲ್ಯ, ಅವಧಿಗೆ ಮೊದಲೇ ಸ್ಖಲನ, ಆತಂಕ, ದೌರ್ಬಲ್ಯ, ಕಡಿಮೆ ವೀರ್ಯಾಣು, ಮುಷ್ಠಿ ಮೈಥುನದ ಅಡ್ಡಪರಿಣಾಮ
NO SIDE EFFECTS 100%
ಪರೀಕ್ಷಿಸಲು ಭಯಬೇಡ, ನಮ್ಮ ಹೆಲ್ತ್‌ಕೇರ್‌ನಲ್ಲಿ ಹಿರಿಯ ತಜ್ಞರಿರುತ್ತಾರೆ
1ನೇ ಮಹಡಿ, ಮಲ್ಲೇಶ್ವರಂ ಆರ್ಕೇಡ್, 7ನೇ ಕ್ರಾಸ್ ಮಾರ್ಗೋಸಾ ರಸ್ತೆ
Above Axis Bank, ಮಲ್ಲೇಶ್ವರಂ, ಬೆಂಗಳೂರು-03 97422 72259

Business Offers

Finance

★ಸಾಲ ಸೌಲಭ್ಯ★ ವ್ಯಾಪಾರಸಾಲ, ಆಸ್ತಿಸಾಲ, ಅಡಮಾನಸಾಲ, ಶಿಕ್ಷಣಸಾಲ, ಶೇ.6%ರ ಬಡ್ಡಿದರದಲ್ಲಿ, 40%ಸಬ್ಸಿಡಿ, ಎಲ್ಲಾರೀತಿಯ ಸಾಲ ದೊರೆಯುತ್ತದೆ.ಸಂಪರ್ಕಿಸಿ: 08222841175, 08278291749.ಏಜೆಂಟರು ಸಂಪರ್ಕಿಸಬಹುದು.

ಭವಿಷ್ಯ

Astrology

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

★ಉಚಿತ ಭವಿಷ್ಯ★ಖಚಿತ ಪರಿಹಾರ:ನಿಮ್ಮ ಸಮಸ್ಯೆಗಳು ಯಾವುದೇ ಇರಲಿ ಸ್ತ್ರೀವಶೀಕರಣ, ಪುರುಷವಶೀಕರಣ ಲೈಂಗಿಕ ಸಮಸ್ಯೆ,ನಿಮ್ಮ ಯಾವುದೇ ಸಮಸ್ಯೆಗಳಿದ್ದರು 100% ಶಾಶ್ವತ ಪರಿಹಾರ.ಮಂತ್ರಾಲಯ. ಪಂಡಿತ್.ಸಾಗರ್ ಶರ್ಮ.8217374106

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

||★ಉಚಿತ ಭವಿಷ್ಯವಾಣಿ★|| ವಶೀಕರಣ ಸ್ಪೆಷಲಿಸ್ಟ್ ಸರ್ವಸಿದ್ಧಿ ಸಾಧಕರು ಮಂಜುನಾಥಶಾಸ್ತ್ರಿ 9900277438. ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ. 100% ಗ್ಯಾರಂಟಿ ಪರಿಹಾರ.

★||ಸಿಗಂದೂರು ಚೌಡೇಶ್ವರಿ||★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION SPECIAL
We are coming out with special offer for Admission Notice, Education Success Congratulation Ads
DH Classifieds More value, more impact
For details contact: Jerry: 9731810277 Vishal: 9845114560 Tanveer: 9886213331
E-mail: dhclassifieds@deccanherald.co.in

ಐಎನ್‌ಎಕ್ಸ್ ಮೀಡಿಯಾ ಪ್ರಕರಣ: ಇಂದು ಸಿಬಿಐ ಅರ್ಜಿ ವಿಚಾರಣೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ಮುಖಂಡ ಪಿ.ಚಿದಂಬರಂ ಹಾಗೂ ಪುತ್ರ ಕಾರ್ತಿ ಅವರ ವಿರುದ್ಧ ಆರೋಪಗಳನ್ನು ಒಳಗೊಂಡ ಐಎನ್‌ಎಕ್ಸ್ ಮೀಡಿಯಾ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿ ಸಿಬಿಐ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ದೆಹಲಿ ಹೈಕೋರ್ಟ್ ಸೋಮವಾರ (ಆ.9) ನಡೆಸಲಿದೆ.

ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳಿರುವ ಕೊಠಡಿಯನ್ನು- (ಮಾಲ್‌ಖಾನಾ) ಪರಿಶೀಲಿಸಲು ಆರೋಪಿಗಳಿಗೆ ಹಾಗೂ ಅವರ ಪರ ವಕೀಲರಿಗೆ ವಿಚಾರಣಾ ನ್ಯಾಯಾಲಯ ಅನುಮತಿ ನೀಡಿರುವುದನ್ನು ಪ್ರಶ್ನಿಸಿ ಸಿಬಿಐ ಅರ್ಜಿ ಸಲ್ಲಿಸಿದೆ.

ನ್ಯಾಯಮೂರ್ತಿ ಮುಕ್ತಾ ಗುಪ್ತ ಈ ಅರ್ಜಿ ವಿಚಾರಣೆ ನಡೆಸುವರು.

ಚಿದಂಬರಂ ಹಾಗೂ ಕಾರ್ತಿ ವಿರುದ್ಧದ ವಿಚಾರಣೆಗೆ ಹೈಕೋರ್ಟ್ ಕಳೆದ ಮೇ 18ರಂದು ತಡೆ ನೀಡಿತ್ತು. ಅಲ್ಲದೇ, ಸಿಬಿಐ ಅರ್ಜಿ ಕುರಿತು ಪ್ರತಿಕ್ರಿಯೆ ಸಲ್ಲಿಸುವಂತೆ ಇಬ್ಬರಿಗೂ ನೋಟಿಸ್ ನೀಡಿತ್ತು.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್ ಬುಕ್, ಯೂ ಟ್ಯೂಬ್, ಟ್ವಿಟರ್ ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಸಂವಾದ ರಾಜ್ಯದ ಆರ್ಥಿಕ ಸ್ಥಿತಿ– ಗತಿ ಎತ್ತ ಸಾಗುತ್ತಿದೆ?
ಬೆಳಿಗ್ಗೆ 11ರಿಂದ 12
ಭಾಗವಹಿಸುವವರು: ಆರ್.ಎಸ್. ದೇಶಪಾಂಡೆ, ನಿವೃತ್ತ ನಿರ್ದೇಶಕ- ಐಸೆಕ್ ಕೆ.ಸಿ. ರಘು, ಸಾರ್ವಜನಿಕ ನೀತಿ ವಿಶ್ಲೇಷಕ, ಪಿ.ಎಂ.ರಘುನಂದನ್, ಹಿರಿಯ ಪತ್ರಕರ್ತ
ಪಾಡ್‌ಕಾಸ್ಟ್: ಇಂದಿನ ವಿಶೇಷ- ವಚನವಾಣಿ
ಪ್ರತೀದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ

ಪೌಷ್ಟಿಕ ಆಹಾರ ಸೇವಿಸಿ

2019ರ ಲೋಕಸಭಾ ಚುನಾವಣೆ: ಯಂತ್ರಗಳ ಪರಿಶೀಲನೆ ಮಾಹಿತಿ ಕೋರಿ ಅರ್ಜಿ

ಇವಿಎಂ ನ್ಯೂನತೆ ಬಹಿರಂಗಕ್ಕೆ ಸೂಚನೆ

ನವದೆಹಲಿ (ಪಿಟಿಐ): 2019ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಬಳಸಲಾಗಿದ್ದ ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳ ಪೈಕಿ ಎಷ್ಟು ಯಂತ್ರಗಳ ತಂತ್ರಾಂಶದ ಪರಿಶೀಲನೆ ವೇಳೆ ದೋಷ ಹಾಗೂ ನ್ಯೂನತೆಗಳು ಕಂಡು ಬಂದಿವೆ ಎಂಬ ಮಾಹಿತಿ ನೀಡುವಂತೆ ಕೇಂದ್ರೀಯ ಮಾಹಿತಿ ಆಯೋಗ (ಸಿಐಸಿ) ಆದೇಶಿಸಿದೆ.

ಆರ್‌ಟಿಐ ಕಾರ್ಯಕರ್ತ ವೆಂಕಟೇಶ್ ನಾಯಕ ಎಂಬುವವರು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿ ಸ್ಟ್ಯಾಂಡರ್ಡೈ-ಜೇಷನ್, ಟೆಸ್ಟಿಂಗ್ ಆ್ಯಂಡ್ ಕ್ವಾಲಿಟಿ ಸರ್ಟಿಫಿಕೇಷನ್ (ಎಸ್‌ಟಿಕ್ಯೂಸಿ) ನಿರ್ದೇಶನಾಲಯಕ್ಕೆ ಸಿಐಸಿ ಈ ಆದೇಶ ನೀಡಿದೆ.

ಇಸಿಐಎಲ್ ಮತ್ತು ಬಿಇಎಲ್ ಸಂಸ್ಥೆಗಳು ಇವಿಎಂ ಹಾಗೂ ವಿವಿಪ್ಯಾಟ್ ಯಂತ್ರಗಳನ್ನು ಅಭಿವೃದ್ಧಿಪಡಿಸಿ, ತಯಾರಿಸಿವೆ. ಇವುಗಳನ್ನು 2019ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಬಳಸಲಾಗಿತ್ತು. ಈ ಯಂತ್ರಗಳ ಲೆಕ್ಕ-ಪರಿಶೋಧನೆ ಹಾಗೂ ಪರೀಕ್ಷೆಗೆ ಸಂಬಂಧಿಸಿದ ಮಾಹಿತಿ ನೀಡುವಂತೆ ವೆಂಕಟೇಶ್ ಅವರು ಎಸ್‌ಟಿಕ್ಯೂಸಿ ನಿರ್ದೇಶನಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಆರ್‌ಟಿಐ ಕಾಯ್ದೆಯ ಸೆಕ್ಷನ್ 8 (1) (ಡಿ) ಉಲ್ಲೇಖಿಸಿದ್ದ ನಿರ್ದೇಶನಾಲಯ, ಮಾಹಿತಿ ನೀಡಲು ನಿರಾಕರಿಸಿತ್ತು. ಇದನ್ನು ಪ್ರಶ್ನಿಸಿ ವೆಂಕಟೇಶ್ ಅವರು ಸಿಐಸಿಗೆ ಮೇಲ್ಮನವಿ ಸಲ್ಲಿಸಿದ್ದರು.

'ಅರ್ಜಿದಾರರ ಮೇಲ್ಮನವಿ ಸಮರ್ಥನೀಯವಾಗಿಯೇ ಇದೆ. ಅವರು ಕೇಳಿರುವುದು ಅಂಕಿ–ಸಂಖ್ಯೆಗಳ ಮಾಹಿತಿ. ಈ ಮಾಹಿತಿಯನ್ನು ನೀಡಲು ಯಾವುದೇ ವಿನಾಯಿತಿಯ ಅಗತ್ಯವಿಲ್ಲ' ಎಂದು ಮಾಹಿತಿ ಆಯುಕ್ತರಾದ ವನಜಾ ಎನ್.ಸರ್ನಾ ಅಭಿಪ್ರಾಯಪಟ್ಟಿದ್ದಾರೆ.

'ಇವಿಎಂ, ವಿವಿಪ್ಯಾಟ್‌ಗಳ ಪರಿಶೀಲನೆ ನಡೆಸಿರುವ ಅಧಿಕಾರಿಗಳ ಹೆಸರು ಹಾಗೂ ಅವರ ಹುದ್ದೆಗಳ ವಿವರ ನೀಡುವುದು ಬೇಡ. ಆದರೆ, ಯಾವ ಊರುಗಳಲ್ಲಿ ಹಾಗೂ ಯಾವ ದಿನಾಂಕಗಳಂದು ಪರಿಶೀಲನೆ ನಡೆಸಲಾಗಿದೆ ಎಂಬ ಮಾಹಿತಿ ಒದಗಿಸುವಂತೆ' ಅವರು ಎಸ್‌ಟಿಕ್ಯೂಸಿ-ಡಿಗೆ ಸೂಚಿಸಿದ್ದಾರೆ.

'ತವರಿಗೆ ಮರಳಿದ ಕಾರ್ಮಿಕರ ಸಂಖ್ಯೆ 5.15 ಲಕ್ಷ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ಎರಡನೇ ಅಲೆ ಹಿನ್ನೆಲೆಯಲ್ಲಿ ಏಪ್ರಿಲ್–ಮೇ ತಿಂಗಳ ಅವಧಿಯಲ್ಲಿ ದೇಶದಾದ್ಯಂತ 5,15,363 ವಲಸೆ ಕಾರ್ಮಿಕರು ಹುಟ್ಟೂರಿಗೆ ಮರಳಿದ್ದಾರೆ. 1ನೇ ಅಲೆ ಅವಧಿಯಲ್ಲಿ ಹೀಗೆ ಮರಳಿದ್ದ ಕಾರ್ಮಿಕರ ಸಂಖ್ಯೆ 1.14 ಕೋಟಿ.

ಬಿಕ್ಕಟ್ಟು ಎದುರಿಸುವಲ್ಲಿನ ಕಾರ್ಯ-ವೈಖರಿಯನ್ನು ಕುರಿತಂತೆ ಟೀಕೆಗೆ ಗುರಿಯಾಗಿರುವ ಸಂಸದೀಯ ಸ್ಥಾಯಿ ಸಮಿತಿಗೆ ಕಾರ್ಮಿಕ ಮತ್ತು ಸಬಲೀಕರಣ ಸಚಿವಾಲಯವು ಈ ಮಾಹಿತಿಯನ್ನು ನೀಡಿದೆ.

ಕಾರ್ಮಿಕರ ವಲಸೆಯು ಮುಖ್ಯವಾಗಿ ಲಾಕ್‌ಡೌನ್ ಆಧರಿಸಿದೆ. ಎರಡನೇ ಅಲೆಯಲ್ಲಿ ಸ್ಥಳೀಯ ಸ್ಥಿತಿ ಆಧರಿಸಿ ರಾಜ್ಯಗಳು ಸ್ಥಳೀಯವಾಗಿ ಲಾಕ್‌ಡೌನ್ ವಿಧಿಸಿದ್ದವು. ಹೀಗಾಗಿ, ಹುಟ್ಟೂರಿಗೆ ಮರಳಿದ ವಲಸಿಗ ಕಾರ್ಮಿಕರ ಸಂಖ್ಯೆಯನ್ನು ಎರಡು ಅಲೆಗೆ ಸಂಬಂಧಿಸಿದಂತೆ ಪರಸ್ಪರ ಹೋಲಿಕೆ ಮಾಡಲಾಗದು ಎಂದು ಸಚಿವಾಲಯವು ಪ್ರತಿಪಾದಿಸಿದೆ.

ಆರ್‌ಜೆಡಿ ಸಂಸದ ಭರ್ತೃಹರಿ ಮಹತಾಬ್ ನೇತೃತ್ವದ ಕಾರ್ಮಿಕರ ಕುರಿತ ಸಂಸದೀಯ ಸ್ಥಾಯಿ ಸಮಿತಿಯ ಪ್ರಶ್ನೆಗೆ ಸಚಿವಾಲಯವು, ಎರಡನೇ ಅಲೆ ಅವಧಿಯಲ್ಲಿ ಒಟ್ಟು 5,15,363 ಕಾರ್ಮಿಕರು ಹುಟ್ಟೂರಿಗೆ ಮರಳಿದ್ದಾರೆ ಎಂದು ತಿಳಿಸಿದೆ.

ಮೊದಲ ಅಲೆಯಲ್ಲಿ ಹುಟ್ಟೂರಿಗೆ ಮರಳಿದ ವಲಸಿಗ ಕಾರ್ಮಿಕರಿಗೆ ನೀಡಲಾದ ಸೌಲಭ್ಯ ಕುರಿತು ರಾಜ್ಯವಾರು ಮಾಹಿತಿ ಲಭ್ಯವಿಲ್ಲ. ಎರಡನೇ ಅಲೆಯಲ್ಲಿ ಹುಟ್ಟೂರಿಗೆ ಮರಳಿದ್ದ ವಲಸಿಗ ಕಾರ್ಮಿಕರು ಕೃಷಿ ಸೇರಿದಂತೆ ಸ್ಥಳೀಯವಾಗಿ ಇತರೆ ಚಟು-ವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ ಎಂಬ ಬಗ್ಗೆಯೂ ಸಮಿತಿಯು ಮಾಹಿತಿ ಕೋರಿತ್ತು.

ತಮಿಳುನಾಡು: 60 ವರ್ಷ ಮೇಲ್ಪಟ್ಟವರಿಗಾಗಿ ವಿಶೇಷ ಲಸಿಕಾ ಶಿಬಿರ

ಚೆನ್ನೈ: 60 ವರ್ಷಕ್ಕಿಂತ ಮೇಲ್ಪಟ್ಟವರು ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಹಿಂಜರಿಯುತ್ತಿರುವುದರಿಂದ ಅವರಿಗಾಗಿಯೇ ತಮಿಳುನಾಡಿನಲ್ಲಿ ಪ್ರತಿ ಭಾನುವಾರ ವಿಶೇಷ ಲಸಿಕಾ ಶಿಬಿರಗಳನ್ನು ಆಯೋಜಿಸಲಾಗಿದೆ.

60 ವರ್ಷ ಮೇಲ್ಪಟ್ಟವರಲ್ಲಿ ಕೇವಲ ಶೇಕಡ 13ರಷ್ಟು ಮಂದಿ ಮಾತ್ರವೇ ಎರಡು ಡೋಸ್ ಕೋವಿಡ್ ಲಸಿಕೆ ಪಡೆದುಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯದಾದ್ಯಂತ ಸುಮಾರು 75 ಲಸಿಕಾ ಕೇಂದ್ರಗಳಲ್ಲಿ ಈ ವಯೋಮಿತಿ-ಯವರಿಗೆ ಪ್ರತ್ಯೇಕವಾಗಿ ಲಸಿಕೆಯ ಎರಡನೇ ಡೋಸ್ ಅನ್ನು ನೀಡಲು ಸರ್ಕಾರ ವ್ಯವಸ್ಥೆ ಮಾಡಿದೆ.

'60 ವರ್ಷ ಮೇಲ್ಪಟ್ಟವರಲ್ಲಿ ಲಸಿಕೆ ಪಡೆಯಲು ಹಿಂಜರಿಕೆ ಇದೆ. ಸಮೀಕ್ಷೆ ಮಾಡಿದವರಲ್ಲಿ ಕೇವಲ ಶೇಕಡ 27.6 ಮಂದಿ ಮಾತ್ರವೇ ಲಸಿಕೆ ಪಡೆಯಲು ಸಿದ್ಧರಿದ್ದಾರೆ. ಮೂರನೇ ಅಲೆ ರಾಜ್ಯಕ್ಕೆ ಪ್ರವೇಶಿಸಿದರೂ, ವಯಸ್ಸಾದವರನ್ನು ಸುರಕ್ಷಿತವಾಗಿರಿಸಲು ಈ ಕ್ರಮ ನೆರವಾಗಲಿದೆ' ಎಂದು ಸಾರ್ವಜನಿಕ ಆರೋಗ್ಯ ನಿರ್ದೇಶಕರು (ಡಿಪಿಹೆಚ್) ತಿಳಿಸಿದ್ದಾರೆ.

ಸಂಕಷ್ಟಕ್ಕೆ ಸಿಲುಕಿದ ಜನರು

ವಾರಾಣಸಿಯಲ್ಲಿ ಭಾನುವಾರ ಸುರಿದ ಭಾರಿ ಮಳೆಯಿಂದಾಗಿ ಸಂಕಷ್ಟಕ್ಕೆ ಸಿಲುಕಿದ ಜನರು ಅಗತ್ಯ ವಸ್ತುಗಳೊಂದಿಗೆ ಸುರಕ್ಷಿತ ಸ್ಥಳಗಳಿಗೆ ತೆರಳಿದರು. ಎನ್‌ಡಿಆರ್‌ಎಫ್ ತಂಡಗಳು ರಕ್ಷಣಾ ಕಾರ್ಯಕ್ಕೆ ನೆರವಾದವು

ಪಿಟಿಐ ಚಿತ್ರ

ಉಗ್ರರು ಅಪಹರಿಸಿದ್ದ ಬಾಲಕಿ 7 ವರ್ಷಗಳ ನಂತರ ಬಿಡುಗಡೆ

ಲಾಗೋಸ್ (ನೈಜೀರಿಯಾ): ಬೊಕೊ ಹರಾಮ್ ಉಗ್ರರು ಅಪಹರಿಸಿದ್ದ ನೈಜೀರಿಯಾದ ಚಿಬೋಕ್‌ನ ವಿದ್ಯಾರ್ಥಿ-ನಿಯನ್ನು 7 ವರ್ಷಗಳ ನಂತರ ಬಿಡುಗಡೆ ಮಾಡಿದ್ದಾರೆ ಎಂದು ಬೊರ್ನೊ ರಾಜ್ಯದ ಗವರ್ನರ್ ತಿಳಿಸಿದ್ದಾರೆ.

2014ರಲ್ಲಿ ಈ ಬಾಲಕಿಯನ್ನು ಅಪಹರಿಸಲಾಗಿತ್ತು. ಬಾಲಕಿಯನ್ನು ಆಕೆಯ ತಂದೆ, ತಾಯಿಗೆ ಒಪ್ಪಿಸಲಾಗಿದೆ. ಆಕೆಗೆ ಸರ್ಕಾರಿ ಪುನರ್ವಸತಿ ಕೇಂದ್ರದಲ್ಲಿ ಮಾನಸಿಕ ಮತ್ತು ವೈದ್ಯಕೀಯ ಚಿಕಿತ್ಸೆ ನೀಡಲಾಗುತ್ತದೆ ಎಂದು ಗವರ್ನರ್ ಬಬಗನ ಜುಲುಮ್ ತಿಳಿಸಿದ್ದಾರೆ.

300 ಶಾಲಾ ಬಾಲಕಿಯರನ್ನು 2014ರ ಏಪ್ರಿಲ್‌ನಲ್ಲಿ ಈಶಾನ್ಯ ನೈಜೀರಿಯಾದ ಚಿಬೋಕ್‌ನಿಂದ ಬೊಕೊ ಹರಮ್ ಉಗ್ರರು ಅಪಹರಿಸಿದ್ದರು.

ಸಂಕ್ಷಿಪ್ತ ಸುದ್ದಿ

ಸಚಿವ ತೋಮರ್‌ಗೆ ಮುತ್ತಿಗೆ: ಡಿಸಿ, ಎಸ್‌ಪಿ ವರ್ಗಾವಣೆ

ಭೋಪಾಲ್ (ಪಿಟಿಐ): ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ್ದ ಕೇಂದ್ರ ಕೃಷಿ ಸಚಿವ ನರೇಂದ್ರಸಿಂಗ್ ತೋಮರ್ ಅವರಿಗೆ ಸ್ಥಳೀಯರು ಮುತ್ತಿಗೆ ಹಾಕಿದ ಬೆನ್ನಲ್ಲೇ, ಶಿಯೋಪುರದ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿ-ಕಾರಿಯನ್ನು ಮಧ್ಯಪ್ರದೇಶ ಸರ್ಕಾರ ಭಾನುವಾರ ವರ್ಗಾವಣೆ ಮಾಡಿದೆ.

ಮಳೆ, ಪ್ರವಾಹದಿಂದ ಆಗಿರುವ ಹಾನಿಯನ್ನು ಪರಿಶೀಲಿಸಲು ಸಚಿವ ತೋಮರ್ ಅವರು ಶಿಯೋಪುರ ನಗರದ ಕರಾಟಿಯಾ ಬಜಾರ್‌ಗೆ ಶನಿವಾರ ಭೇಟಿ ನೀಡಿದ್ದರು. ಶಿಯೋಪುರ ನಗರ ತೋಮರ್ ಅವರು ಪ್ರತಿನಿಧಿಸುವ ಮೊರೆನಾ ಲೋಕಸಭಾ ಕ್ಷೇತ್ರದಲ್ಲಿದೆ.

ಮಾದಕವಸ್ತು ಪೂರೈಕೆದಾರ ಸಾವು

ಗುವಾಹಟಿ (ಪಿಟಿಐ): ಮಾದಕ ವಸ್ತುಗಳ ಪೂರೈಕೆ ಮಾಡುತ್ತಿದ್ದ ಎನ್ನಲಾದ ವ್ಯಕ್ತಿಯೊಬ್ಬರು ಭಾನುವಾರ ಇಲ್ಲಿನ ನಾಗೌನ್ ಜಿಲ್ಲೆಯಲ್ಲಿ ಪೊಲೀಸರ ಎನ್‌ಕೌಂಟರ್‌ನಲ್ಲಿ ಮೃತಪಟ್ಟಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿ-ಯೊಬ್ಬರು ತಿಳಿಸಿದ್ದಾರೆ.

ಇದರೊಂದಿಗೆ ಇದೇ ವರ್ಷದ ಮೇ 10ರಂದು ಹಿಮಂತ ಬಿಸ್ವಾ ಶರ್ಮಾ ನೇತೃತ್ವದ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಎನ್‌ಕೌಂಟರ್‌ನಲ್ಲಿ ಮೃತಪಟ್ಟವರ ಸಂಖ್ಯೆ 16ಕ್ಕೆ ಏರಿದೆ.

ಖಚಿತ ಮಾಹಿತಿ ಆಧರಿಸಿ ಖಟೊವಲ್ ಪೊಲೀಸ್ ಠಾಣೆಯ ಅಧಿಕಾರಿ ಅಲೋಕ್ ದತ್ತಾ ಗೆರುವಾ ಮುಖ್ ಪ್ರದೇಶದಲ್ಲಿ ಶೋಧ ಕಾರ್ಯಕ್ಕೆ ಗೊಂಡಿದ್ದರು. ಸಿಬ್ಬಂದಿ ಸ್ಥಳಕ್ಕೆ ಧಾವಿಸಿದಂತೆ ಮಾದಕ ವಸ್ತು ಪೂರೈಕೆದಾರ ಹಲ್ಲೆಗೆ ಯತ್ನಿಸಿದರು. ತಮ್ಮನ್ನು ರಕ್ಷಿ-ಸಿಕೊಳ್ಳುವ ಯತ್ನದಲ್ಲಿ ಅಧಿಕಾರಿಯ ಕೈಗೆ ಗಾಯವಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

ನಿಧನ ವಾರ್ತೆ

ಕೆ.ರಾಮಮೂರ್ತಿ

ಚೆನ್ನೈ (ಪಿಟಿಐ): ಕಾಂಗ್ರೆಸ್ ಪಕ್ಷದ ತಮಿಳುನಾಡು ಘಟಕದ ಮಾಜಿ ಅಧ್ಯಕ್ಷ ತಿಂದಿವಾನಂ ಕೆ.ರಾಮಮೂರ್ತಿ ಭಾನುವಾರ ನಿಧನರಾದರು. 86 ವರ್ಷದ ಅವರು ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು.

ಮಾಜಿ ಶಾಸಕರಾಗಿದ್ದ ಅವರು, 1984 ರಿಂದ 1990ರ ಅವಧಿಗೆ ರಾಜ್ಯಸಭೆ ಸದಸ್ಯರಾಗಿ ನಾಮಕರಣ-ಗೊಂಡಿದ್ದರು. ತಮಿಳುನಾಡಿನಲ್ಲಿ ಈ ಮೊದಲು ಅಸ್ತಿತ್ವದಲ್ಲಿದ್ದ ವಿಧಾನಪರಿ-ಷತ್ತಿನ ವಿರೋಧಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸಿದ್ದರು.

ಇಂಡೊ–ಟಿಬೆಟನ್ ಗಡಿ ಪೊಲೀಸ್ (ಐಟಿಬಿಪಿ) ಪಡೆ

ಮೊದಲ ಬಾರಿ ಮಹಿಳಾ ಅಧಿಕಾರಿಗಳ ಸೇರ್ಪಡೆ

ಮಸ್ಸೂರಿ (ಉತ್ತರಾಖಂಡ): ಇಂಡೊ–ಟಿಬೆಟನ್ ಗಡಿ ಪೊಲೀಸ್ (ಐಟಿಬಿಪಿ) ಪಡೆಗೆ ಇದೇ ಮೊದಲ ಬಾರಿ ಇಬ್ಬರು ಮಹಿಳಾ ಅಧಿಕಾರಿಗಳು ಯುದ್ಧಭೂಮಿ-ಯಲ್ಲಿ ಕರ್ತವ್ಯ ನಿರ್ವಹಿಸಲು ಸೇರ್ಪಡೆ-ಗೊಂಡಿದ್ದಾರೆ.

ಇಲ್ಲಿನ ಐಟಿಬಿಪಿ ಅಧಿಕಾರಿಗಳ ತರಬೇತಿ ಅಕಾಡೆಮಿಯಲ್ಲಿ ಪ್ರಕೃತಿ ಮತ್ತು ದೀಕ್ಷಾ ಸೇರಿದಂತೆ ಒಟ್ಟು 53 ಅಧಿಕಾರಿಗಳು ತರಬೇತಿಯನ್ನು ಪೂರೈಸಿದರು. ಭಾನುವಾರ ಈ ಅಧಿಕಾರಿಗಳ ನಿರ್ಗಮನ ಪಥಸಂಚಲನ ನಡೆಯಿತು.

ಐಟಿಬಿಪಿ ಮಹಾನಿರ್ದೇಶಕ ಎಸ್. ಎಸ್. ದೇಸ್ವಾಲ್ ಮತ್ತು ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಪ್ರಕೃತಿ ಮತ್ತು ದೀಕ್ಷಾ ಅವರ ಭುಜದ ಮೇಲೆ 'ಅಸಿಸ್ಟಂಟ್ ಕಮಾಂಡಂಟ್' ರ್‍ಯಾಂಕ್‌ಗೆ ಸಂಬಂಧಿಸಿದ ಪಟ್ಟಿಯನ್ನು ಲಗತ್ತಿಸಿದರು. 'ಅಸಿಸ್ಟಂಟ್ ಕಮಾಂಡಂಟ್' ಐಟಿಬಿಪಿಯಲ್ಲಿ ಆರಂಭದ ಹಂತದ ಹುದ್ದೆಯಾಗಿದೆ.

ಐಟಿಬಿಪಿಗೆ ಸೇರ್ಪಡೆಯಾದ ಪ್ರಕೃತಿ ಮತ್ತು ದೀಕ್ಷಾ ಅವರಿಗೆ ಅಸಿಸ್ಟಂಟ್ ಕಮಾಂಡಂಟ್ ರ್‍ಯಾಂಕ್‌ನ ಪಟ್ಟಿಯನ್ನು ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಲಗತ್ತಿಸಿದರು ಪಿಟಿಐ ಚಿತ್ರ

ಪ್ರಕೃತಿ ಅವರ ತಂದೆ ಭಾರತೀಯ ವಾಯು ಪಡೆಯಲ್ಲಿ ಕಾರ್ಯನಿರ್ವಹಿ-ಸಿ ನಿವೃತ್ತಿಯಾಗಿದ್ದಾರೆ. ದೀಕ್ಷಾ ತಂದೆ ಕಮಲೇಶ್ ಕುಮಾರ್ ಐಟಿಬಿಪಿಯಲ್ಲಿ ಇನ್‌ಸ್ಪೆಕ್ಟರ್ ಆಗಿ ಕಾರ್ಯನಿರ್ವಹಿ-ಸಿದ್ದಾರೆ.

ಖಾಕಿ ಸಮವಸ್ತ್ರದಲ್ಲಿದ್ದ ಕಮಲೇಶ್ ಕುಮಾರ್ ಅವರು, ಪಥಸಂಚಲನದ ಬಳಿಕ ತಮ್ಮ ಮಗಳಿಗೆ ಸಲ್ಯೂಟ್ ಹೊಡೆದಾಗ ದೀಕ್ಷಾ ಸಹ ಪ್ರತಿ ಸಲ್ಯೂಟ್ ಹೊಡೆದರು.

'ತಂದೆಯೇ ನನಗೆ ಮಾದರಿ. ಯಾರಿಗಿಂತಲೂ ಕಡಿಮೆ ಇಲ್ಲ ಎಂದು ನನ್ನನ್ನು ಪರಿಗಣಿಸಿದ್ದರು. ಎಲ್ಲ ರೀತಿಯ ಮಾರ್ಗದರ್ಶನ ಮಾಡಿದ್ದಾರೆ' ಎಂದು ದೀಕ್ಷಾ ಪ್ರತಿಕ್ರಿಯಿಸಿದರು.

ಎಲೆಕ್ಟ್ರಿಕಲ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದಿರುವ ಪ್ರಕೃತಿ, 'ಭದ್ರತಾ ಪಡೆಗಳಲ್ಲಿ ಕಾರ್ಯನಿರ್ವಹಿಸುವುದು ಸವಾಲಿನ ಕೆಲಸ. ಇದು ಅತ್ಯಂತ ಕಠಿಣ ಕಾರ್ಯವೂ ಹೌದು' ಎಂದು ಹೇಳಿದರು.

ಅಖಿಲ ಭಾರತ ಮಟ್ಟದ ಪರೀಕ್ಷೆ ಮೂಲಕ ಯುದ್ಧ ಕಾರ್ಯಾಚರಣೆಯ ಕಾರ್ಯಕ್ಕೂ ಮಹಿಳಾ ಅಧಿಕಾರಿ-ಗಳನ್ನು 2016ರಿಂದ ಐಟಿಬಿಪಿಗೆ ಸೇರ್ಪಡೆ ಮಾಡಿಕೊಳ್ಳುವುದನ್ನು ಆರಂಭಿಸಲಾಯಿತು. ಕೇಂದ್ರ ಲೋಕ ಸೇವಾ ಆಯೋಗ (ಯುಪಿಎಸ್‌ಸಿ) ಈ ಪರೀಕ್ಷೆ ನಡೆಸುತ್ತದೆ. ಇದಕ್ಕಿಂತ ಮೊದಲು ಕಾನ್‌ಸ್ಟೆಬಲ್ ಹುದ್ದೆಯಲ್ಲಿ ಮಾತ್ರ ಮಹಿಳೆಯರನ್ನು ಸೇರಿಸಿಕೊಳ್ಳ-ಲಾಗುತ್ತಿತ್ತು.

ಹೂಡಿಕೆ: ಷೇರುಪೇಟೆಯೋ, ಇಲ್ಲ ಮ್ಯೂಚುಯಲ್ ಫಂಡ್?

ಹಣಕಾಸು ಸಾಕ್ಷರತೆ

ಪ್ರಮೋದ್ ಬಿ.ಪಿ.

ಷೇರುಪೇಟೆಯಲ್ಲಿ ನೇರವಾಗಿ ಹಣ ಹೂಡಿಕೆ ಮಾಡುವುದು ಒಳಿತೋ, ಇಲ್ಲ ಮ್ಯೂಚುಯಲ್ ಫಂಡ್ ಮೂಲಕ ಹೂಡಿಕೆ ಮಾಡುವುದು ಸೂಕ್ತವೋ? ಒಂದಲ್ಲ ಒಂದು ಹಂತದಲ್ಲಿ ಪ್ರತಿಯೊಬ್ಬ ಹೂಡಿಕೆದಾರನಿಗೂ ಕಾಡುವ ಪ್ರಶ್ನೆ ಇದು. ಅಸಲಿಗೆ ಷೇರು ಮಾರುಕಟ್ಟೆ ಅಥವಾ ಮ್ಯೂಚುಯಲ್ ಫಂಡ್ ಈ ಎರಡೂ ಕೂಡ ನಿಮ್ಮ ಹಣವನ್ನು ನಿಮಗಾಗಿ ದುಡಿಯುವಂತೆ ಮಾಡಲು ಒಳ್ಳೆಯ ಹೂಡಿಕೆಗಳೇ. ಆದರೆ ಹಣಕಾಸು ನಿರ್ವ-ಹಣೆಯಲ್ಲಿ ನೀವು ಎಷ್ಟು ಪಳಗಿದ್ದೀರಿ ಎನ್ನುವುದರ ಆಧಾರದ ಮೇಲೆ ಎಲ್ಲಿ ಹೂಡಬೇಕು ಎನ್ನುವ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ.

1.ಷೇರು ಮಾರುಕಟ್ಟೆ ಹೂಡಿಕೆಗೆ ಒಂದಿಷ್ಟು ಪರಿಣಿತಿ ಬೇಕು: ಷೇರುಪೇಟೆಯಲ್ಲಿ 7,400 ಕ್ಕೂ ಹೆಚ್ಚು ಕಂಪನಿಗಳಿವೆ. ಈ ಪೈಕಿ ಯಾವ ಕಂಪನಿಯಲ್ಲಿ ಹೂಡಿಕೆ ಮಾಡಬೇಕು ಎಂದು ನಿರ್ಣಯಿಸಬೇಕಾದರೆ ಷೇರುಪೇಟೆಯ ಬಗ್ಗೆ ಒಂದಿಷ್ಟು ಪರಿಣತಿ ಬೇಕು. ಯಾವ ಕಂಪನಿ ಹೇಗೆ ಲಾಭ ಗಳಿಸುತ್ತಿದೆ, ನಿರ್ದಿಷ್ಟ ಕಂಪನಿಯು ಭವಿಷ್ಯದಲ್ಲಿ ಯಾವ ರೀತಿ ಪ್ರಗತಿ ಸಾಧಿಸಬಹುದು, ಕಂಪನಿಯ ಆಡಳಿತ ಮಂಡಳಿಯಲ್ಲಿ ಯಾರಿದ್ದಾರೆ, ಅವರ ಹಿನ್ನೆಲೆಯೇನು, ಆ ಸಂಸ್ಥೆಯ ಮೇಲೆ ಏನಾದರೂ ಕಾನೂನು ವ್ಯಾಜ್ಯಗಳಿವೆಯಾ ಹೀಗೆ ಹತ್ತು ಹಲವು ವಿಚಾರಗಳನ್ನು ಗಮನಿಸಿಕೊಂಡ ಬಳಿಕ ನಿರ್ದಿಷ್ಟ ಕಂಪನಿಯೊಂದರ ಷೇರನ್ನು ಖರೀದಿಸಬೇಕಾಗುತ್ತದೆ. ಆದರೆ ಮ್ಯೂಚುಯಲ್ ಫಂಡ್‌ನಲ್ಲಿ ನಿಮಗೆ ಹೆಚ್ಚು ಪರಿಣತಿ ಬೇಕಿಲ್ಲ. ಯಾವ ಫಂಡ್ ಉತ್ತಮವಾಗಿ ಲಾಭಾಂಶ ನೀಡುತ್ತಿದೆ ಎನ್ನುವುದನ್ನು ಅರಿತು ಆ ನಿರ್ದಿಷ್ಟ ಫಂಡ್‌ನಲ್ಲಿ ಸಣ್ಣ ಮೊತ್ತಗಳಲ್ಲಿ ಹೂಡಿಕೆ ಮಾಡುತ್ತಾ ಹೋದರೆ ಸಾಕು, ಆ ಹಣವನ್ನು ಎಲ್ಲಿ ಹೂಡಬೇಕು ಎನ್ನುವ ನಿರ್ಧಾರವನ್ನು ಪರಿಣಿತ ಫಂಡ್ ಮ್ಯಾನೇಜರ್ ತೆಗೆದುಕೊಳ್ಳುತ್ತಾರೆ. ಮ್ಯೂಚುವಲ್ ಫಂಡ್‌ನಲ್ಲಿ ಮಾರುಕಟ್ಟೆಯ ದಿಢೀರ್ ಏರಿಳಿತಗಳಿಗೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ನಿಮ್ಮ ಎಲ್ಲಾ ತಲೆಬಿಸಿಯನ್ನು ಫಂಡ್ ಮ್ಯಾನೇಜರ್‌ಗಳು ತೆಗೆದುಕೊಳ್ಳುತ್ತಾರೆ.

2. ಮ್ಯೂಚುವಲ್ ಫಂಡ್‌ಗಿಂತ ಷೇರು ಹೂಡಿಕೆಯಲ್ಲಿ ರಿಸ್ಕ್ ಜಾಸ್ತಿ: ಉದಾಹರಣೆಗೆ ನೀವು ಷೇರು ಮಾರುಕಟ್ಟೆ ಹೂಡಿಕೆಯಲ್ಲಿ ₹ 2 ಸಾವಿರ ಕೊಟ್ಟು ಒಂದು ಕಂಪನಿಯ ಷೇರು ಖರೀದಿಸುತ್ತೀರಿ ಎಂದಿಟ್ಟುಕೊಳ್ಳಿ. ಆ ಕಂಪನಿಯ ಷೇರು ಮಾತ್ರ ನಿಮ್ಮದಾಗುತ್ತದೆ. ಆದರೆ ಅದೇ ₹ 2 ಸಾವಿರವನ್ನು ನೀವು ಮ್ಯೂಚುವಲ್ ಫಂಡ್‌ನಲ್ಲಿ ತೊಡಗಿಸಿದರೆ ಫಂಡ್ ಮ್ಯಾನೇಜರ್ ನಿಮ್ಮ ಹಣವನ್ನು ಹತ್ತಾರು ಕಂಪನಿಗಳಲ್ಲಿ ತೊಡಗಿಸುತ್ತಾರೆ. ಎಲ್ಲಿ ಹಣ ತೊಡಗಿಸಿದರೆ ಉತ್ತಮವಾದ ಬೆಳವಣಿಗೆ ಸಾಧ್ಯವಿದೆ ಎನ್ನುವುದನ್ನು ಅಧ್ಯಯನ ಮಾಡುವುದಕ್ಕೆ ಫಂಡ್ ಮ್ಯಾನೇಜರ್ ಜತೆ ಒಂದು ತಜ್ಞ ತಂಡವಿರುತ್ತದೆ. ಆ ತಂಡ ಮಾಡುವ ಅಧ್ಯಯನಗಳನ್ನು ಆಧರಿಸಿ ಫಂಡ್ ಮ್ಯಾನೇಜರ್‌ಗಳು ಹೂಡಿಕೆ ನಿರ್ಧಾರ ಮಾಡುತ್ತಾರೆ. ನೇರವಾಗಿ ಷೇರುಗಳಲ್ಲಿ ಹೂಡಿಕೆ ಮಾಡುವಾಗ ಈ ರೀತಿಯ ಅಧ್ಯಯನ ಮಾಡಲು ಪರಿಣಿತಿ ಬೇಕಾಗುತ್ತದೆ. ಈ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ ಮ್ಯೂಚುವಲ್ ಫಂಡ್‌ನಲ್ಲಿ ಷೇರು ಹೂಡಿಕೆಗಿಂತ ರಿಸ್ಕ್ ಕಡಿಮೆ ಎನ್ನಬಹುದು.

3. ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ ವೈವಿಧ್ಯತೆಗೆ ಹೆಚ್ಚು ಅವಕಾಶ: ಅಗತ್ಯಕ್ಕೆ ತಕ್ಕಂತಹ ಹೂಡಿಕೆ ಆಯ್ಕೆ ಮ್ಯೂಚುಯಲ್ ಫಂಡ್‌ನಲ್ಲಿವೆ. ಹೆಚ್ಚು ರಿಸ್ಕ್‌ಗೆ ಹೆಚ್ಚು ಲಾಭ ಕೊಡುವ ಈಕ್ವಿಟಿ ಫಂಡ್ ಮತ್ತು ಕಡಿಮೆ ರಿಸ್ಕ್ ಇರುವ ಡೆಟ್ ಫಂಡ್‌ಗಳು ಮ್ಯೂಚುಯಲ್ ಫಂಡ್‌ನಲ್ಲಿವೆ. ನಿಮಗೆ ಲಿಕ್ವಿಡಿಟಿ ಅಂದ್ರೆ ಬೇಕಾದಾಗ ಹಣ ಸಿಗುವಂತೆ ಇರಬೇಕು ಅಂದ್ರೆ ಲಿಕ್ವಿಡ್ ಫಂಡ್ ಆಯ್ಕೆ ಇದೆ. ಆದರೆ ಷೇರು ಹೂಡಿಕೆಯಲ್ಲಿ ವ್ಯವಸ್ಥಿತವಾಗಿ ಇಷ್ಟು ಆಯ್ಕೆಗಳನ್ನು ಸುಲಭವಾಗಿ ಮಾಡಿಕೊಳ್ಳುವುದು ಸಾಧ್ಯವಿಲ್ಲ.

4.ಷೇರು ಹೂಡಿಕೆಗೆ ಹೆಚ್ಚು ಸಮಯ ಮೀಸಲಿಡಬೇಕು: ನೇರವಾಗಿ ಷೇರು ಮಾರುಕಟ್ಟೆ ಹೂಡಿಕೆ ಮಾಡುವಾಗ ಮಾರುಕಟ್ಟೆಯ ಏರಿಳಿತಗಳನ್ನು ಗಮನಿಸಿಕೊಂಡು ಹೂಡಿಕೆ ನಿರ್ಧಾರಗಳನ್ನು ಮಾಡಲು ಸಮಯ ಮೀಸಲಿಡಬೇಕು. ಆದರೆ ಮ್ಯೂಚುಯಲ್ ಫಂಡ್ ಹೂಡಿಕೆಗೆ ಹೆಚ್ಚು ಸಮಯ ಅಗತ್ಯವಿಲ್ಲ. ಒಳ್ಳೆಯ ಫಂಡ್ ಆಯ್ಕೆ ಮಾಡಿ ಹೂಡಿಕೆ ಮಾಡುತ್ತಾ ಸಾಗಿದರೆ ಅಧ್ಯಯನ ಮಾಡಿ ಮುನ್ನಡೆಯುವ ಕೆಲಸವನ್ನು ಫಂಡ್ ಮ್ಯಾನೇಜರ್‌ಗಳು ಮಾಡುತ್ತಾರೆ.

5. ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ ಶಿಸ್ತು ಸುಲಭ: ಮ್ಯೂಚುಯಲ್ ಫಂಡ್‌ನಲ್ಲಿ ವ್ಯವಸ್ಥಿತ ಹೂಡಿಕೆ ಯೋಜನೆ (ಎಸ್ ಐಪಿ) ಮೂಲಕ ಹೂಡಿಕೆ ಸುಲಭ. ಸಣ್ಣ ಮೊತ್ತಗಳಲ್ಲಿ ಅಂದರೆ ₹ 100 , ₹ 500 ಅನ್ನು ಕೂಡ ಪ್ರತಿ ತಿಂಗಳು ಹೂಡಿಕೆ ಮಾಡುತ್ತಾ ಹೋಗಬಹುದು. ಷೇರುಗಳಲ್ಲೂ ಎಸ್ ಐಪಿ ವ್ಯವಸ್ಥೆ ಇದೆ. ಆದರೆ ಅದು ಮ್ಯೂಚುಯಲ್ ಫಂಡ್ ಎಸ್ ಐಪಿಯಷ್ಟು ಸರಳವಾಗಿಲ್ಲ.

6. ತೆರಿಗೆ ಅನುಕೂಲ: ಇಎಲ್‌ಎಸ್‌ಎಸ್ (ಈಕ್ವಿಟಿ ಲಿಂಕ್ಡ್ ಸೇವಿಂಗ್ಸ್ ಸ್ಕೀಂ) ಮ್ಯೂಚುಯಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದರೆ ಸೆಕ್ಷನ್ 80 ಸಿ ಅಡಿಯಲ್ಲಿ ₹ 1.5 ಲಕ್ಷದ ವರೆಗೆ ತೆರಿಗೆ ಅನುಕೂಲ ಸಿಗುತ್ತದೆ. ಆದರೆ ಷೇರು ಹೂಡಿಕೆಗೆ ಈ ರೀತಿಯ ತೆರಿಗೆ ಲಾಭ ಸಿಗುವುದಿಲ್ಲ.

(ಲೇಖಕ: ಸುವಿಷನ್ ಹೋಲ್ಡಿಂಗ್ಸ್ ಪ್ರೈ.ಲಿ.,ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಹೊಸ ದಾಖಲೆ ಬರೆದ ಸೂಚ್ಯಂಕಗಳು

ಷೇರುಪೇಟೆ ಸೂಚ್ಯಂಕಗಳು ಹೊಸ ದಾಖಲೆ ಬರೆದಿವೆ. ಆಗಸ್ಟ್ 5 ರಂದು ಸೆನ್ಸೆಕ್ಸ್ 54,717 ಮತ್ತು ನಿಫ್ಟಿ 16,349 ಅಂಶಗಳಿಗೆ ತಲುಪಿ ಇತಿಹಾಸ ಸೃಷ್ಟಿಸಿವೆ. ಜಾಗತಿಕ ವಿದ್ಯಮಾನಗಳ ಜತೆಗೆ ದೇಶಿಯ ಬೆಳವಣಿಗೆಗಳು ಸೂಚ್ಯಂಕಗಳ ಜಿಗಿತಕ್ಕೆ ಕೊಡುಗೆ ನೀಡಿವೆ. ಇನ್ನು ವಾರದ ಅವಧಿಯ ಲೆಕ್ಕಾಚಾರಕ್ಕೆ ಬಂದರೆ, 54,277 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ಶೇ 3.21 ರಷ್ಟು ಜಿಗಿದಿದೆ. 16, 238 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 3 ರಷ್ಟು ಏರಿಕೆ ಕಂಡಿದೆ.

ಸೆನ್ಸೆಕ್ಸ್ ಲಾರ್ಜ್ ಕ್ಯಾಪ್ ಸೂಚ್ಯಂಕ ಶೇ 3 ರಷ್ಟು ಏರಿಕೆಯಾಗಿದ್ದರೆ, ಮಿಡ್ ಕ್ಯಾಪ್ ಶೇ 0.5 ರಷ್ಟು ಹೆಚ್ಚಳವಾಗಿದೆ. ಸ್ಮಾಲ್ ಕ್ಯಾಪ್ ಸೂಚ್ಯಂಕ ಯಥಾಸ್ಥಿತಿ ಕಾಯ್ದುಕೊಂಡಿದೆ. ವಲಯವಾರು ಪ್ರಗತಿಯಲ್ಲಿ ನಿಫ್ಟಿ ಬ್ಯಾಂಕ್ ಸೂಚ್ಯಂಕ ಶೇ 3.5 ರಷ್ಟು ಗಳಿಕೆ ಕಂಡಿದೆ. ಮಾಹಿತಿ ತಂತ್ರಜ್ಞಾನ ಮತ್ತು ಎನರ್ಜಿ ಸೂಚ್ಯಂಕ ತಲಾ ಶೇ 2.5 ರಷ್ಟು ಹೆಚ್ಚಳವಾಗಿವೆ. ಮಾಧ್ಯಮ ವಲಯ ಶೇ 4 ರಷ್ಟು ಇಳಿಕೆಯಾಗಿದೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ರೂ. 2,616.04 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ರೂ. 896.84 ಕೋಟಿ ಮೌಲ್ಯದ ಷೇರುಗಳಲ್ಲಿ ಹೂಡಿದ್ದಾರೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಐಷರ್ ಮೋಟರ್ಸ್ ಶೇ 8.58, ಏರ್ ಟೆಲ್ ಶೇ 8.23, ಎಚ್ ಡಿಎಫ್ ಸಿ ಶೇ 7.66, ಕೋಟಕ್ ಬ್ಯಾಂಕ್ ಶೇ 7.40, ಅದಾನಿ ಪೋರ್ಟ್ಸ್ ಶೇ 5.37 ರಷ್ಟು ಜಿಗಿದಿವೆ. ಯುಪಿಎಲ್ ಶೇ 3.86, ಬಜಾಜ್ ಫಿನ್ ಸರ್ವ್ ಶೇ 1.52, ಗ್ರಾಸಿಮ್ ಶೇ 1.31, ಅಲ್ಟ್ರಾ ಟೆಕ್ ಸಿಮೆಂಟ್ ಶೇ 1.20 ಮತ್ತು ಸಿಪ್ಲಾ ಶೇ 0.95 ರಷ್ಟು ಕುಸಿದಿವೆ.

ಮುನ್ನೋಟ: ಈ ವಾರ ಎಂಆರ್‌ಎಫ್, ಎಂಡೂರೆನ್ಸ್ ಟೆಕ್ನಾಲಜೀಸ್, ಸೆಂಚುರಿ ಪ್ಲೈ, ಜಿಂದಾಲ್ ಸ್ಟೀಲ್, ಪವರ್ ಗ್ರಿಡ್, ಪ್ರೆಸ್ಟೀಜ್, ಕೋಲ್ ಇಂಡಿಯಾ, ಜೊಮ್ಯಾಟೊ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ತ್ರೈಮಾಸಿಕ ಫಲಿತಾಂಶಗಳ ಜತೆ ಜಾಗತಿಕ ಮತ್ತು ದೇಶಿಯ ವಿದ್ಯಮಾನಗಳು , ಅಮೆರಿಕದ ಉದ್ಯೋಗ ಸೃಷ್ಟಿ ದತ್ತಾಂಶ ಮಾರುಕಟ್ಟೆಗಳ ಮೇಲೆ ಪರಿಣಾಮ ಬೀರಲಿವೆ. ಕಾರ್ಡ್ ಟ್ರೇಡ್, ನೂವೋಕೋ ವಿಸ್ತಾಸ್ ಐಪಿಒ ಸೇರಿ ಹಲವು ಕಂಪನಿಗಳ ಐಪಿಒಗಳು ನಡೆಯುತ್ತಿವೆ. ಉತ್ತಮ ಕಂಪನಿಗಳನ್ನು ಮಾತ್ರ ಐಪಿಒ ಹೂಡಿಕೆಗೆ ಪರಿಗಣಿಸಿ.

ಒಟ್ಟಾರೆ ₹ 14,628 ಕೋಟಿ ಬಂಡವಾಳ ಸಂಗ್ರಹ ನಿರೀಕ್ಷೆ

ಈ ವಾರ ನಾಲ್ಕು ಕಂಪನಿಗಳ ಐಪಿಒ

ನವದೆಹಲಿ (ಪಿಟಿಐ): ಈ ವಾರ ಒಟ್ಟು ನಾಲ್ಕು ಕಂಪನಿಗಳು ತಮ್ಮ ಷೇರುಗಳನ್ನು ಸಾರ್ವಜನಿಕರಿಗೆ ಖರೀದಿಗೆ ಮುಕ್ತವಾಗಿ-ಸಲಿದ್ದು (ಐಪಿಒ), ಒಟ್ಟಾರೆ ₹ 14,628 ಕೋಟಿ ಸಂಗ್ರಹ ಆಗುವ ನಿರೀಕ್ಷೆ ಇದೆ.

ಕಾರ್ಡ್‌ ಟ್ರೇಡ್ ಟೆಕ್, ನೂವೋಕೋ ವಿಸ್ತಾಸ್ ಕಾರ್ಪೊರೇಷನ್, ಆಪ್ಟಸ್ ವ್ಯಾಲ್ಯೂ ಹೌಸಿಂಗ್ ಫೈನಾನ್ಸ್ ಮತ್ತು ಚೆಂಪ್ಲಾಸ್ಟ್ ಸನ್ಮಾರ್ ಕಂಪನಿಗಳು ಐಪಿಒ ನಡೆಸಲಿವೆ. ಸಾಲ ತೀರಿಸಲು, ದುಡಿಯುವ ಬಂಡವಾಳದ ಅಗತ್ಯ ಹಾಗು ಇನ್ನಿತರ ಕಾರ್ಪೊರೇಟ್ ಉದ್ದೇ-ಶಗಳಿಗಾಗಿ ಕಂಪನಿಗಳು ಬಂಡವಾಳ ಸಂಗ್ರಹಿಸಲಿವೆ.

ಕಳೆದ ವಾರ, ವಿಂಡ್ಲಾಸ್ ಬಯೋಟೆಕ್ ಲಿಮಿಟೆಡ್, ದೇವಯಾನಿ ಇಂಟರ್‌ನ್ಯಾಷನಲ್ ಲಿಮಿಟೆಡ್, ಕೃಷ್ಣಾ ಡಯಾಗ್ನಾಸ್ಟಿಕ್ಸ್ ಲಿಮಿಟೆಡ್ ಮತ್ತು ಎಕ್ಸಾರೊ ಟೈಲ್ಸ್ ಲಿಮಿಟೆಡ್ ಕಂಪನಿಗಳು ಐಪಿಒ ಮೂಲಕ ಷೇರುಪೇಟೆ ಪ್ರವೇಶಿ-ಸಿದ್ದವು. ಪ್ರಸಕ್ತ ಹಣಕಾಸು ವರ್ಷದಲ್ಲಿ ಇಲ್ಲಿಯವರೆಗೆ 16 ಕಂಪನಿಗಳು ಐಪಿಒ ಮೂಲಕ ಒಟ್ಟಾರೆಯಾಗಿ ₹ 30,666 ಕೋಟಿ ಸಂಗ್ರಹಿಸಿವೆ. 2020–21ರಲ್ಲಿ ಒಟ್ಟು 30 ಕಂಪನಿಗಳು ₹ 31,277 ಕೋಟಿ ಸಂಗ್ರಹಿಸಿದ್ದವು.

ಇನ್ನೂ 40 ಕಂಪನಿಗಳು ಐಪಿಒಗೆ ಸಿದ್ಧತೆ ನಡೆಸಿದ್ದು ಒಟ್ಟಾರೆ ₹ 70 ಸಾವಿರ ಕೋಟಿ ಸಂಗ್ರಹವಾಗುವ ನಿರೀಕ್ಷೆ ಇದೆ ಎಂದು ಸ್ಯಾಕ್ಟಂ ವೆಲ್ತ್ ಮ್ಯಾನೇಜ್‌ಮೆಂಟ್ ಕಂಪನಿಯ ಈಕ್ವಿಟಿ ಮುಖ್ಯಸ್ಥ ಹೇಮಾಂಗ್ ಕಪಾಸಿ ಹೇಳಿದ್ದಾರೆ.

ಎಫ್‌ಪಿಐ: ₹ 1,210 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಆಗಸ್ಟ್ ತಿಂಗಳ ಮೊದಲ ವಾರದಲ್ಲಿ ದೇಶದ ಬಂಡವಾಳ ಮಾರು-ಕಟ್ಟೆಯಲ್ಲಿ ₹ 1,210 ಕೋಟಿ ಹೂಡಿಕೆ ಮಾಡಿದ್ದಾರೆ.

ಆಗಸ್ಟ್ 2 ರಿಂದ 6ರವರೆಗಿನ ಅವಧಿಯಲ್ಲಿ ಷೇರುಗಳ ಖರೀದಿಗೆ ₹ 975 ಕೋಟಿ ಹೂಡಿಕೆ ಮಾಡಿದ್ದು, ಸಾಲಪತ್ರಗಳ ಖರೀದಿಗೆ ₹ 235 ಕೋಟಿ ಹೂಡಿಕೆ ಮಾಡಿದ್ದಾರೆ. ಇದರಿಂದಾಗಿ ಒಟ್ಟಾರೆ ಹೂಡಿಕೆ ಮೊತ್ತವು ₹ 1,210 ಕೋಟಿಗಳಷ್ಟಾಗಿದೆ.

ಜುಲೈನಲ್ಲಿ ₹ 7,273 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದರು.

ಕೋವಿಡ್‌ನ ಮೂರನೇ ಅಲೆಯು ಜಾಗತಿಕ ಮಾರುಕಟ್ಟೆಯ ಮೇಲೆ ಪರಿಣಾಮ ಉಂಟುಮಾಡಿದ್ದರು ಸಹ ದೇಶಿ ಮಟ್ಟದಲ್ಲಿ ತಯಾರಿಕಾ ವಲಯದ ಚೇತರಿಕೆ, ತಗ್ಗಿದ ನಿರುದ್ಯೋಗ ಪ್ರಮಾಣ ಹಾಗೂ ಜಿಎಸ್‌ಟಿ ಸಂಗ್ರಹದಲ್ಲಿ ಹೆಚ್ಚಳದಂತಹ ಸಕಾರಾತ್ಮಕ ಅಂಶಗಳು ಹೂಡಿಕೆಗೆ ಉತ್ತೇಜನ ನೀಡಿವೆ ಎಂದು ಕೋಟಕ್ ಸೆಕ್ಯುರಿಟೀಸ್‌ನ ಕಾರ್ಯ-ನಿರ್ವಾಹಕ ಉಪಾಧ್ಯಕ್ಷ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

ಕಚ್ಚಾತೈಲ ದರ ಏರಿಕೆ, ಅಮೆರಿಕದ ಡಾಲರ್ ಮೌಲ್ಯ ಸ್ಥಿರವಾಗಿರುವುದು ವಿದೇಶಿ ಹೂಡಿಕೆದಾರರನ್ನು ಭಾರತದ ಷೇರುಪೇಟೆಗಳಿಂದ ತುಸು ದೂರ ಇಡುವಂತಾಗಿದೆ. ಷೇರುಪೇಟೆಯು ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿ ವಹಿವಾಟು ನಡೆಸುತ್ತಿರುವುದರಿಂದ ಆಗಾಗ್ಗೆ ಲಾಭಗಳಿಕೆಯ ವಹಿವಾಟನ್ನೂ ನಡೆ-ಸುತ್ತಿದ್ದಾರೆ ಎಂದು ಮಾರ್ನಿಂಗ್‌ಸ್ಟಾರ್ ಇಂಡಿಯಾದ ಸಹಾಯಕ ನಿರ್ದೇಶಕ ಹಿಮಾಂಶು ಶ್ರೀವಾಸ್ತವ ತಿಳಿಸಿದ್ದಾರೆ.

ದೀರ್ಘಾವಧಿಯ ದೃಷ್ಟಿಯಿಂದ ಭಾರತವು ಬಂಡವಾಳ ಆಕರ್ಷಣೆಯ ಪ್ರಮುಖ ತಾಣವಾಗಿಯೇ ಮುಂದುವರಿಯಲಿದೆ. ಆರ್ಥಿಕತೆಯು ಚೇತರಿಕೆಯ ಹಾದಿಗೆ ಮರಳಿದ ಬಳಿಕ ಹೂಡಿಕೆಯು ಸುಧಾರಿಸಬಹುದು. ಹೀಗಿದ್ದರೂ ಮೂರನೇ ಅಲೆಯು ಹೂಡಿಕೆಯ ಮೇಲೆ ಪರಿಣಾಮ ಉಂಟುಮಾಡುವ ಸಾಧ್ಯತೆ ಇದೆ ಎಂದೂ ಎಚ್ಚರಿಸಿದ್ದಾರೆ.

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ (ಸಿ.ಬಿ)
₹231-516
ದ್ವಿತಳಿ (ಬಿ.ವಿ)
₹269-544

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹450
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹450

ದೂರಸಂಪರ್ಕ ವಲಯದ ನಷ್ಟ: ಬ್ಯಾಂಕ್‌ಗಳ ಜತೆ ಇಲಾಖೆ ಚರ್ಚೆ

ನವದೆಹಲಿ (ಪಿಟಿಐ): ದೂರಸಂಪರ್ಕ ವಲಯದಲ್ಲಿನ ಆರ್ಥಿಕ ಒತ್ತಡವನ್ನು ಬಗೆಹರಿಸುವ ನಿಟ್ಟಿನಲ್ಲಿ ದೂರಸಂಪರ್ಕ ಇಲಾಖೆಯು ಬ್ಯಾಂಕ್‌ಗಳೊಂದಿಗೆ ಚರ್ಚೆ ಆರಂಭಿಸಿದೆ ಎಂದು ಮೂಲಗಳು ಹೇಳಿವೆ.

ಮುಖ್ಯವಾಗಿ ವೊಡಾಫೋನ್ ಐಡಿಯಾ ಲಿಮಿಟೆಡ್ (ವಿಐಎಲ್) ಕಂಪನಿಗೆ ತುರ್ತಾಗಿ ಬಂಡವಾಳದ ಅಗತ್ಯ ಇರುವುದರಿಂದ ಇಲಾಖೆಯು ಈ ಹೆಜ್ಜೆ ಇಟ್ಟಿದೆ. ವೊಡಾಫೋನ್ ವಿಷಯದ ಕುರಿತಾಗಿ ಇಲಾಖೆಯ ಅಧಿಕಾರಿಗಳು ಮತ್ತು ಬ್ಯಾಂಕ್‌ಗಳ ಹಿರಿಯ ಅಧಿಕಾರಿಗಳು ಶುಕ್ರವಾರ ಸಭೆಯಲ್ಲಿ ಚರ್ಚೆ ನಡೆಸಿದ್ದು, ಪರಿಹಾರ ಮಾರ್ಗವನ್ನು ನೀಡುವಂತೆ ಇಲಾಖೆಯು ಬ್ಯಾಂಕ್‌ಗಳನ್ನು ಕೇಳಿದೆ ಎಂದು ಮೂಲಗಳು ತಿಳಿಸಿವೆ.

ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ), ಬ್ಯಾಂಕ್ ಆಫ್ ಬರೋಡಾ ಸೇರಿದಂತೆ ಹಲವು ದೊಡ್ಡ ಬ್ಯಾಂಕ್‌ಗಳ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು ಎಂದು ಹೇಳಿವೆ.

ಭಾರತದ ಜಯದ ಉತ್ಸಾಹ ಕಸಿದ ವರುಣ: ಉಭಯ ತಂಡಗಳಿಗೆ ನಾಲ್ಕು ಪಾಯಿಂಟ್ಸ್

ಮಳೆ: ಮೊದಲ ಟೆಸ್ಟ್ ಡ್ರಾನಲ್ಲಿ ಅಂತ್ಯ

ನಿರಾಸೆಯಲ್ಲಿ ಪ್ರೇಕ್ಷಕರು – ರಾಯಿಟರ್ಸ್ ಚಿತ್ರ

ಮುಖ್ಯಾಂಶಗಳು

- ಐದನೇ ದಿನದಾಟ ಒಂದೂ ಎಸೆತವನ್ನು ಕಾಣಲಿಲ್ಲ.
- ಮೊದಲ ಇನಿಂಗ್ಸ್‌ನಲ್ಲಿ 84 ರನ್ ಗಳಿಸಿದ್ದ ಕನ್ನಡಿಗ ಕೆ.ಎಲ್‌.ರಾಹುಲ್
- 2ನೇ ಟೆಸ್ಟ್ ಪಂದ್ಯ ಗುರುವಾರದಿಂದ ಲಾರ್ಡ್ಸ್‌ನಲ್ಲಿ

ನಾಟಿಂಗ್‌ಹ್ಯಾಮ್ (ಪಿಟಿಐ): ವಿರಾಟ್ ಕೊಹ್ಲಿ ಬಳಗದ ಜಯದ ಉತ್ಸಾಹ ಮಳೆಯಲ್ಲಿ ಕೊಚ್ಚಿ ಹೋಯಿತು. ಭಾರತ ಮತ್ತು ಇಂಗ್ಲೆಂಡ್ ತಂಡಗಳ ನಡುವಣ ಮೊದಲ ಟೆಸ್ಟ್ ಕ್ರಿಕೆಟ್ ಪಂದ್ಯವು ಮಳೆಯಿಂದಾಗಿ ರದ್ದಾಯಿತು. ಭಾನುವಾರದ ಐದನೇ ದಿನದಾಟ ಒಂದೂ ಎಸೆತವನ್ನು ಕಾಣಲಿಲ್ಲ.

ಅಂತಿಮ ದಿನದಾಟಕ್ಕೆ ಭಾರತದ ಗೆಲುವಿಗೆ 157 ರನ್ ಬೇಕಿತ್ತು. ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಭಾಗವಾಗಿ ನಡೆಯುತ್ತಿರುವ ಈ ಟೆಸ್ಟ್‌ನಲ್ಲಿ ಉಭಯ ತಂಡಗಳು ತಲಾ ನಾಲ್ಕು ಪಾಯಿಂಟ್ಸ್ ಗಳಿಸಿದವು.

ಒಟ್ಟಾರೆ ಪಂದ್ಯದಲ್ಲಿ ಗರಿಷ್ಠ 450 ಓವರ್‌ಗಳ ಬದಲಾಗಿ 250 ಓವರ್‌ಗ-ಳನ್ನಷ್ಟೇ ಆಡಿಸಲು ಸಾಧ್ಯವಾಯಿತು. ನಾಲ್ಕನೇ ದಿನದಾಟದ ಅಂತ್ಯಕ್ಕೆ ಭಾರತ ತನ್ನ ಎರಡನೇ ಎರಡನೇ ಇನಿಂಗ್ಸ್‌ನಲ್ಲಿ 14 ಓವರ್‌ಗಳಲ್ಲಿ ಒಂದು ವಿಕೆಟ್ ಕಳೆದುಕೊಂಡು 52 ರನ್ ಗಳಿಸಿತ್ತು.

ಭಾರತವು ಗೆಲುವಿನ ಗುರಿ ತಲುಪದಂತೆ ತಡೆಯಲು ಇಂಗ್ಲೆಂಡ್ ಬೌಲರ್‌ಗಳು ವಿಶೇಷ ಪ್ರಯತ್ನವನ್ನೇ ಮಾಡಬೇಕಾಗಿತ್ತು.

‘ರನ್ ಗಳಿಸುವುದು ಸವಾಲಾಗಿದ್ದರೂ ಬ್ಯಾಟಿಂಗ್ ನಡೆಸುವುದು ಕಷ್ಟ-ವಾಗುತ್ತಿರಲಿಲ್ಲ’ ಎಂದು ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 84 ರನ್ ಗಳಿಸಿದ್ದ ಕನ್ನಡಿಗ ಕೆ.ಎಲ್.ರಾಹುಲ್ ಹೇಳಿದ್ದಾರೆ.

2018ರಲ್ಲಿ ಇಂಗ್ಲೆಂಡ್‌ನಲ್ಲಿ ನಡೆದ ಟೆಸ್ಟ್ ಸರಣಿಯಲ್ಲಿ ರಾಹುಲ್ ರನ್ ಗಳಿಸಲು ಪರದಾಡಿದ್ದರು. ಆದರೆ ಈಗ ಲಯ ಕಂಡುಕೊಂಡಿದ್ದರು. ಎರಡನೇ ಟೆಸ್ಟ್ ಪಂದ್ಯವು ಗುರು ವಾರದಿಂದ ಲಾರ್ಡ್ಸ್‌ನಲ್ಲಿ ನಡೆಯಲಿದೆ.

ಸಂಕ್ಷಿಪ್ತ ಸ್ಕೋರ್: ಇಂಗ್ಲೆಂಡ್ (ಮೊದಲ ಇನಿಂಗ್ಸ್) 65.4 ಓವರ್‌ಗಳಲ್ಲಿ183. ಭಾರತ (ಮೊದಲ ಇನಿಂಗ್ಸ್) (84.5 ಓವರ್‌ಗಳಲ್ಲಿ 278. ಇಂಗ್ಲೆಂಡ್: ಎರಡನೇ ಇನಿಂಗ್ಸ್: (ಶುಕ್ರವಾರ 11.1 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 25) 85.5 ಓವರ್‌ಗಳಲ್ಲಿ 303 (ಜೋ ರೂಟ್ 109, ಸ್ಯಾಮ್ ಕರನ್ 32, ಡಾಮ್ ಸಿಬ್ಲಿ 28; ಜಸ್‌ಪ್ರೀತ್ ಬೂಮ್ರಾ 64ಕ್ಕೆ 5, ಮೊಹಮ್ಮದ್ ಸಿರಾಜ್ 84ಕ್ಕೆ 2). ಭಾರತ: 14 ಓವರ್‌ಗಳಲ್ಲಿ 1 ವಿಕೆಟ್‌ಗೆ 52 (ರಾಹುಲ್ 26).

ಲಯೊನೆಲ್ ಮೆಸ್ಸಿ

ಕಣ್ಣೀರಿಡುತ್ತಲೇ ಬಾರ್ಸಿಲೋನಾ ಕ್ಲಬ್ ತೊರೆದ ಮೆಸ್ಸಿ

ಬಾರ್ಸಿಲೋನಾ (ಪಿಟಿಐ): ಅರ್ಜೆಂಟೀನಾದ ಅನುಭವಿ ಫುಟ್‌ಬಾಲ್ ಆಟಗಾರ ಲಯೊನೆಲ್ ಮೆಸ್ಸಿ, ಬಾರ್ಸಿಲೋನಾ ಎಫ್‌ಸಿ ತಂಡವನ್ನು ತೊರೆಯುವುದಾಗಿ ಘೋಷಿಸಿದ್ದಾರೆ. ಕಣ್ಣೀರಿಡುತ್ತಲೇ ಅವರು ಈ ನಿರ್ಧಾರ ಪ್ರಕಟಿಸಿದ್ದಾರೆ.

ಬಾರ್ಸಿಲೋನಾ ಯಶಸ್ಸಿನಲ್ಲಿ ಮಹತ್ತರ ಪಾತ್ರ ವಹಿಸಿರುವ ಮೆಸ್ಸಿ, ಯಾವತ್ತಿಗೂ ಈ ತಂಡವನ್ನು ತೊರೆಯಲು ಬಯಸುವುದಿಲ್ಲ ಎಂದು ಹೇಳಿದ್ದರು. ಆದರೆ ಈಗ ಅನಿವಾರ್ಯವಾಗಿ ತಂಡವನ್ನು ತೊರೆಯು-ತ್ತಿದ್ದೇನೆ ಎಂದು ಸುದ್ದಿಗೋಷ್ಠಿಯಲ್ಲಿ ಪ್ರಕಟಿ ಸಿದರು. ’ನಾನು ಅತೀವ ವಿನಯ ಹಾಗೂ ಗೌರವದಿಂದ ವರ್ತಿಸಲು ಪ್ರಯ-ತ್ನಿಸಿದ್ದೇನೆ. ಬಾರ್ಸಿಲೋನಾ ತಂಡವನ್ನು ತೊರೆಯುವಾಗ ಇದೊಂದೇ ನನ್ನ ಬಳಿ ಉಳಿಯುತ್ತದೆ’ ಎಂದು ಹೇಳಿದ್ದಾರೆ.

ಲಯೊನೆಲ್ ಮೆಸ್ಸಿ, ಬಾರ್ಸಿಲೋನಾ ತಂಡವನ್ನು ತೊರೆದಿರುವುದು ಕೋಟ್ಯಂತರ ಅಭಿಮಾನಿಗಳಿಗೆ ಆಘಾತವನ್ನುಂಟು ಮಾಡಿದೆ.

34 ವರ್ಷದ ಮೆಸ್ಸಿ, ಕಳೆದ 21 ವರ್ಷಗಳಲ್ಲಿ ಬಾರ್ಸಿಲೋನಾ ತಂಡದ ಭಾಗವಾಗಿದ್ದು, ದಾಖಲೆಯ 682 ಗೋಲುಗಳನ್ನು ಗಳಿಸಿದ್ದಾರೆ.ಮೆಸ್ಸಿ ಅವರ ಭವಿಷ್ಯದ ಯೋಜನೆಗಳು ಏನಾಗಲಿದೆ, ಯಾವ ತಂಡವನ್ನು ಸೇರಲಿದ್ದಾರೆ ಎಂಬುದರ ಬಗ್ಗೆ ಮಾಹಿತಿಗಳು ಲಭ್ಯವಾಗಿಲ್ಲ. ವಿಶ್ವದಲ್ಲಿ ಅತಿ ಹೆಚ್ಚು ಆದಾಯ ಹೊಂದಿರುವ ಆಟಗಾರ ಲಯೊನೆಲ್ ಮೆಸ್ಸಿ ಅವರೊಂದಿಗಿನ ಒಪ್ಪಂದ ಮುಂದುವರಿಸಲು ಬಾರ್ಸಿಲೋನಾ ಎಫ್‌ಸಿ ಆಸಕ್ತಿ ತೋರಿರಲಿಲ್ಲ ಎಂಬುದು ವರದಿಯಾಗಿತ್ತು.

‘ಮಾನಸಿಕ ದೃಢತೆ ಫಲ ನೀಡಿತು’



ಜಸ್‌ಪ್ರೀತ್ ಬೂಮ್ರಾ

ನಾಟಿಂಗ್‌ಹ್ಯಾಮ್ (ಪಿಟಿಐ): ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಸೋಲಿನ ನಂತರ ಮಾನಸಿಕವಾಗಿ ದೃಢತೆ ಕಾಪಾಡಿಕೊಳ್ಳಲು ಕೆಲವು ಹೊಂದಾಣಿಕೆ ಮಾಡಿಕೊಂಡಿದ್ದು ಈಗ ಫಲ ನೀಡಿದೆ ಎಂದು ಭಾರತ ಕ್ರಿಕೆಟ್ ತಂಡದ ಬೌಲರ್ ಜಸ್‌ಪ್ರೀತ್ ಬೂಮ್ರಾ ಹೇಳಿದ್ದಾರೆ.

ಭಾನುವಾರ ಮುಕ್ತಾವಾದ ಇಂಗ್ಲೆಂಡ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಒಟ್ಟು ಒಂಬತ್ತು ವಿಕೆಟ್ ಗಳಿಸಿದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

‘ಪ್ರಾಮಾಣಿಕವಾಗಿ ಹೇಳೂತ್ತೇನೆ. ಬಹಳ ದೊಡ್ಡ ಬದಲಾವಣೆಗಳನ್ನು ನಾನು ಮಾಡಿಕೊಂಡಿಲ್ಲ. ಅಂತಿಮ ಫಲಿತಾಂಶ ಏನಾಗುತ್ತದೆ ಎಂದು ನಾನು ನೋಡುವುದಿಲ್ಲ. ಆಟವನ್ನು ಮನಸಾರೆ ಆಸ್ವಾದಿಸುತ್ತೇನೆ. ಆಕ್ಷಣದಲ್ಲಿ ನಾನು ಹೇಗೆ ಆಡಬೇಕು ಎಂಬುದಷ್ಟೇ ಮುಖ್ಯವಾಗುತ್ತದೆ’ ಎಂದು ಹೇಳಿದರು.

’ಕ್ರಿಕೆಟ್ ಆಡಲು ಆರಂಭಿಸಿದಾಗ ನಮ್ಮ ಮೇಲೆ ನಮಗೆ ನಂಬಿಕೆ ಇರುವುದು ಬಹುಮುಖ್ಯ. ಜಯ ಗಳಿಸುವ ಛಲದಿಂದಲೇ ಆಡಬೇಕು. ಅದು ನಮ್ಮಿಂದ ಸಾಧ್ಯ ಎಂಬ ಮನೋಭಾವ, ಗಟ್ಟಿ ನಿಲುವು ನಮ್ಮಲ್ಲಿ-ರಬೇಕು‘ ಎಂದರು.‘

ಪ್ಯಾರಾಲಿಂಪಿಕ್ಸ್‌ಗೆ ಕರ್ನಾಟಕದ ನಿರಂಜನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಪ್ಯಾರಾ ಈಜುಪಟು ನಿರಂಜನ್ ಮುಕುಂದನ್ ಅವರು ಟೋಕಿಯೊ ಪ್ಯಾರಾಲಿಂಪಿಕ್ಸ್–2020 ಕ್ರೀಡಾಕೂಟದಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ.

ಪುರುಷರ 50 ಮೀಟರ್ ಬಟರ್‌ಫ್ಲೈ-ಎಸ್ 7 ಸ್ಪರ್ಧೆಯಲ್ಲಿ ನಿರಂಜನ್ ಭಾಗವಹಿಸಲಿದ್ದಾರೆ ಎಂದು ಭಾರತದ ಪ್ಯಾರಾಲಿಂಪಿಕ್ ಸಮಿತಿ ಭಾನುವಾರ ತಿಳಿಸಿದೆ.

ಆಗಸ್ಟ್ 24 ರಿಂದ ಸೆಪ್ಟೆಂಬರ್ 5ರ ವರೆಗೆ ಟೋಕಿಯೊ ಪ್ಯಾರಾಲಿಂಪಿಕ್ಸ್–2020 ಕ್ರೀಡಾಕೂಟ ನಡೆಯಲಿದೆ.

ಹೈದರಾಬಾದ್ ರೇಸ್

ಅಶ್ವ ಯಶೋಬಾಲಿ ಗೆಲ್ಲುವ ನಿರೀಕ್ಷೆ

ಮಾಡಾಂಟೆ ಪ್ಲೇಟ್ ಸೋಮವಾರದ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅಶ್ವ ಯಶೋಬಾಲಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.05ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ರಿವರ್ ಸಾಂಗ್ 11, ಬ್ಲೂ ಲೇಬಲ್ 1, ಬ್ಯುರಾನೊ 7
2ನೇ ರೇಸ್: ಲಿಮೆನ್‌ಸೆಲ್ಲೊ 11, ಗಾರ್ಗಿಯಾ ಪೀಚ್ 9, ಅಶ್ವ ಮಿಗ್ನನ್ 1
3ನೇ ರೇಸ್: ಥ್ಯಾಂಕ್ಸ್ 12, ಚಾರ್ಮರ್ 1, ಶೋ ಮಿ ಯುವರ್ ವಾಕ್ 11
4ನೇ ರೇಸ್: ಫ್ರಾನ್ಸಿಸ್ ಬೇಕನ್ 5, ಲೈಟ್ನಿಂಗ್ ಪವರ್ 7, ಅಡ್ವಾನ್ಸ್ ಗಾರ್ಡ್ 4
5ನೇ ರೇಸ್: ಅಶ್ವ ರಾಡೀ 3, ಡೇಸ್ ಆಫ್ ರೆಕನಿಂಗ್ 1, ಸಬ್‌ಲೈಮ್ 5
6ನೇ ರೇಸ್: ಅಮರೆಟ್ಟೊ 4, ಲಾ ಲೇಡಿ 2, ಡ್ಯೂ ಡಿಲಿಜೆನ್ಸ್ 3
7ನೇ ರೇಸ್: ಅಶ್ವ ಯಶೋಬಾಲಿ 3, ಮ್ಯಾಕ್ಸ್‌ವೆಲ್ 8, ಪ್ರೈವೇಟ್ ಎಂಪೈರ್ 9
8ನೇ ರೇಸ್: ಬೆಡಾಜಲ್ಡ್ 1, ಶೆಲ್ಡಾನ್ 12, ಸ್ಪುಟ್ನಿಕ್ 6

ಉತ್ತಮ ಬೆಟ್: ಫ್ರಾನ್ಸಿಸ್ ಬೇಕನ್

ಜಾಕ್‌ಪಾಟ್	1ನೇ ಮಿನಿಜಾಕ್	2ನೇ ಮಿನಿಜಾಕ್
4,5,6,7,8	2,3,4,5	5,6,7,8
1ನೇ ಟ್ರಿಬಲ್	**2ನೇ ಟ್ರಿಬಲ್**	**3ನೇ ಟ್ರಿಬಲ್**
1,2,3	3,4,5	6,7,8

ಅಫ್ಗಾನಿಸ್ತಾನದಲ್ಲಿ ತೀವ್ರಗೊಂಡ ಸಂಘರ್ಷ

ತಾಲಿಬಾನ್ ವಶಕ್ಕೆ ಮೂರು ಪ್ರಾಂತ್ಯದ ರಾಜಧಾನಿಗಳು

ಕಾಬೂಲ್ (ರಾಯಿಟರ್ಸ್, ಎಪಿ): ಅಫ್ಗಾನಿಸ್ತಾನದ ಉತ್ತರ ಭಾಗದಲ್ಲಿ ನಿಯಂತ್ರಣ ಸಾಧಿಸುತ್ತಿರುವ ತಾಲಿಬಾನ್, ಭಾನುವಾರ ಮತ್ತೆ ಮೂರು ಪ್ರಾಂತ್ಯಗಳ ರಾಜಧಾನಿಗಳನ್ನು ವಶಪಡಿ-ಸಿಕೊಂಡಿದೆ.

ಕುಂದುಜ್, ಸರ್‌–ಇ–ಪುಲ್, ತಾಲೋಖಾನ್ ವಶಪಡಿಸಿಕೊಳ್ಳಲಾ-ಗಿದೆ. ಈ ಮೂರು ರಾಜಧಾನಿಗಳಲ್ಲಿನ ಸರ್ಕಾರಿ ಕಟ್ಟಡಗಳನ್ನು ಸಹ ವಶಕ್ಕೆ ತಗೆ-ದುಕೊಳ್ಳಲಾಗಿದೆ ಎಂದು ತಾಲಿಬಾನ್ ತಿಳಿಸಿದೆ.

ಶುಕ್ರವಾರದಿಂದ ಇದುವರೆಗೆ ಐದು ಪ್ರಾಂತ್ಯಗಳ ರಾಜಧಾನಿಗಳನ್ನು ತಾಲಿಬಾನ್ ವಶಪಡಿಸಿಕೊಂಡಿದೆ. ಆಗಸ್ಟ್ ಅಂತ್ಯದ ವೇಳೆಗೆ ಅಫ್ಗಾನಿಸ್ತಾ-ನದಲ್ಲಿ ಸೇನಾ ಕಾರ್ಯಾಚರಣೆಯನ್ನು ಅಂತ್ಯಗೊಳಿಸುವುದಾಗಿ ಅಮೆರಿಕ ಪ್ರಕಟಿಸಿರುವ ಬೆನ್ನಲ್ಲೇ ತಾಲಿಬಾನ್ ಉಗ್ರರ ಆಕ್ರಮಣ ಹೆಚ್ಚಿದೆ.

ಸರ್ಕಾರಿ ಅಧಿಕಾರಿಗಳು ಸೇನಾ ಪಡೆಗಳು ನಗರದಿಂದ ಮೂರು ಕಿಲೋ ಮೀಟರ್ ದೂರದಲ್ಲಿರುವ ಸೇನಾ ಬ್ಯಾರಕ್‌ಗಳಿಗೆ ತೆರಳಿದ್ದಾರೆ ಎಂದು ಸರ್‌–ಇ–ಪುಲ್‌ನಲ್ಲಿರನ ಮಹಿಳಾ ಹಕ್ಕುಗಳ ಕಾರ್ಯಕರ್ತೆ ಪರ್ವಿನಾ ಅಝಿಮಿ ಮಾಹಿತಿ ನೀಡಿದ್ದಾರೆ.

ತಾಲೋಖಾನ್‌ನಿಂದಲೂ ಸೇನಾ ಪಡೆಗಳು ಮತ್ತು ಅಧಿಕಾರಿಗಳು ವಾಹನಗಳಲ್ಲಿ ತೆರಳಿದ್ದಾರೆ. ಸರ್ಕಾರ ಯಾವುದೇ ನೆರವು ನೀಡಲು ವಿಫಲವಾಯಿತು. ಈಗ ನಗರ ತಾಲಿಬಾನ್‌ನ ವಶದಲ್ಲಿದೆ ಎಂದು ಭದ್ರತಾ ಪಡೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈಶಾನ್ಯ ಭಾಗದಲ್ಲಿರುವ ಕುಂದುಜ್ ತಾಲಿಬಾನ್ ವಶಪಡಿಸಿಕೊಂಡಿರುವ ಪ್ರಮುಖ ನಗರವಾಗಿದೆ. 2015 ಮತ್ತು 2016ರಲ್ಲಿ ತಾಲಿಬಾನ್ ಈ ನಗರವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿತ್ತು. ಆದರೆ, ಬಹುದಿನಗಳವರೆಗೆ ಉಳಿಯಲಿಲ್ಲ.

‘ಕಮಾಂಡೊ ಪಡೆಗಳು ಸರ್ಕಾರಿ ಕಚೇರಿಗಳು ಮತ್ತು ಪ್ರಮುಖ ಸ್ಥಳಗಳನ್ನು ವಾಪಸ್ ಪಡೆಯಲು ಕಾರ್ಯಾಚರಣೆ ನಡೆಸುತ್ತಿವೆ’ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಉತ್ತರ ಅಫ್ಗಾನಿಸ್ತಾನದಲ್ಲಿ ತಾಲಿಬಾನ್‌ಗೆ ತೀವ್ರ ವಿರೋಧವಿದೆ. 1990ರ ಅವಧಿಯಲ್ಲಿ ತಾಲಿಬಾನ್ ಆಡಳಿತ ನಡೆಸಿದ ಸಂದರ್ಭದಲ್ಲೂ ತೀವ್ರ ವಿರೋಧ ವ್ಯ-ಕ್ತವಾಗಿತ್ತು. ಈ ಪ್ರದೇಶದಿಂದಲೇ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಅಫ್ಘಾ-ನಿಸ್ತಾನದ ಸೇನಾ ಪಡೆಗೆ ಸೇರಿದ್ದಾರೆ

12 ದಿನಗಳ ಬಳಿಕ ಮಿಜೋರಾಂಗೆ ಟ್ರಕ್‌ಗಳ ಸಂಚಾರ

ಪ್ರಜಾವಾಣಿ ವಾರ್ತೆ

ಗುವಾಹಟಿ: ಅಸ್ಸಾಂ ಮತ್ತು ಮಿಜೋರಾಂ ಗಡಿಭಾಗದ-ಲ್ಲಿನ ಹಿಂಸಾಚಾರದ ಕಾರಣಕ್ಕಾಗಿ ಇಲ್ಲಿನ ಎನ್‌ಎಚ್‌–306ನಲ್ಲಿ ಜುಲೈ 26ರಿಂದ ತಡೆಯಲಾಗಿದ್ದ ಸರಕು ಸಾಗಣೆ ಟ್ರಕ್‌ಗಳಿಗೆ ಮಿಜೋರಾಂಗೆ ತೆರಳಲು ಶನಿವಾರ ರಾತ್ರಿ ಅವಕಾಶ ಮಾಡಿಕೊಡಲಾಗಿದೆ.

ಹಿಂಸಾಚಾರದ ಕಾರಣಕ್ಕಾಗಿ ಗಡಿಭಾಗದ ದಕ್ಷಿಣ ಅಸ್ಸಾಂನ ಕಚಾರ್ ಜಿಲ್ಲೆಯ ಸ್ಥಳೀಯರು ಉದ್ರಿಕ್ತಗೊಂಡಿದ್ದರು. ಅಸ್ಸಾಂನ ಅರಣ್ಯ ಮತ್ತು ಪರಿಸರ ಸಚಿವ ಪರಿಮಳ್ ಸುಕ್ಲಬೈದ್ಯ ಹಾಗೂ ನಗರಭಿವೃದ್ಧಿ ಸಚಿವ ಅಶೋಕ್ ಸಿಂಘಾಲ್ ಅವರು ಸ್ಥಳೀಯರನ್ನು ಸಮಾಧಾನಪಡಿಸಿದ ನಂತರ ಟ್ರಕ್‌ಗಳ ಪ್ರಯಾಣಕ್ಕೆ ಅನುವು ಮಾಡಿಕೊಡಲಾಯಿತು.

ಶನಿವಾರ ರಾತ್ರಿ 9 ಟ್ರಕ್‌ಗಳು ಮಿಜೋರಾಂಗೆ ಪ್ರಯಾಣ ಬೆಳೆಸಿದವು. ಭಾನುವಾರ ಸಂಜೆಯ ವೇಳೆಗೆ ಸುಮಾರು 50 ಟ್ರಕ್‌ಗಳು ಮಿಜೋರಾಂಗೆ ತಲುಪಿದವು ಎಂದು ಮೂಲಗಳು ತಿಳಿಸಿವೆ.

ದಕ್ಷಿಣ ಅಸ್ಸಾಂನ ಕಚಾರ್ ಜಿಲ್ಲೆಯ ಲೈಲಾಪುರ ಮತ್ತು ಮಿಜೋರಾಂನ ಕೊಲಸಿಬ್ ಜಿಲ್ಲೆಯ ವೈರೆಂಗ್ಟೆ ನಡುವಿನ ಅರಣ್ಯ ಪ್ರದೇಶದಲ್ಲಿ ಇತ್ತೀಚೆಗೆ ಅಸ್ಸಾಂ ಪೊಲೀಸ್ ಅಧಿಕಾರಿಗಳ ತಂಡದ ಮೇಲೆ ಮಿಜೋರಾಂನ ಪೊಲೀಸರು ಗುಂಡಿನ ದಾಳಿ ನಡೆಸಿದ್ದರು. ಈ ವೇಳೆ ಅಸ್ಸಾಂನ ಆರು ಪೊಲೀಸರು ಸೇರಿದಂತೆ ಒಬ್ಬ ನಾಗರಿಕ ಸಾವಿಗೀಡಾಗಿದ್ದರು. ಪೊಲೀಸ್ ವರಿಷ್ಠಾಧಿಕಾರಿ ಸೇರಿದಂತೆ 50ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು.

ಗಡಿ ಪ್ರದೇಶದ ವಿಚಾರಕ್ಕೆ ಸಂಬಂಧಿಸಿದಂತೆ ಈ ಗುಂಡಿನ ದಾಳಿ ನಡೆದಿತ್ತು.

ಉದ್ಯೋಗ ನಷ್ಟ: ಪರಿಷ್ಕೃತ ವರದಿ ಸಿದ್ಧಪಡಿಸಲು ಸೂಚನೆ

ನವದೆಹಲಿ (ಪಿಟಿಐ): ಭವಿಷ್ಯ ನಿಧಿ ಸಂಘಟನೆ (ಇಪಿಎಫ್‌ಒ) ಹಾಗೂ ವಿಶ್ವಾಸಾರ್ಹ ಏಜೆನ್ಸಿಗಳಿಂದ ಮಾಹಿತಿ ಪಡೆದು, ಕೋವಿಡ್–19 ಪಿಡುಗಿನಿಂದಾಗಿ ಉದ್ಯೋಗ ಕಳೆದುಕೊಂಡವರ ಕುರಿತು ಸಮಗ್ರ ವರದಿ ಸಿದ್ಧಪಡಿಸುವಂತೆ ಕಾರ್ಮಿಕ ಸಚಿವಾಲಯಕ್ಕೆ ಕಾರ್ಮಿಕರ ಕುರಿತ ಸಂಸದೀಯ ಸ್ಥಾಯಿ ಸಮಿತಿ ಸೂಚಿಸಿದೆ.

‘ಇಪಿಎಫ್‌ಒ ಹಾಗೂ ವಿವಿಧ ಏಜೆನ್ಸಿಗಳಿಂದ ಪಡೆಯುವ ಮಾಹಿತಿಯನ್ನು ಪರಿಷ್ಕರಿಸಿ ವರದಿಯನ್ನು ಸಿದ್ಧ-ಪಡಿಸಿದರೆ ಮಾತ್ರ ಉದ್ಯೋಗ ನಷ್ಟ ಕುರಿತು ಸ್ಪಷ್ಟ ಚಿತ್ರಣ ಸಿಗುವುದು’ ಎಂದು ಸಮಿತಿಯು ಕಳೆದ ವಾರ ಸಂಸತ್‌ನಲ್ಲಿ ಮಂಡಿಸಿರುವ ತನ್ನ 25ನೇ ವರದಿಯಲ್ಲಿ ಪ್ರತಿಪಾದಿಸಿದೆ.

‘ಕೋವಿಡ್ ಪಿಡುಗಿನ ಹಿನ್ನೆಲೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಲಾಕ್‌ಡೌನ್ ಜಾರಿಗೊಳಿಸಿದ್ದವು. ಇದರಿಂದ ಆರ್ಥಿಕ ಚಟುವಟಿಕೆಗಳು ಕೆಲಕಾಲ ಸ್ಥ-ಗಿತಗೊಂಡಿದ್ದವು. ಉದ್ಯೋಗದ ಮೇಲೆ ಇದರ ನೇರ ಪರಿಣಾಮ ಉಂಟಾಗಿತ್ತು‘ ಎಂದು ವರದಿಯಲ್ಲಿ ವಿವರಿಸಲಾಗಿದೆ.

‘2020–21ನೇ ಸಾಲಿನಲ್ಲಿ ಇಪಿಎ-ಫ್‌ಒದಲ್ಲಿ ನೋಂದಣಿಯಾದ ವೇತನದಾರರ ಸಂಖ್ಯೆ 77.08 ಲಕ್ಷ ಇತ್ತು. 2019–20ರಲ್ಲಿ ನೋಂದಣಿಯಾಗಿದ್ದ ಉದ್ಯೋಗಿಗಳ ಸಂಖ್ಯೆ 78.58 ಲಕ್ಷ. ಕೋವಿಡ್ ಪಿಡುಗು ಬಾಧಿಸುತ್ತಿದ್ದ-ರೂ, ಭವಿಷ್ಯ ನಿಧಿ ಸಂಘಟನೆಯಲ್ಲಿ ನೋಂದಣಿಯಾದ ವೇತನದಾರರ ಸಂಖ್ಯೆಯಲ್ಲಿ ವ್ಯತ್ಯಾಸ ಕಂಡು ಬರದಿರುವುದು ಗಮನಾರ್ಹ’ ಎಂದು ಸಮಿತಿ ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

ಭಾರತೀಯರ ಪ್ರಯಾಣದ ಮೇಲಿನ ನಿರ್ಬಂಧ ಸಡಿಲಿಸಿದ ಬ್ರಿಟನ್

ಲಂಡನ್ (ಪಿಟಿಐ): ಭಾರತೀಯರು ಬ್ರಿಟನ್‌ಗೆ ಪ್ರಯಾಣಿಸುವುದರ ಮೇಲೆ ಹೇರಲಾಗಿದ್ದ ನಿರ್ಬಂಧಗ-ಳನ್ನು ಭಾನುವಾರ ಸಡಿಲಿಸಲಾಗಿದೆ. ಭಾರತವನ್ನು ‘ಕೆಂಪು ಪಟ್ಟಿ’ಯಿಂದ ‘ಹಳದಿ ಪಟ್ಟಿ’ಗೆ ಸೇರಿಸಲಾಗಿದೆ.

ಈ ಕ್ರಮದಿಂದಾಗಿ, ಪೂರ್ಣ ಪ್ರಮಾಣದಲ್ಲಿ ಕೋವಿಡ್ ಲಸಿಕೆ ಪಡೆದಿರುವ ಭಾರತದ ಪ್ರಯಾಣಿಕರು ಬ್ರಿಟನ್‌ನಲ್ಲಿ 10 ದಿನಗಳ ಕಾಲ ಹೋಟೆಲ್ ಕ್ವಾರಂಟೈನ್‌ನಲ್ಲಿ ಇರಬೇಕಾದ ಅಗತ್ಯವಿಲ್ಲ. ಅದರ ಬದಲಿಗೆ ಅವರು 10 ದಿನಗಳ ಕಾಲ ಮನೆ ಕ್ವಾರಂಟೈನ್‌ನಲ್ಲಿ ಇರಬೇಕಾಗುತ್ತ-ದೆ ಎಂದು ಆರೋಗ್ಯ ಮತ್ತು ಸಾಮಾಜಿಕ ಸಂರಕ್ಷಣೆ ಇಲಾಖೆ (ಡಿಎಚ್‌ಎಸ್‌ಸಿ) ತಿಳಿಸಿದೆ.

ಬ್ರಿಟನ್‌ಗೆ ಬಂದ ನಂತರ, ಸರ್ಕಾರ ಅನುಮೋದಿಸಿದ ಆರೈಕೆ ಕೇಂದ್ರಗಳಲ್ಲಿ 10 ದಿನಗಳ ಕಾಲ ಪ್ರತ್ಯೇಕವಾಸದ-ಲ್ಲಿ ಇರಬೇಕು ಎಂಬ ನಿರ್ಬಂಧ ಇತ್ತು. ಇದಕ್ಕಾಗಿ ಹೆಚ್ಚುವರಿಯಾಗಿ ತಲಾ ₹ 1.80 ಲಕ್ಷ ಶುಲ್ಕ ನೀಡಬೇಕಾಗಿತ್ತು. ಈಗ ಈ ನಿಯಮ ಅನ್ವಯವಾಗುವುದಿಲ್ಲ ಎಂದು ಇಲಾಖೆ ತಿಳಿಸಿದೆ.

18 ವರ್ಷದೊಳಗಿನವರು ಮತ್ತು ಬ್ರಿಟನ್‌ನಲ್ಲಿ ಪೂರ್ಣ ಪ್ರಮಾಣದಲ್ಲಿ ಲಸಿಕೆ ಹಾಕಿಸಿಕೊಂಡವರಿಗೆ ಮನೆ ಕ್ವಾರಂಟೈನ್ ನಿಂದ ವಿನಾಯಿತಿ ನೀಡಲಾಗಿದೆ. ಅದೇ ರೀತಿಯ ವಿನಾಯಿತಿ ಯುರೋಪಿಯನ್ ಒಕ್ಕೂಟ ಮತ್ತು ಅಮೆರಿಕದಲ್ಲಿ ಎರಡು ಡೋಸ್ ಕೋವಿಡ್ ಲಸಿಕೆ ಪಡೆದವರಿಗೂ ಇದೆ.

ಮ್ಯಾರಥಾನ್‌ನ 'ಚಿನ್ನ' ಕಿಪ್ಚೋಗಿ

ಬೆಳ್ಳಿ ಪದಕ ಗೆದ್ದ ನೆದರ್ಲೆಂಡ್ಸ್‌ನ ಅಬ್ದಿ ನಗೀಯೆ ಬೆಲ್ಜಿಯಂನ ಬಶೀರ್ ಅಬ್ದಿಗೆ ಕಂಚು

ಟೋಕಿಯೊ (ರಾಯಿಟರ್ಸ್): 'ಪ್ರತಿಸ್ಪರ್ಧಿಗೂ ನನಗೂ ನಡುವೆ ಉತ್ತಮ ಅಂತರವನ್ನು ಕಾಯ್ದುಕೊಳ್ಳಬೇಕೆಂಬ ಉದ್ದೇಶ ಇರಿಸಿಕೊಂಡೇ ಓಡಿದೆ. ಮ್ಯಾರಥಾನ್ ಕೂಡ ನೋಟಕ್ಕೆ ಸುಖ ನೀಡುವ, ಉತ್ತಮ ಸ್ಪರ್ಧಾತ್ಮಕ ಕ್ರೀಡೆ ಎಂಬುದನ್ನು ಜಗತ್ತಿಗೆ ತೋರಿಸಿಕೊಡಬೇಕೆಂಬುದು ನನ್ನ ಉದ್ದೇಶವಾಗಿತ್ತು...'

ಒಲಿಂಪಿಕ್ಸ್‌ನ ಕೊನೆಯ ದಿವನಾದ ಭಾನುವಾರ ಅಥ್ಲೆಟಿಕ್ಸ್‌ನ ಕೊನೆಯ ಸ್ಪರ್ಧೆಯಾದ ಪುರುಷರ ಮ್ಯಾರಥಾನ್‌ನಲ್ಲಿ ಚಿನ್ನ ಗೆದ್ದ ಕೆನ್ಯಾದ ಎಲ್ಯೂಡ್ ಕಿಪ್ಚೋಗಿ ಆಡಿದ ಮಾತು ಇದು. ಈ ಮಾತಿಗೆ ತಕ್ಕಂತೆ ಇತ್ತು, ಅವರು ಓಡಿದ ರೀತಿ.

ಅಂತಿಮ ಗೆರೆ ತುಳಿಯಲು ಇನ್ನೂ 30 ಕಿಲೋಮೀಟರ್‌ಗಳು ಬಾಕಿ ಇರುವಾಗ ಗುಂಪಿನಿಂದ ಹೊರಬಂದು ವೇಗವನ್ನು ಹೆಚ್ಚಿಸಿಕೊಂಡ ಕಿಪ್ಚೋಗಿ ಅಮೋಘ ಓಟದ ಪ್ರದರ್ಶನ ನೀಡಿದರು. ಈ ಮೂಲಕ ತಾವೊಬ್ಬ ಧೀಮಂತ ಅಥ್ಲೀಟ್ ಎಂಬುದನ್ನು ಜಗತ್ತಿಗೆ ಸಾರಿದರು. ಒಂದು ಹಂತದಲ್ಲಿ ಹಿಂದಿರುಗಿ ನೋಡಿದರೆ ಅವರನ್ನು ಹಿಂಬಾಲಿಸುವವರು ಯಾರೂ ಇರಲಿಲ್ಲ. ಆದರೆ ಅಂತಿಮ ಗೆರೆ ತುಳಿಯುವ ವೇಳೆ ಭಾರಿ ಪೈಪೋಟಿ ಎದುರಾಯಿತು. ಒಂದು ನಿಮಿಷದ ಅಂತರದಲ್ಲಿ ಪ್ರತಿಸ್ಪರ್ಧಿಯನ್ನು ಹಿಂದಿಕ್ಕಿದ ಅವರು ಚಿನ್ನದ ನಗೆಸೂಸಿದರು.

ರಿಯೊದಲ್ಲೂ ಚಾಂಪಿಯನ್ ಆಗಿದ್ದ ಕಿಪ್ಚೋಗಿ ಒಲಿಂಪಿಕ್ಸ್ ಮ್ಯಾರಥಾನ್‌ನಲ್ಲಿ ಸತತ ಎರಡು ಬಾರಿ ಚಿನ್ನ ಗೆದ್ದ ಮೂರನೇ ಕ್ರೀಡಾಪಟು ಎನಿಸಿಕೊಂಡರು. ನಗುನಗುತ್ತಾ ಮಾಧ್ಯಮದವರ ಜೊತೆ ಮಾತನಾಡಿದ 'ನಗುವೇ ಸಂಭ್ರಮ, ಸಂತೋಷದ ಸಂಕೇತ. ಸತತ ಎರಡು ಚಿನ್ನ ಗೆದ್ದು ನನ್ನ ಸಾಮರ್ಥ್ಯ ತೋರಿದ್ದೇನೆ. ಇದು ಮುಂದಿನ ಪೀಳಿಗೆಗೆ ಪ್ರೇರಣೆಯಾಗಲಿದೆ' ಎಂದರು.

2 ತಾಸು 8 ನಿಮಿಷ 38 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ಅವರು 'ಈ ಬಾರಿ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆಲ್ಲುವುದು ನನ್ನ ಜೀವನಶ್ರೇಷ್ಠ ಸಾಧನೆಯಾಗಲಿದೆ' ಎಂದು ಕಳೆದ ತಿಂಗಳಲ್ಲಿ ಆಡಿದ ಮಾತಿಗೆ ಬದ್ಧರಾದರು. ನೆದರ್ಲೆಂಡ್ಸ್‌ನ ಅಬ್ದಿ ನಗೀಯೆ (2:09:58) ಬೆಳ್ಳಿ ಪದಕ ಗೆದ್ದುಕೊಂಡರೆ ಬೆಲ್ಜಿಯಂನ ಬಶೀರ್ ಅಬ್ದಿ (2:10:00) ಕಂಚು ಗಳಿಸಿದರು.

ಕಿಪ್ಚೋಗಿ ಕಳೆದ ಬಾರಿ ಗುರಿ ಮುಟ್ಟಿದ ಕಾಲ
2:08:44.00
- 2008ರ ಒಲಿಂಪಿಕ್ಸ್‌ನಲ್ಲಿ **ಬೆಳ್ಳಿ**
- 2004 ಒಲಿಂಪಿಕ್ಸ್‌ನಲ್ಲಿ **ಕಂಚು**

ಎಲ್ಯೂಡ್ ಕಿಪ್ಚೋಗಿ ಚಿನ್ನದ ಸಂಭ್ರಮ –ಎಎಫ್‌ಪಿ ಚಿತ್ರ

ಬೆಳ್ಳಿ ಪದಕ ಗೆದ್ದ ನೆದರ್ಲೆಂಡ್ಸ್‌ನ ಅಬ್ದಿ ನಗೀಯೆ ಸಂಭ್ರಮ –ಎಎಫ್‌ಪಿ ಚಿತ್ರ

ಸಾಲುಗಟ್ಟಿ ನಿಂತ ಜಪಾನಿಯರು

ಕೋವಿಡ್ ಆತಂಕದ ನಡುವೆಯೇ ನಡೆದ ಒಲಿಂಪಿಕ್ಸ್‌ನ ಸ್ಪರ್ಧೆಗಳ ವೀಕ್ಷಣೆಗೆ ಪ್ರೇಕ್ಷಕರಿಗೆ ಅವಕಾಶ ಇರಲಿಲ್ಲ. ಆದರೆ ವೇಗನಡಿಗೆ, ರೋಡ್ ಸೈಕ್ಲಿಂಗ್ ಮುಂತಾದ ಸ್ಪರ್ಧೆಗಳನ್ನು ಜಪಾನ್ ಪ್ರಜೆಗಳು ರಸ್ತೆಯಲ್ಲಿ ನಿಂತು ವೀಕ್ಷಿಸಿದರು. ಮ್ಯಾರಥಾನ್ ಓಟಗಾರರನ್ನು, ಅವರ ಓಟದ ಸವಿಯುಣ್ಣಲು ಭಾನುವಾರ ಬೆಳಿಗ್ಗೆಯಿಂದಲೇ ಜನರು ಸೇರಿದ್ದರು. ಗುಂಪುಗೂಡಿ ಸ್ಪರ್ಧೆ ವೀಕ್ಷಿಸಬೇಡಿ ಎಂದು ಆಯೋಜಕರು ಮೊದಲೇ ಮನವಿ ಮಾಡಿದ್ದರೂ ಅದನ್ನು ಲೆಕ್ಕಿಸದೆ ಅವರು ಓಟಗಾರರನ್ನು ಹುರಿದುಂಬಿಸಿದರು.

ಅಥ್ಲೆಟಿಕ್ಸ್ ಕೋಚ್ ರಾಧಾಕೃಷ್ಣನ್ ನಾಯರ್ ಹೇಳಿಕೆ

ಬಳುಕುವ ದೇಹ; ಬಲಿಷ್ಠ ಕೈ

ನವದೆಹಲಿ (ಪಿಟಿಐ): ಅದು, 17 ವರ್ಷದೊಳಗಿನ ಅಥ್ಲೀಟ್‌ಗಳ ರಾಷ್ಟ್ರೀಯ ಶಿಬಿರಕ್ಕೆ ಆಯ್ಕೆ ನಡೆಯುತ್ತಿದ್ದ ಸಂದರ್ಭ. ಅಲ್ಲಿಗೆ ಬಂದಿದ್ದ ಆ ಬಾಲಕನ ಜಿಮ್ನಾಸ್ಟ್‌ನಂಥ ದೇಹ ಮತ್ತು ಬಲಿಷ್ಠ ಕೈಗಳನ್ನು ಕಂಡ ಕೋಚ್ ರಾಧಾಕೃಷ್ಣನ್ ನಾಯರ್ ಆತ ಶಿಬಿರಕ್ಕೆ ಆಯ್ಕೆಯಾಗಲು ಅರ್ಹ ಎಂದು ಶಿಫಾರಸು ಮಾಡಿದ್ದರು. ಆ ಬಾಲಕನೇ ಭಾರತಕ್ಕೆ ಒಲಿಂಪಿಕ್ಸ್ ಅಥ್ಲೆಟಿಕ್ಸ್‌ನಲ್ಲಿ ಮೊದಲ ಚಿನ್ನದ ಪದಕ ಗೆದ್ದುಕೊಟ್ಟಿರುವ ನೀರಜ್ ಚೋಪ್ರಾ.

ನೀರಜ್ ಅವರು ಶಿಬಿರಕ್ಕೆ ಆಯ್ಕೆಯಾಗಲು ಕಾರಣವಾದ ಅಂಶಗಳನ್ನು ರಾಧಾಕೃಷ್ಣನ್ ಭಾನುವಾರ ತಿಳಿಸಿದ್ದಾರೆ. ಬಯೊ ಮೆಕಾನಿಕ್ಸ್ ತಜ್ಞ ಡಾ.ಕ್ಲೌಸ್ ಬಟೋನೀಜ್ ಅವರ ಪ್ರಭಾವವೂ ನೀರಜ್ ಮೇಲೆ ಇದೆ ಎಂದರು.

'2015ರ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಐದನೇ ಸ್ಥಾನ ಗಳಿಸಿ ಗಮನ ಸೆಳೆದಿದ್ದರು. ಐದನೇ ಸ್ಥಾನ ಗಳಿಸಿದವರನ್ನು ರಾಷ್ಟ್ರೀಯ ಶಿಬಿರಕ್ಕೆ ಆಯ್ಕೆ ಮಾಡುವ ಪರಿಪಾಠ ಇಲ್ಲ. ಆದರೆ ನೀರಜ್ ಅವರಲ್ಲಿದ್ದ ಭವಿಷ್ಯದ ಅತ್ಯುತ್ತಮ ಅಥ್ಲೀಟ್‌ನನ್ನು ಕಂಡಿದ್ದೆ' ಎಂದು ವರ್ಲ್ಡ್ ಅಥ್ಲೆಟಿಕ್ಸ್‌ನ (ಅಂತರರಾಷ್ಟ್ರೀಯ ಅಥ್ಲೆಟಿಕ್ಸ್ ಫೆಡರೇಷನ್‌ನ ಈಗಿನ ಹೆಸರು) ಲೆವೆಲ್–5 ಕೋಚ್ ಆಗಿರುವ ರಾಧಾಕೃಷ್ಣನ್ ತಿಳಿಸಿದರು.

ಭಾರತ ಅಥ್ಲೆಟಿಕ್ ಫೆಡರೇಷನ್‌ನ ಯೋಜನಾ ಆಯೋಗದ ಮುಖ್ಯಸ್ಥ ಲಲಿತ್ ಭಾನೋಟ್ ಅವರೊಂದಿಗೆ ಮಾತನಾಡಿ ನೀರಜ್‌ಗೆ ಶಿಬಿರದಲ್ಲಿ ಅವಕಾಶ ಕೊಡಿಸಲಾಗಿತ್ತು ಎಂದು ರಾಧಾಕೃಷ್ಣನ್ ವಿವರಿಸಿದರು.

ಶಿಬಿರಕ್ಕೆ ಬರುವ ಮುನ್ನ 73.45 ಮೀಟರ್ಸ್ ದೂರ ಎಸೆದಿದ್ದ ನೀರಜ್ ಎರಡು ವರ್ಷಗಳಲ್ಲಿ 80 ಮೀಟರ್‌ಗಳ ಗಡಿ ದಾಟಿದ್ದರು. 2016ರ ವೇಳೆ ಅವರು ಎಸೆದ ದೂರ 86.48 ಮೀ ಆಗಿತ್ತು.

ಕೇರಳದಲ್ಲಿ ರಾಷ್ಟ್ರೀಯ ಅಥ್ಲೆಟಿಕ್ಸ್ ಕೂಟಕ್ಕೆ ಬರುವುದಕ್ಕೂ ಮೊದಲು ನೀರಜ್ ಅವರು ಪಂಚಕುಲದ ತವು ದೇವಿ ಲಾಲ್ ಕ್ರೀಡಾಂಗಣದಲ್ಲಿ ಅಭ್ಯಾಸ ಮಾಡುತ್ತಿದ್ದರು.

ನಂತರ, 2012ರಲ್ಲಿ ಪಾನಿಪತ್‌ನ ಶಿವಾಜಿ ಕ್ರೀಡಾಂಗಣದಲ್ಲಿ ಅವರ ಅಭ್ಯಾಸ ನಡೆಯಿತು.

ನೀರಜ್ ಚೋಪ್ರಾ ಅವರ ಮನೆಯಲ್ಲಿ ಕುಟುಂಬದ ಸದಸ್ಯರು ಸಿಹಿ ಹಂಚಿ ಸಂಭ್ರಮಿಸಿದರು –ಪಿಟಿಐ ಚಿತ್ರ

ಕುಟುಂಬದ ಸಹಕಾರ ಅಪಾರ

ನೀರಜ್ ಅವರ ಅರ್ಪಣಾ ಭಾವ, ಶಿಸ್ತಿನ ಅಭ್ಯಾಸ ಮತ್ತು ಕಠಿಣ ಪರಿಶ್ರಮಕ್ಕೆ ಕುಟುಂಬದವರ ಅಪಾರ ಸಹಕಾರ ಇತ್ತು. ಇದುವೇ ಅವರ ಯಶಸ್ಸಿಗೆ ಪ್ರಮುಖ ಕಾರಣ ಎಂದು ನೀರಜ್ ಅವರ ತಂದೆ, ಕೃಷಿಕರಾಗಿರುವ ಸತೀಶ್ ಚೋಪ್ರಾ ಹೇಳಿದರು.

'ನಮ್ಮದು ಅವಿಭಕ್ತ ಕುಟುಂಬ. ನನಗೆ ಮೂವರು ಸಹೋದರರು ಇದ್ದಾರೆ. ಅವರು ಸೇರಿದಂತೆ ಕುಟುಂಬದ ಎಲ್ಲರೂ ನೀರಜ್‌ಗೆ ಧಾರಾಳ ಪ್ರೀತಿ–ವಾತ್ಸಲ್ಯವನ್ನು ಧಾರೆ ಎರೆದಿದ್ದಾರೆ' ಎಂದು ಸತೀಶ್ ಹೇಳಿದರು.

'ನಮ್ಮ ಮಗ ಎಲ್ಲರ ಕನಸನ್ನು ನನಸು ಮಾಡಿದ್ದಾನೆ. ಭಾರತಕ್ಕೆ ಚಿನ್ನದ ಗೌರವ ತಂದುಕೊಟ್ಟಿರುವ ಆತನನ್ನು ಪಡೆದ ನಾವು ಧನ್ಯರು' ಎಂದು ತಾಯಿ ಸರೋಜ್ ಹೇಳಿದರು.

ಕ್ರೀಡಾಗ್ರಾಮದಲ್ಲಿ ಸಂಭ್ರಮದ ಅಲೆ

ಭಾರತದ ಕ್ರೀಡಾಪಟುಗಳು ಕ್ರೀಡಾಗ್ರಾಮದಲ್ಲಿ ಶನಿವಾರ ರಾತ್ರಿ ಸಂಭ್ರಮ ಆಚರಿಸಿದರು. ನೀರಜ್ ಚೋಪ್ರಾ ಅವರನ್ನು ಎಲ್ಲರೂ ಅಭಿನಂದಿಸಿದರು. ಕೇಕ್ ಕತ್ತರಿಸುವ ಸಮಾರಂಭದ ನಂತರ ಮಾತನಾಡಿದ ಹಾಕಿ ತಂಡದ ನಾಯಕ ಮನ್‌ಪ್ರೀತ್ ಸಿಂಗ್ 'ನೀರಜ್ ಅವರು ಭಾರತದ ಗೌರವ ಹೆಚ್ಚಿಸಿದ್ದಾರೆ. ಇಡೀ ದೇಶ ಅವರನ್ನು ಕೊಂಡಾಡುತ್ತಿದೆ' ಎಂದರು.

ಬೈಜುಸ್‌ನಿಂದ ₹ 2 ಕೋಟಿ ಬಹುಮಾನ

ನೀರಜ್ ಚೋಪ್ರಾ ಅವರಿಗೆ ₹ 2 ಕೋಟಿ ಮೊತ್ತ ನೀಡಲು ಆನ್‌ಲೈನ್ ಶಿಕ್ಷಣ ಸಂಸ್ಥೆಯಾದ ಬೈಜುಸ್ ನಿರ್ಧರಿಸಿದೆ. ವೈಯಕ್ತಿಕ ಪದಕಗಳನ್ನು ಗೆದ್ದ ಮೀರಾಬಾಯಿ ಚಾನು, ರವಿ ದಹಿಯಾ, ಲವ್ಲಿನಾ ಬೋರ್ಗೊಹೈನ್, ಪಿ.ವಿ.ಸಿಂಧು ಮತ್ತು ಬಜರಂಗ್ ಪೂನಿಯಾ ಅವರಿಗೆ ತಲಾ ₹ 1 ಕೋಟಿ ನೀಡಲಾಗುವುದು ಎಂದು ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬೈಜು ರವೀಂದ್ರನ್ ತಿಳಿಸಿದ್ದಾರೆ.

ಕಂಚಿನ ಪದಕ ಗಳಿಸಿದ ಇಟಲಿ; ಕಣ್ಣೀರು ಹಾಕಿದ ಜಿಮ್ನಾಸ್ಟ್‌ಗಳು

ರಷ್ಯಾ ಪಾರಮ್ಯ ಮುಕ್ತಾಯ ಹೊಸ ಅಧಿಪತಿ ಬಲ್ಗೇರಿಯ

ಟೋಕಿಯೊ: ರಷ್ಯಾದ ರಿಥಮಿಕ್ ಜಿಮ್ನಾಸ್ಟಿಕ್ಸ್‌ನ ಪಾರಮ್ಯಕ್ಕೆ ಪೆಟ್ಟು ನೀಡಿದ ಬಲ್ಗೇರಿಯ ತಂಡದವರು ಭಾನುವಾರ ಚಿನ್ನದ ಸಾಧನೆಯೊಂದಿಗೆ ಸಂಭ್ರಮಿಸಿದರು. ಸೋಲಿನ ಬೆನ್ನಲ್ಲೇ ನಿರ್ಣಾಯಕರ ಮೇಲೆ ಆರೋಪಗಳೂ ಕೇಳಿಬಂದಿವೆ. ರಷ್ಯಾ ಜಿಮ್ನಾಸ್ಟ್‌ಗಳು ಕಣ್ಣೀರು ಹಾಕಿ ಅಂಗಣ ತೊರೆದರು. ಅಂದಚಂದದ, ಕಣ್ಣು ಕುಕ್ಕುವ ಪೋಷಾಕು, ತಾಂತ್ರಿಕ ರಿಮಿಕ್ಸ್‌ಗಳು ಮತ್ತು ಗಾಳಿಯಲ್ಲಿ ತೇಲಿ ಸಾಮರ್ಥ್ಯ ಪ್ರದರ್ಶಿಸುವ ಸುಂದರಿಯರ ಮೋಹಕ ನೃತ್ಯಕ್ಕೆ ಹೆಸರುವಾಸಿಯಾಗಿರುವ ರಿಥಮಿಕ್ ಜಿಮ್ನಾಸ್ಟಿಕ್ಸ್‌ನಲ್ಲಿ 2000ನೇ ಇಸವಿ ಒಲಿಂಪಿಕ್ಸ್‌ನಿಂದ ರಷ್ಯಾ ಪಾರುಪತ್ಯ ಮೆರೆದಿತ್ತು. ಅಥೆನ್ಸ್‌ನಿಂದ ರಿಯೊ ವರೆಗೂ ಪ್ರತಿ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಆ ದೇಶದ ಪಾಲಾಗಿತ್ತು. ಆದರೆ ಈ ಬಾರಿ ಸತತ ಎರಡು ದಿನ ಎರಡು ವಿಭಾಗಗಳಲ್ಲಿ ಸೋತು ನಿರಾಸೆಗೆ ಒಳಗಾಯಿತು.

ಶನಿವಾರ ನಡೆದಿದ್ದ ವೈಯಕ್ತಿಕ ಸ್ಪರ್ಧೆಯಲ್ಲಿ ಇಸ್ರೇಲ್‌ನ ಲಿನಾಯ್ ಅಶ್ರಾಮ್ ಚಿನ್ನ ಗೆದ್ದರು ಚಿನ್ನದ ಮೇಲೆ ಕಣ್ಣಿಟ್ಟು ಟೋಕಿಯೊಗೆ ಬಂದಿದ್ದ ರಷ್ಯಾ ಸಹೋದರಿಯರಾದ ದಿನಾ ಅವೆರಿನಾ ಮತ್ತು ದಿನಾ ಅರಿನಾ ಕ್ರಮವಾಗಿ ಎರಡು ಮತ್ತು ನಾಲ್ಕನೇ ಸ್ಥಾನ ಗಳಿಸಿದ್ದರು. ಭಾನುವಾರ ನಡೆದ ತಂಡ ವಿಭಾಗದ ಸ್ಪರ್ಧೆಯಲ್ಲಿ ರಷ್ಯಾ ಎರಡನೇ ಸ್ಥಾನಕ್ಕೆ ಕುಸಿಯಿತು. ಕಂಚಿನ ಪದಕ ಇಟಲಿ ಪಾಲಾಯಿತು.

ತಂಡಗಳು ಗಳಿಸಿದ ಸ್ಕೋರು

ಬಲ್ಗೇರಿಯ	ರಷ್ಯಾ	ಇಟಲಿ
44.550	44.500	42.850

ಇಟಲಿ ತಂಡದ ಪ್ರದರ್ಶನ –ಎಎಫ್‌ಪಿ ಚಿತ್ರ

ವಾಲಿಬಾಲ್: ಅಮೆರಿಕಕ್ಕೆ ಖುಷಿ ತಂದ ಚಿನ್ನ

ಟೋಕಿಯೊ: ಒಲಿಂಪಿಕ್ಸ್‌ನ ಮಹಿಳಾ ವಿಭಾಗದ ವಾಲಿಬಾಲ್ ಸ್ಪರ್ಧೆಯಲ್ಲಿ ಚಿನ್ನ ಗೆಲ್ಲುವ ಅಮೆರಿಕದ ಕನಸು ಕೊನೆಗೂ ಕೈಗೂಡಿತು. ಭಾನುವಾರ ಇಲ್ಲಿ ನಡೆದ ಫೈನಲ್ ಹಣಾಹಣಿಯಲ್ಲಿ ಆ ತಂಡವು 3-0ಯಿಂದ ಬದ್ಧ ಎದುರಾಳಿ ಬ್ರೆಜಿಲ್ ತಂಡವನ್ನು ಪರಾಭವಗೊಳಿಸಿತು.

ಆ್ಯಂಡ್ರಿಯಾ ಡ್ರ್ಯೂಸ್ 15 ಪಾಯಿಂಟ್ಸ್ ಗಳಿಸುವ ಮೂಲಕ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. 2016ರ ರಿಯೊ ಕೂಟದಲ್ಲಿ ಕಂಚು ಗೆದ್ದಿದ್ದ ಅಮೆರಿಕ ಇಲ್ಲಿ 25–21, 25–20, 25–14ರಿಂದ ಗೆದ್ದಿತು.

ಅಮೆರಿಕ ತಂಡವು ಈ ಹಿಂದಿನ ಒಲಿಂಪಿಕ್ಸ್‌ಗಳಲ್ಲಿ ಮೂರು ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳನ್ನು ಗೆದ್ದಿತ್ತು. ಚಿನ್ನದ ಕನಸು ಮಾತ್ರ ಈಡೇರಿರಲಿಲ್ಲ.

ಈ ವಿಭಾಗದ ಕಂಚಿನ ಪದಕಕ್ಕಾಗಿ ನಡೆದ ಹಣಾಹಣಿಯಲ್ಲಿ ಸರ್ಬಿಯಾ ಗೆದ್ದಿತು. ಪದಕದ ಪಂದ್ಯದಲ್ಲಿ 3-0ಯಿಂದ ದಕ್ಷಿಣ ಕೊರಿಯಾ ತಂಡವನ್ನು ಮಣಿಸಿತು.

ಚಿನ್ನದ ಪದಕ ಗೆದ್ದ ಅಮೆರಿಕ ಆಟಗಾರ್ತಿಯರ ಸಂಭ್ರಮ– ಎಎಫ್‌ಪಿ ಚಿತ್ರ

ಲಾರೆನ್ಸ್ ಪ್ರೈಸ್ (ಬಲ ತುದಿ) ಹಾಗೂ ಲಿ ಕಿಯಾನ್ ನಡುವಣ ಸೆಣಸಾಟ– ಎಎಫ್‌ಪಿ ಚಿತ್ರ

ಬಹುಮುಖಿ ಪ್ರತಿಭೆಗೆ ಬಾಕ್ಸಿಂಗ್ ಪದಕ

ಟೋಕಿಯೊ (ಎಎಫ್‌ಪಿ): ಲಾರೆನ್ಸ್ ಪ್ರೈಸ್... ಟ್ಯಾಕ್ಸಿ ಚಾಲಕಿ, ವೇಲ್ಸ್ ತಂಡದ ಫುಟ್‌ಬಾಲ್ ಆಟಗಾರ್ತಿ, ಅಂತರರಾಷ್ಟ್ರೀಯ ಯೂತ್ ವಾಲಿಬಾಲ್ ಆಡಿದವರು. ಕಿಕ್‌ಬಾಕ್ಸಿಂಗ್‌ನಲ್ಲಿ ಮಾಜಿ ವಿಶ್ವ ಚಾಂಪಿಯನ್. ಈ ಪ್ರತಿಭೆಗೆ ಈಗ ಒಲಿಂಪಿಕ್ಸ್ ಬಾಕ್ಸಿಂಗ್ ಚಿನ್ನ ಒಲಿದಿದೆ.

ಭಾನುವಾರ ಇಲ್ಲಿ ನಡೆದ ಮಿಡ್ಲ್‌ವೇಟ್ ವಿಭಾಗದ ಫೈನಲ್ ಹಣಾಹಣಿಯಲ್ಲಿ ಅವರು ಚೀನಾದ ಕಿಯಾನ್ ಲೀ ಅವರನ್ನು 5-0ಯಿಂದ ಪರಾಭವಗೊಳಿಸಿದರು.

ಮಹಿಳೆಯರ ಲೈಟ್ ವೇಟ್ ವಿಭಾಗದ ಚಿನ್ನವು ಐರ್ಲೆಂಡ್‌ನ ಕೆಲ್ಲಿ ಆ್ಯನ್ ಹ್ಯಾರಿಂಗ್ಟನ್ ಅವರ ಪಾಲಾಯಿತು. ಅಂತಿಮ ಸುತ್ತಿನ ಬೌಟ್‌ನಲ್ಲಿ ಅವರು 5-0ಯಿಂದ ಬ್ರೆಜಿಲ್‌ನ ಬಿಟ್ರಿಜ್ ಫೆರಿಯೆರಾ ಅವರನ್ನು ಮಣಿಸಿದರು.

ಜಿದ್ದಾಜಿದ್ದಿನಿಂದ ಕೂಡಿದ್ದ ಪುರುಷರ ಲೈಟ್‌ವೇಟ್ ಫೈನಲ್ ಬೌಟ್‌ನಲ್ಲಿ ಕ್ಯೂಬಾದ ಆ್ಯಂಡಿ ಕ್ರುಜ್ 4-1ರಿಂದ ಅಮೆರಿಕದ ಕೆಯಿಶವಾನ್ ಡೇವಿಡ್ ಅವರನ್ನು ಮಣಿಸಿ ಚಿನ್ನದ ಪದಕಕ್ಕೆ ಮುತ್ತಿಟ್ಟರು. ಪುರುಷರ ಸೂಪರ್ ಹೆವಿವೇಟ್ ವಿಭಾಗದ ಫೈನಲ್‌ನಲ್ಲಿ ಉಜ್ಬೆಕಿಸ್ತಾನದ ಬಿ ಜಲೊಲೊವ್ ಅವರು ಅಮೆರಿಕದ ಟೊರೆಜ್ ಜೂನಿಯರ್ ಎದುರು ಗೆದ್ದು ಬೀಗಿದರು.

ಪುರುಷರ ಫೈನಲ್‌ನಲ್ಲಿ ಕೆಯಿಶವಾನ್ ಡೇವಿಡ್ (ಎಡ) ಹಾಗೂ ಆ್ಯಂಡಿ ಕ್ರುಜ್ ನಡುವಣ ಪೈಪೋಟಿ– ಎಎಫ್‌ಪಿ ಚಿತ್ರ

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಅಮೆರಿಕ	39	41	33	113
ಚೀನಾ	38	32	18	88
ಜಪಾನ್	27	14	17	58
ಬ್ರಿಟನ್	22	21	22	65
ಆರ್‌ಒಸಿ	20	28	23	71
ಆಸ್ಟ್ರೇಲಿಯಾ	17	7	22	46
ನೆದರ್ಲೆಂಡ್ಸ್	10	12	14	36
ಫ್ರಾನ್ಸ್	10	12	11	33
ಜರ್ಮನಿ	10	11	16	37
ಇಟಲಿ	10	10	20	40
ಭಾರತ (48ನೇ ಸ್ಥಾನ)	1	2	4	7

ಸಂಭ್ರಮ... ಪುರುಷರ ವಾಟರ್ ಪೋಲೊದಲ್ಲಿ ಚಿನ್ನ ಗೆದ್ದ ಸರ್ಬಿಯಾ ತಂಡದ ಆಟಗಾರ ಸ್ಟ್ರಾಹಿಂಜಾ ರಸೊವಿಚ್ ಅವರು ತಂಡದ ಕೋಚ್ ಜೊತೆ ಕೊಳದಲ್ಲೇ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಪ್ಯಾರಿಸ್‌ನ ಐಫೆಲ್ ಟವರ್ ಸುತ್ತ ವಿಮಾನಗಳು ಬಿಡಿಸಿದ ರಾಷ್ಟ್ರಧ್ವಜದ ಚಿತ್ತಾರ



ಸುಡುಮದ್ದುಗಳಿಂದಾಗಿ ಹೊರಹೊಮ್ಮಿದ ಬೆಳಕಿನ ಚಿತ್ತಾರದಲ್ಲಿ ಟೋಕಿಯೊ ಕ್ರೀಡಾಂಗಣ ಕಂಗೊಳಿಸಿತು –ಎಎಫ್‌ಪಿ ಚಿತ್ರಗಳು

ಕೋವಿಡ್ ಕಾಲದಲ್ಲಿಯೂ ಒಲಿಂಪಿಕ್ಸ್ ಆಯೋಜಿಸಿ ಯಶಸ್ವಿಯಾದ ಜಪಾನ್: ಆಧುನಿಕ ಒಲಿಂಪಿಕ್ಸ್ ಪಿತಾಮಹನ ನಾಡಿನಲ್ಲಿ ಮುಂದಿನ ಕೂಟ

ನಮಸ್ಕಾರ ಪ್ಯಾರಿಸ್; ಧನ್ಯವಾದ ಟೋಕಿಯೊ

ಮನುಕುಲದ ಮನೋಲ್ಲಾಸ ಮತ್ತು ಸಹೋದರತ್ವದ ಸಂಕೇತವಾಗಿರುವ ಒಲಿಂಪಿಕ್ಸ್ ಕೂಟದ ಧ್ವಜ ಸೂರ್ಯೋದಯ ನಗರಿ ಟೋಕಿಯೊದಿಂದ ದೀಪಗಳ ನಗರಿ ಪ್ಯಾರಿಸ್‌ಗೆ ಭಾನುವಾರ ಪ್ರಯಾಣ ಆರಂಭಿಸಿತು

ಟೋಕಿಯೊ: ಮನುಕುಲದ ಮನೋಲ್ಲಾಸ ಮತ್ತು ಸಹೋದರತ್ವದ ಸಂಕೇತವಾಗಿರುವ ಒಲಿಂಪಿಕ್ ಕೂಟದ ಧ್ವಜ ಸೂರ್ಯೋದಯ ನಗರಿ ಟೋಕಿಯೊದಿಂದ ದೀಪಗಳ ನಗರಿ ಪ್ಯಾರಿಸ್‌ಗೆ ಭಾನುವಾರ ಪ್ರಯಾಣ ಆರಂಭಿಸಿತು.

ಆಧುನಿಕ ಒಲಿಂಪಿಕ್ ಅಭಿಯಾನದ ಪಿತಾಮಹ ಪಿಯರ್ ಡಿ ಕೌಬರ್ತಿನ್ ನಾಡಿನಲ್ಲಿ 2024ರ ಕೂಟ ನಡೆಯಲಿದೆ.

ಕೋವಿಡ್ ಕಾಲಘಟ್ಟದ ಎಲ್ಲ ಸವಾಲುಗಳನ್ನು ಮೆಟ್ಟಿ ನಿಂತು ಒಲಿಂಪಿಕ್ ಕೂಟವನ್ನು ಯಶಸ್ವಿಯಾಗಿ ಆಯೋಜಿಸಿದ ಜಪಾನ್ ಅದ್ದೂರಿ ಕಾರ್ಯಕ್ರಮದಲ್ಲಿ ಒಲಿಂಪಿಕ್ ಧ್ವಜವನ್ನು ಅಂತರರಾಷ್ಟ್ರೀಯ ಒಲಿಂಪಿಕ್ ಕಮಿಟಿಯ ಅಧ್ಯಕ್ಷ ಥಾಮಸ್ ಬಾಕ್ ಅವರ ಮೂಲಕ ಫ್ರಾನ್ಸ್‌ಗೆ ಹಸ್ತಾಂತರಿಸಿತು.

ಅದರ ಬೆನ್ನಲ್ಲೇ ಕ್ರೀಡಾಂಗಣದಲ್ಲಿದ್ದ ಕ್ರೀಡಾಜ್ಯೋತಿಯ ಸಮೀಪದ ದೊಡ್ಡ ಡಿಜಿಟಲ್ ಪರದೆಯಲ್ಲಿ ಪ್ಯಾರಿಸ್‌ನ ಐಫೆಲ್ ಟವರ್–ಮುಂದೆ ಸಂಭ್ರಮಿಸುವ ಜನಸಮೂಹ, ಕುಣಿಯುತ್ತ, ಹಾಡುತ್ತ ಒಲಿಂಪಿಕ್ ಕೂಟವನ್ನು ಸ್ವಾಗತಿಸಿದ ಕಲಾವಿದರು ಕಂಡರು. ಐಫೆಲ್ ಟಾವರ್‌ನ ಸುತ್ತ ಶರವೇಗದಲ್ಲಿ ಚಲಿಸಿದ ಆಧುನಿಕ ತಂತ್ರಜ್ಞಾನದ ಜೆಟ್ ವಿಮಾನಗಳು ಗಾಳಿಯಲ್ಲಿ ಫ್ರಾನ್ಸ್ ದೇಶದ ಧ್ವಜದ ಚಿತ್ತಾರ ಬಿಡಿಸಿದವು. ಆ ದೇಶದ ಒಲಿಂಪಿಕ್ ಪದಕ ವಿಜೇತರು, ಕ್ರೀಡಾಪಟುಗಳು ಟವರ್ ಮುಂದೆ ಸೇರಿ ಸಂಭ್ರಮಿಸಿದರು.

ಪ್ಯಾರಿಸ್‌ನಲ್ಲಿ ಕ್ರೀಡಾಪ್ರೇಮಿಗಳ ಸಂಭ್ರಮ –ರಾಯಿಟರ್ಸ್ ಚಿತ್ರ

ಇತ್ತ ಟೋಕಿಯೊ ಕ್ರೀಡಾಂಗಣದಲ್ಲಿದ್ದ ಫ್ರೆಂಚ್ ತಂಡದ ಆಟಗಾರರೂ ಸಡಗರದಿಂದ ನರ್ತಿಸಿದರು. ಪಥಸಂಚಲನದಲ್ಲಿ ಭಾರತದ ಕುಸ್ತಿಪಟು, ಕಂಚಿನ ಪದಕ ವಿಜೇತ ಬಜರಂಗ್ ಪೂನಿಯಾ ರಾಷ್ಟ್ರ ಧ್ವಜ ಹಿಡಿದು ನಡೆದರು.

ಜಪಾನ್ ದೇಶದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಅನಾವರಣ ಮಾಡಿದ ಸಂಗೀತ, ನೃತ್ಯ ಕಾರ್ಯಕ್ರಮಗಳು ಗಮನ ಸೆಳೆದವು. ಕೊನೆಯಲ್ಲಿ ಕ್ರೀಡಾಜ್ಯೋತಿಯ ಗೋಳದ ಸ್ವಯಂಚಾಲಿತ ಬಾಗಿಲುಗಳು ಮುಚ್ಚಿದಾಗ. ದೊಡ್ಡ ಪರದೆಯ ಮೇಲೆ ಅರಿಗಾಟೊ (ಧನ್ಯವಾದಗಳು) ಪದ ಪ್ರಜ್ವಲಿಸಿತು.

17 ದಿನಗಳಿಂದ ಒಂದೇ ಸೂರಿನಡಿ ಕೂಡಿ ಆಡಿ ನಲಿದ 205 ದೇಶಗಳ ಕ್ರೀಡಾಪಟುಗಳ ಕಂಗಳದಲ್ಲಿ ಸಂಭ್ರಮ ಭಾವ. ಜೊತೆಗೆ ವಿದಾಯದ ಕಣ್ಣೀರು ಕೂಡ ತುಳುಕಿದ್ದವು. ದೇಶ, ಧರ್ಮ, ಬಣ್ಣ, ಭಾಷೆಗಳನ್ನು ಮೀರಿ ಸೇರಿ ಆಡಿದ ಇವರೆಲ್ಲ ಕ್ರೀಡೆಯನ್ನು ಗೆಲ್ಲಿಸಿದರು.

ಜುಲೈ 23ರಂದು ಟೋಕಿಯೊ ಒಲಿಂಪಿಕ್ –2020 ಆರಂಭವಾಗುವ ಮುನ್ನ ಜಪಾನ್ ಆಡಳಿತವು ಹಲವು ಪ್ರತಿಭಟನೆಗಳನ್ನು ಎದುರಿಸಬೇಕಾಯಿತು. ಹೋದ ವರ್ಷವೇ ನಡೆಯಬೇಕಿದ್ದ ಒಲಿಂಪಿಕ್ ಈ ವರ್ಷಕ್ಕೆ ಮುಂದೂಡಿದ್ದ ಜಪಾನ್ ನಿರ್ಧಾರ ಐತಿಹಾಸಿಕವಾಗಿತ್ತು. ಆದರೆ, ಈಗ ಮತ್ತೆ ಮುಂದೂಡಲು ಅದು ಸಿದ್ಧವಿರಲಿಲ್ಲ. 1948ರ ನಂತರ ಒಂದು ಬಾರಿಯೂ ರದ್ದಾಗದ ಒಲಿಂಪಿಕ್ ಕೂಟವನ್ನು ಈ ಬಾರಿಯೂ ನಡೆಸಿಯೇ ತೀರುವ ಛಲವನ್ನು ಐಒಎ ತೊಟ್ಟಿತ್ತು.

ಬಯೋಬಬಲ್ ನಿಯಮಾವಳಿಗಳನ್ನು ಅಚ್ಚುಕಟ್ಟಾಗಿ ಜಾರಿ ಮಾಡಲಾಯಿತು. ಅದಾಗ್ಯೂ 400ಕ್ಕೂ ಹೆಚ್ಚು ಕೋವಿಡ್ ಪ್ರಕರಣಗಳು ವರದಿಯಾದವು. ಆದರೂ ಕೂಟಕ್ಕೆ ಅಡೆತಡೆಯಾಗಲಿಲ್ಲ. ಸಾವಿರಾರು ಸ್ವಯಂಸೇವಕರು, ಆಧುನಿಕ ತಂತ್ರಜ್ಞಾನದ ಸೌಲಭ್ಯಗಳೊಂದಿಗೆ ಕೂಟವನ್ನು ಯಶಸ್ವಿಯಾಗಿ ನಡೆಸುವಲ್ಲಿ ಜಪಾನ್ ಮೇಲುಗೈ ಸಾಧಿಸಿತು. ಪದಕ ಪಟ್ಟಿಯಲ್ಲಿಯೂ ಆತಿಥೇಯ ಕ್ರೀಡಾಪಟುಗಳು ದಿಟ್ಟ ಪೈಪೋಟಿ ಒಡ್ಡಿದರು.

ಯುದ್ಧಪೀಡಿತ ಸಿರಿಯಾದ 12 ವರ್ಷದ ಪೋರಿ ಹೆಂಡ್ ಜಾಜಾ ಟೇಬಲ್ ಟೆನಿಸ್‌ನಲ್ಲಿ ಆಡಿ ಮನ ಗೆದ್ದರು.

ಯುದ್ಧನಿರಾಶ್ರಿತರ ತಂಡವೂ ತನ್ನ ಹೆಜ್ಜೆಗುರುತು ಮೂಡಿಸಿತು. ಸ್ಯಾನ್ ಮರೈನ್ ನಂತಹ ಪುಟ್ಟ ರಾಷ್ಟ್ರವೂ ಪದಕದ ಖಾತೆ ತೆರೆಯಿತು.

ಪ್ರಮುಖ ಅಂಶಗಳು

- ಇದೇ ಮೊದಲ ಬಾರಿ ಒಲಿಂಪಿಕ್ ಕೂಟವು ಪ್ರೇಕ್ಷಕರಿಲ್ಲದ ಕ್ರೀಡಾಂಗಣದಲ್ಲಿ ನಡೆಯಿತು.
- ವಿಜೇತರು ತಮ್ಮ ಪದಕಗಳನ್ನು ತಾವೇ ಕೊರಳಿಗೆ ಹಾಕಿಕೊಂಡರು
- 5000 ಪದಕಗಳನ್ನು ಪ್ರದಾನ ಮಾಡಲಾಯಿತು
- ಜಪಾನ್ ಪ್ರಜೆಗಳಿಂದ ದೇಣಿಗೆ ಪಡೆದ ಮೊಬೈಲ್ ಫೋನ್‌ಗಳ ಇ ತ್ಯಾಜ್ಯ ಬಳಸಿ ಪದಕಗಳನ್ನು ತಯಾರಿಸಲಾಗಿತ್ತು. ಪರಿಸರಸ್ನೇಹಿಯಾದ ಹಲವು ಕ್ರಮಗಳನ್ನು ಜಪಾನ್ ಕೈಗೊಂಡಿದ್ದು ವಿಶೇಷ
- ಅಮೆರಿಕ ತಂಡವು ಪದಕ ಪಟ್ಟಿಯಲ್ಲಿ ಮತ್ತೊಮ್ಮೆ ಅಗ್ರಸ್ಥಾನ ಗಳಿಸಿತು
- ಕೂಟದಲ್ಲಿ ಮೊದಲ ಚಿನ್ನದ ಪದಕವನ್ನು ಚೀನಾ ಪಡೆಯಿತು.
- ಆಧುನಿಕ ತಂತ್ರಜ್ಞಾನದ ಸಹಾಯದಿಂದ ಸಿದ್ಧಪಡಿಸಲಾದ ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ನೂತನ ದಾಖಲೆಗಳು ನಿರ್ಮಾಣವಾದವು.
- ಸುಮಾರು ಒಂದು ಲಕ್ಷ ಕೋಟಿ ರೂಪಾಯಿ ವೆಚ್ಚದಲ್ಲಿ ಕೂಟ ನಡೆಯಿತು
- ಪ್ಯಾರಿಸ್‌ನಲ್ಲಿ 2024ರ ಆಗಸ್ಟ್ 28 ರಿಂದ ಸೆಪ್ಟೆಂಬ 8ರವರೆಗೆ ಒಲಿಂಪಿಕ್ಸ್
- 1900 ಮತ್ತು 1924ರಲ್ಲಿ ಒಲಿಂಪಿಕ್ ಕೂಟ ಆಯೋಜಿಸಿದ್ದ ಪ್ಯಾರಿಸ್
- 1964ರಲ್ಲಿಯೂ ಟೋಕಿಯೊ ಒಲಿಂಪಿಕ್ ಕೂಟವನ್ನು ಯಶಸ್ವಿಯಾಗಿ ಆಯೋಜಿಸಿತ್ತು

ಭಾರತ ತಂಡದ ಬಜರಂಗ್ ಪೂನಿಯಾ, ದೀಪಕ್ ಪೂನಿಯಾ ಮತ್ತಿತರರು ಚಿತ್ರ ತೆಗೆಸಿಕೊಂಡು ಸಂಭ್ರಮಿಸಿದರು –ಪಿಟಿಐ ಚಿತ್ರ

ಐಒಸಿ ಅಧ್ಯಕ್ಷ ಥಾಮಸ್ ಬಾಕ್ ಅವರು ಪ್ಯಾರಿಸ್ ಮೇಯರ್ ಆ್ಯನಿ ಹಿಡಲ್ಗೊ ಅವರಿಗೆ ಒಲಿಂಪಿಕ್ ಧ್ವಜವನ್ನು ಹಸ್ತಾಂತರಿಸಿದರು –ರಾಯಿಟರ್ಸ್ ಚಿತ್ರ

ದಾಖಲೆ ಮಾಡಿದ ಕ್ರೀಡಾಪಟುಗಳು

ಟೋಕಿಯೊ ಒಲಿಂಪಿಕ್ಸ್‌ನ ಅಥ್ಲೆಟಿಕ್ಸ್ ಮತ್ತು ಈಜು ಸ್ಪರ್ಧೆಗಳಲ್ಲಿ ಕ್ರೀಡಾಪಟುಗಳು ಬೆಳಗಿದರು. ಹಲವು ವಿಶ್ವ ಮತ್ತು ಕೂಟ ದಾಖಲೆಗಳು ಮೂಡಿಬಂದವು. ಅಂತಹ ಕೆಲವು ಪ್ರಮುಖ ಸಾಧಕರ ವಿವರ ಇಲ್ಲಿದೆ.

ಎಮಾ ಮೆಕಿಯನ್
ಸ್ಪರ್ಧೆ: ಈಜು
ದೇಶ: ಆಸ್ಟ್ರೇಲಿಯಾ
ಚಿನ್ನ 4,ಕಂಚು 3
ಒಲಿಂಪಿಕ್ ದಾಖಲೆ
50 ಮೀ ಫ್ರೀಸ್ಟೈಲ್ (23.81 ಸೆ)
100 ಮೀ ಫ್ರೀಸ್ಟೈಲ್ (51.96 ಸೆ)

ಕ್ಯಾಲೆಬ್ ಡ್ರೆಸೆಲ್
ದೇಶ: ಅಮೆರಿಕ
ಚಿನ್ನ 5
ಒಲಿಂಪಿಕ್ ದಾಖಲೆ
50 ಮೀ ಫ್ರೀಸ್ಟೈಲ್ (21.07 ಸೆ)
100 ಮೀ ಫ್ರೀಸ್ಟೈಲ್ (47.02 ಸೆ)
100 ಮೀ ಬಟರ್‌ಫ್ಲೈ (49.45 ಸೆ)
ವಿಶ್ವ ದಾಖಲೆ 100 ಮೀ ಬಟರ್‌ಫ್ಲೈ (49.45 ಸೆ)

ಅರಿಯಾನೆ ಟಿಟ್ಮಸ್
ದೇಶ: ಆಸ್ಟ್ರೇಲಿಯಾ
ಚಿನ್ನ 2, ಬೆಳ್ಳಿ 1, ಕಂಚು 1
ಒಲಿಂಪಿಕ್ ದಾಖಲೆ
200 ಮೀ. ಫ್ರೀಸ್ಟೈಲ್ (1 ನಿ. 53.20 ಸೆ.)

ತತಿಯಾನ ಶೂಮೇಕರ್
ದೇಶ: ದಕ್ಷಿಣ ಆಫ್ರಿಕಾ
ಚಿನ್ನ 1, ಬೆಳ್ಳಿ 1
ಒಲಿಂಪಿಕ್ ದಾಖಲೆ
100 ಮೀ. ಬ್ರೆಸ್ಟ್‌ಸ್ಟ್ರೋಕ್ (1 ನಿ.4.82 ಸೆ)
ವಿಶ್ವ ದಾಖಲೆ
200 ಮೀ. ಬ್ರೆಸ್ಟ್‌ಸ್ಟ್ರೋಕ್ (2ನಿ.18.95 ಸೆ.)

ಕರ್ಸ್ಟೆನ್ ವಾರೊಮ್
ಸ್ಪರ್ಧೆ: ಅಥ್ಲೆಟಿಕ್ಸ್
ದೇಶ: ನಾರ್ವೆ
ಒಂದು ಚಿನ್ನ
ವಿಶ್ವ ದಾಖಲೆ
400 ಮೀ. ಹರ್ಡಲ್ಸ್ (45.94 ಸೆ.)

ಕ್ರೌಸರ್ ರ್‍ಯಾನ್
ದೇಶ: ಅಮೆರಿಕ
ಒಂದು ಚಿನ್ನ
ವಿಶ್ವ ದಾಖಲೆ
ಶಾಟ್‌ಪಟ್ (23.37 ಮೀ.)

ಸಿಡ್ನಿ ಮೆಕ್‌ಲಾಫ್ಲಿನ್
ದೇಶ: ಅಮೆರಿಕ
ಎರಡು ಚಿನ್ನ
ವಿಶ್ವ ದಾಖಲೆ
400 ಮೀ. ಹರ್ಡಲ್ಸ್ ಫೈನಲ್ (51.46 ಸೆ)

ಯೂಲಿಮಾರ್ ರೋಜಾಸ್
ದೇಶ: ವೆನೆಜುವೆಲಾ
ಒಂದು ಚಿನ್ನ
ವಿಶ್ವ ದಾಖಲೆ
ಟ್ರಿಪಲ್ ಜಂಪ್ (15.67 ಮಿ.)

ಜಾಂಗ್ ಚಾಂಗ್‌ಹಾಂಗ್
ಸ್ಪರ್ಧೆ: ಶೂಟಿಂಗ್
ದೇಶ: ಚೀನಾ
ಒಂದು ಚಿನ್ನ
ವಿಶ್ವ ದಾಖಲೆ
50 ಮೀ. ರೈಫಲ್ ತ್ರಿ ಪೊಸಿಷನ್ಸ್ (466 ಪಾಯಿಂಟ್ಸ್)

ಲಾಶಾ ತಾಲಖಿಜೆ
ಸ್ಪರ್ಧೆ: ವೇಟ್‌ಲಿಫ್ಟಿಂಗ್
ದೇಶ: ಜಾರ್ಜಿಯಾ
ಒಂದು ಚಿನ್ನ
ವಿಶ್ವ ದಾಖಲೆ
ಪುರುಷರ 109 ಕೆಜಿ ವಿಭಾಗ (ಒಟ್ಟು 488 ಕೆಜಿ ಭಾರ)

ಚಿನ್ನದ ಪದಕ ಜಯಿಸಿದ ಖುಷಿಯಲ್ಲಿ ಅಮೆರಿಕ ತಂಡದ ಆಟಗಾರ್ತಿಯರು –ಎಎಫ್‌ಪಿ ಚಿತ್ರ

ಬ್ಯಾಸ್ಕೆಟ್‌ಬಾಲ್: ಅಮೆರಿಕಕ್ಕೆ ಮತ್ತೊಂದು ಚಿನ್ನ

ಸಾಯ್‌ತಮಾ (ಪಿಟಿಐ): ಒಲಿಂಪಿಕ್ಸ್‌ನ ಮಹಿಳೆಯರ ಬ್ಯಾಸ್ಕೆಟ್‌ಬಾಲ್‌ನಲ್ಲಿ ಅಮೆರಿಕ ತಂಡ ಪ್ರಾಬಲ್ಯ ಮುಂದುವರಿಸಿತು.

ಟೋಕಿಯೊ ಕೂಟದ ಅಂತಿಮ ದಿನ ನಡೆದ ಫೈನಲ್‌ನಲ್ಲಿ ಈ ತಂಡ 90–75 ಪಾಯಿಂಟ್ಸ್‌ನಿಂದ ಜಪಾನ್ ವಿರುದ್ಧ ಜಯಿಸಿತು. ಆ ಮೂಲಕ ಒಲಿಂಪಿಕ್ಸ್‌ನಲ್ಲಿ ಸತತ ಏಳನೇ ಚಿನ್ನದ ಪದಕ ಗೆದ್ದ ಹಿರಿಮೆ ತನ್ನದಾಗಿಸಿಕೊಂಡಿತು. ಜೊತೆಗೆ ತಮ್ಮದೇ ದೇಶದ ಪುರುಷರ ತಂಡದ ಸಾಧನೆಯನ್ನು ಸರಿಗಟ್ಟಿತು.

ತಂಡವು ಒಲಿಂಪಿಕ್ಸ್‌ನಲ್ಲಿ ಸತತ 55 ಪಂದ್ಯ ಜಯಿಸಿದ ಶ್ರೇಯಕ್ಕೂ ಪಾತ್ರವಾಗಿದೆ.

1992ರ ಬಾರ್ಸಿಲೋನಾ ಒಲಿಂಪಿಕ್ಸ್‌ನಲ್ಲಿ ಈ ತಂಡದವರು ಕೊನೆಯದಾಗಿ ಪಂದ್ಯವೊಂದರಲ್ಲಿ ಸೋತಿದ್ದರು.

ಜಪಾನ್ ವಿರುದ್ಧ ಅಮೆರಿಕ ತಂಡ ಆರಂಭದಿಂದಲೇ ಆಕ್ರಮಣಕಾರಿ ಸಾಮರ್ಥ್ಯ ತೋರಿತು. ಈ ತಂಡದ ಬ್ರಿಟ್ನಿ ಗ್ರೀನರ್ 30 ಪಾಯಿಂಟ್ಸ್ ಕಲೆಹಾಕಿದರು. ಎಜಾ ವಿಲ್ಸನ್ ಮತ್ತು ಬ್ರಿಯೆನ್ನಾ ಸ್ಟೀವರ್ಟ್ ಕ್ರಮವಾಗಿ 19 ಹಾಗೂ 14 ಪಾಯಿಂಟ್ಸ್ ಗಳಿಸಿದರು.

ಹ್ಯಾಂಡ್‌ಬಾಲ್: ಫ್ರಾನ್ಸ್‌ಗೆ ಚಿನ್ನ

ಟೋಕಿಯೊ (ಎಎಫ್‌ಪಿ): ಫ್ರಾನ್ಸ್ ತಂಡವು ಮಹಿಳೆಯರ ಹ್ಯಾಂಡ್‌ಬಾಲ್ ಸ್ಪರ್ಧೆಯ ಚಿನ್ನದ ಪದಕವನ್ನು ಕೊರಳಿಗೇರಿಸಿಕೊಂಡಿತು.

ಫೈನಲ್‌ನಲ್ಲಿ ಫ್ರಾನ್ಸ್ 30–25ರಿಂದ ರಷ್ಯಾ ತಂಡವನ್ನು ಸೋಲಿಸಿತು.

ಉಭಯ ತಂಡಗಳು ಆರಂಭದಿಂದಲೇ ಜಿದ್ದಾಜಿದ್ದಿನ ಪೈಪೋಟಿ ನಡೆಸಿದವು. ಹೀಗಾಗಿ 16–16 ಸಮಬಲ ಕಂಡುಬಂದಿತ್ತು. ನಂತರ ಸತತ ಆರು ಗೋಲುಗಳನ್ನು ದಾಖಲಿಸಿದ ಫ್ರಾನ್ಸ್ ವನಿತೆಯರು ಮಿಂಚಿದರು. ಈ ತಂಡದ ಗೋಲ್‌ಕೀಪರ್ ಕ್ಲಿಯೋಪಾತ್ರ ಡಾರ್ಲಿಯುಕ್ಸ್ ಕೂಡ ಮೋಡಿ ಮಾಡಿದರು.



ನೀರಜ್ ಚೋಪ್ರಾ
ಕ್ರೀಡೆ : ಜಾವೆಲಿನ್ ಥ್ರೋ
ರಾಜ್ಯ : ಹರಿಯಾಣ
ಪದಕ : ಚಿನ್ನ

ಚಿನ್ನದ ಹೊಳಪು; ಬೆಳ್ಳಿ–ಕಂಚಿನ ಮಿಂಚು

ಮೀರಾಬಾಯಿ ಚಾನು ಗಳಿಸಿಕೊಟ್ಟ ಬೆಳ್ಳಿ ಪದಕದಿಂದ ಆರಂಭಗೊಂಡ ಭಾರತದ ಟೋಕಿಯೊ ಒಲಿಂಪಿಕ್ಸ್ ಪದಕದ ಅಭಿಯಾನಕ್ಕೆ ನೀರಜ್ ಚೋಪ್ರಾ ಗಳಿಸಿದ ಚಿನ್ನದ ಹೊಳಪಿನೊಂದಿಗೆ ತೆರೆ ಬಿತ್ತು. ಇದರ ನಡುವೆ ಆಗಾಗ ಬೆಳ್ಳಿ ಮತ್ತು ಕಂಚಿನ ಪದಕಗಳ ಮಿಂಚು ದೇಶದ ಕ್ರೀಡಾ ನಭದಲ್ಲಿ ಹೊಸಬೆಳಕಿನ ಕಿರಣಗಳನ್ನು ಮೂಡಿಸಿತು. ನೀರಜ್ ಚೋಪ್ರಾ ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಚಿನ್ನ ಗೆದ್ದ ದೇಶದ ಮೊದಲ ಅಥ್ಲೀಟ್ ಎನಿಸಿಕೊಂಡರೆ, ಮೀರಾಬಾಯಿ ಚಾನು ವೇಟ್‌ಲಿಫ್ಟಿಂಗ್‌ನಲ್ಲಿ ಬೆಳ್ಳಿ ಗೆದ್ದ ಮೊದಲ ಮಹಿಳೆಯಾದರು. ವೈಯಕ್ತಿಕ ಎರಡು ಪದಕಗಳನ್ನು ಗಳಿಸಿದ ಮೊದಲ ಕ್ರೀಡಾಪಟು ಎಂಬ ಪಟ್ಟ ಸಿಂಧು ಮುಡಿಯೇರಿತು. ಒಲಿಂಪಿಕ್ಸ್ ಇತಿಹಾಸದಲ್ಲೇ ಗರಿಷ್ಠ ಪದಕಗಳನ್ನು ಗೆದ್ದ ಸಾಧನೆ ಭಾರತದಿಂದ ಈ ಬಾರಿ ಆಗಿದೆ. ಇದು, ಮುಂದಿನ ಹಾದಿಯಲ್ಲಿ ನಿರೀಕ್ಷೆ ಮೂಡಿಸಿದೆ; ಸವಾಲನ್ನೂ ಮುಂದಿಟ್ಟಿದೆ.



ಮನ್‌ಪ್ರೀತ್ ಸಿಂಗ್, ಪುರುಷರ ಹಾಕಿ ತಂಡದ ನಾಯಕ (ಕಂಚು)

ಹೋರಾಟ ರೋಚಕ; ಕೈಜಾರಿದ ಪದಕ

ಹಾಕಿ: ಜಿನುಗಿದ ಕಣ್ಣೀರು...

ಮಹಿಳಾ ಹಾಕಿ ತಂಡ ಆರಂಭದ ಮೂರು ಪಂದ್ಯಗಳಲ್ಲಿ ಸತತ ಸೋಲು ಕಂಡರೂ ನಂತರ ಪುಟಿದೆದ್ದು ಸೆಮಿಫೈನಲ್ ಪ್ರವೇಶಿಸಿತ್ತು. ಏಕೈಕ ಗೋಲಿನ ಬಲದಿಂದ ಬಲಿಷ್ಠ ಆಸ್ಟ್ರೇಲಿಯಾ ಮೇಲೆ ಬಿಗಿ ಹಿಡಿತ ಸಾಧಿಸಿದ ರಾಣಿ ರಾಂಪಾಲ್ ಬಳಗ ದೇಶದ ಮಹಿಳಾ ಹಾಕಿಯನ್ನು ಒಲಿಂಪಿಕ್ಸ್‌ನಲ್ಲಿ ಮೊದಲ ಬಾರಿ ಅಂತಿಮ ನಾಲ್ಕರ ಘಟ್ಟ ತಲುಪುವಂತೆ ಮಾಡಿತ್ತು. ಸೆಮಿಫೈನಲ್‌ನಲ್ಲಿ ಅರ್ಜೆಂಟೀನಾಗೆ ಮಣಿದರೂ ಕಂಚಿನ ಪದಕ ಗೆದ್ದು ಇತಿಹಾಸ ನಿರ್ಮಿಸುವ ಆಸೆ ಜೀವಂತವಾಗಿತ್ತು. ಆದರೆ ಮೂರು ಮತ್ತು ನಾಲ್ಕನೇ ಸ್ಥಾನಗಳನ್ನು ನಿರ್ಣಯಿಸುವ ಪಂದ್ಯದಲ್ಲಿ 3–4ರಲ್ಲಿ ಸೋತು ನಿರಾಸೆ ಅನುಭವಿಸಿತ್ತು. ಆಟಗಾರ್ತಿಯರು ಕ್ರೀಡಾಂಗಣದಲ್ಲಿ ಕಣ್ಣೀರ ಧಾರೆಯಲ್ಲಿ ಮುಳುಗಿದರು.

ರವಿ ದಹಿಯಾ
ಕ್ರೀಡೆ : ಕುಸ್ತಿ (57 ಕೆಜಿ)
ರಾಜ್ಯ : ಹರಿಯಾಣ
ಪದಕ : ಬೆಳ್ಳಿ

ಮೀರಾಬಾಯಿ ಚಾನು
ಕ್ರೀಡೆ : ವೇಟ್‌ಲಿಫ್ಟಿಂಗ್ (49 ಕೆಜಿ)
ರಾಜ್ಯ : ಮಣಿಪುರ
ಪದಕ : ಬೆಳ್ಳಿ

ಪಿ.ವಿ.ಸಿಂಧು
ಕ್ರೀಡೆ : ಬ್ಯಾಡ್ಮಿಂಟನ್
ರಾಜ್ಯ : ತೆಲಂಗಾಣ
ಪದಕ : ಕಂಚು

ಲವ್ಲಿನಾ ಬೋರ್ಗೊಹೈನ್
ಕ್ರೀಡೆ : ಬಾಕ್ಸಿಂಗ್ (69 ಕೆಜಿ)
ರಾಜ್ಯ : ಅಸ್ಸಾಂ
ಪದಕ : ಕಂಚು

ಬಜರಂಗ್ ಪೂನಿಯಾ
ಕ್ರೀಡೆ : ಕುಸ್ತಿ (65 ಕೆಜಿ)
ರಾಜ್ಯ : ಹರಿಯಾಣ
ಪದಕ : ಕಂಚು

ಜೇಸನ್ ಕೆನ್ನಿ ಅವರು ಪತ್ನಿ ಲೌರಾ ಜೊತೆ ಸಂಭ್ರಮಿಸಿದರು

ಸೈಕ್ಲಿಂಗ್: ಜೇಸನ್ ಕೆನ್ನಿ ‘ಕಿಂಗ್’

ಟೋಕಿಯೊ: ಪುರುಷರ ಸೈಕ್ಲಿಂಗ್‌ನ ಕೀರಿನ್ ವಿಭಾಗದಲ್ಲಿ ಬ್ರಿಟನ್‌ನ ಜೇಸನ್ ಕೆನ್ನಿ ಮೋಡಿ ಮಾಡಿದರು.

ಕೊನೆಯ ನಾಲ್ಕು ಲ್ಯಾಪ್‌ಗಳಲ್ಲಿ ವೇಗ ಹೆಚ್ಚಿಸಿಕೊಂಡು ಗುರಿಯತ್ತ ಮುನ್ನುಗ್ಗಿದ ಅವರು ಚಿನ್ನದ ಪದಕ ಕೊರಳಿಗೇರಿಸಿಕೊಂಡರು. ಇದರೊಂದಿಗೆ ಒಲಿಂಪಿಕ್ಸ್ ಸೈಕ್ಲಿಂಗ್‌ನಲ್ಲಿ ಏಳು ಚಿನ್ನದ ಪದಕ ಜಯಿಸಿದ ಬ್ರಿಟನ್‌ನ ಮೊದಲ ಕ್ರೀಡಾಪಟು ಎಂಬ ಹಿರಿಮೆಗೂ ಭಾಜನರಾದರು.

ಮಲೇಷ್ಯಾದ ಮಹಮ್ಮದ್ ಅಜಿಜುಲ್ ಹಸ್ನಿ ಮತ್ತು ನೆದರ್ಲೆಂಡ್ಸ್‌ನ ಹ್ಯಾರಿ ಲ್ಯಾವರೆಸೆನ್ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಪಡೆದರು.

ರವಿಕುಮಾರ್ ಮನೆಗೆ ಖಟ್ಟರ್ ಭೇಟಿ

ಚಂಡೀಗಡ (ಪಿಟಿಐ) ಟೋಕಿಯೊ ಒಲಿಂಪಿಕ್ಸ್ ಕುಸ್ತಿಯಲ್ಲಿ ಬೆಳ್ಳಿಪದಕ ಜಯಿಸಿದ ರವಿಕುಮಾರ್ ದಹಿಯಾ ಅವರ ಸೋನಿಪತ್ ಸಮೀಪದ ನಹ್ರಿಯಲ್ಲಿರುವ ಮನೆಗೆ ಹರಿಯಾಣ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಭೇಟಿ ನೀಡಿದರು.

ರವಿಕುಮಾರ್ ದಹಿಯಾ

ರವಿಯವರ ಅಪ್ಪ, ಅಮ್ಮನನ್ನು ಭೇಟಿಯಾದರು. ರವಿಯ ಕುಸ್ತಿಯ ಪ್ರತಿಭೆಯನ್ನು ಶ್ಲಾಘಿಸಿದರು.

ಇದೇ ಸಂದರ್ಭದಲ್ಲಿ ಹಾಜರಿದ್ದ ನಹ್ರಿ ಗ್ರಾಮ ಪಂಚಾಯಿತಿಯವರು ಊರಿನಲ್ಲಿರುವ ಕೆಲವು ಮೂಲಭೂತ ಸಮಸ್ಯೆಗಳನ್ನು ಪರಿಹರಿಸುವಂತೆ ಖಟ್ಟರ್ ಅವರಿಗೆ ಮನವಿಪತ್ರ ಸಲ್ಲಿಸಿದರು. ಅದನ್ನು ಸ್ವೀಕರಿಸಿದ ಪರಿಹಾರ ಕಾರ್ಯಗಳಿಗೆ ಕೂಡಲೇ ಚಾಲನೆ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಟೆನಿಸ್: ರುಹಾನ್, ಅಹಿದಾಗೆ ಅಗ್ರ ಶ್ರೇಯಾಂಕ

ಬೆಂಗಳೂರು: ಕೋವಿಡ್‌ನಿಂದಾಗಿ ಸ್ಥಗಿತಗೊಂಡಿದ್ದ ಟೆನಿಸ್ ಟೂರ್ನಿಗಳು ಪುನರಾರಂಭವಾಗಲಿವೆ. ಎಐಟಿಎ 12 ವರ್ಷದೊಳಗಿನವರ ಟೂರ್ನಿಯು ಇಲ್ಲಿನ ಕರ್ನಾಟಕ ರಾಜ್ಯ ಲಾನ್ ಟೆನಿಸ್ ಅಂಗಣದಲ್ಲಿ ಸೋಮವಾರ ಆರಂಭವಾಗಲಿದೆ. ಈ ತಿಂಗಳಲ್ಲಿ ಇನ್ನೂ ಮೂರು ಟೂರ್ನಿಗಳು ನಿಗದಿಯಾಗಿವೆ.

ತತ್ವಂ ಜೂನಿಯರ್ ಟೂರ್‌ನ ಭಾಗವಾಗಿ ನಡೆಯಲಿರುವ ಈ ಟೂರ್ನಿಯಲ್ಲಿ ರುಹಾನ್ ಕೊಮಂದೂರ್ ಮತ್ತು ಅಹಿದಾ ಸಿಂಗ್ ಅವರಿಗೆ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಅಗ್ರ ಶ್ರೇಯಾಂಕ ನೀಡಲಾಗಿದೆ. ಬಾಲಕರ ವಿಭಾಗದಲ್ಲಿ ಯಶಸ್ ರಾಜ್ ಎಂ, ಅನಿರುದ್ಧ ಪಳನಿಸ್ವಾಮಿ ಅವರು ಎರಡು ಮತ್ತು ಮೂರನೇ ಶ್ರೇಯಾಂಕ ಪಡೆದಿದ್ದಾರೆ. ಬಾಲಕಿಯರ ವಿಭಾಗದಲ್ಲಿ ತೀರ್ಥಾ ಎ.ಎನ್, ರಿತಿಶಾ ಚೌಧರಿ ಅವರಿಗೆ ಎರಡು ಮತ್ತು ಮೂರನೇ ಶ್ರೇಯಾಂಕ ನೀಡಲಾಗಿದೆ.

ಆಟಗಾರರು, ಕೋಚ್‌ಗಳು, ಪೋಷಕರು ಹಾಗೂ ಅಧಿಕಾರಿಗಳ ಆರೋಗ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು, ಕೋವಿಡ್ ತಡೆ ಮಾರ್ಗಸೂಚಿಗಳ ಅನ್ವಯ ಟೂರ್ನಿಗಳನ್ನು ನಡೆಸಲಾಗುತ್ತದೆ. ಗರಿಷ್ಠ 32 ಆಟಗಾರರಿಗೆ ಪಾಲ್ಗೊಳ್ಳಲು ಅವಕಾಶ ನೀಡಲಾಗಿದೆ. ಸೆಪ್ಟೆಂಬರ್‌ನಲ್ಲಿ ನಿಗದಿಯಾಗಿರುವ ಟೂರ್ನಿಗೆ ವಿವಿಧ ರಾಜ್ಯಗಳಿಂದ ಆಟಗಾರರು ಭಾಗವಹಿಸಲಿದ್ದಾರೆ.

ಫುಟ್‌ಬಾಲ್: ಕ್ವಾರ್ಟರ್‌ಗೆ ಪ್ಯಾಂಥರ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಘಟಿತ ಆಟವಾಡಿದ ಬೆಂಗಳೂರು ಪ್ಯಾಂಥರ್ಸ್, ಬೆಂಗಳೂರು ಸಿಟಿ ಎಫ್‌ಸಿ ಮತ್ತು ಹಾಕ್ಸ್ ಯುನೈಟೆಡ್ ತಂಡಗಳು ಕೆಎಸ್‌ಎಫ್‌ಎ–ಬಿಡಿಎಫ್‌ಎ 'ಸಿ' ಡಿವಿಷನ್ ಫುಟ್‌ಬಾಲ್ ಟೂರ್ನಿಯ ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟವು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ 16ರ ಘಟ್ಟದ ಪಂದ್ಯದಲ್ಲಿ ಬೆಂಗಳೂರು ಪ್ಯಾಂಥರ್ಸ್ 1–0ಯಿಂದ ಬೆಂಗಳೂರು ಏರೋಸ್ ತಂಡವನ್ನು ಸೋಲಿಸಿತು. ವಿಜೇತ ತಂಡದ ಪರ ಪುನೀತ್ 28ನೇ ನಿಮಿಷದಲ್ಲಿ ಗೋಲು ಹೊಡೆದರು.

ಪ್ರೀಕ್ವಾರ್ಟರ್‌ಫೈನಲ್‌ನ ಇನ್ನೊಂದು ಹಣಾಹಣಿಯಲ್ಲಿ ಬೆಂಗಳೂರು ಸಿಟಿ ಎಫ್‌ಸಿಯು 1–0ಯಿಂದ ಬೆಂಗಳೂರು ಅಥ್ಲೆಟಿಕ್ಸ್ ಎಫ್‌ಸಿಯನ್ನು ಪರಾಭವಗೊಳಿಸಿತು. ಪಂದ್ಯದಲ್ಲಿ ಬೆಂಗಳೂರು ಸಿಟಿಯ ಅಲೆನ್ ಜಾಂಟಿ ಎಕ್ಕಾ ಗೋಲು ದಾಖಲಿಸಿದರು.

ಮತ್ತೊಂದು ಪಂದ್ಯದಲ್ಲಿ ಯಲಹಂಕ ಕ್ಯಾಂಪ್ ಬಾಯ್ಸ್ ತಂಡವನ್ನು ಹಾಕ್ಸ್ ಯುನೈಟೆಡ್ ಪೆನಾಲ್ಟಿ ಶೂಟೌಟ್‌ನಲ್ಲಿ ಮಣಿಸಿತು. ಪಂದ್ಯದ ನಿಗದಿತ ಅವಧಿಯಲ್ಲಿ ಉಭಯ ತಂಡಗಳು ತಲಾ ಎರಡು ಗೋಲು ದಾಖಲಿಸಿದ್ದವು. ಶೂಟೌಟ್‌ನಲ್ಲಿ ಹಾಕ್ಸ್ ಏಳು ಬಾರಿ ಯಶಸ್ಸು ಕಂಡರೆ, ಯಲಹಂಕ ಕ್ಯಾಂಪ್ ಬಾಯ್ಸ್ ಆರು ಗೋಲುಗಳನ್ನು ಮಾತ್ರ ಗಳಿಸಿತು.

ಸೋಮವಾರ ನಡೆಯುವ ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಲೆಜೆಂಡ್ಸ್ ಡಿ ಸ್ಪೋರ್ಟಿಂಗ್ ಎಫ್‌ಸಿ– ಅಗ್ನಿಪುತ್ರ ಎಫ್‌ಸಿ ಸೆಣಸಲಿವೆ. ಇನ್ನೊಂದು ಪಂದ್ಯದಲ್ಲಿ ರೊನಾಲ್ಡೊ ಎಫ್‌ಸಿ– ಅಲ್ ಫತೇಹ್ ಎಫ್‌ಸಿ ತಂಡಗಳು ಮುಖಾಮುಖಿಯಾಗಲಿವೆ.

ಹಾಕಿ ತಂಡಗಳ ಶ್ರೇಷ್ಠ ಸಾಧನೆ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಗಮನಾರ್ಹ ಸಾಧನೆ ಮಾಡಿರುವ ಭಾರತದ ಪುರುಷ ಹಾಗೂ ಮಹಿಳಾ ಹಾಕಿ ತಂಡಗಳು, ವಿಶ್ವ ರ‍್ಯಾಂಕಿಂಗ್‌ನಲ್ಲಿ ಕ್ರಮವಾಗಿ ಮೂರನೇ ಹಾಗೂ ಎಂಟನೇ ಸ್ಥಾನಗಳಿಗೆ ಬಡ್ತಿ ಪಡೆದಿವೆ. ಇದು ಹಾಕಿ ವಿಶ್ವ ರ‍್ಯಾಂಕಿಂಗ್‌ನಲ್ಲಿ ಭಾರತದ ಪುರುಷ ಹಾಗೂ ಮಹಿಳಾ ತಂಡಗಳ ಇದುವರೆಗಿನ ಶ್ರೇಷ್ಠ ಸಾಧನೆಯಾಗಿದೆ.

ಜರ್ಮನಿ ತಂಡವನ್ನು 5-4 ಗೋಲುಗಳಿಂದ ಮಣಿಸಿದ ಪುರುಷರ ತಂಡವು ಕಂಚು ಗೆಲ್ಲುವ ಮೂಲಕ ಒಲಿಂಪಿಕ್ಸ್‌ನಲ್ಲಿ 41 ವರ್ಷಗಳ ಬಳಿಕ ಪದಕದ ಸಾಧನೆ ಮಾಡಿತ್ತು.

ಮನ್‌ಪ್ರೀತ್

'ಪ್ರತಿಯೊಬ್ಬ ಆಟಗಾರನ ಕಠಿಣ ಪರಿಶ್ರಮಕ್ಕೆ ದೊರಕಿದ ಫಲ ಇದು. ಭಾರತೀಯ ಹಾಕಿಯು ಮತ್ತಷ್ಟು ಉತ್ತುಂಗಕ್ಕೇರಲಿದೆ' ಎಂದು ಪುರುಷರ ತಂಡದ ನಾಯಕ ಮನ್‌ಪ್ರೀತ್ ಸಿಂಗ್ ಹೇಳಿದ್ದಾರೆ.

ಫುಟ್‌ಬಾಲ್ ಪಟು ಕೃಷ್ಣೋಜಿ ನಿಧನ

ಬೆಂಗಳೂರು: ಭಾರತ ತಂಡವನ್ನು ಪ್ರತಿನಿಧಿಸಿದ್ದ ಕರ್ನಾಟಕದ ಫುಟ್‌ಬಾಲ್ ಆಟಗಾರ ಎಸ್.ಕೃಷ್ಣೋಜಿ ರಾವ್ (81) ಅವರು ಭಾನುವಾರ ನಿಧನರಾದರು.

ಕೃಷ್ಣೋಜಿ ಅವರು 1967 ಮತ್ತು 1968ರಲ್ಲಿ ಸಂತೋಷ್ ಟ್ರೋಫಿ ಗೆದ್ದ ಆಗಿನ ಮೈಸೂರು ರಾಜ್ಯ ತಂಡದಲ್ಲಿ ಆಡಿದ್ದರು. ತಂಡದ ನಾಯಕತ್ವವನ್ನು ನಿಭಾಯಿಸಿದ್ದರು.

for a test drive, call on 1800 315 4444. select variants available in CSD. special offers for defence personnel, government, PSU and corporate employees. for bulk enquiries, contact corpsales@renault.com for further details, visit renault.co.in

terms and conditions apply. #prices mentioned above are for base variant for ex-showroom Bengaluru for each model and are exclusive of local taxes. ^the benefits up to ₹ 40 000/- for Kwid include cash benefit of up to ₹ 10 000/-, exchange benefit of up to ₹ 20 000/- & loyalty benefit of up to ₹ 10 000/- (which includes exchange benefit on Renault model or cash discount on buying additional Renault model) on select versions. ^^^ loyalty benefit up to ₹ 10 000/- on Kiger includes cash benefit on buying additional / exchange with Renault models. ^^the benefits up to ₹ 50 000/- for Triber include cash benefit of up to ₹ 15 000/-, exchange benefit of up to ₹ 25 000/- & loyalty benefit of up to ₹ 10 000/-(which includes exchange benefit on Renault model or cash discount on buying additional Renault model) on select versions. corporate/PSU/defence personnel/government employee/professionals benefits applicable for each model are basis eligibility of the customer and based on submission of required proof by the customer. * buy now, pay in 2022 corresponds to EMI holiday of 6 months from the date of disbursal of Loan, applicable till 31st August 2021. ##freedom offer worth ₹ 5 000/- by Renault dealers on Kwid and Triber only. freedom offer includes Renault Genuine Accessories worth ₹ 5 000/- or 1 gm gold coin subject to availability at dealership. freedom offer applicable on all bookings made between 6th August – 15th August 2021 and retail before 28th August 2021. finance at the sole discretion of Renault finance. offers may vary across variants and cities. model/accessories shown may not be a part of the standard fitment. the above mentioned offers & benefits are valid till 31st August 2021 and are through Renault dealership. for detailed offers, visit www.renault.co.in/offers. Renault India Pvt. Ltd. reserves the right to change or modify the mentioned schemes and conditions without prior notice. Renault India Pvt. Ltd. shall not be liable for any loss or damage arising from your failure to comply or understand the offer details. in the event of any dispute, all matters shall be governed by all applicable laws of India and court at Gurugram shall have the exclusive jurisdiction. for detailed terms and conditions, please visit www.renault.co.in

SHOWROOMS: KARNATAKA: BENGALURU: RENAULT Mysore Road Mob: +91 8527240549, RENAULT Palace Orchards Mob: +91 8527240717, RENAULT Silk Board Mob: +91 8527240654, RENAULT Whitefield Mob: +91 8527240685, RENAULT JP Nagar Mob: +91 8527240626, RENAULT Kalyan Nagar Mob: +91 8527236137, RENAULT Sarjapura Mob: +91 8448481374, RENAULT Yelahanka Mob: +91 8527234592, RENAULT Yeswanthpur Mob: +91 9311832962. **TUMKUR:** RENAULT Tumkur Mob: +91 8527234251.

L&K | SAATCHI & SAATCHI

72198 21111 BAJAJ FINANCE LTD - AF

*ನಿಯಮ ಹಾಗೂ ಷರತ್ತುಗಳು ಅನ್ವಯಿಸುತ್ತವೆ. ₹3 000/-ದ ಗರಿಷ್ಠ ಉಳಿತಾಯದ ಮೌಲ್ಯ ಪಲ್ಸರ್ RS200 ಮೇಲೆ ಅನ್ವಯಿಸುತ್ತದೆ. #ಡೌನ್ ಪೇಮೆಂಟ್ ಪಲ್ಸರ್ 150 ಸಿಂಗಲ್ ಡಿಸ್ಕ್ ವೇರಿಯಂಟ್‌ಗಾಗಿ. ಡಿಸಿಸಿ ಚಾರ್ಜ್ ಮತ್ತು ಪ್ರೊಸೆಸಿಂಗ್ ಫೀ ಎಕ್ಸ್‌ಟ್ರಾ ಅನ್ವಯ. ಫೈನಾನ್ಸ್‌ನೀಡುವವರ ಏಕೈಕ ನಿಷ್ಕರ್ಷೆಯ ಮೇರೆಗೆ ಫೈನಾನ್ಸ್ ದೊರಕುತ್ತದೆ. ಯಾವುದೇ ಅಥವಾ ಎಲ್ಲಾ ಆಫರ್‌ಗಳನ್ನು ಮುಂದಾಗಿ ಸೂಚನೆ ನೀಡದೇ ಹಿಂತೆಗೆಯುವ ಅಧಿಕಾರವನ್ನು ಬಜಾಜ್ ಆಟೊ ಕಾದಿರಿಸಿಕೊಂಡಿದೆ/ಸ್ಟಂಟ್‌ಗಳನ್ನು ವೃತ್ತಿಪರರ ಮೇಲ್ವಿಚಾರಣೆಯಲ್ಲಿ ತಜ್ಞರು ನಿಯಂತ್ರಿತ ಹಾಗೂ ಕಟ್ಟುಪಾಡಿನ ಪರಿಸರದಲ್ಲಿ ಜನ ಸಾಮಾನ್ಯರಿಂದ ಅಥವಾ ಸಾರ್ವಜನಿಕ ರಸ್ತೆಗಳಿಂದ ದೂರದಲ್ಲಿ ಮಾಡಿರುತ್ತಾರೆ. ದಯವಿಟ್ಟು ಈ ಸ್ಟಂಟ್‌ಗಳನ್ನು ಅನುಕರಿಸಬೇಡಿ ಮತ್ತು ಎಲ್ಲಾ ಸಮಯದಲ್ಲೂ ಟ್ರಾಫಿಕ್ ಮತ್ತು ಸುರಕ್ಷಾ ನಿಯಮಗಳನ್ನು ಪಾಲಿಸಿರಿ.

Authorised Dealers for Bajaj Auto Ltd.: Bangalore • Bommanahalli AMBA BAJAJ: 9535411100 • **HSR Layout** AMBA BAJAJ: 8884333732 • **Sarjapur** AMBA BAJAJ: 7406688884• **BTM Layout** AMBA BAJAJ: 7441690413• **Madiwala** AMBA BAJAJ: 9945000048• **Electronic City** AMBA BAJAJ: 8971711118• **Nayandahalli Mysore Rd** RV BAJAJ: 7259186162 • **Chandra Layout Moodalapalya** RV BAJAJ: 7353763301 • **Kengeri** RV BAJAJ: 7353763305 • **Giri Nagar** RV BAJAJ: 6361211128• **Vijaynagar** RV BAJAJ: 7353763307• **Banashankari** POPULAR BAJAJ: 9945111874 • **Rajajinagar** POPULAR BAJAJ : 6366554001 • **Koramangala** POPULAR BAJAJ: 9845589079 • **Konankunte** POPULAR BAJAJ: 7760967834 • **Ramnagara** POPULAR BAJAJ: 7760967832 • **Kanakpura** POPULAR BAJAJ: 9972533890 • POPULAR BAJAJ **Channapatna** 9901947666 • POPULAR BAJAJ **Uttarahalli** 9972095890 • POPULAR BAJAJ **Gottigere** 7760996891 • **Mekhri Circle** KALYANI BAJAJ: 8884413595 • **Yelahanka** KALYANI BAJAJ: 9449849618 • **Mathikere** KALYANI BAJAJ: 8884430126 • **Chickbellapur** KALYANI BAJAJ: 8884413594 • **Devenhalli** KALYANI BAJAJ: 9449849624 • **Marathahalli** KHIVRAJ BAJAJ: 9036091986 • **Kasturba Rd** KHIVRAJ BAJAJ: 9035060140 • **Indiranagar** KHIVRAJ BAJAJ: 9035060139 • **Hennur** KHIVRAJ BAJAJ: 9742155225 • **Banaswadi** KHIVRAJ BAJAJ: 9035060147 • **Hesargatta** KHIVRAJ BAJAJ: 9035060148 • **Whitefield** KHIVRAJ BAJAJ: 8618840097 • **Hoskote** KHIVRAJ BAJAJ: 9035005075 • **Magadi Rd** ANANT BAJAJ: 9902934455 • **Laggere** ANANT BAJAJ: 7022984402 • **Hubli** CHANNAMMA BAJAJ: 9620614106 • **Arvind Nagar branch** 8884771881 **Gadag** CHANNAMMA BAJAJ: 9620747153 • **Sirsi** CHANNAMMA BAJAJ: 8884645609 • **Haveri** CHANNAMMA BAJAJ: 8151884422 • **Belgaum** JAGAJAMPI BAJAJ: 988690116, JAGASHREE BAJAJ: 7349773962. • **Chikodi** JAGAJAMPI BAJAJ: 9449736406 • **Gokak** JAGAJAMPI BAJAJ: 7022425616 • **Bellary AADI BAJAJ: 9606050246• Raichur SHREE BALAJI AUTOMOBILES: 9964626515• Koppal I A BAJAJ: 8123712938• Hospet AADI BAJAJ:9731361414 • Hagaribommanahalli AADI BAJAJ: 9900363010• SIRUGUPPA AADI BAJAJ: 9110217558 • Bijapur BIJJARGI BAJAJ (BLDE Road)**: 6362877793 •(Bus Stand Road) 8884000970 • **Bagalkot** BIJJARGI BIKES: 9148448324 • **Sindagi** BIJJARGI BAJAJ 8861946802• **Bidar** SINDOL BAJAJ 9513226555 • **Chitradurga** BTV BAJAJ: Ph: 7349247162 • **Hiriyur** BTV BAJAJ: Ph: 7349247168 • **Challakere** BTV BAJAJ 8296199371 • **Davangere** JAIN BAJAJ: Ph: 9343636805 • **Harihara** JAIN BAJAJ: Ph: 9632300444 • **Gulbarga** VKG BAJAJ: 9632018700 • **Yadgir** VKG BAJAJ: 8722182492 • **Humnabad** VKG BAJAJ 8050889160 • **Shimoga** SUPREME BAJAJ: 8105000999 • **Sagar** SUPREME BAJAJ: • **Bhadravathi** SUPREME BAJAJ: 9008352799 • **Chikkamagalur** SUPREME BAJAJ: 9008379799 • **Tarikere** SUPREME BAJAJ: 9008569799 • **Hosanagar** SUPREME BAJAJ 9731767799 • **Anandpura** SUPREME BAJAJ 9663501499 • **Hassan** ARPITA BAJAJ: 9902439255, **Arsikere** ARPITA BAJAJ: 9964094535 • **Kolar** SHREE KAMAKSHI BAJAJ: 9845784351 • **Malur** SHREE KAMAKSHI BAJAJ: 9665524409 • **KGF** SHREE KAMAKSHI BAJAJ: 9900235758 • **Mulbagalu** SHREE KAMAKSHI BAJAJ: 8892616586 • **BANGARAPET** SHREE KAMAKSHI BAJAJ: 8970688361 • **Tumkur** AKSHAYA BAJAJ: 7259040253• **Tiptur** AKSHAYA BAJAJ: 7259040226 • **Sira** AKSHAYA BAJAJ: 7259040328 • **Kunigal** AKSHAYA BAJAJ: 7338662706 • **Madhugiri** AKSHAYA BAJAJ: 7338662681 • **BH Road:** 7338662687 • **Mysore Saraswathipuram** POPULAR BAJAJ: 9148101113 • **Chamarajapuram** POPULAR BAJAJ: 7259786271 • **Vontikoppal** STAR BAJAJ: 9739549252 • **Mandya** POPULAR BAJAJ: 7760967900 • **Chamarajanagara** PATEL BAJAJ: 8722067560 • **Hunsur** STAR BAJAJ: 9916833072 • **Kushalnagar** POPULAR BAJAJ: 7259786276 • **Nanjangud** STAR BAJAJ: 9742100252 • **NR Mohalla** STAR BAJAJ: 8095777706 • **Balmatta** SUPREME BAJAJ: 9606973192 • **Kuloor** SUPREME BAJAJ: 9606237547 • **Surathkal** SUPREME BAJAJ: 9606973193 • **Thokottu** 9606702429 • **B C Road** 7618715273 • **Bidar** SINDOL BAJAJ 9513226555 • **UDUPI** SAANVI BAJAJ 7259678777.